
ಮಂಗಳವಾರ, ಏಪ್ರಿಲ್ 8, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 97 | ಪುಟ 16
● www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಕ್ರಿಯೆ



ಗಾಂಧೀಜಿ ಅವರ ಆತ್ಮಚರಿತ್ರೆಯ ಹೆಸರು, 'ನನ್ನ ಸತ್ಯಾನ್ವೇಷಣೆ'. ಮೋದಿ ಅವರು ಪುಸ್ತಕ ಬರೆಯುತ್ತಾರೋ ಇಲ್ಲವೋ ತಿಳಿದಿಲ್ಲ. ಬಹುಶಃ ಪುಸ್ತಕ ಬರೆದರೆ, ಅದರ ಹೆಸರು, 'ಸುಳ್ಳುಗಳ ಅನ್ವೇಷಣೆ'ಯಾಗಿರಬಹುದು
ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ (ಪಟ್ನಾದಲ್ಲಿ ಆಡಿದ ಮಾತು)

ಆಳ-ಅಗಲ ಒಂದನೇ ತರಗತಿ '6 ವರ್ಷ'ದ ಸಂದಿಗ್ಧ
ವಕ್ಫ್ (ತಿದ್ದುಪಡಿ) ಕಾಯ್ದೆ: ವಿಚಾರಣೆಗೆ 'ಸುಪ್ರೀಂ' ಒಪ್ಪಿಗೆ 13
ಟೊಮೆಟೊ, ಈರುಳ್ಳಿ ಸುರಿದು ಆಕ್ರೋಶ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,137 ▼	22,161 ▼	₹93,620 (ಬೆಂಗಳೂರು) ▼	₹94,000 (ಬೆಂಗಳೂರು) ▲	85.76 ▼

ಪರಿಷ್ಕೃತ ದರ ಇಂದಿನಿಂದಲೇ ಜಾರಿ ● ಉಜ್ವಲಾ ಯೋಜನೆಯ ಫಲಾನುಭವಿಗಳಿಗೂ ತಟ್ಟಿದ ಬಿಸಿ

ಮನೆ ಬಳಕೆ ಎಲ್‌ಪಿಜಿ ₹50 ಏರಿಕೆ

ನವದೆಹಲಿ (ಪಿಟಿಐ): ಮನೆ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ಕೇಂದ್ರ ಸರ್ಕಾರವು ₹50 ಹೆಚ್ಚಿಸಿದೆ. ಪರಿಷ್ಕೃತ ದರ ಮಂಗಳವಾರದಿಂದ ಅನ್ವಯವಾಗಲಿದೆ.

ಅಡುಗೆ ಅನಿಲ ಬೆಲೆಯಲ್ಲಿನ ಹೆಚ್ಚಳವು ಉಜ್ವಲಾ ಯೋಜನೆಯ ಫಲಾನುಭವಿಗಳು ಮತ್ತು ಸಾಮಾನ್ಯ ಬಳಕೆದಾರರಿಗೆ ಅನ್ವಯಿಸುತ್ತದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಸೋಮವಾರ ತಿಳಿಸಿದ್ದಾರೆ.



ಇದರ ಪರಿಣಾಮವಾಗಿ ನವದೆಹಲಿಯಲ್ಲಿ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯು ₹853ಕ್ಕೆ ತಲುಪಿದೆ. ಉಜ್ವಲಾ ಯೋಜನೆಯ ಫಲಾನುಭವಿಗಳಿಗೆ ಇದೇ ಎಲ್‌ಪಿಜಿ ಸಿಲಿಂಡರ್ ದರ ಪ್ರಸ್ತುತ ₹503 ರಿಂದ ₹553ಕ್ಕೆ ಏರಿಕೆಯಾಗಿದೆ.

ಎಲ್‌ಪಿಜಿ ಸಿಲಿಂಡರ್ ದರವನ್ನು ಕಳೆದ ವರ್ಷ ಮಾರ್ಚ್‌ನಲ್ಲಿ ಕೊನೆಯದಾಗಿ ಪರಿಷ್ಕರಿಸಲಾಗಿತ್ತು. ಆಗ ಬೆಲೆಯನ್ನು ₹100 ಕಡಿತಗೊಳಿಸಲಾಗಿತ್ತು.

13ನೇ ಪುಟ ನೋಡಿ



ಪೆಟ್ರೋಲ್, ಡೀಸೆಲ್ ಅಬಕಾರಿ ಸುಂಕ ₹2 ಹೆಚ್ಚಳ

ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ ₹2 ಹೆಚ್ಚಿಸಿದೆ. ಆದರೆ ಅಬಕಾರಿ ಸುಂಕದ ಹೆಚ್ಚಳವು ಚಿಲ್ಲರೆ ಮಾರಾಟದ ಮೇಲೆ ಯಾವುದೇ ಪರಿಣಾಮ ಬೀರದು ಎಂದು ಪೆಟ್ರೋಲಿಯಂ ಸಚಿವಾಲಯ ತಿಳಿಸಿದೆ.

'ಅಬಕಾರಿ ಸುಂಕ ಏರಿಕೆಯಾದರೂ ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಮಾರಾಟ ಬೆಲೆಯಲ್ಲಿ ಯಾವುದೇ ಹೆಚ್ಚಳ ಇರುವುದಿಲ್ಲ ಎಂದು ತೈಲೋತ್ಪನ್ನ ಕಂಪನಿಗಳು ತಿಳಿಸಿವೆ' ಎಂದು ಸಚಿವಾಲಯವು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಪೆಟ್ರೋಲ್ ಮೇಲಿನ ಅಬಕಾರಿ ಸುಂಕ ಲೀಟರ್‌ಗೆ ₹11 ರಿಂದ ₹13ಕ್ಕೆ ಹಾಗೂ ಡೀಸೆಲ್ ಮೇಲಿನ ಸುಂಕ ಲೀಟರ್‌ಗೆ ₹8 ರಿಂದ ₹10ಕ್ಕೆ ಏರಿಕೆಯಾಗಿದೆ.

ಈ ಹೆಚ್ಚಳದ ನಂತರ ಪೆಟ್ರೋಲ್ ಮೇಲಿನ ಕೇಂದ್ರದ ಒಟ್ಟು ತೆರಿಗೆಗಳು ಲೀಟರ್‌ಗೆ ₹21.9 ಹಾಗೂ ಡೀಸೆಲ್ ಮೇಲಿನ ತೆರಿಗೆಗಳು ₹17.80ಕ್ಕೆ ತಲುಪಿವೆ.

ಸಿಎನ್‌ಜಿ ದರ ₹1 ಏರಿಕೆ

ನವದೆಹಲಿ ಸೇರಿದಂತೆ ದೇಶದ ಹಲವು ನಗರಗಳಲ್ಲಿ ಸಾಂದ್ರೀಕೃತ ನೈಸರ್ಗಿಕ ಅನಿಲದ (ಸಿಎನ್‌ಜಿ) ದರವನ್ನು ಅನಿಲ ಸಂಸ್ಥೆಗಳು ಪ್ರತಿ ಕೆ.ಜಿಗೆ ₹1 ಹೆಚ್ಚಿಸಿವೆ.

ರಾಷ್ಟ್ರದ ರಾಜಧಾನಿಯಲ್ಲಿ ಸಿಎನ್‌ಜಿ ದರ ಪ್ರತಿ ಕೆ.ಜಿಗೆ ₹75.09 ಆಗಿದೆ ಎಂದು ನವದೆಹಲಿಯ ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್ 'ಎಕ್ಸ್'ನಲ್ಲಿ ತಿಳಿಸಿದೆ.

'ಬಿಜೆಪಿ ಕಪಾಳಕ್ಕೆ ಏಟು'



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲದ ಬೆಲೆ ಹೆಚ್ಚಿಸುವ ಮೂಲಕ ಜನಾಕ್ರೋಶ ಯಾತ್ರೆ ಆರಂಭಿಸಿರುವ ರಾಜ್ಯದ ಬಿಜೆಪಿ ನಾಯಕರಿಗೆ ಕಪಾಳಕ್ಕೆ ಹೊಡೆದಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ಬೆಲೆ ಏರಿಕೆಗೆ ಕೇಂದ್ರ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಯೇ ಕಾರಣ ಎಂದು ನಾವು ಹೇಳುತ್ತಲೇ ಬಂದಿರುವ ಸತ್ಯವನ್ನು ಪ್ರಧಾನಿ ಅವರೇ ದೇಶದ ಜನರ ಮುಂದೆ ಬಿಚ್ಚಿಟ್ಟಿದ್ದಾರೆ. ಪೆಟ್ರೋಲ್, ಡೀಸೆಲ್ ಮೇಲಿನ ಅಬಕಾರಿ ತೆರಿಗೆ ₹2, ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ₹50 ಏರಿಕೆ ಮಾಡಿದ್ದಾರೆ. ಈಗ ರಾಜ್ಯದ ಬಿಜೆಪಿ ನಾಯಕರ ಪ್ರತಿಕ್ರಿಯೆ ಏನು? ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಯುತ್ತಿದ್ದರೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಒಂದೇ ಸಮನೆ ಏರಿಸುತ್ತಿರುವುದು ಏಕೆ ಎಂಬ ವಿಷಯವನ್ನು ರಾಜ್ಯದ ಜನರಿಗೆ ತಿಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

13ನೇ ಪುಟ ನೋಡಿ

'ಪೋಕ್ಸೊ: ಬಿಎಸ್‌ವೈಗೆ ಅರಿವಿರಲಿಲ್ಲವೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೋಕ್ಸೊದಂತಹ ಅಹಿತಕರ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಳ್ಳುವುದಕ್ಕೂ ಮುನ್ನ ತಮ್ಮ ಕೆಲಸಗಳ ಬಗ್ಗೆ ಅರಿವು ಇರಬೇಕಿತ್ತು' ಎಂದು ಹೈಕೋರ್ಟ್, ಪ್ರಕರಣದ ಆರೋಪಿಯೂ ಆದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಕಿವಿಮಾತು ಹೇಳಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಲಾಗಿರುವ ನಿರೀಕ್ಷಣಾ ಜಾಮೀನಿನ ಷರತ್ತುಗಳ ಸಡಿಲಿಕೆ ಮತ್ತು ಕೆಲವು ಕಾನೂನು ಅಂಶಗಳ ಸ್ಪಷ್ಟನೆ ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರ್ ಅವರು ಸೋಮವಾರ ವಿಚಾರಣೆ ನಡೆಸಿದರು.

'ಅವರೊಬ್ಬ ಹಿರಿಯ ರಾಜಕಾರಣಿ. ಆಗಾಗ್ಗೆ ರಾಜ್ಯ ಮತ್ತು ದೇಶದಾದ್ಯಂತ ಪ್ರವಾಸ ಕೈಗೊಳ್ಳುವ ಪ್ರಮೇಯಗಳಿರುತ್ತವೆ. ಹೀಗಾಗಿ, ಪ್ರತಿ ಹಂತದಲ್ಲೂ ಅನುಮತಿ ಕೋರಿ ನ್ಯಾಯಾಲಯವನ್ನು ಎಡತಾಕಲು ಅವರಿಗೆ ಕಷ್ಟವಾಗುತ್ತದೆ' ಎಂದು ಯಡಿಯೂರಪ್ಪ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್ ಹೇಳಿದರು.



9ನೇ ಪುಟ ನೋಡಿ

ದ್ವಿತೀಯ ಪಿಯು ಫಲಿತಾಂಶ ಇಂದು



ಬೆಂಗಳೂರು: ದ್ವಿತೀಯ ಪಿಯು ಫಲಿತಾಂಶ ಏ.8ರಂದು ಪ್ರಕಟವಾಗುತ್ತಿದೆ. ಮಧ್ಯಾಹ್ನ 12.30ರ ನಂತರ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಜಾಲತಾಣ https://karresults.nic.in ನಲ್ಲಿ ಫಲಿತಾಂಶವನ್ನು ವೀಕ್ಷಿಸಬಹುದು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಷೇರುಪೇಟೆಯಲ್ಲಿ ಮಹಾಪತನ


ಮುಂಬೈ(ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಯ ಪರಿಣಾಮವಾಗಿ ಅಮೆರಿಕದಲ್ಲಿ ಹಣದುಬ್ಬರ ಹೆಚ್ಚಾಗಬಹುದು, ಅಲ್ಲಿ ಆರ್ಥಿಕ ಹಿಂಜರಿತ ಎದುರಾಗಬಹುದು ಎಂಬ ಲೆಕ್ಕಾಚಾರವು ಭಾರತದ ಷೇರುಪೇಟೆ ಹೂಡಿಕೆದಾರರಲ್ಲಿ ನಡುಕ ಸೃಷ್ಟಿಸಿದೆ.

ದೇಶದ ಷೇರುಪೇಟೆಗಳ ಪ್ರಮುಖ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಸೋಮವಾರದ ವಹಿವಾಟಿನಲ್ಲಿ ಭಾರಿ ಪ್ರಮಾಣದ ಕುಸಿತ ಕಂಡಿವೆ.

ಟ್ರಂಪ್ ಅವರ ಸುಂಕ ನೀತಿ ಹಾಗೂ ಈ ನೀತಿಗೆ ಚೀನಾ ಕೈಗೊಂಡ ಪ್ರತೀಕಾರದ ಕ್ರಮಗಳ ಪರಿಣಾಮವಾಗಿ ಜಾಗತಿಕ ಆರ್ಥಿಕ ಬೆಳವಣಿಗೆಯು ಮಂದಗತಿಗೆ ತಿರುಗುವ ಭೀತಿ ಸೃಷ್ಟಿಯಾಗಿದೆ. ಇದು ಷೇರುಪೇಟೆಗಳಲ್ಲಿ ನಿರಾಶೆಯ ಕರಿಮೋಡಗಳು ಕವಿಯುವಂತೆ ಮಾಡಿದೆ. ದೇಶದ ಷೇರುಪೇಟೆಗಳಲ್ಲಿ ಸೋಮವಾರ ದಾಖಲಾದ ಕುಸಿತವು ಐದು ವರ್ಷಗಳ ವಹಿವಾಟಿನಲ್ಲಿ ಕಂಡ ಭಾರಿ ಕುಸಿತಗಳ ಪೈಕಿ ಒಂದಾಗಿದೆ. ಷೇರು ಹೂಡಿಕೆದಾರರಿಗೆ ಇದೊಂದು ಕೆಟ್ಟ ದಿನವಾಗಿತ್ತು.

ಮುಂಬೈ ಷೇರುಪೇಟೆಯ (ಬಿಎಸ್‌ಇ) ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 10 ತಿಂಗಳ ಅತಿದೊಡ್ಡ ಕುಸಿತವನ್ನು ಸೋಮವಾರ ದಾಖಲಿಸಿತು. 2,226 ಅಂಶಗಳಷ್ಟು (ಶೇ 2.95ರಷ್ಟು) ಕುಸಿದ ಸೆನ್ಸೆಕ್ಸ್ 73,137 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ದಿನದ ವಹಿವಾಟಿನ ನಡುವಿನಲ್ಲಿ ಸೂಚ್ಯಂಕವು 3,939 ಅಂಶಗಳವರೆಗೂ ಇಳಿಕೆ ಕಂಡಿತ್ತು.

12ನೇ ಪುಟ ನೋಡಿ



ಬಿಎಸ್‌ಇ ವಲಯವಾರು ಕುಸಿತ

ಲೋಹ	6.22%
ರಿಯಾಲ್ಟಿ	5.69%
ಸರಕು	4.68%
ಗ್ರಾಹಕ ಬಳಕೆ	3.79%
ಐ.ಟಿ	2.92%

ಏಷ್ಯಾದ ಇತರ ಕಡೆಗಳಲ್ಲಿಯೂ ಕುಸಿತ

13% ಹ್ಯಾಂಗ್ ಸೆಂಗ್ (ಹಾಂಕಾಂಗ್)	7% ಎಸ್‌ಎಸ್‌ಇ ಸೂಚ್ಯಂಕ (ಶಾಂಘೈ)
8% ನಿಕ್ಕೈ (ಟೋಕಿಯೊ)	5% ಕೊಸ್ಪಿ (ದಕ್ಷಿಣ ಕೊರಿಯಾ)

ಕಳೆದುಕೊಂಡಿದ್ದು ₹14 ಲಕ್ಷ ಕೋಟಿ

ದೇಶದ ಷೇರುಪೇಟೆಗಳಲ್ಲಿ ಹಣ ತೊಡಗಿಸಿದವರು ಸೋಮವಾರದ ವಹಿವಾಟಿನಲ್ಲಿ ಒಟ್ಟು ₹14 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ.

ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ಸೋಮವಾರದ ವಹಿವಾಟಿನ ಅಂತ್ಯಕ್ಕೆ ₹14.09 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ.

'ಪೌರ ಕಾರ್ಮಿಕರು ಮೇ 1ರಿಂದ ಕಾಯಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೌರಕಾರ್ಮಿಕರನ್ನು ಕಾಯಂಗೊಳಿಸಿ, ಮೇ 1ರ ಕಾರ್ಮಿಕ ದಿನಾಚರಣೆಯಿಂದ ನೇಮಕಾತಿ ಪತ್ರಗಳನ್ನು ನೀಡುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸೋಮವಾರ ಇಲ್ಲಿ ನಡೆದ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಬೆಳ್ಳಿ ಮಹೋತ್ಸವ ಹಾಗೂ ಪೌರಕಾರ್ಮಿಕರಿಗೆ ಅರಿವು ಕಾರ್ಯಕ್ರಮದಲ್ಲಿ ಅವರು ಈ ಭರವಸೆ ನೀಡಿದರು.

'ಚಾಲಕರನ್ನೂ ಗುತ್ತಿಗೆಯಿಂದ ತೆಗೆದು ಕಾಯಂ ಮಾಡಲಾಗುವುದು. ಪೌರ ಕಾರ್ಮಿಕರಿಗೆ ನಗದು ರಹಿತ ಆರೋಗ್ಯ ಕಾರ್ಡ್ ನೀಡಲಾಗುವುದು. ಪೌರಕಾರ್ಮಿಕರ ಸಿಂಧುತ್ವದ ಸಮಸ್ಯೆ ಬಗೆಹರಿಸಲಾಗುವುದು. ಪ್ರತಿವರ್ಷ ಒಂದು ಸಾವಿರ ಪೌರಕಾರ್ಮಿಕರನ್ನು ವಿದೇಶ ಪ್ರವಾಸಕ್ಕೆ ಕಳುಹಿಸಲಾಗುತ್ತಿದೆ. ಈ ಸಮುದಾಯವೂ ವಿಶ್ವಪ್ರಜ್ಞೆ ಬೆಳೆಸಿಕೊಳ್ಳಬೇಕು' ಎಂದರು.

'ಸರ್ಕಾರದ ಮುಖ್ಯ ಕಾರ್ಯದರ್ಶಿ ಆಗಲಿ, ಪೌರಕಾರ್ಮಿಕರಾಗಲಿ ವ್ಯತ್ಯಾಸವಿಲ್ಲ. ಎಲ್ಲ ಸೇವೆಗಳೂ ಪವಿತ್ರವೇ. ನಿಮಗೂ ವೃತ್ತಿಗೌರವ, ಘನತೆ ಸಿಗಬೇಕು' ಎಂದು ಅಭಿಪ್ರಾಯಪಟ್ಟರು.

4ನೇ ಪುಟ ನೋಡಿ

₹50 ಸಾವಿರಕ್ಕೆ ವೇತನ: ಡಿಸಿಎಂ

'ಪೌರ ಕಾರ್ಮಿಕರೇ ನಿಮ್ಮ ಕೆಲಸ ಕಾಯಂ ಆದ ತಕ್ಷಣ ಸಂಬಳ ₹50 ಸಾವಿರ ಮುಟ್ಟುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

4ನೇ ಪುಟ ನೋಡಿ

'ದೊಡ್ಡ ನಗರದ ಅಲ್ಲಿ–ಇಲ್ಲಿ ಇಂತಹ ಘಟನೆ ನಡೆಯುತ್ತವೆ'

ಪ್ರಜಾವಾಣಿ ವಾರ್ತೆ



ಜಿ.ಪರಮೇಶ್ವರ

ಬೆಂಗಳೂರು: ಯುವತಿಯನ್ನು ಹಿಂಬಾಲಿಸಿದ ಯುವಕನೊಬ್ಬ ಅನುಚಿತವಾಗಿ ವರ್ತಿಸಿದ ಪ್ರಕರಣಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವ ಜಿ. ಪರಮೇಶ್ವರ ಅವರು, 'ದೊಡ್ಡ ನಗರದಲ್ಲಿ ಅಲ್ಲಿ ಇಲ್ಲಿ ಇಂತಹ ಘಟನೆಗಳು ನಡೆಯುತ್ತವೆ' ಎಂದಿರುವುದಕ್ಕೆ ಭಾರಿ ಟೀಕೆ ವ್ಯಕ್ತವಾಗಿದೆ.

ಸುದ್ದಗುಂಟೆಪಾಳ್ಯದ ಭಾರತಿ ಲೇಔಟ್‌ನಲ್ಲಿ ಏ. 3ರಂದು ಮಧ್ಯರಾತ್ರಿ ನಡೆದ ಘಟನೆಯ ಬಗ್ಗೆ ಸುದ್ದಿಗಾರರು ಗಮನಸೆಳೆದಾಗ ಪ್ರತಿಕ್ರಿಯಿಸಿದ ಪರಮೇಶ್ವರ, 'ಅಲ್ಲೊಂದು ಇಲ್ಲೊಂದು ಇಂತಹ ಘಟನೆ ಆದಾಗ ಸ್ವಾಭಾವಿಕವಾಗಿ ಜನರ ಗಮನ ಸೆಳೆಯುತ್ತದೆ. ಅಷ್ಟಕ್ಕೇ ನಾವು ಬಿಡುವುದಿಲ್ಲ. ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

4ನೇ ಪುಟ ನೋಡಿ

ರಾಜೀನಾಮೆಗೆ ಬಿಜೆಪಿ ಆಗ್ರಹ

ನವದೆಹಲಿ: ಗೃಹ ಸಚಿವ ಜಿ.ಪರಮೇಶ್ವರ ಅವರಿಂದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ರಾಜೀನಾಮೆ ಪಡೆಯಬೇಕು ಎಂದು ಬಿಜೆಪಿ ಆಗ್ರಹಿಸಿದೆ.

4ನೇ ಪುಟ ನೋಡಿ

ನಿಯಮದಂತೆ ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಎಸ್‌ಡಬ್ಲ್ಯುಎಂ ಬೈ-ಲಾದಲ್ಲಿರುವಂತೆಯೇ ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕವನ್ನು ನಿರ್ಧರಿಸಿ ಜಾರಿಗೊಳಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ನಿಯಮದಂತೆ ನಿರ್ಧಾರವಾಗಿರುವಂತೆ ಶುಲ್ಕ ಜಾರಿ ಮಾಡಲಾಗಿದ್ದು, ವಸತಿಯೇತರ ಕಟ್ಟಡಗಳಿಗೆ ವಸತಿ ಕಟ್ಟಡಗಳಿಗಿಂತ ಹೆಚ್ಚಿದೆ. ನಗರ ವ್ಯಾಪ್ತಿಯಲ್ಲಿ ಸುಮಾರು ₹700 ಕೋಟಿ ಬಳಕೆದಾರರ ಶುಲ್ಕ ಸಂಗ್ರಹವಾಗಲಿದ್ದು, ಅದರಲ್ಲಿ ₹231 ಕೋಟಿ ವಸತಿ ಕಟ್ಟಡಗಳಿಂದ ಬರಲಿದೆ. ಉಳಿದ ಹಣ ವಾಣಿಜ್ಯ ಕಟ್ಟಡಗಳಿಂದಲೇ ಬರುತ್ತದೆ. ನಾವು ಎಲ್ಲವನ್ನೂ ನಿಯಮದಂತೆಯೇ ಜಾರಿ ಮಾಡಿದ್ದೇವೆ’ ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ವಾಹನ ನಿಲುಗಡೆ ಶುಲ್ಕದ ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸುವ ಅವಧಿ ಮುಗಿದಿದ್ದು, ಅವೆಲ್ಲವನ್ನು ಪರಿಗಣಿಸಿ ಅಂತಿಮಗೊಳಿಸಲಾಗುತ್ತದೆ. ನಂತರ ಅದನ್ನು ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆದು ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ’ ಎಂದು ಹೇಳಿದರು.

ಕಾವೇರಿ ನೀರು ಹೊಸ ಸಂಪರ್ಕ ಶುಲ್ಕ: ಎರಡು ತಿಂಗಳು ಕಾಲಾವಕಾಶ

ಏ.15ರ ನಂತರ ‘ಇಎಂಐ’ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನೀರಿನ ಹೊಸ ಸಂಪರ್ಕದ ‘ಪ್ರೊರೇಟಾ’ ಶುಲ್ಕವನ್ನು ಸಮಾನ ಕಂತುಗಳಲ್ಲಿ (ಇಎಂಐ) ಪಾವತಿಸಲು ಬೆಂಗಳೂರು ಜಲಮಂಡಳಿ ಯೋಜನೆ ರೂಪಿಸಿದ್ದು, ಏಪ್ರಿಲ್ 15ರ ನಂತರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ಯೋಜನೆಗೆ ಚಾಲನೆ ನೀಡಲಿದ್ದಾರೆ ಎಂದು ಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

‘ಯೋಜನೆ ಉದ್ಘಾಟನೆಯಾದ ನಂತರ ಎರಡು ತಿಂಗಳವರೆಗೆ ಇದು ಚಾಲ್ತಿಯಲ್ಲಿರಲಿದೆ. ಕಾವೇರಿ ನೀರಿನ ಸಂಪರ್ಕ ಪಡೆಯದವರು ಈ ಅವಧಿಯೊಳಗೆ ಈ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬೇಕು’ ಎಂದು ಅವರು ತಿಳಿಸಿದ್ದಾರೆ.

ಬೆಂಗಳೂರು ನಗರದ ಎಲ್ಲ ನಾಗರಿಕರಿಗೂ ಶುದ್ಧ ಹಾಗೂ ಬಿಐಎಸ್ ಪ್ರಮಾಣೀಕೃತ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಅವರು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಕಾವೇರಿ ನೀರಿನ ಹೊಸ ಸಂಪರ್ಕ ಪಡೆಯಲು ಒಂದೇ ಬಾರಿಗೆ ‘ಪ್ರೊರೇಟಾ ಶುಲ್ಕ’ ಪಾವತಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಇಎಂಐ ಸೌಲಭ್ಯ ನೀಡಬೇಕೆಂದು ಅಪಾರ್ಟ್‌ಮೆಂಟ್ ಕ್ಷೇಮಾಭಿವೃದ್ಧಿ ಸಂಘಗಳು, ಕಟ್ಟಡಗಳ ಮಾಲೀಕರು ಮನವಿ ಮಾಡಿದ್ದರು. ಈ ಕಾರಣದಿಂದ 12 ತಿಂಗಳ ಸಮಾನ ಕಂತುಗಳಲ್ಲಿ ಶುಲ್ಕ ಪಾವತಿಸಿ ನೀರಿನ ಸಂಪರ್ಕ ಪಡೆದುಕೊಳ್ಳುವ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ ಎಂದು ರಾಮ್‌ಪ್ರಸಾತ್ ವಿವರಿಸಿದ್ದಾರೆ.

‘ಇಎಂಐ’ಗೆ ಷರತ್ತುಗಳು

- ಡಿಮ್ಯಾಂಡ್ ನೋಟಿಸ್ (ಅನ್ವಯಿಸಿದಲ್ಲಿ ಪ್ರೊರೇಟಾ ಶುಲ್ಕ, ಮೀಟರ್ ಶುಲ್ಕ, ಪರಿವೀಕ್ಷಣಾ ಶುಲ್ಕ, ಜಿಬಿ ವಾಸ್ಟ್, ಬಿಸಿಸಿ ಶುಲ್ಕಗಳು ಹಾಗೂ ಲೈನ್ ವೆಚ್ಚ ಸೇರಿದ) ತಲುಪಿದ ನಂತರ ಒಟ್ಟು ಶುಲ್ಕದಲ್ಲಿ ಶೇ 20ರಷ್ಟು ಮೊತ್ತವನ್ನು ಮೊದಲ ಕಂತಾಗಿ ಪಾವತಿಸಬೇಕು.
- ಉಳಿದ ಶೇ 80ರಷ್ಟು ಶುಲ್ಕವನ್ನು 12 ತಿಂಗಳ ಸಮಾನ ಕಂತುಗಳಲ್ಲಿ ಪಾವತಿಸಬೇಕು.
- ಅಪಾರ್ಟ್‌ಮೆಂಟ್ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಮನೆ/ಕಟ್ಟಡ ಮಾಲೀಕರಿಗೆ ಮಾತ್ರ ಈ ಇಎಂಐ ಸೌಲಭ್ಯವಿರುತ್ತದೆ.

ಏ.10ರಿಂದ ಚೈತ್ರದ ಚಿಗುರು ಬೇಸಿಗೆ ಶಿಬಿರ

ಬೆಂಗಳೂರು: ನಗರದ ಉದಯಭಾನು ಕಲಾಸಂಘದಿಂದ ಏಪ್ರಿಲ್ 10 ರಿಂದ 30ರವರೆಗೆ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿದೆ.

5 ವರ್ಷದಿಂದ 16 ವರ್ಷದೊಳಗಿನ ಮಕ್ಕಳು ಈ ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಶಿಬಿರವು ಪ್ರತಿ ದಿನ ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1.30ರವರೆಗೆ ನಡೆಯಲಿದೆ.

ಶಿಬಿರದಲ್ಲಿ ವಿಜ್ಞಾನ, ಇತಿಹಾಸ, ಪರಿಸರ, ಆಹಾರ ಪದ್ಧತಿ, ಯೋಗ, ಪ್ರಾರ್ಥನೆ, ಮೌಲ್ಯ ಶಿಕ್ಷಣ, ನೈರ್ಮಲ್ಯ, ಚಿತ್ರಕಲೆ, ನೃತ್ಯ, ಸಂಗೀತ, ನಾಟಕ ಸೇರಿದಂತೆ ಸೃಜನಶೀಲ ಚಟುವಟಿಕೆಗಳಲ್ಲಿ ತರಬೇತಿ ನೀಡಲಾಗುತ್ತದೆ.

ಆಸಕ್ತರು ಶಿಬಿರದ ವಿವರಗಳಿಗಾಗಿ 080-26601831/26609343ಗೆ ಕರೆ ಮಾಡಬಹುದು ಎಂದು ಸಂಘದ ಗೌರವ ಕಾರ್ಯದರ್ಶಿ ರಾಧಾಕೃಷ್ಣ ಕೌಂಡಿನ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ರೀಡ್’ ಆಗದ ಮೆಟ್ರೊ ಕಾರ್ಡ್ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗದು ರಹಿತ ಪ್ರಯಾಣಕ್ಕಾಗಿ ಇರುವ ‘ನಮ್ಮ ಮೆಟ್ರೊ ಸ್ಮಾರ್ಟ್‌ಕಾರ್ಡ್’ ಬಳಸಲು ಸಾಧ್ಯವಾಗದಷ್ಟು ಹಳೆಯದಾದರೆ ಶುಲ್ಕ ಪಾವತಿಸದೇ ಬದಲಾಯಿಸುವ ಅವಕಾಶವನ್ನು ಬಿಎಂಆರ್‌ಸಿಎಲ್ ನೀಡಿದೆ.

ಪುನರ್‌ಭರ್ತಿ ಮಾಡಬಹುದಾದ ಈ ಕಾರ್ಡ್‌ಗಳಿಗೆ ಹಣ ತುಂಬಲು ಸಾಧ್ಯವಾಗದಷ್ಟು ಹಾಳಾದ ಕಾರ್ಡ್ ಬದಲಿಸಬಹುದು. ಹಳೇ ಕಾರ್ಡ್‌ನಲ್ಲಿ ಉಳಿಕೆಯಾಗಿರುವ ಹಣವನ್ನು ಹೊಸ ಕಾರ್ಡ್‌ಗೆ ವರ್ಗಾವಣೆ ಮಾಡಲಾಗುತ್ತದೆ.

ನಿತ್ಯ ಮೆಟ್ರೊದಲ್ಲಿ ಸಂಚರಿಸುವವರು ಟಿಕೆಟ್ ಕೌಂಟರ್‌ಗಳಲ್ಲಿ ಪ್ರತಿಬಾರಿ ಸರತಿಯಲ್ಲಿ ನಿಂತು ಪ್ರಯಾಣ ದರ ಪಾವತಿಸಿ ಟೋಕನ್ ಪಡೆಯುವುದನ್ನು ತಪ್ಪಿಸುವುದಕ್ಕಾಗಿ ‘ಇಂಟಿಗ್ರೇಟೆಡ್ ಸಿಂಗಲ್ ವ್ಯಾಲೆಟ್’ ಆಗಿ ಕಾರ್ಯ ನಿರ್ವಹಿಸುವ ಕಾರ್ಡ್‌ಗಳನ್ನು ಮೆಟ್ರೊ ಪರಿಚಯಿಸಿತ್ತು. ಒಂದು ಬಾರಿ ಹಣ ತುಂಬಿದರೆ ಅದು ಖಾಲಿ ಆಗುವವರೆಗೆ ಬಳಸಬಹುದು. ಖಾಲಿ ಆದಾಗ ಆನ್‌ಲೈನ್ ಮೂಲಕ ಇಲ್ಲವೇ ಮೆಟ್ರೊ ನಿಲ್ದಾಣಗಳಲ್ಲಿ ಪುನರ್ ಭರ್ತಿ ಮಾಡಿಕೊಳ್ಳಬಹುದು.

‘ಮೆಟ್ರೊ ಕಾರ್ಡ್‌ಗಳಿಗೆ ಬಳಕೆಯ ಅವಧಿ ಇಷ್ಟೇ ಎಂದು ನಿಗದಿ ಇಲ್ಲ.



ನಮ್ಮ ಮೆಟ್ರೊ ಹೊಸ ಸ್ಮಾರ್ಟ್‌ಕಾರ್ಡ್

ಕಾರ್ಡ್ ಸದೃಢವಾಗಿರುವಷ್ಟು ಸಮಯ ಬಳಸಬಹುದು. ಸ್ವಯಂಚಾಲಿತ ಶುಲ್ಕ ಸಂಗ್ರಹ (ಎಎಫ್‌ಸಿ) ಗೇಟ್‌ಗಳಲ್ಲಿ ಕಾರ್ಡ್ ರೀಡ್ ಆಗದಿದ್ದರೆ ಬಿಎಂಆರ್‌ಸಿಎಲ್ ಹೊಸ ಕಾರ್ಡ್ ನೀಡಲಿದೆ. ಆದರೆ, ತಾಂತ್ರಿಕ ಕಾರಣ ಹೊರತುಪಡಿಸಿ ಕಾರ್ಡ್ ಮುರಿಯುವುದು ಇನ್ನಿತರ ಕಾರಣಗಳಿಂದ ಕಾರ್ಡ್ ನಿರುಪಯೋಗಿಯಾದರೆ ಶುಲ್ಕರಹಿತವಾಗಿ ಹೊಸ ಕಾರ್ಡ್ ನೀಡಲಾಗುವುದಿಲ್ಲ’ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

‘ಮೆಟ್ರೊ ನಿಲ್ದಾಣದಲ್ಲಿ ಕಾರ್ಡ್ ರೀಚಾರ್ಜ್ ಮಾಡಲು ಮೂರು ಬಾರಿ ಪ್ರಯತ್ನಿಸಿದ್ದೆ. ತಾಂತ್ರಿಕ ಕಾರಣದಿಂದ ಆಗುತ್ತಿಲ್ಲ ಎಂದು ಸಿಬ್ಬಂದಿ ಯಾವುದೇ ಶುಲ್ಕ ಪಡೆಯದೇ ಹೊಸ ಕಾರ್ಡ್ ನೀಡಿದರು. ಹಳೇ ಕಾರ್ಡ್‌ನಲ್ಲಿದ್ದ ₹83 ಹೊಸ ಕಾರ್ಡ್‌ಗೆ ವರ್ಗಾವಣೆಗೊಂಡಿದೆ. ಹೊಸ ಕಾರ್ಡ್ ರೀಚಾರ್ಜ್ ಮಾಡಿಕೊಂಡು ಬಂದೆ’ ಎಂದು ಹೊಸ ಕಾರ್ಡ್ ಪಡೆದ ಪ್ರಯಾಣಿಕರೊಬ್ಬರು ತಿಳಿಸಿದರು.

ಕೆಎಸ್‌ಎಂಸಿಎಲ್‌ಗೆ ₹492 ಕೋಟಿ ಆದಾಯ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣಿ ಮತ್ತು ಭೂ ವಿಜ್ಞಾನ ವ್ಯಾಪ್ತಿಗೆ ಬರುವ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್ (ಕೆಎಸ್‌ಎಂಸಿಎಲ್) ಸಂಸ್ಥೆಗೆ ತೆರಿಗೆಯ ನಂತರ ₹492.00 ಕೋಟಿ (ಅಂದಾಜು) ನಿವ್ವಳ ಆದಾಯ ಬರುವ ನಿರೀಕ್ಷೆಯಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಎಸ್‌.ಎಸ್. ಮಲ್ಲಿಕಾರ್ಜುನ ತಿಳಿಸಿದರು.

ಕೆಎಸ್‌ಎಂಸಿಎಲ್ ಸಂಸ್ಥೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

₹666 ಕೋಟಿ ವೆಚ್ಚದಲ್ಲಿ ಕಚೇರಿ ಹಾಗೂ ವಾಣಿಜ್ಯ ಸಮುಚ್ಚಯ ಕಟ್ಟಡ ನಿರ್ಮಾಣ ಮಾಡಲು ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಕೆಎಸ್‌ಎಂಸಿಎಲ್ ವತಿಯಿಂದ ಸರ್ಕಾರಿ ಶಾಲಾ ಕೊಠಡಿಗಳ ನಿರ್ಮಾಣ ಸೇರಿದಂತೆ ₹14.68 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿಧಿಯಡಿ ಕೈಗೊಳ್ಳಲಾಗುತ್ತಿದೆ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರು ತಿಳಿಸಿದರು.

‘ಸಂಪರ್ಕ ಸೇತುವೆ ಆಗಲಿದೆ ಆತ್ಮಕಥೆ’

ನಾಗಮಣಿ ಎಸ್‌. ರಾವ್ ಅವರ ‘ಸುದ್ದಿ ಸಂಗಾತಿಯ ಸ್ವಗತ’ ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುವಜನರಿಗೆ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದ ಬಗ್ಗೆ ತಿಳಿಸುವ ಜತೆಗೆ, ಹಿಂದಿನ ಮತ್ತು ಇಂದಿನ ಪೀಳಿಗೆಗಳ ನಡುವೆ ನನ್ನ ಆತ್ಮಕಥೆ ಸಂಪರ್ಕ ಸೇತುವೆಯಾಗಲಿದೆ’ ಎಂದು ಆಕಾಶವಾಣಿಯ ನಿವೃತ್ತ ಸುದ್ದಿ ಸಂಪಾದಕಿ ನಾಗಮಣಿ ಎಸ್. ರಾವ್ ಹೇಳಿದರು.

ಮಾಧ್ಯಮ ಚಿಂತನ ವೇದಿಕೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರ ಆತ್ಮಕಥೆ ‘ಸುದ್ದಿ ಸಂಗಾತಿಯ ಸ್ವಗತ’ ಪುಸ್ತಕ ಬಿಡುಗಡೆಯಾಯಿತು. ಈ ವೇಳೆ ಮಾತನಾಡಿದ ಅವರು, ‘ಸ್ವಾತಂತ್ರ್ಯ ಹೋರಾಟದ ಬಗ್ಗೆ ಈಗಿನ ತಲೆಮಾರಿನವರಿಗೆ ತಿಳಿಸಬೇಕಾಗಿದೆ. ಯುವಜನರಿಗೆ ಗಾಂಧೀಜಿ ಯಾರು ಎನ್ನುವುದೂ ತಿಳಿಯದಾಗಿದೆ. ಅವರು ಮದ್ದುಗುಂಡು, ಬಂದೂಕುಗಳು ಇಲ್ಲದೆ ಅಹಿಂಸಾ ಮಾರ್ಗದಿಂದ ಹೋರಾಟ ಮಾಡಿದ್ದರು ಅಂದರೆ ನಂಬುತ್ತಿಲ್ಲ. ನಾವು ಕಳೆದ ಕಾಲದ ರೀತಿ ನೀತಿಯನ್ನು ಕಟ್ಟಿಕೊಡುವ, ವೃತ್ತಿ ಜೀವನದ ಅನುಭವವನ್ನು ದಾಖಲಿಸುವ ಉದ್ದೇಶದಿಂದ ಆತ್ಮಕಥೆ ರಚಿಸಿದೆ’ ಎಂದರು.

ಪುಸ್ತಕ ಬಿಡುಗಡೆ ಮಾಡಿದ ಸಾಹಿತಿ ಹಂ.ಪ. ನಾಗರಾಜಯ್ಯ, ‘ಸಾಮಾನ್ಯವಾಗಿ ಆತ್ಮಕಥೆಯಲ್ಲಿ ಉತ್ಪ್ರೇಕ್ಷೆ ಇರುತ್ತದೆ. ಆದರೆ, ನಾಗಮಣಿ ಅವರ ಆತ್ಮಕಥೆಗೆ ಉತ್ಪ್ರೇಕ್ಷೆಯ ಸೋಂಕು ಕೂಡ ಸ್ಪರ್ಶಿಸಿಲ್ಲ. ತಮ್ಮ ಧ್ವನಿಯ ಮೂಲಕವೇ ಅವರು ಲಕ್ಷಾಂತರ ಜನರ ಮನಸ್ಸುಗಳನ್ನು ಗೆದ್ದಿದ್ದರು. ಈ ನಾಡಿಗೆ ಹೊಸ ಧ್ವನಿ ನೀಡಿದ ವ್ಯಕ್ತಿಯ ವಿಶಿಷ್ಟ ಬದುಕಿನ ಆಯಾಮವನ್ನು ಈ ಕೃತಿಯು ಬಿಂಬಿಸಲಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಾಗಮಣಿ ಎಸ್. ರಾವ್ ಅವರ ಬಗ್ಗೆ ಅಭಿನಂದನಾ ನುಡಿಗಳನ್ನಾಡಿದ ಪತ್ರಕರ್ತೆ ಕೆ.ಎಚ್. ಸಾವಿತ್ರಿ, ‘ನಾಗಮಣಿ ಅವರ ಆತ್ಮಕಥೆಯು ಪತ್ರಿಕೋದ್ಯಮ ನಡೆದು ಬಂದ ಹಾದಿಯನ್ನು ತಿಳಿಸಲಿದೆ. ಅವರು ತಾವು ಪಟ್ಟ ಕಷ್ಟಗಳ ಬಗ್ಗೆ ಆತ್ಮಕಥೆಯಲ್ಲಿ ಹೇಳಿಕೊಂಡಿಲ್ಲ’ ಎಂದರು.

ಕೃತಿಯ ಸಂಯೋಜಕಿಯೂ ಆಗಿರುವ ಪತ್ರಕರ್ತೆ ಮಾಲತಿ ಭಟ್ ಅವರು ಪುಸ್ತಕದ ಬಗ್ಗೆ ಮಾತನಾಡಿದರು. ಪತ್ರಕರ್ತೆ ಹಾಗೂ ಪ್ರಕಾಶಕಿ ಆರ್. ಪೂರ್ಣಿಮಾ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನುಂ, ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ ಉಪಸ್ಥಿತರಿದ್ದರು.


ಕಾರ್ಯಕ್ರಮದಲ್ಲಿ ಹಂ.ಪ. ನಾಗರಾಜಯ್ಯ ಅವರು ನಾಗಮಣಿ ಎಸ್‌. ರಾವ್ ಅವರನ್ನು ಅಭಿನಂದಿಸಿದರು. ಆಯೇಶಾ ಖಾನುಂ, ಎಚ್‌.ಎಲ್‌. ಪುಷ್ಪ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಜೂನಿಯರ್ ರೆಡ್‌ಕ್ರಾಸ್ ಉತ್ತೀರ್ಣರಾದವರಿಗೆ ಪ್ರತಿಭಾ ಪುರಸ್ಕಾರ, ರಕ್ತದಾನ ಶಿಬಿರ: ಉದ್ಘಾಟನೆ: ಲತಾ ಕುಮಾರಿ, ಅಧ್ಯಕ್ಷತೆ: ಜಿ. ಜಗದೀಶ, ಉಪಸ್ಥಿತಿ: ಬಸ್ರೂರು ರಾಜೀವ್ ಶೆಟ್ಟಿ, ವೂಡೇ ಪಿ. ಕೃಷ್ಣ, ರೋಶನಿ ಗೌಡ, ಆಯೋಜನೆ: ಭಾರತೀಯ ರೆಡ್‌ಕ್ರಾಸ್, ಸ್ಥಳ: ಕರ್ನಾಟಕ ರಾಜ್ಯ ಕಂದಾಯ ಇಲಾಖಾ ನೌಕರರ ಸಂಘ, ಜಿಲ್ಲಾಧಿಕಾರಿಗಳ ಕಚೇರಿ ಆವರಣ, ಕೆ.ಜಿ. ರಸ್ತೆ, ಬೆಳಿಗ್ಗೆ 9.30


ಲತಾ ಕುಮಾರಿ

ಪೀಣ್ಯ ದಾಸರಹಳ್ಳಿ ಸಮತಾ ಸೈನಿಕ ದಳ ಶತಮಾನೋತ್ಸವ, ಚೊಕ್ಕಸಂದ್ರ ಗ್ರಾಮ ಶಾಖೆ ಉದ್ಘಾಟನೆ: ಅತಿಥಿಗಳು: ಎಂ.ವೆಂಕಟಸ್ವಾಮಿ, ಬಿ.ಟಿ. ಲಲಿತಾನಾಯಕ್, ಆರ್.ಚಂದ್ರಶೇಖರ್, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ಸೌಂದರ್ಯ ಪ್ಯಾರಡೈಸ್ ಸಭಾಂಗಣ, ದಾಸರಹಳ್ಳಿ, ಬೆಳಿಗ್ಗೆ 11.30

ಹನುಮಗಿರಿ ಮೇಳದಿಂದ ಯಕ್ಷಗಾನ-ಪ್ರಸಂಗ: ‘ಸಾಕೇತ ಸಾಮ್ರಾಜ್ಞಿ’, ಆಯೋಜನೆ: ಯಕ್ಷಗಾನ ಅಭಿಮಾನಿಗಳು, ಸ್ಥಳ: ಸರ್ಕಾರಿ ಶಾಲೆ ಮೈದಾನ, ಮಲ್ಲೇಶ್ವರ ಪೊಲೀಸ್ ಠಾಣೆ ಎದುರು, ಮಲ್ಲೇಶ್ವರ, ಸಂಜೆ 5

25ನೇ ವರ್ಷದ ಪ್ರವಚನ ವಾಹಿನಿ: ‘ರಾಮಾಯಣದ ಆಯ್ದ ಭಾಗಗಳು’ ಉಪನ್ಯಾಸ: ಕೆ. ಲಕ್ಷ್ಮೀನಾರಾಯಣ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ರಾಮನವಮಿ ವಿಶೇಷ



87ನೇ ರಾಮೋತ್ಸವ ಸಮಾರಂಭ: ಭರತನಾಟ್ಯ: ಅದಿತಿ ಬಿ. ಶೇಷ್, ಪ್ರವಚನ: ಪಾವಗಡ ಪ್ರಕಾಶ್ ರಾವ್, ಭಕ್ತಿ ಭಾವ ಚಿತ್ರಮಂಜರಿ: ಗಾಯನ: ಸುಪ್ರಿಯಾ ರಘುನಂದನ್,ಕೀ ಬೋರ್ಡ್: ಪರಶುರಾಮ್ ಬಿಜಾಪುರ್, ಕೊಳಲು: ಶಿವಲಿಂಗ ರಾಜಪುರ, ತಬಲಾ: ಜಯಚಂದ್ರಾಚಾರ್, ರಿದಂ ಪ್ಯಾಡ್: ಯಶೋಧರ, ಆಯೋಜನೆ: ಎನ್.ಆರ್. ಕಾಲೊನಿ ಶ್ರೀರಾಮಮಂದಿರಂ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಎನ್. ಆರ್. ಕಾಲೊನಿ, ಬಸವನಗುಡಿ, ಸಂಜೆ 4.15ರಿಂದ

32ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಜೆ 5.15– ಗಾಯನ: ಪೂರ್ವಜ ವೆಂಕಟ್, ಪಿಟೀಲು: ಸನತ್ ಕುಮಾರ್ ನೈಬಿ, ಮೃದಂಗ: ಪ್ರವೀಣ್ ಹರಿಹರನ್,ಸಂಜೆ 6.30 ಕೊಳಲುವಾದನ: ಎಲ್.ವಿ. ಮುಕುಂದ್, ಪಿಟೀಲು: ನಳಿನಾ ಮೋಹನ್, ಮೃದಂಗ: ವಿನೋದ್ ಶ್ಯಾಮ್ ಅನೂರು, ಖಂಜೀರ: ಎ.ಎಸ್.ಎನ್. ಸ್ವಾಮಿ, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಹಾಡುಗಾರಿಕೆ: ಐಶ್ವರ್ಯ, ಸೌಂದರ್ಯ, ಪಿಟೀಲು: ಮತ್ತೂರ್ ಶ್ರೀನಿಧಿ, ಮೃದಂಗ: ಎಚ್.ಎಸ್. ಸುಧೀಂದ್ರ, ಘಟ: ಸುಕನ್ಯಾ ರಾಂಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ:ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

ವಸಂತ ನವರಾತ್ರಿ ಶ್ರೀರಾಮೋತ್ಸವ: ಗಾಯನ:ಟಿ. ಎಸ್. ಆನಂದ್, ಪಿಟೀಲು: ಸಿ.ಎಸ್. ಉಷಾ, ಮೃದಂಗ: ಎಚ್. ಎಸ್. ಕೃಷ್ಣಮೂರ್ತಿ, ಘಟ: ಎನ್. ಫಣೀಂದ್ರ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

71ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಸಂಜೆ 5.30–ಭರತನಾಟ್ಯ, ರಾತ್ರಿ 7–ನೃತ್ಯ ರೂಪಕ: ವೆಂಕಟೇಶ ನಾಟ್ಯ ಮಂದಿರ ವೃಂದದವರಿಂದ, ನಿರ್ದೇಶನ: ಮಹಿಮ ಹರೀಶ್, ಆಯೋಜನೆ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 7

ಬೆಂಗಳೂರು ಕರಗ ಮಹೋತ್ಸವ: ವಿಶೇಷ ಪೂಜೆಗಳು ಮತ್ತು ಮಹಾಮಂಗಳಾರತಿ, ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನಗರದ ಸೌಂದರ್ಯ ಹೆಚ್ಚಳಕ್ಕೆ ಕ್ರಮ: ಗಮನ ಸೆಳೆಯುತ್ತಿರುವ ಕ್ರೀಡಾ ಸಾಧಕರು – ಸಮಾಜ ಸುಧಾರಕರ ಕಲಾಕೃತಿಗಳು

ಕಂಬಗಳ ಮೇಲೆ ಅರಳಿದ ಕೀರ್ತಿ–ಸ್ಫೂರ್ತಿ



ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯಲ್ಲಿರುವ ಮೆಟ್ರೊ ಸ್ತಂಭಗಳ ಮೇಲೆ ಚನ್ನಪಟ್ಟಣದ ಗೊಂಬೆಗಳ ಕಲೆಯನ್ನು ಬಿಂಬಿಸುವ ಕಲಾಕೃತಿಗಳನ್ನು ಸುಂದರವಾಗಿ ಮೂಡಿಸಲಾಗಿದೆ ಚಿತ್ರ: ಎಂ.ಎಸ್. ಮಂಜುನಾಥ್



ಶಾಂತಿನಗರದ ಕೆಂಗಲ್ ಹನುಮಂತಯ್ಯ ರಸ್ತೆಯ ಮೇಲ್ಸೇತುವೆಯ ಕಂಬಗಳ ಮೇಲೆ ಬಿಡಿಸಿರುವ ಕ್ರಿಕೆಟ್ ಆಟಗಾರರ ಕಲಾಕೃತಿ ಚಿತ್ರ: ಪ್ರಶಾಂತ್ ಎಚ್.ಜಿ.

‘ನಗರದ ಸೌಂದರ್ಯಕ್ಕೆ ಆದ್ಯತೆ’

‘ನಗರದ ಸೌಂದರ್ಯ ಹೆಚ್ಚಿಸುವುದರ ಜತೆಗೆ ಸ್ವಚ್ಛತೆ ಕಾಪಾಡುವಂತೆ ಅರಿವು ಮೂಡಿಸಲು ಚಿತ್ರಗಳನ್ನು ಬಿಡಿಸಲಾಗಿದೆ. ಕಾರ್ಪೊರೇಟ್ ಸಂಸ್ಥೆಗಳ ಸಹಕಾರದೊಂದಿಗೆ 75 ಕಿ.ಮೀ. ಮಾರ್ಗದಲ್ಲಿ ಮೂರು ಹಂತಗಳಲ್ಲಿ ಕಂಬಗಳ ಮೇಲೆ ಚಿತ್ರ ಬಿಡಿಸುವ ಯೋಜನೆ ಇದೆ. ತುಮಕೂರು ಮಾರ್ಗದಲ್ಲಿ ಸ್ಪರ್ಶ್ ಆಸ್ಪತ್ರೆ, ಎಂ.ಜಿ.ರಸ್ತೆ ಮಾರ್ಗದಲ್ಲಿ ಡಿಸ್ಕವರಿ ವಿಲೇಜ್ ಸಂಸ್ಥೆ.. ಹೀಗೆ ಕಾರ್ಪೊರೇಟ್ ಸಂಸ್ಥೆಗಳು ಕೈ ಜೋಡಿಸಿವೆ. ನಗರದ ಸೌಂದರ್ಯ ಹಾಗೂ ಶುಚಿತ್ವ ಕಾಪಾಡಲು ಜನರು ಸಹಕಾರ ನೀಡಬೇಕು’ ಎಂದು ಬಿಎಂಆರ್‌ಸಿಎಲ್ ಉಪ ಮುಖ್ಯ ಎಂಜಿನಿಯರ್ (ಸ್ವತ್ತು ಅಭಿವೃದ್ಧಿ ವಿಭಾಗ) ಆರ್.ರಾಘವೇಂದ್ರ ರಾವ್ ಮನವಿ ಮಾಡಿದರು.

• ಕೆ.ಎಸ್.ಸುನಿಲ್

ಬೆಂಗಳೂರು: ಮೆಟ್ರೊ ಸ್ತಂಭಗಳನ್ನು ನೋಡಿ, ‘ಕಂಬದ ಮ್ಯಾಲಿನ ಗೊಂಬಿಯೇ’ ಹಾಡು ಗುನುಗುವಂತಾದರೆ, ಮೇಲ್ಸೇತುವೆಯ ಮೇಲಿನ ಕ್ರೀಡಾ ಸಾಧಕರ ಚಿತ್ರ ಕಂಡು ನಗು ಮಿನುಗುತ್ತದೆ. ಸಮಾಜ ಸುಧಾರಕರ ಚಿತ್ರಗಳು ಮಕ್ಕಳಲ್ಲಿ ಯಾರಿವರು ಎಂಬ ಕುತೂಹಲವನ್ನೂ ಮೂಡಿಸುತ್ತವೆ. ‘ನಮ್ಮ ಮೆಟ್ರೊ’ ಸೌಂದರ್ಯದೊಂದಿಗೆ ಸಂಸ್ಕೃತಿ, ಸ್ಫೂರ್ತಿ ಮತ್ತು ಕೀರ್ತಿಯನ್ನು ಒಟ್ಟೊಟ್ಟಿಗೆ ಒಡಮೂಡಿಸಿದೆ.

‘ಬ್ರ್ಯಾಂಡ್ ಬೆಂಗಳೂರು’ ಯೋಜನೆಯಡಿ ಮೆಟ್ರೊ ಪಿಲ್ಲರ್ ಹಾಗೂ ಐತಿಹಾಸಿಕ ಪಾರಂಪರಿಕ ಕಟ್ಟಡಗಳ ದೀಪಾಲಂಕಾರದ ಮೂಲಕ ನಗರದ ಸೌಂದರ್ಯ ಹೆಚ್ಚಿಸಲು ಸರ್ಕಾರ ಮುಂದಾಗಿದೆ. ಈಗಾಗಲೇ ಕೆಲವು ಸ್ತಂಭಗಳಲ್ಲಿ ನಾಡಿನ ಕಲೆಯ ಅನಾವರಣಗೊಳಿಸುವ ಕಾರ್ಯ ಸಾಗಿದೆ.

‘ನಮ್ಮ ಮೆಟ್ರೊ’ ಪಿಲ್ಲರ್‌ಗಳಲ್ಲಿ ಚನ್ನಪಟ್ಟಣದ ಗೊಂಬೆಗಳೇ ಜೀವತಳೆದಂತೆ ಬಣ್ಣಬಣ್ಣಗಳಲ್ಲಿ ನಳನಳಿಸುತ್ತಿವೆ. ಶಾಂತಿನಗರದ ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿ ‘ಕ್ರೀಡಾ ಜಂಕ್ಷನ್’ ಎಂದು ಹೆಸರಿಸಿ, ಪ್ರತಿ ಸ್ತಂಭಕ್ಕೂ ನೀಲಿ ಬಣ್ಣದ ಜರ್ಸಿ ಧರಿಸಿರುವ ಕ್ರಿಕೆಟ್ ಪಟುಗಳ ಚಿತ್ರಗಳನ್ನು ಬಿಡಿಸಲಾಗಿದೆ. ಅದೇ ರೀತಿ ಮೈಸೂರು ರಸ್ತೆಯ ಬಾಲಗಂಗಾಧರ ನಾಥ ಸ್ವಾಮೀಜಿ ಮೇಲ್ಸೇತುವೆಯ ಪಿಲ್ಲರ್‌ಗಳಲ್ಲಿ ಸಮಾಜ ಸುಧಾರಕರ ಭಾವಚಿತ್ರಗಳು ಕಲಾತ್ಮಕವಾಗಿ ಮೂಡಿ ಬಂದಿವೆ.

ನಮ್ಮ ಮೆಟ್ರೊವನ್ನು ಮತ್ತಷ್ಟು ಆಕರ್ಷಣೀಯವಾಗಿಸುವ ನಿಟ್ಟಿನಲ್ಲಿ ಬಿಎಂಆರ್‌ಸಿಎಲ್ ಹೊಸ ಹೆಜ್ಜೆ ಇಟ್ಟಿದೆ. ಇದರ ಭಾಗವಾಗಿ ನಗರದ ಹುಸ್ಕೂರು ಗೇಟ್‌ನಿಂದ ಹೆಬ್ಬಗೋಡಿವರೆಗಿನ ಮಾರ್ಗದಲ್ಲಿರುವ ಮೆಟ್ರೊ ಸ್ತಂಭಗಳ ಮೇಲೆ ‘ಪಿಲ್ಲರ್ಸ್ ಆಫ್ ಬೆಂಗಳೂರು-ಪ್ರತಿನಿತ್ಯದ ಚಾಂಪಿಯನ್‌ಗಳ ಸಂಭ್ರಮಾಚರಣೆ’ ಶೀರ್ಷಿಕೆಯಡಿ ಚನ್ನಪಟ್ಟಣದ ಗೊಂಬೆಗಳ ಕಲೆಯನ್ನು ಬಿಂಬಿಸುವ ಕಲಾಕೃತಿಗಳನ್ನು ಸುಂದರವಾಗಿ ಮೂಡಿಸಲಾಗಿದೆ.

ಬಯೋಕಾನ್ ಫೌಂಡೇಷನ್‌ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿ ಈ ಯೋಜನೆ ಅನುಷ್ಠಾನ ಮಾಡಲಾಗಿದೆ.

ಹೂವು ಮಾರಾಟಗಾರರು, ಎಲೆಕ್ಟ್ರೀಷಿಯನ್, ಟೇಲರ್‌ಗಳು, ವೈದ್ಯರು, ದಾದಿಯರು, ಸಂಗೀತಗಾರರು, ವಿಜ್ಞಾನಿಗಳು ಸೇರಿ ದೈನಂದಿನ ಜೀವನದ ಭಾಗವಾಗಿರುವ ಎಲ್ಲಾ ಪಾತ್ರಧಾರಿಗಳ ಚಿತ್ರಗಳು ಚನ್ನಪಟ್ಟಣದ ಗೊಂಬೆಗಳಂತೆ ಸುಂದರವಾಗಿ ಮೂಡಿಬಂದಿವೆ.

‘ಪಿಲ್ಲರ್ಸ್ ಆಫ್ ಬೆಂಗಳೂರು’ ಹೆಸರಿನಲ್ಲಿ ಹುಸ್ಕೂರು ಗೇಟ್‌ನಿಂದ ಪ್ರಾರಂಭವಾಗುವ ಮೆಟ್ರೊ ಪಿಲ್ಲರ್‌ಗಳ ಮೇಲೆ ನಮ್ಮ ಸಾಂಪ್ರದಾಯಿಕ ಕಲೆಯನ್ನು ಬಿಂಬಿಸುವ ಕಲಾಕೃತಿಗಳನ್ನು ಚಿತ್ರಿಸಲಾಗಿದೆ. ಈ ಎಲ್ಲ ಕಲಾಕೃತಿಗಳು ಬೀದಿ ಬದಿ ವ್ಯಾಪಾರಿಗಳು, ರೈತರು, ಪೌರಕಾರ್ಮಿಕರು, ಸ್ವಚ್ಛತಾ ಕಾರ್ಮಿಕರು, ಆಟೊ ಚಾಲಕರ ಚಿತ್ರಗಳನ್ನು ಒಳಗೊಂಡಿವೆ. ಚನ್ನಪಟ್ಟಣದ ಗೊಂಬೆಗಳ ಸ್ಪರ್ಶ ನೀಡಿ ಈ ಚಿತ್ರಗಳನ್ನ ಚಿತ್ರಿಸಿರುವುದು ವಿಶೇಷ’ ಎಂದು ಬಯೋಕಾನ್ ಫೌಂಡೇಷನ್ ಮಿಷನ್ ತಿಳಿಸಿದೆ.



ಮೈಸೂರು ರಸ್ತೆಯ ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯ ಕಂಬಗಳ ಮೇಲೆ ಸಮಾಜ ಸುಧಾರಕರ ಕಲಾಕೃತಿಗಳನ್ನು ರಚಿಸಲಾಗಿದೆ ಪ್ರಜಾವಾಣಿ ಚಿತ್ರ

ಬಿಬಿಎಂಪಿ ವತಿಯಿಂದ ಶಾಂತಿನಗರದ ಕೆ.ಎಚ್. ರಸ್ತೆಯಲ್ಲಿರುವ ಮೇಲ್ಸೇತುವೆ ಪಿಲ್ಲರ್‌ಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ ಮತ್ತು ದೇಶಕ್ಕೆ ಕೀರ್ತಿ ತಂದ ಕ್ರಿಕೆಟಿಗರ ಭಾವಚಿತ್ರಗಳನ್ನು ಚಿತ್ರಿಸಲಾಗಿದೆ.

‘ಸಾಧಕರ ಚಿತ್ರಗಳು ಸಾಧನೆಗೆ ಪ್ರೇರಣೆ’

‘ದೇಶಕ್ಕೆ ಕೀರ್ತಿ ತಂದುಕೊಟ್ಟ ಕ್ರೀಡಾಪಟುಗಳ ಭಾವಚಿತ್ರಗಳನ್ನು ಕಂಬಗಳಲ್ಲಿ ನೋಡುವುದಕ್ಕೆ ಖುಷಿಯಾಗುತ್ತದೆ. ಈ ಚಿತ್ರಗಳನ್ನು ನೋಡಿದಾಗ ಮಕ್ಕಳಿಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂಬ ಆಸೆ ಮೂಡುತ್ತದೆ. ಮೇಲ್ಸೇತುವೆ ಕೆಳಗೆ ಕುಳಿತುಕೊಳ್ಳಲು ಕಲ್ಲಿನ ಬೆಂಚುಗಳನ್ನು ಹಾಕಲಾಗಿದೆ. ಹಾಗಾಗಿ ಈ ಪ್ರದೇಶದಲ್ಲಿ ಯಾರೂ ಗಲೀಜು ಮಾಡುವುದಿಲ್ಲ’ ಎಂದು ಸ್ಥಳೀಯ ನಿವಾಸಿ ರಮೇಶ್ ರಾಜು ತಿಳಿಸಿದರು.



‘ಕ್ರೀಡಾ ಜಂಕ್ಷನ್’ನಲ್ಲಿ ರಾಹುಲ್ ದ್ರಾವಿಡ್, ಜಾವಗಲ್ ಶ್ರೀನಾಥ್, ಇ.ಎ.ಎಸ್. ಪ್ರಸನ್ನ, ಸೈಯದ್ ಕಿರ್ಮಾನಿ, ವಿ.ಸುಬ್ರಹ್ಮಣ್ಯ, ಬಿ.ಎಸ್.ಚಂದ್ರಶೇಖರ್, ಜಿ.ಆರ್.ವಿಶ್ವನಾಥ್, ಅನಿಲ್ ಕುಂಬ್ಳೆ, ರೋಜರ್ ಬಿನ್ನಿ, ಶಾಂತಾ ರಂಗಸ್ವಾಮಿ ಅವರ ಆಟದ ವೈಖರಿಯನ್ನು ಚಿತ್ರಗಳಲ್ಲಿ ನೋಡಬಹುದು. ಅಲ್ಲದೇ ಬ್ಯಾಡ್ಮಿಂಟನ್ ತಾರೆ ಪ್ರಕಾಶ್ ಪಡುಕೋಣೆ ಅವರ ಆಟದ ಭಂಗಿ ಸಹ ನೋಡುಗರನ್ನು ಆಕರ್ಷಿಸುತ್ತದೆ.

ಮೈಸೂರು ರಸ್ತೆಯ ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯ ಪಿಲ್ಲರ್‌ಗಳಲ್ಲಿ ಸಮಾಜ ಸುಧಾರಕರು ಹಾಗೂ ಹೋರಾಟಗಾರರ ಭಾವಚಿತ್ರವನ್ನು ಬಿಡಿಸಲಾಗಿದೆ. ಮಹರ್ಷಿ ವಾಲ್ಮೀಕಿ, ಟಿಪ್ಪು ಸುಲ್ತಾನ್, ಅಕ್ಕಮಹಾದೇವಿ, ಸಂತ ಸೇವಾಲಾಲ್, ಬಾಲಗಂಗಾಧರನಾಥ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ ಸೇರಿದಂತೆ ಹಲವು ಮಹನೀಯರ ಚಿತ್ರಗಳು ಗಮನ ಸೆಳೆಯುತ್ತವೆ.

‘ನಗರದ ಸೌಂದರ್ಯ ಹೆಚ್ಚಿಸಲು ಕೆಲವು ಕಂಬಗಳಿಗೆ ಚಿತ್ರಗಳನ್ನು ಬಿಡಿಸಲಾಗಿದೆ. ಇನ್ನು ಕೆಲವು ಕಂಬಗಳನ್ನು ಜಾಹೀರಾತಿಗೆ ಮೀಸಲಿಡಲಾಗಿದೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ‘ಪ್ರಜಾವಾಣಿ’ಗೆ ತಿಳಿಸಿದರು.

ರಾಜ್ಯದ ಅತಿ ದೊಡ್ಡ ಶೈಕ್ಷಣಿಕ ಮೇಳಕ್ಕೆ ನಾಲ್ಕು ದಿನವಷ್ಟೇ ಬಾಕಿ..

ನೀಟ್, ಸಿಇಟಿ: ‘ಎಡ್ಯುವರ್ಸ್’ ಪಕ್ಷಿನೋಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಏ.16,-17ರಂದು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಯುತ್ತಿದ್ದು, ಪರೀಕ್ಷೆಯ ಪೂರ್ವಸಿದ್ಧತೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ಇಡೀ ಪ್ರಕ್ರಿಯೆಯ ಪಕ್ಷಿನೋಟ ಒದಗಿಸಲಿದೆ ‘ಎಡ್ಯುವರ್ಸ್’.

ಬೆಂಗಳೂರು ಅರಮನೆ ಮೈದಾನದಲ್ಲಿ (ತ್ರಿಪುರವಾಸಿನಿ) ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಪತ್ರಿಕೆಗಳಾದ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಏಪ್ರಿಲ್ 12 ಮತ್ತು 13ರಂದು ಆಯೋಜಿಸಿರುವ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳವು ‘ಎಡ್ಯುವರ್ಸ್’ ಸಿಇಟಿ, ನೀಟ್ ಪರೀಕ್ಷೆ, ನಂತರದ ಭವಿಷ್ಯ ಕುರಿತು ಖಚಿತ ಮಾಹಿತಿಯ ಆಗರವಾಗಿರಲಿದೆ.

ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ಕೋರ್ಸ್ ಜ್ಞಾನದ ಜತೆಗೆ, ಭವಿಷ್ಯವನ್ನೂ ಭದ್ರಮಾಡಬೇಕು. ಆದಾಯದ ಮೂಲವೂ ಆಗಬೇಕು. ಜೀವನಕ್ಕೆ ಆದಾಯವೂ ಮುಖ್ಯ. ಆಯ್ಕೆ ಮಾಡಿಕೊಂಡ ವೃತ್ತಿಯ ಜತೆಗೆ ನಿವೃತ್ತಿಯವರೆಗೂ ಸಾಗಬೇಕಿದೆ.

ಮುಖ್ಯಾಂಶಗಳು

- ಆಯೋಜನೆ: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’
- ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಂಗಳೂರು
- ದಿನಾಂಕ: ಏಪ್ರಿಲ್ 12–13 ಸಮಯ: ಬೆಳಿಗ್ಗೆ 10ರಿಂದ

ಅದಕ್ಕಾಗಿ ಮುಂದೊಂದು ದಿನ ವೃತ್ತಿಯ ಆಯ್ಕೆ ತಪ್ಪು ಎನಿಸದಂತೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ‘ಆ್ಯಡ್ 6 ಅಡ್ವರ್ಟೈಸಿಂಗ್’ ಸಹಯೋಗದ ಈ ಶೈಕ್ಷಣಿಕ ಮೇಳ ನೆರವಾಗಲಿದೆ.

ಸಿಇಟಿ, ನೀಟ್ ಪ್ರಕ್ರಿಯೆ ಮತ್ತು ‘ಎಡ್ಯುವರ್ಸ್’: ಸಿಇಟಿ ಪರೀಕ್ಷೆ ಬರೆಯಲು ಹಾಗೂ ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ ಸೀಟುಗಳ ಹಂಚಿಕೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ (ಕೆಇಎ) ಈ ಬಾರಿ 3.71 ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಪ್ರಾಧಿಕಾರದ ಅಂಕಿಅಂಶಗಳ ಪ್ರಕಾರ ಅವರಲ್ಲಿ 3.30 ಲಕ್ಷ ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆ ಬರೆಯಲಿದ್ದಾರೆ. 41 ಸಾವಿರ ಅಭ್ಯರ್ಥಿಗಳು ವೈದ್ಯಕೀಯ ಸೀಟು ಹಂಚಿಕೆ ಕೋರಿ ನೋಂದಣಿ ಮಾಡಿಕೊಂಡಿದ್ದಾರೆ.

ಪ್ರಜಾವಾಣಿ DH ಎಡ್ಯುವರ್ಸ್ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಪ್ರವೇಶ ನೋಂದಣಿಗಾಗಿ ಉಪಯೋಗಿಸಿ..

ವೈದ್ಯಕೀಯ, ದಂತ ವೈದ್ಯಕೀಯ ಹಾಗೂ ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ನೀಟ್-25ರಲ್ಲಿ ಅರ್ಹತೆ ಪಡೆಯಬೇಕು ಹಾಗೂ ಕಡ್ಡಾಯವಾಗಿ ಕೆಇಎನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಿರಬೇಕು. ಇಂತಹ ಎಲ್ಲ ವಿಷಯಗಳ ಸಂಪೂರ್ಣ ಮಾಹಿತಿಯನ್ನು ‘ಎಡ್ಯುವರ್ಸ್’ ನೀಡುವ ಜತೆಗೆ, ಗೊಂದಲಗಳಿಗೆ ಪರಿಹಾರ ಕಲ್ಪಿಸಲಿದೆ.

ದಯಾನಂದ ಸಾಗರ್ ವಿಶ್ವವಿದ್ಯಾಲಯ, ಐಸಿಎಫ್‌ಎಐ, ಮಾಹೆ, ಸಪ್ತಗಿರಿ ಎನ್‌ಪಿಎಸ್, ಪಾರುಲ್ ವಿಶ್ವವಿದ್ಯಾಲಯ, ಗಾರ್ಡನ್ ಸಿಟಿ ವಿಶ್ವವಿದ್ಯಾಲಯ, ಗೀತಂ ವಿಶ್ವವಿದ್ಯಾಲಯ, ಎಸ್‌ಆರ್‌ಎಂ ವಿಶ್ವವಿದ್ಯಾಲಯ, ಕೆಎಲ್‌ಇ, ಕೆಎಸ್‌ಜಿಐ, ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆಗಳು, ಎಎಂಸಿ, ನಾಗಾರ್ಜುನ ಎಂಜಿನಿಯರಿಂಗ್ ಕಾಲೇಜು, ಎಂವಿಜೆಟಿ, ಎಂಐಟಿ-ಡಬ್ಲ್ಯೂಪಿಯು, ಎಐಎಂಎಸ್, ಹಿಂದೂಸ್ತಾನ್ ಅಕಾಡೆಮಿ, ವಿದ್ಯಾವರ್ಧಕ, ಹರ್ಷ ಸಂಸ್ಥೆಗಳು, ಡಾ.ಎಸ್. ಆರ್. ಚಂದ್ರಶೇಖರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್, ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಆಕಾಶ್ ಗ್ರೂಪ್, ಎಸ್.ಇ.ಎ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ವಿಷನ್ ಐಎಎಸ್, ಎಸ್‌ಡಿಎಂ -ಉಜಿರೆ, ಸೌಂದರ್ಯ ಗ್ರೂಪ್, ಆರ್‌ವಿ ವಿಶ್ವವಿದ್ಯಾಲಯ, ಜಿಎಸ್‌ಎಸ್‌ಎಸ್, ಕೆಎಸ್‌ಒಯು, ಎಎಂಇಟಿ ವಿಶ್ವವಿದ್ಯಾಲಯ, ಸಂಜಯ್ ಗೋದಾವತ್, ಎಂಐಟಿ ಎಡಿಟಿ ಸೇರಿದಂತೆ 60ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳು, ಪೋಷಕರಿಗೆ ದಾರಿ ತೋರಲಿವೆ.

ಸಂಕ್ಷಿಪ್ತ ಸುದ್ದಿ

ಭಗವಾನ್ ಮಹಾವೀರ ಜಯಂತಿ 10ರಂದು



ಬೆಂಗಳೂರು: ಭಗವಾನ್ ಮಹಾವೀರ ಜಯಂತಿ ಪ್ರಯುಕ್ತ ಜೈನ್ ಯುವ ಸಂಘಟನೆಯಿಂದ ಏಪ್ರಿಲ್ 10ರಂದು ಬೆಳಿಗ್ಗಿನಿಂದ ಸಂಜೆ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ಅಧ್ಯಕ್ಷ ಮಹಾವೀರ್ ಮುನೋತ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 7.30ಕ್ಕೆ ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ವೈಭವದ ಮೆರವಣಿಗೆ ನಡೆಯಲಿದೆ. ಬೆಳಿಗ್ಗೆ 10.30ಕ್ಕೆ ಅಹಿಂಸಾ ಮತ್ತು ವಿಶ್ವಶಾಂತಿ ಸಮಾವೇಶ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ವಿವಿಧ ಪಕ್ಷಗಳ ನಾಯಕರು, ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದರು.

ಮಧ್ಯಾಹ್ನ 1.21ಕ್ಕೆ ಗುರುಭಗವಂತರಿಂದ ಮಹಾಮಂಗಳೀಕ ನೆರವೇರಲಿದೆ. ಸಂಜೆ ಆದಿ ತೀರ್ಥಂಕರರ ಪಂಚಕಲ್ಯಾಣಗಳನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಅಂದು ರಕ್ತದಾನ, ಕಣ್ಣು ಪರೀಕ್ಷೆ, ಮಧುಮೇಹ, ರಕ್ತದೊತ್ತಡ ಪರೀಕ್ಷೆ ಶಿಬಿರ ಸಹಿತ ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಜೈನ್ ಯುವ ಸಂಘಟನೆಯ ಕಾರ್ಯದರ್ಶಿ ನೀರಜ್ ಕಟಾರಿಯಾ, ಹಿತೇಶ್ ಕಾಂಕಲಿಯ, ಮಾಧ್ಯಮ ಸಂಚಾಲಕ ಚಂದ್ರಶೇಖರಯ್ಯ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಂದ ಸ್ವಚ್ಛತೆ; ಶಿಕ್ಷಕರಿಗೆ ಎಚ್ಚರಿಕೆ

ಬೆಂಗಳೂರು: ವಿದ್ಯಾರ್ಥಿಗಳನ್ನು ಶಾಲಾ ಸ್ವಚ್ಛತಾ ಕಾರ್ಯದಲ್ಲಿ ಬಳಸಿಕೊಳ್ಳುವ ಶಿಕ್ಷಕರ ಮೇಲೆ ಎಫ್‌ಐಆರ್ ದಾಖಲಿಸಲಾಗುವುದು ಎಂದು ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಬೆಂಗಳೂರು ಉತ್ತರ ಜಿಲ್ಲೆಯ ಶಾಲೆಯೊಂದರಲ್ಲಿ ಮಕ್ಕಳಿಂದ ಶಾಲಾ ಆವರಣ ಹಾಗೂ ಮತ್ತೊಂದು ಶಾಲೆಯಲ್ಲಿ ಶೌಚಾಲಯ ಸ್ವಚ್ಛಗೊಳಿಸುವಂತೆ ಒತ್ತಾಯಿಸಿದ ಘಟನೆ ವರದಿಯಾದ ಹಲವು ತಿಂಗಳ ನಂತರ ಇಲಾಖೆ ಶಿಕ್ಷಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಪ್ರಸ್ತುತ, ಶಾಲೆಗಳ ನಿರ್ವಹಣೆಗಾಗಿ 1ರಿಂದ 30 ವಿದ್ಯಾರ್ಥಿಗಳಿದ್ದರೆ ವಾರ್ಷಿಕ ₹4,000, 100 ವಿದ್ಯಾರ್ಥಿಗಳಿದ್ದರೆ ₹10,000 ನೀಡಲಾಗುತ್ತಿದೆ. ಈ ಮೊತ್ತವನ್ನು ಕುಡಿಯುವ ನೀರಿನ ವೆಚ್ಚ, ಆವರಣ ಮತ್ತು ಶೌಚಾಲಯಗಳ ಸ್ವಚ್ಛತಾ ಕಾರ್ಯಕ್ಕೆ ಬಳಸಿಕೊಳ್ಳಬೇಕಿದೆ.

ಕವಿತಾ ರೆಡ್ಡಿ ಸದಸ್ಯತ್ವ ರದ್ದತಿಗೆ ಸೂಚನೆ

ಬೆಂಗಳೂರು: ಪಕ್ಷದಿಂದ ಉಚ್ಚಾಟನೆಗೊಂಡಿರುವ ಕವಿತಾ ರೆಡ್ಡಿ ಅವರ ಕಾರ್ಮಿಕ ಕಲ್ಯಾಣ ಮಂಡಳಿಯ ಸದಸ್ಯತ್ವ ರದ್ದುಪಡಿಸಬೇಕು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರಿಗೆ ಕೆಪಿಸಿಸಿ ಶಿಸ್ತು ಪಾಲನಾ ಸಮಿತಿ ಸೂಚಿಸಿದೆ.

‘ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಕಾರಣಕ್ಕೆ 2024ರ ಸೆಪ್ಟೆಂಬರ್ 23ರಂದೇ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳ ಅವಧಿಗೆ ಕವಿತಾ ರೆಡ್ಡಿ ಅವರನ್ನು ಉಚ್ಚಾಟಿಸಲಾಗಿದೆ. ಆದರೆ, ಅವರು ನಿಮ್ಮ ಇಲಾಖೆಯ ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸದಸ್ಯರಾಗಿ ಮುಂದುವರಿದಿರುವ ಬಗ್ಗೆ ದೂರುಗಳು ಬಂದಿವೆ. ಹೀಗಾಗಿ, ಅವರ ಸದಸ್ಯತ್ವ ರದ್ದುಪಡಿಸಬೇಕು’ ಎಂದು ಲಾಡ್ ಅವರಿಗೆ ಕೆಪಿಸಿಸಿ ಶಿಸ್ತುಪಾಲನಾ ಸಮಿತಿ ಪತ್ರ ಬರೆದಿದೆ.

ಕೈಗಾರಿಕಾ ಮಾಲಿನ್ಯ ಅಧ್ಯಯನಕ್ಕೆ ಉನ್ನತ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ 215 ಕೈಗಾರಿಕಾ ಪ್ರದೇಶಗಳಲ್ಲಿನ ಕೈಗಾರಿಕೆಗಳಿಂದ ಆಗುತ್ತಿರುವ ಮಾಲಿನ್ಯ ಕುರಿತು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಭಾರತೀಯ ತಂತ್ರಜ್ಞಾನ ಸಂಸ್ಥೆಯಂತಹ (ಐಐಟಿ) ಉನ್ನತ ಮಟ್ಟದ ಸಂಸ್ಥೆಗಳಿಂದ ವಿಸ್ತೃತ ಅಧ್ಯಯನ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಸಿಇಒ ಮಹೇಶ್, ತಾಂತ್ರಿಕ ಸಲಹೆಗಾರ ಡಾ.ಅರವಿಂದ ಗಲಗಲಿ ಸೇರಿದಂತೆ ಉನ್ನತ ಅಧಿಕಾರಿಗಳೊಂದಿಗೆ ಸೋಮವಾರ ಅವರು ಸಭೆ ನಡೆಸಿದರು.

‘ಕೈಗಾರಿಕಾ ಪ್ರದೇಶಗಳಲ್ಲಿ ಉದ್ಯಮ ನಡೆಸಲು ಅನುಮತಿ ನೀಡುವಾಗ ಸರ್ಕಾರ ಹಲವು ಮಾನದಂಡ ನೀಡುತ್ತದೆ. ಆದರೆ, ನಂತರದ ದಿನಗಳಲ್ಲಿ ಏನಾಗುತ್ತದೆ ಎನ್ನುವುದರ ಪರಿಶೀಲನೆ ಅಗತ್ಯ. ಉದ್ಯಮಗಳನ್ನು ಬೆಳೆಸುವ ಜತೆಯಲ್ಲೇ ನೆಲ, ಜಲ, ವಾಯು, ಕೃಷಿ ಮತ್ತು ಮನುಷ್ಯರ ಮೇಲಾಗುತ್ತಿರುವ ಪರಿಣಾಮಗಳನ್ನೂ ಅಧ್ಯಯನ ಮಾಡಿ, ಅವುಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು’ ಎಂದು ಸೂಚಿಸಿದರು.

ಕೈಗಾರಿಕಾ ಮಾಲಿನ್ಯ ಕುರಿತು ಅಧ್ಯಯನಕ್ಕಾಗಿ ಸೂಕ್ತ ಸಂಸ್ಥೆಯನ್ನು ಗುರುತಿಸಬೇಕು. ನೇಮಕ ಮಾಡಿದ ಸಂಸ್ಥೆಯ ತಂಡಗಳು ಎಲ್ಲಾ ಕೈಗಾರಿಕಾ ಪ್ರದೇಶಗಳಿಗೂ ಖುದ್ದಾಗಿ ಭೇಟಿ ನೀಡಬೇಕು. ನಿಗದಿತ ಕಾಲಮಿತಿಯ ಒಳಗೆ ವರದಿಯನ್ನು ಸಲ್ಲಿಸಬೇಕು. ಮಾಲಿನ್ಯದ ತೀವ್ರತೆ ಆಧರಿಸಿ, ಆಯಾ ಉದ್ಯಮಗಳು ಯಾವ ಬಗೆಯ ಪರಿಹಾರ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು ಎಂಬ ಸಲಹೆ ನೀಡಬೇಕು ಎಂದು ಹೇಳಿದರು.

87ನೇ ರಾಮನವಮಿ ಸಂಗೀತೋತ್ಸವದಲ್ಲಿ ನ್ಯಾ. ರಾಮಚಂದ್ರ ಹುದ್ದಾರ

‘ಧರ್ಮ ಇದ್ದ ಕಡೆ ನ್ಯಾಯವಿರುತ್ತದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದಲ್ಲಿ ಸ್ವಾರ್ಥ, ದ್ವೇಷ ಮನೋಭಾವನೆ ಹೆಚ್ಚಾಗುತ್ತಿದೆ. ಇಂಥ ಧಾರ್ಮಿಕ ಆಚರಣೆಗಳ ಮೂಲಕ ಉತ್ತಮ ಗುಣಗಳನ್ನು ಬೆಳೆಸಿಕೊಂಡು ಮಾದರಿ ಜೀವನ ನಡೆಸಬೇಕು’ ಎಂದು ಹೈಕೋರ್ಟ್ ನ್ಯಾಯಮೂರ್ತಿ ರಾಮಚಂದ್ರ ಡಿ. ಹುದ್ದಾರ ತಿಳಿಸಿದರು.

ಶ್ರೀರಾಮ ಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ ಟ್ರಸ್ಟ್ ನಗರದ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ ‘87ನೇ ಶ್ರೀ ರಾಮನವಮಿ ಸಂಗೀತೋತ್ಸವ ಉದ್ಘಾಟನೆ’ ಮತ್ತು ‘ಎಸ್.ಎಂ. ಕೃಷ್ಣ ಸ್ಮಾರಕ ರಾಷ್ಟ್ರೀಯ ಸಂಗೀತ ಪ್ರಶಸ್ತಿ’ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಧರ್ಮ ಇದ್ದ ಕಡೆ ನ್ಯಾಯ ಇರುತ್ತದೆ. ಧರ್ಮದಲ್ಲಿ ಅಧರ್ಮ ಕೂಡಿದರೆ ಸಮಾಜ ಹಾಳಾಗುತ್ತದೆ. ಪ್ರತಿಯೊಬ್ಬ ಮನುಷ್ಯ ಆದರ್ಶವಾಗುವ ಮೂಲಕ ಸಮಾಜದ ಸುಧಾರಣೆಗೆ ತಮ್ಮ ಜೀವನವನ್ನು ಮುಡುಪಾಗಿ ಇಡಬೇಕು’ ಎಂದು ಸಲಹೆ ನೀಡಿದರು.

‘ರಾಮನ ಆದರ್ಶವನ್ನು ನಾವೆಲ್ಲರೂ ಪಾಲಿಸಿದರೆ ಸಮಾಜ ಸುಧಾರಣೆ ಮಾಡಬಹುದು. ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು ಮಾದರಿ ಜೀವನ ನಡೆಸಬೇಕು’ ಎಂದರು.



ಶ್ರೀರಾಮ ಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ ಟ್ರಸ್ಟ್ ಆಯೋಜಿಸಿದ್ದ 87ನೇ ರಾಮನವಮಿ ಸಂಗೀತೋತ್ಸವದಲ್ಲಿ ವಿದ್ವಾನ್ ಸಂದೀಪ್ ನಾರಾಯಣ್ ಅವರಿಗೆ ‘ಎಸ್.ಎಂ.ಕೃಷ್ಣ ಸ್ಮಾರಕ ರಾಷ್ಟ್ರೀಯ ಸಂಗೀತ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಎಸ್.ಎನ್.ವರದರಾಜ್, ಮಂಡಳಿಯ ಪ್ರಮುಖರಾದ ಎನ್.ಶಿವಶೈಲಂ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಪತ್ನಿ ಪ್ರೇಮಾ ಕೃಷ್ಣ, ಹೈಕೋರ್ಟ್ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ, ಮಂಡಳಿಯ ಮೆಂಟರ್ ಸಿ.ಎಸ್.ಕೇದಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಪತ್ನಿ ಪ್ರೇಮಾ ಕೃಷ್ಣ ಮಾತನಾಡಿ, ‘ಕೃಷ್ಣ ಅವರಿಗೆ ಸಂಗೀತ ಎಂದರೆ ತುಂಬಾ ಇಷ್ಟ. ಪ್ರತಿ ವರ್ಷ ತಪ್ಪದೇ ರಾಮೋತ್ಸವದ ಸಂಗೀತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದರು’ ಎಂದು ನೆನಪಿಸಿಕೊಂಡರು.

‘ಹಲವು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ರಾಮಸೇವಾ ಮಂಡಳಿಯ ರಾಮನವಮಿ ಸಂಗೀತೋತ್ಸವ ದೇಶಕ್ಕೆ ಮಾದರಿಯಾಗಿದೆ. ಇಂಥ ಸಂಗೀತೋತ್ಸವದಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟ ಆಯೋಜಕರಿಗೆ ಅಭಾರಿಯಾಗಿದ್ದೇನೆ’ ಎಂದರು.

ಕಾರ್ಯಕ್ರಮದಲ್ಲಿ, ರಾಮಚಂದ್ರ ಹುದ್ದಾರ ಅವರು ವಿದ್ವಾನ್ ಸಂದೀಪ ನಾರಾಯಣ್ ಅವರಿಗೆ ‘ಎಸ್.ಎಂ. ಕೃಷ್ಣ ಸ್ಮಾರಕ ರಾಷ್ಟ್ರೀಯ ಸಂಗೀತ ಪ್ರಶಸ್ತಿ’ ಪ್ರದಾನ ಮಾಡಿದರು. ಪ್ರಶಸ್ತಿಯು ₹1 ಲಕ್ಷ ನಗದು, ಸ್ಮರಣಿಕೆ ಮತ್ತು ಫಲ ತಾಂಬೂಲವನ್ನು ಒಳಗೊಂಡಿದೆ. ಎಸ್.ಎಂ. ಕೃಷ್ಣ ಕುಟುಂಬದವರು ರಾಮಸೇವಾ ಮಂಡಳಿಯಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಚಾಲನೆ: 'ಬೆಲೆ ಏರಿಕೆ, ಮುಸ್ಲಿಮರ ಓಲೈಕೆ' ವಿರುದ್ಧ ಪ್ರತಿಭಟನೆ

ಸಿ.ಎಂ ತವರಲ್ಲಿ ಬಿಜೆಪಿ 'ಜನಾಕ್ರೋಶ' ಯಾತ್ರೆ

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯ ಕಾಂಗ್ರೆಸ್ ಸರ್ಕಾರವು ಬೆಲೆ ಏರಿಕೆ, ಮುಸ್ಲಿಮರ ಓಲೈಕೆ, ಪರಿಶಿಷ್ಟರ ಹಣ ಲೂಟಿ ಮಾಡುತ್ತಿದೆ ಹಾಗೂ ಭ್ರಷ್ಟಾಚಾರದಲ್ಲಿ ತೊಡಗಿದೆ' ಎಂದು ಆರೋಪಿಸಿ ಬಿಜೆಪಿ ಕೈಗೊಂಡಿರುವ 16 ದಿನಗಳ 'ಜನಾಕ್ರೋಶ ಯಾತ್ರೆ'ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತವರಿನಿಂದ ಚಾಲನೆ ನೀಡಲಾಯಿತು.

ಇಲ್ಲಿನ ನೆಹರೂ ವೃತ್ತದಿಂದ ಪುರಭವನದವರೆಗೆ ಸೋಮವಾರ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಪಕ್ಷದ ನಾಯಕರು ಒಗ್ಗಟ್ಟಿನ ಮಂತ್ರ ಜಪಿಸಿದರು. ಸರ್ಕಾರದ ವಿರುದ್ಧ ಟೀಕಾಸ್ತ್ರಗಳನ್ನು ಪ್ರಯೋಗಿಸಿದರು. ಪಕ್ಷದ ವಿವಿಧ ಬಣಗಳಲ್ಲಿ ಗುರುತಿಸಿಕೊಂಡಿದ್ದವರೂ ಮುನಿಸು ಮರೆತು, ಯಾತ್ರೆಯಲ್ಲಿ ಕೈ–ಕೈಹಿಡಿದುಕೊಂಡು ಹೆಜ್ಜೆ ಹಾಕಿ, ವೇದಿಕೆಯನ್ನು ಹಂಚಿಕೊಂಡರು. 'ಬೆಲೆ ಏರಿಕೆಗೆ ರಾಜ್ಯ ಸರ್ಕಾರವೇ ಹೊಣೆ' ಎಂದು ಹೇಳಿದರು.

ಬೆಟ್ಟದಲ್ಲಿ ಪೂಜೆ: ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಿಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಾಯಕರು ಪೂಜೆ ಸಲ್ಲಿಸಿದರು.

ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಪ್ರಲ್ಹಾದ ಜೋಶಿ, 'ಗೃಹಲಕ್ಷ್ಮಿ ಯೋಜನೆಯ ಹಣ ಮಹಿಳೆಯರಿಗೆ ತಲುಪುತ್ತಿಲ್ಲ. ಡೀಸೆಲ್, ಹಾಲು ಸೇರಿದಂತೆ 48 ವಸ್ತುಗಳ ಬೆಲೆ ಏರಿಸಲಾಗಿದೆ. ಜನನ- ಮರಣ ಪ್ರಮಾಣಪತ್ರ ಪಡೆಯಲು ಹಣ ಕಟ್ಟಬೇಕಿದೆ' ಎಂದು ವಾಗ್ದಾಳಿ ನಡೆಸಿದರು.

'ಪ್ರಶ್ನಿಸಿದವರ ವಿರುದ್ಧ ಪ್ರಕರಣ ದಾಖಲಿಸುವ ಅಸಹಿಷ್ಣುತೆಯನ್ನು ಸರ್ಕಾರ ಪ್ರದರ್ಶಿಸಿದೆ. ಗ್ಯಾರಂಟಿ ಯೋಜನೆಗಳಿಗಾಗಿ ಜನರ ತಲೆ ಬೋಳಿಸಲಾಗುತ್ತಿದೆ. ಬಿಜೆಪಿಯ ಹೋರಾಟದ ಬಿಸಿ ಸರ್ಕಾರಕ್ಕೆ ತಟ್ಟಲಿದೆ' ಎಂದರು.

ಬಿ.ವೈ.ವಿಜಯೇಂದ್ರ ಮಾತನಾಡಿ, 'ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ಮೇಲೆ ಅಹಿಂದ ಸಮುದಾಯವನ್ನು ಮರೆತಿದ್ದು, ಅಲ್ಪಸಂಖ್ಯಾತರ ನಾಯಕರಷ್ಟೇ ಆಗಿದ್ದಾರೆ. ಪರಿಶಿಷ್ಟರ ₹38ಸಾವಿರ ಕೋಟಿಯನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಈ ಲಜ್ಜೆಗೆಟ್ಟ, ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರದ ಮುಖವನ್ನು ಬಿಜೆಪಿಯು ಯಾತ್ರೆಯ ಮೂಲಕ ಜನರಿಗೆ ತೋರಿಸಲಿದೆ' ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, 'ಈ ಸರ್ಕಾರವು ತೆರಿಗೆ ವಿಧಿಸಿ ಜನರ ರಕ್ತ ಹೀರುತ್ತಿದೆ' ಎಂದು ಆರೋಪಿಸಿದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, '14 ನಿವೇಶನಗಳನ್ನು ಮುಡಾಕ್ಕೆ ವಾಪಸ್ ಮಾಡಿ ಮುಖ್ಯಮಂತ್ರಿ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಹೈಕಮಾಂಡ್‌ಗೆ ಕಪ್ಪಕಾಣಿಕೆ ಕೊಡಲು ಕಾಂಗ್ರೆಸ್ ನಾಯಕರಲ್ಲಿ ಪೈಪೋಟಿ ನಡೆದಿದೆ. ನಮ್ಮ ಜನಾಕ್ರೋಶ ಯಾತ್ರೆಯಿಂದಲೇ ಸರ್ಕಾರದ ಆಯಸ್ಸು ಕಡಿಮೆಯಾಗಲಿದೆ' ಎಂದರು.

ಸಂಸದರಾದ ಗೋವಿಂದ ಕಾರಜೋಳ, ಪಿ.ಸಿ.ಮೋಹನ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಅರವಿಂದ ಬೆಲ್ಲದ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಟಿ.ಎಸ್.ಶ್ರೀವತ್ಸ, ಎನ್.ರವಿಕುಮಾರ್, ಸಿ.ಕೆ.ರಾಮಮೂರ್ತಿ, ಮುಖಂಡರಾದ ಪ್ರತಾಪಸಿಂಹ, ಮುರುಗೇಶ ನಿರಾಣಿ, ಬಿ.ಶ್ರೀರಾಮುಲು, ಬಿ.ಹರ್ಷವರ್ಧನ್, ಪಿ.ರಾಜು, ಪ್ರೀತಂಗೌಡ, ನಂದೀಶ್, ನಾರಾಯಣಗೌಡ, ನಾರಾಯಣಸ್ವಾಮಿ, ರಘು ಕೌಟಿಲ್ಯ, ಫಣೀಶ್, ಎ.ಎಸ್. ನಡಹಳ್ಳಿ ಮತ್ತು ಕಾರ್ಯಕರ್ತರು ಪಾಲ್ಗೊಂಡಿದ್ದರು.



'ಜನಾಕ್ರೋಶ ಯಾತ್ರೆ'ಗೆ ಸೋಮವಾರ ಚಾಲನೆ ನೀಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರೊಂದಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಮುಖಂಡರು ಹಾಗೂ ಕಾರ್ಯಕರ್ತರು ಹೆಜ್ಜೆ ಹಾಕಿದರು
ಚಿತ್ರ: ಅನೂಪ್ ರಾಘ ಟಿ.

> **ಕೇಂದ್ರ ಡೀಸೆಲ್ ದರ ₹ 2 ಏರಿಸಿದರೂ ಅದರ ಭಾರವನ್ನು ಪೆಟ್ರೋಲಿಯಂ ಕಂಪನಿಗಳೇ ಹೊರಲಿವೆ. ಆದರೆ, ರಾಜ್ಯ ಸರ್ಕಾರ ಜನರ ಮೇಲೆ ಹೊರೆ ಹಾಕುತ್ತಿದೆ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> **ಎಲ್ಲ ಮುಖಂಡರೂ ಒಟ್ಟಾಗಿ ಜನರ ಬಳಿಗೆ ಬಂದಿದ್ದೇವೆ. ಜನರ ಧ್ವನಿಯಾಗಿ ಪ್ರಬಲ ಪ್ರತಿಪಕ್ಷವಾಗಿ ಬಿಜೆಪಿ ಕಾರ್ಯನಿರ್ವಹಿಸುತ್ತಿದೆ**
> **ಬಿ.ವೈ.ವಿಜಯೇಂದ್ರ**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಕಳ್ಳ– ಮಳ್ಳ, ಪ್ರಿಯಾಂಕಾ ವಡೆ..'

ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು 'ಪ್ರಿಯಾಂಕಾ ವಡೆ' ಎಂದು ಅಶೋಕ ಕರೆದರು. 'ವಡೆ' ಅಲ್ಲ 'ವಾದ್ರಾ' ಎಂದು ಪಕ್ಕದಲ್ಲಿದ್ದ ಪ್ರಲ್ಹಾದ ಜೋಶಿ ತಿದ್ದಿದರು. ಪ್ರತಿಕ್ರಿಯಿಸಿದ ಅಶೋಕ, 'ನನಗೆ ಗೊತ್ತಿರಲಿಲ್ಲ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ– ಡಿಸಿಎಂ ಡಿ.ಕೆ.ಶಿವಕುಮಾರ್ ಕಳ್ಳ–ಮಳ್ಳ' ಎಂದು ಅಣಕಿಸಿದ ಅವರು, 'ಸಿದ್ದರಾಮಯ್ಯ ಟೋಪಿ ಹಾಕಿಲ್ಲವಷ್ಟೇ' ಎಂದು ವ್ಯಂಗ್ಯವಾಡಿದರು.

'ಸರ್ಕಾರದ ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲು ನೀಡಿದ್ದಾರೆ. ಹೆಣ್ಣುಮಕ್ಕಳಿಗೆ ಶಾದಿಭಾಗ್ಯ ನೀಡುತ್ತಿದ್ದಾರೆ. ವಾದ್ರಾ ಅವರನ್ನು ಮೆಚ್ಚಿಸಲು ಬಂಡೀಪುರ ರಾತ್ರಿ ವಾಹನ ಸಂಚಾರಕ್ಕೆ ಅವಕಾಶ ನೀಡಲು ಮುಂದಾಗಿದ್ದಾರೆ' ಎಂದು ಹರಿಹಾಯ್ದರು.

'ಬಿಜೆಪಿ– ಜೆಡಿಎಸ್ ನಡುವೆ ಒಡಕಿಲ್ಲ'

ಬೆಂಗಳೂರು: ಬಿಜೆಪಿ, ಜೆಡಿಎಸ್ ನಡುವೆ ಒಡಕಿಲ್ಲ, ಭಿನ್ನಾಭಿಪ್ರಾಯವೂ ಇಲ್ಲ. ರಾಜ್ಯ ಸರ್ಕಾರದ ವಿರುದ್ಧ ಈಗ ಹಮ್ಮಿಕೊಂಡಿರುವ ಜನಾಕ್ರೋಶ ಯಾತ್ರೆ ಬಿಜೆಪಿಯ ಹೋರಾಟ ಎಂದು ಆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಕರ್ನಾಟಕದಲ್ಲಿ ನಮ್ಮದೇ ತಪ್ಪಿನಿಂದ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿದ್ದೇವೆ. ಬಿಜೆಪಿ ಶಕ್ತಿಯುತವಾಗಿದ್ದು, ಸಮರ್ಥ ವಿರೋಧ ಪಕ್ಷವಾಗಿ ಕೆಲಸ ಮಾಡುವ ಮೂಲಕ ಮತ್ತಷ್ಟು ಬಲಗೊಳ್ಳಲಿದೆ' ಎಂದು ಹೇಳಿದರು.

'ಜನರಿಗೆ ಆಕ್ರೋಶವಿಲ್ಲ, ಬಿಜೆಪಿಗೆ ಮಾತ್ರ ಆಕ್ರೋಶವಿದೆ' ಎಂಬ ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಮೈಸೂರಿನಲ್ಲಿ ತಿರುಗೇಟು ನೀಡಿದ ವಿಜಯೇಂದ್ರ, 'ಕಾಂಗ್ರೆಸ್‌ನವರು ಭ್ರಮೆಯಲ್ಲಿದ್ದಾರೆ. ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತವರಿಗೆ ಜನರ ಕಷ್ಟಗಳು ಕಾಣುವುದಿಲ್ಲ' ಎಂದು ಹೇಳಿದರು.

ಕುರ್ಚಿ ಉಳಿಸಿಕೊಳ್ಳಲು ಬಿವೈವಿ ಯಾತ್ರೆ– ಸಿ.ಎಂ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: 'ತಮ್ಮ ಕುರ್ಚಿ ಉಳಿಸಿಕೊಳ್ಳಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಜನಾಕ್ರೋಶ ಯಾತ್ರೆ ಹಮ್ಮಿಕೊಂಡಿದ್ದಾರೆ. ಇಷ್ಟೊಂದು ಅಸಮರ್ಥ, ನಿರ್ಲಜ್ಜ, ಜನವಿರೋಧಿ ವಿರೋಧ ಪಕ್ಷವನ್ನು ರಾಜ್ಯ ಎಂದೂ ಕಂಡಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

'ಸ್ವಪಕ್ಷೀಯರೇ ಆರೋಪಿಸುವಂತೆ 'ಪೇಮೆಂಟ್ ಸೀಟ್'ನಲ್ಲಿ ಕುಳಿತಿರುವ ವಿಜಯೇಂದ್ರ ಅವರಿಗೆ ರಾಜ್ಯ ಸರ್ಕಾರವನ್ನು ಪ್ರಶ್ನಿಸುವ ಯಾವ ನೈತಿಕತೆ ಇದೆ? ನಮ್ಮನ್ನು ಪ್ರಶ್ನಿಸುವ ಮೊದಲು ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಅವರ ಶಾಸಕ ಮಿತ್ರರು ಮಾಡುತ್ತಿರುವ ಗಂಭೀರ ಆರೋಪಗಳಿಗೆ ಉತ್ತರಿಸುವ ದಮ್ಮು ತಾಕತ್ ತೋರಿಸಲಿ' ಎಂದಿದ್ದಾರೆ.

'ಗ್ಯಾರಂಟಿ ಯೋಜನೆಗಳ ಯಶಸ್ಸನ್ನು ವಿಫಲಗೊಳಿಸುವ ಉದ್ದೇಶದಿಂದ ಬಿಜೆಪಿ ನಾಯಕರು ಕೇಂದ್ರ ಸರ್ಕಾರದ ಜೊತೆ ಶಾಮೀಲಾಗಿ ರಾಜ್ಯಕ್ಕೆ ನ್ಯಾಯಬದ್ಧವಾಗಿ ಸಿಗಬೇಕಾದ ತೆರಿಗೆ ಪಾಲು ಮತ್ತು ಅನುದಾನಕ್ಕೆ ಕತ್ತರಿ ಹಾಕಿಸಿದ್ದಾರೆ. ತಮ್ಮ ಬೆವರಿನ ಗಳಿಕೆಯಿಂದ ನೀಡುತ್ತಿರುವ ₹5 ಲಕ್ಷ ಕೋಟಿ ತೆರಿಗೆ ಹಣದಲ್ಲಿ ಕೇವಲ ₹60 ಸಾವಿರ ಕೋಟಿ ವಾಪಸು ನೀಡುತ್ತಿರುವ ಅನ್ಯಾಯದ ಬಗ್ಗೆ ರಾಜ್ಯದ ಜನ ಆಕ್ರೋಶಗೊಂಡಿದ್ದಾರೆ. ಅದರ ಬಿಸಿ ಬಿಜೆಪಿ ನಾಯಕರಿಗೆ ತಟ್ಟಲಿದೆ' ಎಂದಿದ್ದಾರೆ.

'ಜನರ ಹಿತರಕ್ಷಣೆಯ ಕಾಳಜಿ ಇರುವುದಾದರೆ ಮೊದಲು ಪ್ರಧಾನಿ ನಿವಾಸದ ಎದುರು ಬಿಜೆಪಿ ನಾಯಕರು ಪ್ರತಿಭಟನೆ ನಡೆಸಬೇಕು. ಕರ್ನಾಟಕವನ್ನು ಶತ್ರು ರಾಜ್ಯದಂತೆ ನೋಡುತ್ತಿರುವ ನರೇಂದ್ರ ಮೋದಿ ಸರ್ಕಾರ ತೆರಿಗೆ ಪಾಲು, ಅನುದಾನ ಹಂಚಿಕೆಯಲ್ಲಿ ಅನ್ಯಾಯ ಮಾಡುತ್ತಿದೆ. ಅಲ್ಲದೆ, ಕೇಂದ್ರದಲ್ಲಿ ಕರ್ನಾಟಕದ ದನಿಯನ್ನು ಕುಗ್ಗಿಸಬೇಕೆಂಬ ದುಷ್ಟ ಉದ್ದೇಶದಿಂದ ಕ್ಷೇತ್ರ ಮರುವಿಂಗಡಣೆಯನ್ನು ಮಾಡಲು ಹೊರಟಿದೆ. ಇದರ ವಿರುದ್ಧ ದನಿ ಎತ್ತಬೇಕಾಗಿರುವ ರಾಜ್ಯದ ಬಿಜೆಪಿ ಸಂಸದರು ಬಾಯಿಗೆ ಬೀಗ ಹಾಕಿಕೊಂಡು ಕೇಂದ್ರದ ಗುಲಾಮರಂತೆ ವರ್ತಿಸುತ್ತಿದ್ದಾರೆ' ಎಂದಿದ್ದಾರೆ.

ಲಾರಿ ಮುಷ್ಕರ ಕೈಬಿಡಿ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಯಲಬುರ್ಗಾ (ಕೊಪ್ಪಳ ಜಿಲ್ಲೆ): 'ಲಾರಿ ಮಾಲೀಕರ ಸಂಘದವರ ಜೊತೆ ಚರ್ಚಿಸಿದ್ದು, ಮುಷ್ಕರ ಕೈಬಿಡುವಂತೆ ಮನವಿ ಮಾಡಿದ್ದೇನೆ. ಈ ಕುರಿತು ಮುಖ್ಯಮಂತ್ರಿ ಜೊತೆಗೂ ಚರ್ಚಿಸುವೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸೋಮವಾರ ತಾಲ್ಲೂಕಿನ ಬೇವೂರು ಗ್ರಾಮದಲ್ಲಿ ಮಾತನಾಡಿ, 'ಪ್ರಧಾನಿ ನರೇಂದ್ರ ಮೋದಿ ಡೀಸೆಲ್ ಬೆಲೆ ಏರಿಕೆ ಮಾಡಿದ್ದನ್ನು ನೋಡಿ ನಾವು ಬೆಲೆ ಏರಿಸಿದ್ದೇವೆ. ಕೇಂದ್ರದವರು ಬೆಲೆ ಇಳಿಸಿದರೆ ನಾವೂ ಇಳಿಸುತ್ತೇವೆ' ಎಂದರು.

ಯಡಿಯೂರಪ್ಪ, ವಿಜಯೇಂದ್ರ ವಿರುದ್ಧ ಹರಿಹಾಯ್ದ ಯತ್ನಾಳ • ಬಿಜೆಪಿ ವರಿಷ್ಠರಿಗೆ ಆಗ್ರಹ

'ಲೂಟಿಕೋರ ಅಪ್ಪ, ಮಕ್ಕಳನ್ನು ಹೊರಹಾಕಿ'

ಪ್ರಜಾವಾಣಿ ವಾರ್ತೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): 'ವಿದೇಶದಲ್ಲಿ ಸಾಕಷ್ಟು ಆಸ್ತಿ ಮಾಡಿರುವ ಯಡಿಯೂರಪ್ಪ ಮಹಾಭ್ರಷ್ಟ. ಅವರ ಫೋಟೊ ಹಾಕಿದರೆ ವೋಟ್ ಹಾಕುವ ಕಾಲ ಹೋಯಿತು' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಪಟ್ಟಣದಲ್ಲಿ ಸೋಮವಾರ ವೀರರಾಣಿ ಕಿತ್ತೂರು ಚನ್ನಮ್ಮ ಸಮಾಧಿಗೆ ಗೌರವ ಅರ್ಪಿಸಿ ಮಾತನಾಡಿದ ಅವರು, 'ಯಡಿಯೂರಪ್ಪ ಕುಟುಂಬ ಬಿಜೆಪಿಯಿಂದ ಹೊರ ಹೋಗುವವರೆಗೆ ನಾವು ಬಿಜೆಪಿಗೆ ಮರಳಲ್ಲ. ಅವರನ್ನು ಮುಖ್ಯಮಂತ್ರಿ ಮಾಡಲು ನಾವು ಬರಬೇಕೆ' ಎಂದು ಪ್ರಶ್ನಿಸಿದರು.

'ಯಡಿಯೂರಪ್ಪ ಲಿಂಗಾಯತ ಎಂಬುದನ್ನು ಸಾಬೀತು ಮಾಡಲಿ. ಕೋವಿಡ್ ಕಾಲದಲ್ಲಿ ಲೂಟಿ ಮಾಡಿರುವ ಅಪ್ಪ–ಮಕ್ಕಳು ತಿಂಗಳಿಗೊಮ್ಮೆ ಯಾಕೆ ದುಬೈಗೆ ಹೋಗುತ್ತಾರೆ? ವಿದೇಶದಲ್ಲಿ ಆಸ್ತಿ ಮಾಡಿದವರಿಗೆ ನೈತಿಕತೆ ಇಲ್ಲ. ವಿದೇಶದಲ್ಲಿ ಆಸ್ತಿ ಇಲ್ಲ ಎಂದು ಖಡಾಖಂಡಿತವಾಗಿ ಹೇಳುವರೇ? ಬ್ಯಾಂಕ್‌ನಲ್ಲಿ ಕೋಟ್ಯಂತರ ರೂಪಾಯಿ ಹಣ ಇಟ್ಟಿಲ್ಲ ಎಂದು ಯಡಿಯೂರಪ್ಪ ಮತ್ತು ವಿಜಯೇಂದ್ರ ಇಬ್ಬರೂ ಯಡಿಯೂರು ಸಿದ್ಧಲಿಂಗೇಶ್ವರ ಬಳಿ ತೆರಳಿ ಆಣೆ ಮಾಡಲಿ' ಎಂದು ಸವಾಲು ಹಾಕಿದರು.

'ರಾಜ್ಯದಾದ್ಯಂತ ಪ್ರವಾಸ ಕೈಗೊಂಡಿರುವ ನನಗೆ ಎಲ್ಲಾ ಕಡೆ ಉತ್ತಮ ಅಭಿಪ್ರಾಯ ವ್ಯಕ್ತವಾಗುತ್ತಿದೆ. ನನ್ನ ನಾಯಕತ್ವಕ್ಕೆ ಎಲ್ಲರ ಒಪ್ಪಿಗೆಯಿದೆ. ಸಮಾವೇಶವೊಂದರಲ್ಲಿ ಬಿಜೆಪಿ ಶಿಸ್ತು ಸಮಿತಿ ವ್ಯಕ್ತಿಯೊಬ್ಬರು ಬಂದಿದ್ದರು. ಸಮಾವೇಶದಲ್ಲಿ ಏನು ನಡೆಯಿತು, ಜನ ಏನು ಇಷ್ಟಪಡುತ್ತಾರೆ ಎಂಬುದನ್ನು ಆ ವ್ಯಕ್ತಿ ಬಿಜೆಪಿ ಹೈಕಮಾಂಡ್‌ಗೆ ಹೇಳಲಿ' ಎಂದರು.

'ಸ್ವಾಮೀಜಿ ಬಳಸಿಕೊಂಡಿಲ್ಲ': 'ಸಚಿವ ಸ್ಥಾನದ ಲಾಬಿಗಾಗಿ ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ದೆಹಲಿಗೆ ಯಾರು ಕರೆದೊಯ್ದಿದ್ದರು ಎಂಬುದು ಗೊತ್ತು. ನಾನು ಒಮ್ಮೆಯೂ ಅಂಥ ಕೆಲಸ ಮಾಡಿಲ್ಲ. ಸ್ವಾಮೀಜಿ ಅವರನ್ನು ಲಕ್ಷ್ಮೀ ಹೆಬ್ಬಾಳಕರ, ವಿನಯ ಕುಲಕರ್ಣಿ ಬಳಸಿಕೊಂಡಿದ್ದಾರೆಯೇ ಹೊರತು ನಾನಲ್ಲ' ಎಂದು ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

'ನನ್ನ ಮತ್ತು ಕೂಡಲಸಂಗಮ ಸ್ವಾಮೀಜಿ ಸಂಬಂಧ ಮೀಸಲಾತಿ ಹೋರಾಟದಿಂದ ಇದೆ. ಸ್ವಾಮೀಜಿ ಅವರನ್ನೇ ಬದಲಿಸುವೆ ಎನ್ನುವವರ ಬಗ್ಗೆ ನಾನು ಮಾತನಾಡಲ್ಲ' ಎಂದರು.



ಬೈಲಹೊಂಗಲದಲ್ಲಿ ಇರುವ ಕಿತ್ತೂರು ರಾಣಿ ಚನ್ನಮ್ಮ ಅವರ ಸಮಾಧಿಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಸೋಮವಾರ ಭೇಟಿ ನೀಡಿ, ಪುಷ್ಪ ನಮನ ಸಲ್ಲಿಸಿದರು
ಪ್ರಜಾವಾಣಿ ಚಿತ್ರ

> **ನಾನು ಹೊಸದಾಗಿ ಪಕ್ಷ ಕಟ್ಟಿದರೆ, ಪರೋಕ್ಷವಾಗಿ ಕಾಂಗ್ರೆಸ್‌ಗೆ ಅನುಕೂಲ ಆಗುತ್ತದೆ. ಹೀಗಾಗಿ ಮುಂದಿನ ಕ್ರಮದ ಬಗ್ಗೆ ಯೋಚಿಸುತ್ತಿರುವೆ**
> **ಬಸನಗೌಡ ಪಾಟೀಲ ಯತ್ನಾಳ**
> ಶಾಸಕ

> **ಕೇಂದ್ರ ಬಿಜೆಪಿ ನಾಯಕರು ಕೂಡಲೇ ಯತ್ನಾಳ ಅವರನ್ನು ಗೌರವಯುತವಾಗಿ ಮರಳಿ ಪಕ್ಷಕ್ಕೆ ಸೇರಿಸಿಕೊಳ್ಳಲಿ. ಇಲ್ಲದಿದ್ದರೆ ಪ್ರತಿಭಟಿಸುತ್ತೇವೆ**
> **ಬಸವಜಯ ಮೃತ್ಯುಂಜಯ ಸ್ವಾಮೀಜಿ**
> ಕೂಡಲಸಂಗಮ

'ಲಕ್ಷ್ಮೀ ಮಿದುಳು, ಹೃದಯ ಯಾರ ಕಡೆ ಇದೆ?'

'ಯತ್ನಾಳ ಮಿದುಳಿಗೂ, ನಾಲಿಗೆಗೂ ಲಿಂಕ್ ಇಲ್ಲ' ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದ್ದಾರೆ. ಆದರೆ, ಅವರ ಮಿದುಳು ಮತ್ತು ಹೃದಯ ಯಾರ ಬಳಿ ಇದೆ ಎಂಬುದು ನಮಗೂ ಗೊತ್ತಿಲ್ಲ. ಇನ್ನೂ ಏನಾದರೂ ಬಾಯಿ ಬಿಟ್ಟರೆ, ನಾನು ಇನ್ನೂ ಬಹಳ ಮುಂದೆ ಹೋಗಿ ಹೇಳಬೇಕಾಗುತ್ತದೆ' ಎಂದು ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

'ಯತ್ನಾಳ ಪರ ಕೂಡಲಸಂಗಮ ಸ್ವಾಮೀಜಿ ನಿಂತಿರುವುದಕ್ಕೆ ನೋವಾಗಿದೆ ಎಂದು ಲಕ್ಷ್ಮೀ ಹೆಬ್ಬಾಳಕರ ಹೇಳಿದ್ದಾರೆ. ಅಷ್ಟೊಂದು ನೋವಾಗಿದ್ದರೆ, ಅಮೃತಾಂಜನ್ ಅಥವಾ ಜಂಡೂಬಾಮ್ ಕೊಡಲೇ? ಆಗ ಸ್ವಾಮೀಜಿ ಅವರನ್ನು ಬಳಸಿಕೊಂಡರು. ಈಗ ಅದೇ ಸ್ವಾಮೀಜಿ ಅವರಿಂದ ನೋವು ಆಗುತ್ತಿದೆಯೇ' ಎಂದು ಅವರು ಪ್ರಶ್ನಿಸಿದರು.

'ನಮಗೆ ಬಿಜೆಪಿಯಲ್ಲೇ ನ್ಯಾಯ'

ಬೆಳಗಾವಿ: 'ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವ್ಯಾಪಿಸಿರುವ ಬಿಜೆಪಿಯಲ್ಲೇ ನಮಗೆ ನ್ಯಾಯ ಸಿಗಲಿದೆ. ಬೇರೆ ಪಕ್ಷ ಕಟ್ಟುವ ಅಗತ್ಯವಿಲ್ಲ' ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

'ಶಾಸಕ ಬಸನಗೌಡ ಯತ್ನಾಳ ಅವರು ಈಗಲೂ ನಮ್ಮ ತಂಡದಲ್ಲೇ ಇದ್ದಾರೆ. ಅವರಿಂದ ಅಂತರ ಕಾಯ್ದುಕೊಳ್ಳಬೇಕಿಲ್ಲ. ಅವರು ಯಾರಿಗೂ ಕೆಟ್ಟದ್ದು ಬಯಸುವ ವ್ಯಕ್ತಿಯಲ್ಲ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ನೇರವಾಗಿ ಮಾತನಾಡುವುದು ಯತ್ನಾಳ ಅವರ ಹುಟ್ಟುಗುಣ. ಅವರು ಒಂದು ಕುಟುಂಬದ ವಿರುದ್ಧ ಮಾತನಾಡುತ್ತಾರೆ ಹೊರತು ಪಕ್ಷದ ನಾಯಕರನ್ನು ಬಯ್ಯುವುದಿಲ್ಲ. ಮಾತಿನ ಭರದಲ್ಲಿ ಏನೇನೋ ಮಾತನಾಡಬೇಡಿ ಮತ್ತು ಪಕ್ಷಕ್ಕೆ ಮುಜುಗರ ತರಬೇಡಿಯೆಂದು ಅವರಿಗೆ ಸಾಕಷ್ಟು ಸಲ ತಿಳಿ ಹೇಳಿದ್ದೇನೆ' ಎಂದರು.

'ದೊಡ್ಡ ನಗರದ ಅಲ್ಲಿ–ಇಲ್ಲಿ ಇಂತಹ ಘಟನೆ ನಡೆಯುತ್ತವೆ'

ಒಂದನೇ ಪುಟದಿಂದ...

'ಪೊಲೀಸರು 24 × 7 ಕೆಲಸ ಮಾಡುತ್ತಿದ್ದಾರೆ. ಬೀಟ್ ವ್ಯವಸ್ಥೆ ಚೆನ್ನಾಗಿ ಆಗಬೇಕು, ಎಚ್ಚರಿಕೆಯಿಂದ ಇರಬೇಕೆಂದು ಪೊಲೀಸ್ ಕಮಿಷನರ್‌ಗೆ ನಿತ್ಯ ಹೇಳುತ್ತೇನೆ. ಪ್ರತಿಯೊಂದು ಪ್ರದೇಶದ ಮೇಲೆ ನಿಗಾವಹಿಸಬೇಕು. ಗಸ್ತು ಶಿಸ್ತಿನಿಂದ, ಪರಿಣಾಮಕಾರಿಯಾಗಿ ಮಾಡಬೇಕು, ಬೀಟ್ ವ್ಯವಸ್ಥೆಯನ್ನು ಸುಧಾರಿಸಬೇಕೆಂದು ಸೂಚಿಸಿದ್ದೇನೆ' ಎಂದರು.

ಈ ಹೇಳಿಕೆ ಪ್ರಕಟವಾಗುತ್ತಿದ್ದಂತೆ, ವಿರೋಧ ಪಕ್ಷ ಕಟು ಟೀಕೆ ಮಾಡಿತು. ಜಾಲತಾಣಿಗರು ಗೃಹ ಸಚಿವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಪರಮೇಶ್ವರ ವಿಫಲ: ವಿಜಯೇಂದ್ರ

ಪರಮೇಶ್ವರ ಅವರ ಹೇಳಿಕೆ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವುದರ ದ್ಯೋತಕ ಎಂದು ವಿಜಯೇಂದ್ರ ದೂರಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೂ ಅಪರಾಧ ಪ್ರಕರಣಗಳು ವರದಿಯಾಗುತ್ತಲೇ ಇವೆ. ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಗೃಹ ಸಚಿವರ ಮಾತುಗಳು ಅವರ ಅಸಮರ್ಥತೆ ಪ್ರತಿಬಿಂಬಿಸಿವೆ. ಕಾನೂನು ಸುವ್ಯವಸ್ಥೆ ನಿಭಾಯಿಸುವಲ್ಲಿ, ಮಹಿಳೆಯರಿಗೆ ರಕ್ಷಣೆ ನೀಡುವಲ್ಲಿ ಅವರು ವಿಫಲರಾಗಿದ್ದಾರೆ ಎಂದು ಟೀಕಿಸಿದರು.

ರಾಜೀನಾಮೆಗೆ ಬಿಜೆಪಿ ಆಗ್ರಹ

ಒಂದನೇ ಪುಟದಿಂದ...

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ, 'ಪರಮೇಶ್ವರ ಇಂತಹ ಹೇಳಿಕೆ ನೀಡುತ್ತಿರುವುದು ಇದೇ ಮೊದಲಲ್ಲ. 2017ರಲ್ಲೂ ಕೀಳುಮಟ್ಟದ ಹೇಳಿಕೆ ನೀಡಿದ್ದರು. ಈ ಹೇಳಿಕೆ ಅತ್ಯಂತ ಆಘಾತಕಾರಿ. ಸ್ತ್ರೀದ್ವೇಷ ಹಾಗೂ ಅಸಹ್ಯಕರ ಮನಸ್ಥಿತಿಯ ಹೇಳಿಕೆ' ಎಂದರು.

ಕಾಂಗ್ರೆಸ್ ಆಡಳಿತವಿರುವ ರಾಜ್ಯದಲ್ಲಿ ಮಹಿಳೆಯರ ಮೇಲಿನ ಅಪರಾಧಗಳು ಶೇಕಡಾ 50ರಷ್ಟು ಹೆಚ್ಚಾಗಿವೆ ಎಂದು ಅವರು ದೂರಿದರು.

'ಆರೋಪಿಯನ್ನು ಇನ್ನೂ ಏಕೆ ಬಂಧಿಸಿಲ್ಲ'

ಪ್ರಜಾವಾಣಿ ವಾರ್ತೆ



ಬೋಪಯ್ಯ

ಮಡಿಕೇರಿ: 'ಆತ್ಮಹತ್ಯೆಗೆ ಪ್ರಚೋದನೆ ನೀಡಿದರೆ ಸಾಮಾನ್ಯ ಜನರನ್ನು ನೋಟಿಸ್ ನೀಡದೆ ಬಂಧಿಸಲಾಗುತ್ತದೆ. ಆದರೆ ಬಿಜೆಪಿಯ ವಿನಯ್ ಸೋಮಯ್ಯ ಪ್ರಕರಣದಲ್ಲಿ ಆರೋಪಿ ತೆನ್ನಿರ ಮೈನಾ ಕಾಂಗ್ರೆಸ್ ಕಾರ್ಯಕರ್ತನಾಗಿರುವುದರಿಂದ ಬಂಧಿಸದೆ ನೋಟಿಸ್ ಅಷ್ಟೇ ನೀಡಲಾಗಿದೆ. ಕಾಂಗ್ರೆಸ್‌ಗೆ ಬೇರೆ ಸಂವಿಧಾನ, ನಿಯಮಗಳಿವೆಯೇ' ಎಂದು ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಆಕ್ಷೇಪಿಸಿದರು.

'ಶಾಸಕರು ಈ ಪ್ರಕರಣದಲ್ಲಿ, ಯುಡಿಆರ್ ಮಾಡಿ ಬಿಸಾಕಿ ಎಂದು ಪೊಲೀಸರಿಗೆ ಹೇಳಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿರುವುದನ್ನು ಸಾಕ್ಷ್ಯ ಎಂದು ಪರಿಗಣಿಸಲಾಗದು ಎಂದು ಯಾವ ಕಾನೂನು ಹೇಳುತ್ತದೆಂದು ಕೇಳಿದ ಬಳಿಕವಷ್ಟೇ ಪ್ರಕರಣ ದಾಖಲಾಯಿತು' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಕೊಡಗಿನ ಇಬ್ಬರು ಶಾಸಕರಿಗೆ ಹೊಗಳಿಕೆಯಷ್ಟೇ ಬೇಕು. ಸಮಸ್ಯೆಗಳಿವೆ ಎಂದರೆ ಸಾಕು, ಎಲ್ಲಿಲ್ಲದ ಕೋಪ ಬರುತ್ತದೆ. ದುಃಸ್ಥಿತಿಯಲ್ಲಿರುವ ಶೌಚಾಲಯದ ಚಿತ್ರ ಹಾಕಿ, ಸರಿಪಡಿಸಿ ಎನ್ನುವುದೂ ಕಷ್ಟಕರ ಎಂಬ ಸ್ಥಿತಿ ಜಿಲ್ಲೆಯಲ್ಲಿದೆ. ಚಿತ್ರವನ್ನು ಕೂಡಲೇ ಅಳಿಸಿದರೂ ಬಿಡದೇ ಪ್ರಕರಣ ದಾಖಲಿಸಿ, ನ್ಯಾಯಾಲಯ ತಡೆಯಾಜ್ಞೆ ನೀಡಿದ ನಂತರವೂ ರೌಡಿ ಪಟ್ಟಿಗೆ ಸೇರಿಸಲು ಹುನ್ನಾರ ನಡೆಸುತ್ತಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆ ನಾಳೆ: 'ವಿನಯ್ ಸೋಮಯ್ಯ ಸಾವಿನ ಪ್ರಕರಣದಲ್ಲಿ ಶಾಸಕ ಎ.ಎಸ್. ಪೊನ್ನಣ್ಣ ಹಾಗೂ ಡಾ.ಮಂತರ್‌ಗೌಡ ಅವರ ಹೆಸರನ್ನು ಸೇರಿಸಬೇಕು ಹಾಗೂ ಸಿಬಿಐ ತನಿಖೆಗೆ ಒಪ್ಪಿಸಬೇಕು' ಎಂದು ಆಗ್ರಹಿಸಿ ಮತ್ತೆ ಇದೇ 9ರಂದು ಮಡಿಕೇರಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲು ಬಿಜೆಪಿ ತೀರ್ಮಾನಿಸಿದೆ.



ಪೌರಕಾರ್ಮಿಕರಿಗೆ ಅರಿವು ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು ಚಿತ್ರ: ಕಿಶೋರ್ ಕುಮಾರ್ ಬೋಳಾರ್

'ಪೌರ ಕಾರ್ಮಿಕರು ಮೇ 1ರಿಂದ ಕಾಯಂ'

ಒಂದನೇ ಪುಟದಿಂದ...

'ನೀವೆಲ್ಲಾ ಕಷ್ಟಪಟ್ಟು ಶುಚಿತ್ವದ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಮಕ್ಕಳೂ ಇದೇ ಕೆಲಸ ಮಾಡಬಾರದು. ಮಕ್ಕಳು ವಿದ್ಯಾವಂತರಾಗಿ, ಸ್ವಾಭಿಮಾನಿಗಳಾಗಬೇಕು. ಸಮಾಜದ ಮುಖ್ಯವಾಹಿನಿಗೆ ಬರಬೇಕು. ಪೌರಕಾರ್ಮಿಕರ ಸಂಬಳವನ್ನು ₹7 ಸಾವಿರದಿಂದ ₹17 ಸಾವಿರಕ್ಕೆ ಏರಿಸಿದ್ದು ಇದೇ ಸಿದ್ದರಾಮಯ್ಯ' ಎಂದು ಹೇಳಿದರು.

'ಪೌರಕಾರ್ಮಿಕರ ಸಂಘಟನೆ ಮತ್ತು ಹೋರಾಟದಲ್ಲಿ ನಾರಾಯಣ್ ಅವರ ಪಾತ್ರ ದೊಡ್ಡದಿದೆ. ಪೌರಕಾರ್ಮಿಕ ಸಮುದಾಯದಿಂದ ಬಂದು ಮೇಯರ್ ಆದವರಲ್ಲಿ ನಾರಾಯಣ್ ಅವರು ಮೊದಲಿಗರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

₹730 ಕೋಟಿ ಮೀಸಲು: 'ಈ ಬಾರಿಯ ಬಿಬಿಎಂಪಿ ಬಜೆಟ್‌ನಲ್ಲಿ ಪೌರಕಾರ್ಮಿಕರ ವೇತನಕ್ಕೆ ₹500 ಕೋಟಿ, ಪಿಂಚಣಿಗೆ ₹107 ಕೋಟಿ ಮೀಸಲಿಡಲಾಗಿದೆ. ₹6 ಸಾವಿರ ಪಿಂಚಣಿ ನೀಡುವ ಯೋಜನೆ ತರಲಾಗಿದೆ. ಒಟ್ಟಾರೆ, ಪೌರ ಕಾರ್ಮಿಕರ ಕಲ್ಯಾಣಕ್ಕಾಗಿ ₹730 ಕೋಟಿ ಮೀಸಲಿಟ್ಟಿದ್ದೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

₹50 ಸಾವಿರಕ್ಕೆ ವೇತನ: ಡಿಸಿಎಂ

ಒಂದನೇ ಪುಟದಿಂದ...

ಸಮಾರಂಭದಲ್ಲಿ ಮಾತನಾಡಿದ ಅವರು, 'ಇಂದೇ ನಿಮಗೆ ನೇಮಕಾತಿ ಪತ್ರ ನೀಡಬೇಕು ಎನ್ನುವ ಆಲೋಚನೆ ಇತ್ತು. ಒಂದಷ್ಟು ಸಿಂಧುತ್ವ ಬಾಕಿಯಿದ್ದು ಮೇ 1ರಂದು ನೇಮಕಾತಿ ಪತ್ರ ನಿಮ್ಮ ಕೈ ಸೇರುವುದು. ಪೌರಕಾರ್ಮಿಕರ ಬದುಕಿನಲ್ಲಿ ಬದಲಾವಣೆ ತರುವುದೇ ಕಾಂಗ್ರೆಸ್ ಸರ್ಕಾರದ ಸಂಕಲ್ಪ. ಪೌರಕಾರ್ಮಿಕರು ನಮ್ಮ ಹಾಗೂ ದೇಶದ ಶಕ್ತಿ, ಕಾಂಗ್ರೆಸ್ ಸರ್ಕಾರ ನಿಮ್ಮ ಶಕ್ತಿ' ಎಂದು ಹೇಳಿದರು.





ಹೂವಿನಹಡಗಲಿ ತಾಲ್ಲೂಕು ಉತ್ತಂಗಿ ಗ್ರಾಮದಲ್ಲಿ ರೈತರು ಟೊಮೆಟೊ, ಈರುಳ್ಳಿ ರಸ್ತೆಗೆ ಸುರಿದು ಪ್ರತಿಭಟಿಸಿದರು (ಎಡ ಚಿತ್ರ). ಬೆಳಗಾವಿ ಜಿಲ್ಲಾಧಿಕಾರಿ ಕಚೇರಿ ಎದುರಿನ ರಸ್ತೆಯಲ್ಲಿ ಸೋಮವಾರ ರೈತರು ಎಲೆಕೋಸನ್ನು ರಸ್ತೆಗೆ ಸುರಿದು, ಪ್ರತಿಭಟಿಸಿದರು ಪ್ರಜಾವಾಣಿ ಚಿತ್ರಗಳು

ಬೆಲೆ ಕುಸಿತದಿಂದ ಕಂಗಾಲಾದ ಬೆಳೆಗಾರರು; ಬೆಳೆದ ಉತ್ಪನ್ನ ರಸ್ತೆಗೆ ಸುರಿದರು...

ಟೊಮೆಟೊ, ಈರುಳ್ಳಿ ಸುರಿದು ಆಕ್ರೋಶ

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಮಾರುಕಟ್ಟೆಯಲ್ಲಿ ಬೆಲೆ ಕುಸಿದಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿ ರೈತರು ಸೋಮವಾರ ತಾಲ್ಲೂಕಿನ ಉತ್ತಂಗಿ ಗ್ರಾಮದಲ್ಲಿ ಭಾರಿ ಪ್ರಮಾಣದಲ್ಲಿ ಟೊಮೆಟೊ, ಈರುಳ್ಳಿಯನ್ನು ರಸ್ತೆಗೆ ಸುರಿದು ಪ್ರತಿಭಟಿಸಿದರು. ಸೂಕ್ತ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

'ಎರಡು ಎಕರೆಯಲ್ಲಿ ಟೊಮೆಟೊ ಬೆಳೆಯಲು ₹ 60 ಸಾವಿರ ಖರ್ಚು ಮಾಡಿರುವೆ. ಮಾರುಕಟ್ಟೆಯಲ್ಲಿ 20 ಕೆಜಿ ಟೊಮೆಟೊ ಟ್ರೇ ದರ ₹ 20 ಮತ್ತು ₹ 30ಕ್ಕೆ ಕುಸಿದಿದೆ. ಸಂತೆಗಳಲ್ಲಿ ₹ 10ಕ್ಕೆ 3 ಕೆಜಿ ಟೊಮೆಟೊ ಮಾರಲಾಗುತ್ತಿದೆ. ಇದರಿಂದ ಕೂಲಿ ವೆಚ್ಚವೂ ಸಿಗುತ್ತಿಲ್ಲ' ಎಂದು ರೈತ ಕುರುಬರ ಶಿವಪುತ್ರಪ್ಪ ಅಳಲು ತೋಡಿಕೊಂಡರು.

ರಾಜ್ಯ ಈರುಳ್ಳಿ ಬೆಳೆಗಾರರ ಸಂಘದ ಅಧ್ಯಕ್ಷ ಎನ್.ಎಂ. ಸಿದ್ದೇಶ ಮಾತನಾಡಿ, 'ಉತ್ತರ ಕರ್ನಾಟಕದಲ್ಲಿ ಈರುಳ್ಳಿ ಉತ್ತಮ ಇಳುವರಿ ಬಂದಿದೆ. ಬೆಂಗಳೂರು ಮಾರುಕಟ್ಟೆಯಲ್ಲಿ ನಮ್ಮ ಭಾಗದ ಫಸಲಿಗೆ ಉತ್ತಮ ಬೆಲೆ ಸಿಗುತ್ತಿಲ್ಲ. ಪ್ರತಿ ಕ್ವಿಂಟಲ್ ಈರುಳ್ಳಿ ಉತ್ಪಾದನಾ ವೆಚ್ಚ ₹ 2,000 ರಿಂದ ₹ 2,500 ಇದೆ. ಆದರೆ, ಮಾರುಕಟ್ಟೆಯಲ್ಲಿ ಕ್ವಿಂಟಲ್ ಈರುಳ್ಳಿ ದರ ₹ 1,000 ರಿಂದ ₹1,200ಕ್ಕೆ ಕುಸಿದಿದೆ. ತಾಲ್ಲೂಕು ಕೇಂದ್ರಗಳಲ್ಲಿ ಖರೀದಿ ಕೇಂದ್ರ ತೆರೆದು ಕ್ವಿಂಟಲ್‌ಗೆ ₹4,000ರಂತೆ ಖರೀದಿಸಬೇಕು' ಎಂದರು.

ತಹಶೀಲ್ದಾರ್ ಜಿ.ಸಂತೋಷ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು. ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಯಾತದ ಪ್ರಭು, ರೈತರಾದ ಮೂಲಿಮನಿ ಶರಣಪ್ಪ, ಅಂಗಡಿ ನಾಗರಾಜ, ಮುದೇಗೌಡ್ರ ಬಸವರಾಜ, ಮಂಜುನಾಥ ಯಾಟಿ, ಮಂಜುನಾಥ, ಎಸ್.ಎಂ. ಫಕ್ಕೀರಯ್ಯ ಇದ್ದರು.

ಬೆಳಗಾವಿ: ರಸ್ತೆಗೆ ಎಲೆಕೋಸು ಸುರಿದು ಪ್ರತಿಭಟನೆ

ಬೆಳಗಾವಿ: 'ಎಲೆಕೋಸು (ಕ್ಯಾಬೇಜ್) ದರ ಕೆಜಿಗೆ 80 ಪೈಸೆಗೆ ಕುಸಿದಿದ್ದು, ನಾವು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದೇವೆ. ನಮಗೆ ಆಗಿರುವ ಹಾನಿಗೆ ಸರ್ಕಾರ ಸೂಕ್ತ ಪರಿಹಾರ ಒದಗಿಸಬೇಕು' ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಸಂಘಟನೆ ನೇತೃತ್ವದಲ್ಲಿ ರೈತರು ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು. ಎಲೆಕೋಸನ್ನು ರಸ್ತೆಗೆ ಸುರಿದು ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡ ಅಪ್ಪಾಸಾಹೇಬ ದೇಸಾಯಿ ಮಾತನಾಡಿ, 'ಮೂರು–ನಾಲ್ಕು ತಿಂಗಳಿನಿಂದ ಎಲೆಕೋಸು, ಮೂಲಂಗಿ ಮತ್ತಿತರ ತರಕಾರಿಗಳ ದರ ಕುಸಿದಿದೆ. ಮಾರಾಟಕ್ಕಾಗಿ ಮಾರುಕಟ್ಟೆಗೆ ತಂದರೆ, ವಾಹನದ ಬಾಡಿಗೆಯೂ ಸಿಗುತ್ತಿಲ್ಲ. ಹಾಗಾಗಿ ಬೆಳೆ ಹೊಲದಲ್ಲೇ ಕೊಳೆಯುತ್ತಿದೆ' ಎಂದರು.

'ಪ್ರತಿ ಎಕರೆಯಲ್ಲಿ ಎಲೆಕೋಸು ಬೆಳೆಯಲು ₹45 ಸಾವಿರ ಖರ್ಚಾಗುತ್ತದೆ. ಈಗಿನ ದರಕ್ಕೆ ಬಂಡವಾಳವೂ ಬರಲ್ಲ. ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದರು.

ಕಾವೇರಿ ನಿಗಮದ ಇಇ, ಅಕೌಂಟ್ ಸೂಪರಿಂಟೆಂಡೆಂಟ್ 'ಲೋಕಾ' ಬಲೆಗೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ/ನಂಜನಗೂಡು: ನಾಲೆ ದುರಸ್ತಿ ಕಾಮಗಾರಿಯ ಬಿಲ್ ಹಣ ಬಿಡುಗಡೆ ಮಾಡಲು, ಮೈಸೂರು ಜಿಲ್ಲೆ ನಂಜನಗೂಡು ಕಚೇರಿಯಲ್ಲಿ ಸೋಮವಾರ ₹ 1.45 ಲಕ್ಷ ಲಂಚ ಪಡೆಯುತ್ತಿದ್ದಾಗಲೇ ಕಾವೇರಿ ನೀರಾವರಿ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ರಂಗನಾಥ್ ಹಾಗೂ ಅಕೌಂಟ್ ಸೂಪರಿಂಟೆಂಡೆಂಟ್ ಉಮಾ ಮಹೇಶ್ವರ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದರು.

2022ರಲ್ಲಿ ನಾಲೆ ದುರಸ್ತಿ ಮಾಡಿದ್ದ ಗುತ್ತಿಗೆದಾರ ಅಬ್ದುಲ್ ಅಜೀಜ್ ಅವರಿಗೆ ₹ 23 ಲಕ್ಷ ಹಣ ಬಿಡುಗಡೆ ಮಾಡಲು ಈ ಅಧಿಕಾರಿಗಳು ಶೇ 6 ಕಮಿಷನ್ ನೀಡುವಂತೆ ಕೇಳಿದ್ದರು. ಗುತ್ತಿಗೆದಾರರು ಮೈಸೂರು ಲೋಕಾಯುಕ್ತ ಕಚೇರಿಗೆ ದೂರು ಸಲ್ಲಿಸಿದ್ದರು.

ಚಾಮರಾಜನಗರ ಲೋಕಾಯುಕ್ತ ಡಿವೈಎಸ್‌ಪಿ ಮ್ಯಾಥ್ಯೂ ಥಾಮಸ್ ಮಾರ್ಗದರ್ಶನದಲ್ಲಿ ಮೈಸೂರು ನಗರ ಲೋಕಾಯುಕ್ತ ಇನ್‌ಸ್ಪೆಕ್ಟರ್ ರವಿಕುಮಾರ್ ಹಾಗೂ ಚಾಮರಾಜನಗರ ಲೋಕಾಯುಕ್ತ ಇನ್‌ಸ್ಪೆಕ್ಟರ್ ಶಶಿಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.



ಕಾವೇರಿ ನೀರಾವರಿ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ರಂಗನಾಥ್ (ಕುಳಿತಿರುವವರು) ಹಾಗೂ ಅಕೌಂಟ್ ಸೂಪರಿಂಟೆಂಡೆಂಟ್ ಉಮಾ ಮಹೇಶ್ವರ

ಶಿಕ್ಷಣ ಸಚಿವರ ಶ್ರಮದಾನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಸೋಮವಾರ ಶಾಲೆಯ ಕಾಂಪೌಂಡ್ ನಿರ್ಮಾಣಕ್ಕೆ ಸ್ವತಃ ಶ್ರಮದಾನ ಮಾಡಿದರು. ಬಿರು ಬಿಸಿಲಿನಲ್ಲಿ ತಲೆಗೆ ಟವೆಲ್ ಸುತ್ತಿಕೊಂಡು, ಪಿಕಾಸಿ ಹಿಡಿದು ಕಾಂಪೌಂಡ್ ನಿರ್ಮಾಣಕ್ಕೆ ಗುಂಡಿ ಅಗೆದರು. ಗುದ್ದಲಿಯಿಂದ ಬುಟ್ಟಿಗೆ ಮಣ್ಣು ತುಂಬಿ ಹೊತ್ತು ಬೇರೆಡೆ ಸುರಿದರು.

ಸೊರಬ ತಾಲ್ಲೂಕಿನ ಹುರುಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಂಗಳ ಸೋಮವಾರ ಈ ಶ್ರಮದಾನಕ್ಕೆ ಸಾಕ್ಷಿಯಾಯಿತು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಶಾಲೆಯ ಕಾಂಪೌಂಡ್ ನಿರ್ಮಾಣಕ್ಕೆ ಸಚಿವರು ಕೈಜೋಡಿಸಿದರು. ಶ್ರಮದಾನ ಒಂದು ಗಂಟೆ ನಡೆಯಿತು. ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಚಾಲನೆ ನೀಡಿ ಶ್ರಮದಾನ ಮಾಡಿದರು.

'ನರೇಗಾ ಯೋಜನೆ ಸದ್ಬಳಕೆ ಮಾಡಿಕೊಂಡರೆ ಗ್ರಾಮಗಳ ಚಿತ್ರಣವನ್ನೇ ಬದಲಿಸಬಹುದು. ಈ ರೀತಿಯ ಕಾರ್ಯಕ್ರಮ ಇತರರಿಗೆ ಮಾದರಿ ಆಗಬೇಕು, ಪ್ರೇರಣೆಯಾಗಬೇಕು' ಎಂದು ಮಧು ಬಂಗಾರಪ್ಪ ಹೇಳಿದರು.

ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿಯ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯೊಬ್ಬರು 1ನೇ ತರಗತಿ ಬಾಲಕನಿಗೆ ಹೊಡೆದ ಪ್ರಕರಣ ಸಂಬಂಧ ಪ್ರತಿಕ್ರಿಯಿಸಿದ ಸಚಿವರು, 'ಮಕ್ಕಳೊಂದಿಗೆ ಅಮಾನವೀಯವಾಗಿ ವರ್ತಿಸಿದ್ದು ಸರಿಯಲ್ಲ. ಮಗುವಿನ ಚಿಕಿತ್ಸಾ ವೆಚ್ಚವನ್ನು ಇಲಾಖೆಯಿಂದಲೇ ಭರಿಸಲಾಗುವುದು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದರು.



ಸರ್ಕಾರಿ ಶಾಲೆಯ ಕಾಂಪೌಂಡ್ ನಿರ್ಮಾಣ ಕಾಮಗಾರಿಗಾಗಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಗುಂಡಿ ಅಗೆದು, ಮಣ್ಣು ಹೊತ್ತರು

ಚಾಮರಾಜನಗರ ಜಿಲ್ಲೆಯಲ್ಲಿ 5,119 ಎಕರೆ ಸ್ವತ್ತು

ಮಹಾರಾಜರ ಆಸ್ತಿ; ಖಾತೆಗೆ ಪ್ರಮೋದಾದೇವಿ ಪತ್ರ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಜಿಲ್ಲೆಯ ವಿವಿಧೆಡೆ ಮೈಸೂರು ಮಹಾರಾಜರಿಗೆ ಸೇರಿರುವ ಖಾಸಗಿ ಸ್ವತ್ತುಗಳನ್ನು ಕೂಡಲೇ ಖಾತೆ ಮಾಡಿಕೊಡುವಂತೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ಭೂ ದಾಖಲೆಗಳ ಉಪ ನಿರ್ದೇಶಕರು ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಖಾತೆಯಾಗುವವರೆಗೂ ಯಾರ ಹೆಸರಿಗೂ ಖಾತೆ ಮಾಡದಂತೆ, ಕಂದಾಯ ಗ್ರಾಮವಾಗಿ ಘೋಷಿಸದಂತೆ, ಯಾವುದೇ ವಹಿವಾಟು ನಡೆಸಲು ಅವಕಾಶ ನೀಡದಂತೆ ತಕರಾರು ಅರ್ಜಿಯನ್ನೂ ಸಲ್ಲಿಸಿದ್ದಾರೆ.

'ಮಾರ್ಚ್ 20ರಂದು ಬರೆದಿರುವ ಪತ್ರವು 21ರಂದು ಕಚೇರಿಗೆ ತಲುಪಿದ್ದು ಅರ್ಜಿಯ ಪರಿಶೀಲನೆ ನಡೆಯುತ್ತಿದೆ' ಎಂದು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಪತ್ರದಲ್ಲಿ ಏನಿದೆ?: ಜ.23, 1950ರಂದು ಮೈಸೂರು ಮಹಾರಾಜರು ಹಾಗೂ ಆಗಿನ ಕೇಂದ್ರ ಸರ್ಕಾರದ ನಡುವಿನ ಒಪ್ಪಂದದಂತೆ ಜಿಲ್ಲೆಯ ಹಲವು ಗ್ರಾಮಗಳಲ್ಲಿ, ಹಲವು ಸರ್ವೆ ನಂಬರ್‌ಗಳಲ್ಲಿರುವ 5,119 ಎಕರೆ 9 ಗುಂಟೆ ಜಮೀನು ಮಹಾರಾಜರಿಗೆ ಸೇರಿದ ಖಾಸಗಿ ಸ್ವತ್ತಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಎಲ್ಲಿ ಎಷ್ಟು ಆಸ್ತಿ?: ಅಟ್ಟುಗೂಳಿಪುರದಲ್ಲಿ 4,445 ಎಕರೆ 33 ಗುಂಟೆ, ಹರದನಹಳ್ಳಿಯ ಸರ್ವೆ ನಂಬರ್ 125, 124, 134, 135, 133, 463, 169, 184ರಲ್ಲಿ 130 ಎಕರೆ 3 ಗುಂಟೆ, ಬೂದಿತಿಟ್ಟು ಗ್ರಾಮದ ಸರ್ವೆ ನಂಬರ್ 117ರಲ್ಲಿ 63 ಎಕರೆ 39 ಗುಂಟೆ, ಕರಡಿಹಳ್ಳ ಗ್ರಾಮದ ಸರ್ವೆ ನಂಬರ್ 1, 2, 3ರಲ್ಲಿ 76 ಎಕರೆ 23 ಗುಂಟೆ.

ಕನ್ನಿಕೆರೆ ಗ್ರಾಮದ ಸರ್ವೆ ನಂಬರ್ 1, 2, 3 ರಲ್ಲಿ 190 ಎಕರೆ 4 ಗುಂಟೆ, ಉಮ್ಮತ್ತೂರಿನ ಸರ್ವೆ ನಂಬರ್ 563ರಲ್ಲಿರುವ 199 ಎಕರೆ 27 ಗುಂಟೆ, ಬಸವಾಪುರದ ಸರ್ವೆ ನಂಬರ್ 143ರಲ್ಲಿ 13 ಎಕರೆ ಹಾಗೂ ಚಾಮರಾಜನಗರದಲ್ಲಿರುವ ಮಹಾರಾಜರ ಜನನ ಮಂಟಪ ಹಾಗೂ ಉದ್ಯಾನವು ರಾಜಮನೆತನದ ಸ್ವತ್ತಾಗಿದೆ ಎಂದು ತಿಳಿಸಿದ್ದಾರೆ.

ರಾಜರ ಸ್ವತ್ತುಗಳಿರುವ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುತ್ತಿರುವ ಮಾಹಿತಿ ಇದ್ದು, ಖಾಸಗಿ ಸ್ವತ್ತನ್ನು ಕಂದಾಯ ಗ್ರಾಮವಾಗಿಸಬಾರದು ಎಂದು ತಕರಾರು ಸಲ್ಲಿಸಿದ್ದಾರೆ.

'ಪತ್ರ ತಲುಪಿದೆ; ಪೂರಕ ದಾಖಲೆ ಸಲ್ಲಿಸಿಲ್ಲ'

ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರ ಪತ್ರ ಜಿಲ್ಲಾಡಳಿತಕ್ಕೆ ತಲುಪಿದೆ. ಆದರೆ, ಮಹಾರಾಜರ ಖಾಸಗಿ ಸ್ವತ್ತು ಎಂಬುದಕ್ಕೆ ಪೂರಕ ದಾಖಲೆಗಳನ್ನು ಸಲ್ಲಿಸಿಲ್ಲ. ಅರ್ಜಿ ಸಂಬಂಧ ಪರಿಶೀಲನೆ ನಡೆಸುವಂತೆ ಚಾಮರಾಜನಗರ ತಹಶೀಲ್ದಾರ್‌ಗೆ ಸೂಚನೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ತಿಳಿಸಿದ್ದಾರೆ.

ರಾಧಾ–ರುಕ್ಮಿಣಿಗೆ 'ನಟನ ಪುರಸ್ಕಾರ'

ಮೈಸೂರು: ವೃತ್ತಿ ರಂಗಭೂಮಿಯ ಹಿರಿಯ ನಟಿಯರಾದ ರಾಧಾ–ರುಕ್ಮಿಣಿ ಸಹೋದರಿಯರನ್ನು ಇಲ್ಲಿನ ನಟನ ರಂಗಶಾಲೆಯಿಂದ ನೀಡುವ 'ನಟನ ಪುರಸ್ಕಾರ–2025'ಕ್ಕೆ ಆಯ್ಕೆ ಮಾಡಲಾಗಿದೆ.

'ನಟನ'ದ ಸಂಸ್ಥಾಪಕ ಅಧ್ಯಕ್ಷ ಎನ್. ಸುಬ್ರಹ್ಮಣ್ಯಂ ನೆನಪಿನಲ್ಲಿ ನೀಡುವ ಪುರಸ್ಕಾರ ಇದು. ಈ ಕಲಾವಿದೆಯರು ರಂಗಭೂಮಿಗೆ ಅತಿ ದೀರ್ಘ ಅವಧಿಯಿಂದ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹ 10ಸಾವಿರ, ಸ್ಮರಣಿಕೆ ಹಾಗೂ ಅಭಿನಂದನಾ ಪತ್ರ ಒಳಗೊಂಡಿದೆ. ಏ.11ರಂದು ದಟ್ಟಗಳ್ಳಿಯ ಸುಪ್ರೀಂ ಪಬ್ಲಿಕ್ ಶಾಲೆಯಲ್ಲಿ 'ರಜಾ–ಮಜಾ' ಬೇಸಿಗೆ ಶಿಬಿರದ ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು' ಎಂದು ರಂಗಕರ್ಮಿ ಮಂಡ್ಯ ರಮೇಶ್ ತಿಳಿಸಿದ್ದಾರೆ.



ರಾಧಾ–ರುಕ್ಮಿಣಿ

12 ಉತ್ತರ ತಪ್ಪು: ಅಭ್ಯರ್ಥಿಗಳ ಆರೋಪ

ಕಲಬುರಗಿ: ಜನವರಿ 25ರಂದು ನಡೆದಿದ್ದ ಗ್ರೂಪ್ ಬಿ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗವು ಕೀ ಉತ್ತರಗಳನ್ನು ಪ್ರಕಟಿಸಿದ್ದು, ಅದರಲ್ಲಿ 12 ಉತ್ತರಗಳು ತಪ್ಪಾಗಿವೆ ಎಂದು ಅಭ್ಯರ್ಥಿಗಳು ಆರೋಪಿಸಿದ್ದಾರೆ.

ಕೀ ಉತ್ತರದ ವಿಷಯ ಸಂಕೇತ 609ರ ಪ್ರಶ್ನೆಪತ್ರಿಕೆ ವರ್ಶನ್ ಕೋಡ್ 'ಆರ್' ನಲ್ಲಿನ 23, 25, 45, 51, 66, 67, 76, 83, 88, 92 ಹಾಗೂ 95ನೇ ಪ್ರಶ್ನೆಗಳಿಗೆ ನೀಡಲಾದ ಕೀ ಉತ್ತರಗಳು ತಪ್ಪಾಗಿವೆ ಎಂದು ಪರೀಕ್ಷೆ ಬರೆದ ಕಲಬುರಗಿಯ ಅಭ್ಯರ್ಥಿ ಜಗನ್ನಾಥ ಆರೋಪಿಸಿದ್ದಾರೆ.

76ನೇ ಪ್ರಶ್ನೆ ಕರ್ನಾಟಕದಲ್ಲಿ ಒಬಿಸಿ ಪಟ್ಟಿಯ ಪ್ರವರ್ಗ–2ರಲ್ಲಿ ಮುಸ್ಲಿಮರನ್ನು ಸೇರಿಸಲು ಯಾವ ಆಯೋಗವು ಪ್ರಸ್ತಾಪಿಸಿತು ಎಂಬ ಪ್ರಶ್ನೆಗೆ ಮಂಜುನಾಥ ಹೆಗಡೆ ಆಯೋಗ ಎಂದು ಉತ್ತರ ನೀಡಲಾಗಿದೆ. ಆದರೆ, ಕರ್ನಾಟಕದಲ್ಲಿ ಆ ಹೆಸರಿನ ಆಯೋಗವೇ ಇಲ್ಲ ಎಂದು ಅವರು ಹೇಳಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.



ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560 020.
ದೂರವಾಣಿ:080–23368615 / 23442271 / 74 ವಿಸ್ತರಣೆ: 266 ವೆಬ್‌ಸೈಟ್: kbda.karnataka.gov.in / www.bdabangalore.org

ಸಂ.: ಬೆಂಅಪ್ರಾ/ಇ.ಒ/ಸಿ.ಎ/02/2025–26 ದಿನಾಂಕ: 04/04/2025

ನಾಗರಿಕ ಸೌಲಭ್ಯ (ಸಿ.ಎ) ನಿವೇಶನಗಳ ಪ್ರಕಟಣೆ 2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಲಭ್ಯವಿರುವ ಕೆಳಕಂಡ ನಾಗರಿಕ ಸೌಲಭ್ಯ ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು 1989ರ ಅನುಸಾರ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಪೂರ್ವ ವಿಭಾಗ

ಕ್ರ. ಸಂ.	ಬಡಾವಣೆ ಹೆಸರು / ಸರ್ವೆ ನಂ.	ಗ್ರಾಮ / ಹೋಬಳಿ	ನಾಗರಿಕ ಸೌಲಭ್ಯ (ಸಿ.ಎ) ನಿವೇಶನ ಸಂಖ್ಯೆ	ನಾಗರಿಕ ಸೌಲಭ್ಯ (ಸಿ.ಎ) ವಿಸ್ತೀರ್ಣ ಚ.ಮೀ.	ಉದ್ದೇಶ (ಮೀಸಲು)	ಚ.ಮೀ. ಒಂದಕ್ಕೆ ದರ (ರೂ.ಗಳಲ್ಲಿ)	ನೊಂದಣಿ ಶುಲ್ಕ (ರೂ.ಗಳಲ್ಲಿ)	ಅರ್ಜಿ ಜೊತೆಗೆ ಪಾವತಿ ಮಾಡಬೇಕಾಗಿರುವ ಪ್ರಾರಂಭಿಕ ಠೇವಣಿ ಮೊತ್ತ (ರೂ.ಗಳಲ್ಲಿ)	ಒಂದೇ ಕಂತಿನಲ್ಲಿ 30 ವರ್ಷಗಳಿಗೆ ಪಾವತಿ ಮಾಡಬೇಕಾದ ಗುತ್ತಿಗೆ ಮೊತ್ತ (ರೂ.ಗಳಲ್ಲಿ) ಜಿ.ಎಸ್.ಟಿ 18% ಹೊರತುಪಡಿಸಿ	ವಾರ್ಷಿಕ ಮೊತ್ತ (ರೂ.ಗಳಲ್ಲಿ) ಜಿ.ಎಸ್.ಟಿ 18% ಹೊರತುಪಡಿಸಿ	ಹೆಚ್ಚುವರಿ ಗುತ್ತಿಗೆ ಮೊತ್ತ (10 ಚ.ಮೀ ಒಂದಕ್ಕೆ ವಾರ್ಷಿಕ ರೂ.1)
1	2	3	4	5	6	7	8	9	10	11	12
1	ಮೆ:ಸ್ಕಂದ ಮೋಕ್ಷ ಸರ್ವೆ ನಂ.44/1 &45/1	ಪಣತ್ತೂರು		335.98	ಸಾಮಾಜಿಕ ಚಟುವಟಿಕೆಗಳು (ಎಸ್.ಟಿ)	3,105	2,500	52,161	10,43,218	1,89,135	33.60
2	ಮೆ:ಮೈನಾ ಪ್ರಾಪರ್ಟಿಸ್ ಪ್ರೈ ಲಿ.,	ಗುಂಜೂರು / ವರ್ತೂರು		216.15	ಸಾಮಾಜಿಕ ಚಟುವಟಿಕೆಗಳು (ಸಾಮಾನ್ಯ)	3,398	2,500	91,799	7,34,391	1,33,145	21.62
3	ಸರ್ವೆ ನಂ.112, 113, 114, 115, (ಗ್ರೀನ್ ಕ್ಯಾಸ್ಕೆಡ್)	ರಾಯಸಂದ್ರ		470.25	ನರ್ಸರಿ ಶಾಲೆ/ಪ್ಲೇ ಹೋಂ (ಎಸ್.ಸಿ)	2,800	2,500	65,835	1,3,16,700	2,38,718	47.03
4	ಸರ್ವೆ ನಂ.112, 113, 114, 115, (ಗ್ರೀನ್ ಕ್ಯಾಸ್ಕೆಡ್)	ರಾಯಸಂದ್ರ		460.00	ಜಿಮ್ನಾಷಿಯಂ (ಎಸ್.ಟಿ)	3,105	2,500	71,415	14,28,300	2,58,951	46.00
5	ಸರ್ವೆ ನಂ.112/ಪಿ (ರಿಲೇಬಲ್ ಡೆವಲಪರ್ಸ್)	ಹರಳೂರು		236.00	ಸಾಂಸ್ಕೃತಿಕ ಚಟುವಟಿಕೆಗಳು (ಸಾಮಾನ್ಯ)	3,100	2,500	91,450	7,31,600	1,32,639	23.60
6	ಸರ್ವೆ ನಂ.5/1, 2, 3, 6/1, 2, 17/ಎ, 2, 3, 18/1, 2, 3, 19/1, 3, 20	ಕುರುಡು ಸೊಣ್ಣೇನಹಳ್ಳಿ / ಬಿದರಹಳ್ಳಿ		490.50	ಪ್ಲೇ ಹೋಂ (ಸಾಮಾನ್ಯ)	3,100	2,500	190,069	15,20,550	2,75,676	49.05
7	ಶ್ರೀ ಸುರೇಂದ್ರ ಬಡಾವಣೆ, ಸರ್ವೆ ನಂ.5/1 ಮತ್ತು 5/3,	ಸಾದರಮಂಗಲ / ಕೆ.ಆರ್.ಪುರ		163.46	ಸಾಮಾಜಿಕ ಚಟುವಟಿಕೆಗಳು (ಸಾಮಾನ್ಯ)	3,720	2,500	76,009	6,08,071	1,10,243	16.35
8	ರೆಸಿಡೆನ್ಷಿಯಲ್ ಲೇಔಟ್ ಸೈಟ್ಸ್ ಸರ್ವೆ ನಂ.203/ಪಿ,	ಕಾಡುಗೋಡಿ / ಬಿದರಹಳ್ಳಿ		169.00	ಸಾಮಾಜಿಕ ಚಟುವಟಿಕೆಗಳು (ಸಾಮಾನ್ಯ)	3,547	2,500	74,927	5,99,413	1,08,674	16.90
9	ಸರ್ವೆ ನಂ.111/2(ಪಿ), 111/3ಬಿ(ಪಿ), 112/1ಎ(ಪಿ), 112/1ಬಿ, 112/2–5, 113, 114/12ಬಿ, 115/1, 3, 161/1,2,3	ಹರಳೂರು		1474.20	ಶೈಕ್ಷಣಿಕ (ಎಸ್.ಸಿ)	9,025	5,000	665,233	1,33,04,655	24,12,134	147.42
10	ಸರ್ವೆ ನಂ. 79/3(ಪಿ), 81/2, 84/4(ಪಿ), 85(ಪಿ), 86/1(ಪಿ), 86/5, 6, 7, & 8	ದೊಡ್ಡತೋಗೂರು		1054.88	ರಿಕ್ರಿಯೇಷನ್ ಸೆಂಟರ್ (ಸಾಮಾನ್ಯ)	3,450	5,000	454,970	36,39,758	6,59,888	105.49
11	ರೆಸಿಡೆನ್ಷಿಯಲ್ ಬಡಾವಣೆ ಸರ್ವೆ ನಂ.34/ (ಪಿ), 36/2, 37/2 39&40	ವೈಟ್‌ಫೀಲ್ಡ್ (ಬೀನಾ ಜೋಸೆಫ್) / ವರ್ತೂರು		645.75	ರಿಕ್ರಿಯೇಷನ್ ಸೆಂಟರ್ (ಸಾಮಾನ್ಯ)	13,500	2,500	1,089,703	87,17,625	15,80,505	64.58
12	ಕೇಂಬ್ರಿಡ್ಜ್ ಬಡಾವಣೆ, ಹೆಚ್.ಎ.ಎಲ್ 2ನೇ ಹಂತ	ಸೋಮೇಶ್ವರನಗರ		1209.39	ಶೈಕ್ಷಣಿಕ (ಎಸ್.ಸಿ)	12,250	5,000	740,751	1,48,15,028	26,85,964	120.94
13	ಹೆಚ್.ಎ.ಎಲ್ 3ನೇ ಹಂತ ಸಿ.ಎ ನಿವೇಶನ ಸಂಖ್ಯೆ: 03	–	03	224.00	ನರ್ಸರಿ ಶಾಲೆ/ಪ್ಲೇ ಹೋಂ / ಶಿಶು ಆರೈಕೆ ಕೇಂದ್ರ (ಎಸ್.ಸಿ)	3,600	2,500	40,320	8,06,400	1,46,200	22.40
14	ಸಿ.ಎ ನಿವೇಶನ ಸಂಖ್ಯೆ: 06	ಲಿಂಗರಾಜಪುರ	06	111.48	ಮೆಡಿಕಲ್ ಕ್ಲಿನಿಕ್ (ಎಸ್.ಸಿ)	8,625	2,500	48,076	9,61,515	1,74,323	11.15
15	ಸಿ.ಎ ನಿವೇಶನ ಸಂಖ್ಯೆ:01, ಸರ್ವೆ ನಂ.99/1 & 100/1	ಹರಳೂರು	01	442.50	ಜಿಮ್ನಾಷಿಯಂ (ಸಾಮಾನ್ಯ)	3,100	2,500	1,71,469	13,71,750	2,48,698	44.25
16	ರೆಸಿಡೆನ್ಷಿಯಲ್ ಲೇಔಟ್ ಸೈಟ್ಸ್ ನಂ.02, ಸರ್ವೆ ನಂ.61/2	ಕುಂದಲಹಳ್ಳಿ / ಕೆ.ಆರ್. ಪುರ	02	466.88	ಸಾಂಸ್ಕೃತಿಕ ಕೇಂದ್ರ (ಸಾಮಾನ್ಯ)	14,800	2,500	8,63,728	69,09,824	12,52,751	46.69
17	ರೆಸಿಡೆನ್ಷಿಯಲ್ ಲೇಔಟ್ ಸೈಟ್ಸ್ ನಂ. 01, ಸರ್ವೆ ನಂ.34/ಪಿ, 36/2, 37/2, 39 & 40	ವೈಟ್‌ಫೀಲ್ಡ್ / ವರ್ತೂರು	01	645.75	ಜಿಮ್ನಾಷಿಯಂ (ಸಾಮಾನ್ಯ)	13,500	2,500	10,89,703	87,17,625	15,80,505	64.58
18	ರೆಸಿಡೆನ್ಷಿಯಲ್ ಲೇಔಟ್ ಸೈಟ್ಸ್ ನಂ. 01, ಸರ್ವೆ ನಂ.12/3, 13/12 & 24/3	ಬಿ.ನಾರಾಯಣಪುರ	01	1328.00	ಶೈಕ್ಷಣಿಕ (ಎಸ್.ಸಿ)	9,250	5,000	6,14,200	1,22,84,000	22,27,089	132.80
	ಪಶ್ಚಿಮ ವಿಭಾಗ										
	ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್–1										
19	ಬಿ–1, ಸಿ.ಎ–3, ಸರ್ವೆ ನಂ. 81/1	ಕೊಡಿಗೇಹಳ್ಳಿ	03	228.00	ಮೆಡಿಕಲ್ ಕ್ಲಿನಿಕ್/ ಮೆಟರ್ನಿಟಿ ಹೋಮ್, ರೋಗನಿರ್ಣಯ ಕೇಂದ್ರ/ ಡಯಾಲಿಸಿಸ್ ಕೇಂದ್ರ, (ಸಾಮಾನ್ಯ)	9,800	2,500	2,79,300	22,34,400	4,05,097	22.80
20	ಬಿ–1, ಸಿ.ಎ–4, ಸರ್ವೆ ನಂ. 81/1	ಕೊಡಿಗೇಹಳ್ಳಿ	04	1503.00	ಮಾರುಕಟ್ಟೆಗಳು (ಎಸ್.ಸಿ)	7,900	5,000	5,93,685	1,18,73,700	21,52,702	150.30
21	ಬಿ–1, ಸಿ.ಎ–9, ಸರ್ವೆ ನಂ. 105/2, 105/1	ಕನ್ನಳ್ಳಿ	09	6550.00	ರಿಕ್ರಿಯೇಷನ್ ಸೆಂಟರ್ (ಸಾಮಾನ್ಯ)	9,800	10,000	80,23,750	6,41,90,000	1,16,37,647	655.00
22	ಬಿ–1, ಸಿ.ಎ, ಸರ್ವೆ ನಂ. 6	ಕನ್ನಳ್ಳಿ		1653.00	ಮಾರುಕಟ್ಟೆಗಳು (ಸಾಮಾನ್ಯ)	9,800	5,000	20,24,925	1,61,99,400	29,36,951	165.30
23	ಬಿ–1, ಸಿ.ಎ ಸರ್ವೆ ನಂ. 58/4	ಕೊಡಿಗೇಹಳ್ಳಿ		446.00	ಮಕ್ಕಳ ಆರೈಕೆ ಕೇಂದ್ರ (ಸಾಮಾನ್ಯ)	3,260	2,500	1,81,745	14,53,960	2,63,603	44.60
	ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್–2										
24	ಬಿ–2, ಸಿ.ಎ–1, ಸರ್ವೆ ನಂ.165/2	ರಾಮಸಂದ್ರ	01	534.00	ಮೆಟರ್ನಿಟಿ ಹೋಮ್/ ಆಸ್ಪತ್ರೆ (ಸಾಮಾನ್ಯ)	10,000	2,500	6,67,500	53,40,000	9,68,142	53.40
25	ಬಿ–2, ಸಿ.ಎ–14, ಸರ್ವೆ ನಂ.22/5	ಕನ್ನಳ್ಳಿ	14	561.00	ಮಿನಿ ಮಾರುಕಟ್ಟೆಗಳು (ಸಾಮಾನ್ಯ)	9,800	2,500	6,87,225	54,97,800	9,96,751	56.10
26	ಬಿ–2, ಸಿ.ಎ–12 ಸರ್ವೆ ನಂ.51,52,53,47/2 & 47/6	ಕನ್ನಳ್ಳಿ	12	2757.00	ವೈದ್ಯಕೀಯ/ ಆರೋಗ್ಯ ಕೇಂದ್ರ / ಆಸ್ಪತ್ರೆ (ಎಸ್.ಸಿ)	7,900	7,500	10,89,015	2,17,80,300	39,48,768	275.70
27	ಬಿ–2, ಸಿ.ಎ ಸರ್ವೆ ನಂ.40/1,40/2	ಕನ್ನಳ್ಳಿ		467.30	ವೈದ್ಯಕೀಯ ಚಿಕಿತ್ಸಾಲಯ (ಸಾಮಾನ್ಯ)	9,800	2,500	5,72,443	45,79,540	8,30,271	46.73
	ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್–3										
28	ಬಿ–3, ಸಿ.ಎ–1 ಸರ್ವೆ ನಂ.95/3	ರಾಮಸಂದ್ರ	01	1579.00	ಮಾರುಕಟ್ಟೆಗಳು (ಸಾಮಾನ್ಯ)	10,000	5,000	19,73,750	1,57,90,000	28,62,727	157.90
29	ಬಿ–3, ಸಿ.ಎ–2 ಸರ್ವೆ ನಂ.175	ರಾಮಸಂದ್ರ	02	2542.00	ವೈದ್ಯಕೀಯ/ ಆರೋಗ್ಯ ಕೇಂದ್ರ / ಆಸ್ಪತ್ರೆ (ಎಸ್.ಸಿ)	8,000	7,500	10,16,800	2,03,36,000	36,86,917	254.20
30	ಬಿ–3, ಸಿ.ಎ–3 ಸರ್ವೆ ನಂ.23/8, 23/9	ಸೂಲಿಕೆರೆ	03	331.00	ಮಿನಿ ಮಾರುಕಟ್ಟೆಗಳು (ಸಾಮಾನ್ಯ)	10,000	2,500	4,13,750	33,10,000	6,00,103	33.10
	ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್–4										
31	ಬಿ–4, ಸಿ.ಎ–1 ಸರ್ವೆ ನಂ.80/1	ಕೊಮ್ಮಘಟ್ಟ	01	399.00	ಹಾಲಿನ ಬೂತ್‌ಗಳು/ ಹಾಪ್‌ಕಾಮ್ಸ್ (ಸಾಮಾನ್ಯ)	10,000	2,500	4,98,750	39,90,000	7,23,387	39.90
32	ಬಿ–4, ಸಿ.ಎ–2 ಸರ್ವೆ ನಂ.81/2, 109/1, 109/2, 109/3	ಕೊಮ್ಮಘಟ್ಟ	02	3880.00	ಧಾರ್ಮಿಕ (ಸಾಮಾನ್ಯ)	2,300	7,500	11,15,500	89,24,000	16,17,921	388.00
33	ಬಿ–4, ಸಿ.ಎ–5 ಸರ್ವೆ ನಂ.109/1, 109/2, 109/3	ಕೊಮ್ಮಘಟ್ಟ	05	6721.00	ಸಾಮಾಜಿಕ / ಸಾಂಸ್ಕೃತಿಕ ಚಟುವಟಿಕೆಗಳು (ಎಸ್.ಟಿ)	3,300	10,000	27,72,413	2,21,79,300	40,21,107	672.10
	ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್–5										
34	ಬಿ–5, ಸಿ.ಎ–2, ಸರ್ವೆ ನಂ.35/1, 35/2	ಕೊಮ್ಮಘಟ್ಟ	02	11210.00	ಜಿಮ್ನಾಷಿಯಂ (ಸಾಮಾನ್ಯ)	3,300	10,000	46,24,125	3,69,93,000	67,06,831	1121.00
35	ಬಿ–5, ಸಿ.ಎ–5, ಸರ್ವೆ ನಂ.36/2ಃ	ಕೊಮ್ಮಘಟ್ಟ	05	2616.00	ವೃದ್ಧಾಶ್ರಮಗಳು/ ಅನಾಥಾಶ್ರಮಗಳು / ವಸತಿ ನಿಲಯಗಳು/ ಧರ್ಮಶಾಲಾ, (ಎಸ್.ಸಿ)	1,900	7,500	2,48,520	49,70,400	9,01,134	261.60
36	ಬಿ–5, ಸಿ.ಎ–6, ಸರ್ವೆ ನಂ.28	ಕೊಮ್ಮಘಟ್ಟ	06	807.00	ಮಿನಿ ಮಾರುಕಟ್ಟೆಗಳು/ (ಸಾಮಾನ್ಯ)	10,000	2,500	10,08,750	80,70,000	14,63,091	80.70
37	ಬಿ–5, ಸಿ.ಎ–10, ಸರ್ವೆ ನಂ.19/2	ಚಲ್ಲಘಟ್ಟ	10	1824.00	ಜಿಮ್ನಾಷಿಯಂ (ಸಾಮಾನ್ಯ)	3,300	5,000	7,52,400	60,19,200	10,91,281	182.40
38	ಬಿ–5, ಸಿ.ಎ–18, ಸರ್ವೆ ನಂ.121	ಕೊಮ್ಮಘಟ್ಟ	18	5975.00	ಧಾರ್ಮಿಕ (ಸಾಮಾನ್ಯ)	2,300	10,000	17,17,813	1,37,42,500	24,91,515	597.50
39	ಬಿ–5, ಸಿ.ಎ–7 ಸರ್ವೆ ನಂ.18/2, 18/3	ಚಲ್ಲಘಟ್ಟ	07	1690.34	ಸಾಮಾಜಿಕ / ಸಾಂಸ್ಕೃತಿಕ ಚಟುವಟಿಕೆಗಳು (ಸಾಮಾನ್ಯ)	3,300	5,000	6,97,265	55,78,122	10,11,314	169.03
	ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್–6										
40	ಬಿ–6, ಸಿ.ಎ–1 ಸರ್ವೆ ನಂ.48	ಭೀಮನಕುಪ್ಪೆ	01	338.00	ಜಿಮ್ನಾಷಿಯಂ (ಸಾಮಾನ್ಯ)	3,300	2,500	1,39,425	11,15,400	2,02,222	33.80
41	ಬಿ–6, ಸಿ.ಎ–2 ಸರ್ವೆ ನಂ.59	ಭೀಮನಕುಪ್ಪೆ	02	7705.00	ಸಮುದಾಯ ಭವನ/ಕಲ್ಯಾಣ ಮಂಟಪ (ಎಸ್.ಸಿ)	8,000	10,000	30,82,000	6,16,40,000	1,11,75,332	770.50
42	ಬಿ–6, ಸಿ.ಎ–3 ಸರ್ವೆ ನಂ.11/3	ಭೀಮನಕುಪ್ಪೆ	03	667.00	ವೈದ್ಯಕೀಯ/ ಆರೋಗ್ಯ ರಕ್ಷಣೆ/ ಆಸ್ಪತ್ರೆಗಳು (ಸಾಮಾನ್ಯ)	10,000	2,500	8,33,750	66,70,000	12,09,271	66.70
43	ಬಿ–6, ಸಿ.ಎ–9 ಸರ್ವೆ ನಂ.146/3	ಭೀಮನಕುಪ್ಪೆ	09	609.00	ಸಾಮಾಜಿಕ / ಸಾಂಸ್ಕೃತಿಕ ಚಟುವಟಿಕೆಗಳು (ಸಾಮಾನ್ಯ)	3,300	2,500	2,51,213	20,09,700	3,64,359	60.90
44	ಬಿ–6, ಸಿ.ಎ–10 ಸರ್ವೆ ನಂ.7/1,8,9/1	ಭೀಮನಕುಪ್ಪೆ	10	1772.00	ವೈದ್ಯಕೀಯ/ ಆರೋಗ್ಯ ರಕ್ಷಣೆ/ ಆಸ್ಪತ್ರೆಗಳು (ಸಾಮಾನ್ಯ)	10,000	5,000	22,15,000	1,77,20,000	32,12,636	177.20
45	ಬಿ–6, ಸಿ.ಎ–11 ಸರ್ವೆ ನಂ.2/1,2/2	ಭೀಮನಕುಪ್ಪೆ	11	3244.00	ಶೈಕ್ಷಣಿಕ (ಸಾಮಾನ್ಯ)	10,000	7,500	40,55,000	3,24,40,000	58,81,372	324.40
46	ಬಿ–6, ಸಿ.ಎ–12 ಸರ್ವೆ ನಂ.2/1	ಭೀಮನಕುಪ್ಪೆ	12	638.00	ನರ್ಸರಿ ಶಾಲೆ/ ಪ್ಲೇ ಹೋಂ / ಶಿಶು ಆರೈಕೆ ಕೇಂದ್ರ (ಸಾಮಾನ್ಯ)	10,000	2,500	7,97,500	63,80,000	11,56,694	63.80
47	ಬಿ–6, ಸಿ.ಎ–14 ಸರ್ವೆ ನಂ.163	ಭೀಮನಕುಪ್ಪೆ	14	2033.00	ಸಮುದಾಯ ಭವನ/ಕಲ್ಯಾಣ ಮಂಟಪ (ಎಸ್.ಸಿ)	8,000	7,500	8,13,200	1,62,64,000	29,48,663	203.30
48	ಬಿ–6, ಸಿ.ಎ–17 ಸರ್ವೆ ನಂ.175/3	ಭೀಮನಕುಪ್ಪೆ	17	340.00	ಮಿನಿ ಮಾರುಕಟ್ಟೆಗಳು/ (ಸಾಮಾನ್ಯ)	10,000	2,500	4,25,000	34,00,000	6,16,420	34.00
49	ಬಿ–6, ಸಿ.ಎ–19 ಸರ್ವೆ ನಂ.230/2	ಭೀಮನಕುಪ್ಪೆ	19	663.00	ಜಿಮ್ನಾಷಿಯಂ (ಸಾಮಾನ್ಯ)	3,300	2,500	273,488	21,87,900	3,96,666	66.30
	ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್–7										
50	ಬಿ–7, ಸಿ.ಎ–1 ಸರ್ವೆ ನಂ.61/1,61/2	ಕೊಮ್ಮಘಟ್ಟ	01	20240.00	ವೈದ್ಯಕೀಯ/ ಆರೋಗ್ಯ ರಕ್ಷಣೆ/ ಆಸ್ಪತ್ರೆಗಳು (ಸಾಮಾನ್ಯ)	10,000	10,000	25,300,000	20,24,00,000	3,66,95,120	2024.00
51	ಬಿ–7, ಸಿ.ಎ–4 ಸರ್ವೆ ನಂ.49/2	ಕೊಮ್ಮಘಟ್ಟ	04	848.00	ವೈದ್ಯಕೀಯ/ ಆರೋಗ್ಯ ರಕ್ಷಣೆ/ ಆಸ್ಪತ್ರೆಗಳು (ಎಸ್.ಸಿ)	8,000	2,500	3,39,200	67,84,000	12,29,939	84.80
52	ಬಿ–7, ಸಿ.ಎ–5 ಸರ್ವೆ ನಂ.49/3,47,48	ಕೊಮ್ಮಘಟ್ಟ	05	4639.00	ಧಾರ್ಮಿಕ (ಸಾಮಾನ್ಯ)	2,300	10,000	13,33,713	1,06,69,700	19,34,417	463.90
53	ಬಿ–7, ಸಿ.ಎ–11 ಸರ್ವೆ ನಂ.55,60/3,117	ಕೊಮ್ಮಘಟ್ಟ	11	2016.00	ಸಮುದಾಯ ಭವನ/ಕಲ್ಯಾಣ ಮಂಟಪ (ಸಾಮಾನ್ಯ)	10,000	7,500	25,20,000	2,01,60,000	36,55,008	201.60
54	ಬಿ–7, ಸಿ.ಎ–09, ಸರ್ವೆ ನಂ.212, 211, 193/2	ಭೀಮನಕುಪ್ಪೆ	09	3961.00	ಶೈಕ್ಷಣಿಕ (ಸಾಮಾನ್ಯ)	10,000	7,500	49,51,250	3,96,10,000	71,81,293	396.10
	ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್–8										
55	ಬಿ–8, ಸಿ.ಎ–1 ಸರ್ವೆ ನಂ.55/1,55/2	ಸೂಲಿಕೆರೆ	01	8550.00	ಶೈಕ್ಷಣಿಕ ಹಾಗೂ ವಿದ್ಯಾರ್ಥಿನಿಲಯ (ಸಾಮಾನ್ಯ)	10,000	10,000	1,06,87,500	8,55,00,000	1,55,01,150	855.00

ಮುಂದುವರೆದಿದೆ...........

ಕ್ರ. ಸಂ.	ಬಡಾವಣೆ ಹೆಸರು / ಸರ್ವೆ ನಂ.	ಗ್ರಾಮ / ಹೋಬಳಿ	ನಾಗರಿಕ ಸೌಲಭ್ಯ (ಸಿ.ಎ)		ಉದ್ದೇಶ (ಮೀಸಲು)	ಚ.ಮೀ. ಒಂದಕ್ಕೆ ದರ (ರೂ.ಗಳಲ್ಲಿ)	ನೊಂದಣಿ ಶುಲ್ಕ (ರೂ.ಗಳಲ್ಲಿ)	ಅರ್ಜಿ ಜೊತೆಗೆ ಪಾವತಿ ಮಾಡಬೇಕಾಗಿರುವ ಪ್ರಾರಂಭಿಕ ಠೇವಣಿ ಮೊತ್ತ (ರೂ.ಗಳಲ್ಲಿ)	ಒಂದೇ ಕಂತಿನಲ್ಲಿ 30 ವರ್ಷಗಳಿಗೆ ಪಾವತಿ ಮಾಡಬೇಕಾದ ಗುತ್ತಿಗೆ ಮೊತ್ತ (ರೂ.ಗಳಲ್ಲಿ) ಜಿ.ಎಸ್.ಟಿ 18% ಹೊರತುಪಡಿಸಿ	ವಾರ್ಷಿಕ ಮೊತ್ತ (ರೂ.ಗಳಲ್ಲಿ) ಜಿ.ಎಸ್.ಟಿ 18% ಹೊರತುಪಡಿಸಿ	ಹೆಚ್ಚುವರಿ ಗುತ್ತಿಗೆ ಮೊತ್ತ (10 ಚ.ಮೀ ಒಂದಕ್ಕೆ ವಾರ್ಷಿಕ ರೂ.1)
			ನಿವೇಶನ ಸಂಖ್ಯೆ	ವಿಸ್ತೀರ್ಣ ಚ.ಮೀ.							
1	2	3	4	5	6	7	8	9	10	11	12
ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್-8											
56	ಬಿ-8, ಸಿ.ಎ-3 ಸರ್ವೆ ನಂ.9/4,12/1	ಸೂಲಿಕೆರೆ	03	3256.00	ವಿಕಲ ಚೇತನರ ಆರೋಗ್ಯ ಕೇಂದ್ರ (ಪಿ.ಹೆಚ್-ಸಾಮಾನ್ಯ)	2,900	7,500	4,72,120	94,42,400	17,11,907	325.60
57	ಬಿ-8, ಸಿ.ಎ-4 ಸರ್ವೆ ನಂ.12/2,11/3,11/4,11/5,11/1ಃ,14/3,11/6,11/1ಅ,14/2	ಸೂಲಿಕೆರೆ	04	18884.00	ಶೈಕ್ಷಣಿಕ (ಸಾಮಾನ್ಯ)	10,000	10,000	2,36,05,000	18,88,40,000	3,42,36,692	1888.40
58	ಬಿ-8, ಸಿ.ಎ ಸರ್ವೆ ನಂ.8,72	ಸೂಲಿಕೆರೆ		369.80	ಪಶು ಚಿಕಿತ್ಸಾಲಯ (ಸಾಮಾನ್ಯ)	3,300	2,500	1,52,543	12,20,340	2,21,248	36.98
ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್-9											
59	ಬಿ-9, ಸಿ.ಎ-8, ಸರ್ವೆ ನಂ.126/2	ಕೆಂಚನಪುರ	08	1031.00	ಅನಾಥಾಶ್ರಮ / ವೃದ್ಧಾಶ್ರಮ (ಸಾಮಾನ್ಯ)	2,300	5,000	2,96,413	23,71,300	4,29,917	103.10
ಪಶ್ಚಿಮ ವಿಭಾಗ											
60	ಶ್ರೀ ಪ್ರದೀಪ್ ಕೃಷ್ಣಪ್ಪ ಬಡಾವಣೆ, ಸರ್ವೆ ನಂ.124/1, 124/2, 124/3 ಮತ್ತು 124/4	ಕರಿಹೋಬನಹಳ್ಳಿ		1177.02	ಆಸ್ಪತ್ರೆ /ನರ್ಸಿಂಗ್ ಹೋಂ (ಎಸ್.ಸಿ)	7,750	5,000	4,56,095	91,21,905	16,53,801	117.70
ಸರ್.ಎಂ.ವಿ.ಬಡಾವಣೆ 3ನೇ ಬ್ಲಾಕ್											
61	ಸಿ.ಎ ನಿವೇಶನ ಸಂಖ್ಯೆ:15	–	15	13085.30	ಮಾರುಕಟ್ಟೆಗಳು (ಸಾಮಾನ್ಯ)	12,750	10,000	20,854,697	16,68,37,575	3,02,47,652	1308.53
62	ಸಿ.ಎ ನಿವೇಶನ ಸಂಖ್ಯೆ: 02	–	02	1372.00	ಮಿನಿ ಮಾರುಕಟ್ಟೆಗಳು (ಎಸ್.ಸಿ)	9,375	5,000	6,43,125	1,28,62,500	23,31,971	137.20
63	ಸಿ.ಎ ನಿವೇಶನ ಸಂಖ್ಯೆ:03	–	03	649.12	ಮೆಟರ್ನಿಟಿ ಹೋಮ್ & ಆಸ್ಪತ್ರೆ (ಸಾಮಾನ್ಯ)	12,750	2,500	10,34,535	82,76,280	15,00,490	64.91
64	ಸಿ.ಎ ನಿವೇಶನ ಸಂಖ್ಯೆ:9ಎ	–	9ಎ	500	ಮಿನಿ ಮಾರುಕಟ್ಟೆ (ಸಾಮಾನ್ಯ)	12,750	2,500	7,96,875	63,75,000	11,55,788	50.00
ಸರ್. ಎಂ. ವಿಶ್ವೇಶ್ವರಯ್ಯ ಬಡಾವಣೆ 5ನೇ ಬ್ಲಾಕ್											
65	ಸಿ.ಎ ನಿವೇಶನ ಸಂಖ್ಯೆ:09	–	09	3063.06	ಶೈಕ್ಷಣಿಕ (ಎಸ್.ಸಿ)	12,200	7,500	46,71,167	3,73,69,332	67,75,060	306.31
ಸರ್. ಎಂ. ವಿಶ್ವೇಶ್ವರಯ್ಯ ಬಡಾವಣೆ 7ನೇ ಬ್ಲಾಕ್											
66	ಸಿ.ಎ ನಿವೇಶನ ಸಂಖ್ಯೆ:04	–	04	1453	ಧಾರ್ಮಿಕ (ಸಾಮಾನ್ಯ)	2,480	5,000	4,50,430	36,03,440	6,53,304	145.30
ಸರ್. ಎಂ. ವಿಶ್ವೇಶ್ವರಯ್ಯ ಬಡಾವಣೆ 9ನೇ ಬ್ಲಾಕ್											
67	ಸಿ.ಎ ನಿವೇಶನ ಸಂಖ್ಯೆ:07	–	07	7543.00	ಧಾರ್ಮಿಕ (ಸಾಮಾನ್ಯ)	2,480	10,000	2,338,330	18,706,640	3,391,514	754.30
ಉತ್ತರ ವಿಭಾಗ											
68	ಬಿ.ಇ.ಇ. ಕೋ-ಆಪರೇಟಿವ್ ಹೆಚ್.ಬಿ.ಸಿ.ಎಸ್. ಲಿಮಿಟೆಡ್, ಕೆ.ಜಿ. ನರಸೀಪುರ, ಸರ್ವೆ ನಂ.24	ಕೆ.ಜಿ. ನರಸೀಪುರ/ ಯಲಹಂಕ		144.43	ಡಿಸ್ಪೆನ್ಸರಿ ಕ್ಲಿನಿಕ್ (ಎಸ್.ಸಿ)	8,600	2,500	62,105	12,42,098	2,25,192	14.44
69	ಬಿ.ಇ.ಇ. ಕೋ-ಆಪರೇಟಿವ್ ಹೆಚ್.ಬಿ.ಸಿ.ಎಸ್. ಲಿಮಿಟೆಡ್, ಆವಲಹಳ್ಳಿ 2ನೇ ಫೇಸ್, ಸರ್ವೆ ನಂ.106	ಆವಲಹಳ್ಳಿ 2ನೇ ಹಂತ / ಯಲಹಂಕ		666.00	ಬ್ಯಾಂಕ್ (ಸಾಮಾನ್ಯ)	6,000	2,500	4,99,500	39,96,000	7,24,475	66.60
70	ಕರ್ನಾಟಕ ಗೌರ್ನಮೆಂಟ್ ಸೆಕ್ರೆಟೇರಿಯೇಟ್ 'ಡಿ' ಗ್ರೂಪ್ ಎಂಪ್ಲಾಯೀಸ್ ಅಸೋಸಿಯೇಷನ್ ಎಂ.ಎಸ್. ಬಿಲ್ಡಂಗ್ ಡಾ॥ ಅಂಬೇಡ್ಕರ್ ವೀಧಿ ರಸ್ತೆ, ಬೆಂಗಳೂರು ಸರ್ವೆ ನಂ.81 (ಹಳೇ ನಂ.55)	ಬೆಲ್ಲಹಳ್ಳಿ		315.77	ಡಿಸ್ಪೆನ್ಸರಿ (ಪಾಲಿ ಕ್ಲಿನಿಕ್) (ಸಾಮಾನ್ಯ)	6,000	2,500	2,36,828	18,94,620	3,43,495	31.58
71	ಆರ್.ಎಂ.ವಿ 2ನೇ ಹಂತ 2ನೇ ಬ್ಲಾಕ್ ಸಿ.ಎ ನಿವೇಶನ ಸಂಖ್ಯೆ: 03	–	03	1819.00	ಎಸ್.ಸಿ/ಎಸ್.ಟಿವ ಾನಸಿಕ ಹಾಗೂ ವಿಕಲ ಚೇತನ ಮಕ್ಕಳ ಪುನರ್ ವಸತಿ ಕೇಂದ್ರ ಮತ್ತು ಆಸ್ಪತ್ರೆ (ಪಿ.ಹೆಚ್-ಎಸ್.ಸಿ)	3,060	5,000	2,78,307	55,66,140	10,09,141	181.90
72	ಅರ್ಕಾವತಿ ಬಡಾವಣೆ, ಸಿ.ಎ ನಿವೇಶನ ಸಂಖ್ಯೆ: 01, ಸರ್ವೆ ನಂ 88/3	ಜಕ್ಕೂರು	01	1700.00	ಮಾರುಕಟ್ಟೆಗಳು (ಎಸ್.ಸಿ)	8,100	5,000	6,88,500	1,37,70,000	24,96,501	170.00
ಡಾ॥ ಕೆ. ಶಿವರಾಮಕಾರಂತ ಬಡಾವಣೆ (ಪ್ರಾಧಿಕಾರದ ವತಿಯಿಂದ ಅನುಮೋದಿಯಾದ ಖಾಸಗಿ ಬಡಾವಣೆ)											
73	ಯು.ಎ.ಎಸ್. ಎಂಪ್ಲಾಯೀಸ್ ಹೆಚ್.ಬಿ.ಸಿ.ಎಸ್. ಲಿಮಿಟೆಡ್ ಸರ್ವೆ ನಂ. 105/3 & 108/2 ಸಿ.ಎ ನಿವೇಶನ ಸಂಖ್ಯೆ:02,	ಅಲ್ಲಾಳಸಂದ್ರ	02	356.15	ನರ್ಸರಿ / ಪ್ಲೇ ಹೋಂ/ ಶಿಶು ಆರೈಕೆ ಕೇಂದ್ರ (ಸಾಮಾನ್ಯ)	3,029	2,500	1,34,847	10,78,778	1,95,583	35.62
74	ಡಿಯೋ ಮಾರ್ವಲ್ ಬಡಾವಣೆ ಸರ್ವೆ ನಂ. 32/1, 32/2, 32/3, 33, 37, 38, 39, 52, 53 ಸಿ.ಎ ನಿವೇಶನ ಸಂಖ್ಯೆ:02,	ಅನಂತಪುರ	02	450.00	ಮಿನಿ ಮಾರುಕಟ್ಟೆಗಳು (ಸಾಮಾನ್ಯ)	11,200	2,500	6,30,000	50,40,000	9,13,752	45.00
75	ಡಿಯೋ ಮಾರ್ವಲ್ ಬಡಾವಣೆ ಸರ್ವೆ ನಂ. 32/1, 32/2, 32/3, 33, 37, 38, 39, 52, 53 ಸಿ.ಎ ನಿವೇಶನ ಸಂಖ್ಯೆ:04	ಅನಂತಪುರ	04	820.00	ಆಸ್ಪತ್ರೆ (ಎಸ್.ಸಿ)	8,600	2,500	3,52,600	70,52,000	12,78,528	82.00
76	ರೆಸಿಡೆಂಟಲ್ ಗ್ರೂಪ್ ಹೌಸಿಂಗ್ ಡೆವಲಪ್ ಮೆಂಟ್ ಪ್ಲಾನ್ (ಟಾಟ ಹೌಸಿಂಗ್ ಡೆವಲಪ್ ಮೆಂಟ್ ಕಾರ್ಪೊರೇಷನ್ ಲಿಮಿಟೆಡ್) ಸರ್ವೆ ನಂ. 02 ಸಿ.ಎ ನಿವೇಶನ ಸಂಖ್ಯೆ:01,	ಜಾಲಹಳ್ಳಿ	01	1263.00	ಸಮುದಾಯ ಭವನ/ ಸಾಂಸ್ಕೃತಿಕ ಚಟುವಟಿಕೆಗಳು, (ಸಾಮಾನ್ಯ)	3,540	5,000	5,58,878	44,71,020	8,10,596	126.30
ದಕ್ಷಿಣ ವಿಭಾಗ											
ಬನಶಂಕರಿ 3ನೇ ಹಂತ											
77	ಸರ್ವೆ ನಂ.120/10 ಸಿ.ಎ	ಕತ್ತರಿಗುಪ್ಪೆ		2347.78	ಶೈಕ್ಷಣಿಕ (ಸಾಮಾನ್ಯ)	13,200	7,500	38,73,837	3,09,90,696	56,18,613	234.78
78	ಸಿ.ಎ ನಿವೇಶನ ಸಂಖ್ಯೆ:10	ಚನ್ನಮ್ಮನಕೆರೆ ಟ್ಯಾಂಕ್ ಬೆಡ್	10	559.16	ಆಸ್ಪತ್ರೆ (ಸಾಮಾನ್ಯ)	13,000	2,500	9,08,635	72,69,080	13,17,884	55.92
79	ಬನಶಂಕರಿ 3ನೇ ಹಂತ, 3ನೇ ಬ್ಲಾಕ್ ಸಿ.ಎ ನಿವೇಶನ ಸಂಖ್ಯೆ:01	–	01	570.00	ಧಾರ್ಮಿಕ/ ಸಾಂಸ್ಕೃತಿಕ ಚಟುವಟಿಕೆಗಳು (ಸಾಮಾನ್ಯ)	3,120	2,500	2,22,300	17,78,400	3,22,424	57.00
ಜೆ ಪಿ ನಗರ 8ನೇ ಫೇಸ್ 2ನೇ ಬ್ಲಾಕ್											
80	ಸರ್ವೆ ನಂ. 34/1, 39/1, 40/ಎ	ಕೊತ್ತನೂರು	27	1152.00	ಶೈಕ್ಷಣಿಕ (ಎಸ್.ಸಿ)	10,688	5,000	6,15,600	1,23,12,000	22,32,166	115.20
ಅಂಜನಾಪುರ ಮುಂದುವರೆದ ಬಡಾವಣೆ 11ನೇ ಬ್ಲಾಕ್											
81	ಸಿ.ಎ ನಿವೇಶನ ಸಂಖ್ಯೆ 21	–	21	379.68	ಧಾರ್ಮಿಕ (ಸಾಮಾನ್ಯ)	2,800	2,500	1,32,888	10,63,104	1,92,741	37.97
82	ಸಿ.ಎ ನಿವೇಶನ ಸಂಖ್ಯೆ 18	–	18	2276.82	ಸಮುದಾಯ ಭವನ (ಎಸ್.ಸಿ)	3,150	7,500	3,58,599	71,71,983	13,00,281	227.68
83	ಸಿ.ಎ ನಿವೇಶನ ಸಂಖ್ಯೆ 20	–	20	1320.00	ಜಿಮ್ನಾಷಿಯಂ (ಸಾಮಾನ್ಯ)	3,800	5,000	6,27,000	50,16,000	9,09,401	132.00
84	ಸರ್ವೆ ನಂ. 99/4, ಸಿ.ಎ ನಿವೇಶನ ಸಂಖ್ಯೆ 27	–	27	191.62	ಧಾರ್ಮಿಕ (ಸಾಮಾನ್ಯ)	2,800	2,500	67,067	5,36,536	97,274	19.16
ಬನಶಂಕರಿ 6ನೇ ಹಂತ, 1ನೇ ಬ್ಲಾಕ್											
85	ಸರ್ವೆ ನಂ.25 ಸಿ.ಎ ನಿವೇಶನ ಸಂಖ್ಯೆ:01	ತುರಹಳ್ಳಿ	01	1920.00	ಆಸ್ಪತ್ರೆ (ಎಸ್.ಸಿ)	10,860	5,000	26,06,400	2,08,51,200	37,80,323	192.00
ಬನಶಂಕರಿ 6ನೇ ಹಂತ, 3ನೇ ಬ್ಲಾಕ್											
86	ಸರ್ವೆ ನಂ.92	ಹೆಮ್ಮಿಗೇಪುರ	02	5611.50	ಶೈಕ್ಷಣಿಕ (ಸಾಮಾನ್ಯ)	10,940	10,000	76,73,726	6,13,89,810	1,11,29,973	561.15
87	ಸರ್ವೆ ನಂ.91 &97	ಹೆಮ್ಮಿಗೇಪುರ	01	9610.00	ಧಾರ್ಮಿಕ (ಸಾಮಾನ್ಯ)	2,488	10,000	29,88,710	2,39,09,680	43,34,825	961.00
ಬನಶಂಕರಿ 6ನೇ ಹಂತ, 5ನೇ ಬ್ಲಾಕ್											
88	ಸರ್ವೆ ನಂ.23 ಸಿ.ಎ ನಿವೇಶನ ಸಂಖ್ಯೆ:04	ಲಿಂಗಧೀರನಹಳ್ಳಿ	04	3330.00	ಆಸ್ಪತ್ರೆ /ನರ್ಸಿಂಗ್ ಹೋಂ (ಸಾಮಾನ್ಯ)	11,200	7,500	46,62,000	3,72,96,000	67,61,765	333.00
89	ಸರ್ವೆ ನಂ.19 ಸಿ.ಎ ನಿವೇಶನ ಸಂಖ್ಯೆ:03	ಲಿಂಗಧೀರನಹಳ್ಳಿ	03	8125.00	ಶೈಕ್ಷಣಿಕ (ಸಾಮಾನ್ಯ)	11,200	10,000	1,13,75,000	9,10,00,000	1,64,98,300	812.50
ಬನಶಂಕರಿ 6ನೇ ಹಂತ, 6ನೇ ಬ್ಲಾಕ್											
90	ಸರ್ವೆ ನಂ.17 & 18 ಸಿ.ಎ ನಿವೇಶನ ಸಂಖ್ಯೆ:03	ಸೋಂಪುರ	03	8424.00	ಧಾರ್ಮಿಕ (ಸಾಮಾನ್ಯ)	2,540	10,000	26,74,620	2,13,96,960	38,79,269	842.40
91	ಸರ್ವೆ ನಂ.16, 32 ಸಿ.ಎ ನಿವೇಶನ ಸಂಖ್ಯೆ:07	ಸೋಂಪುರ	07	7562.00	ಧಾರ್ಮಿಕ (ಸಾಮಾನ್ಯ)	2,540	10,000	24,00,935	1,92,07,480	34,82,316	756.20
ಬನಶಂಕರಿ 6ನೇ ಹಂತ, 8ನೇ ಬ್ಲಾಕ್											
92	ಸಿ.ಎ ನಿವೇಶನ ಸಂಖ್ಯೆ 06	–	06	1494.25	ಸಮುದಾಯ ಭವನ/ ಸಾಮಾಜಿಕ ಅಥವಾ ಸಾಂಸ್ಕೃತಿಕ ಚಟುವಟಿಕೆಗಳು (ಎಸ್.ಸಿ)	3,020	5,000	2,25,632	45,12,635	8,18,141	149.43
ಬನಶಂಕರಿ 6ನೇ ಹಂತ, 11ನೇ ಬ್ಲಾಕ್											
93	ಸರ್ವೆ ನಂ. 14	ಗಾಣಕಲ್ಲು	01	4110.00	ಸಮುದಾಯ ಭವನ (ಎಸ್.ಸಿ)	3,060	10,000	6,28,830	1,25,76,600	22,80,138	411.00
ಮುಂದುವರೆದ ಬನಶಂಕರಿ 6ನೇ ಹಂತ, 4ನೇ 'ಟಿ' ಬ್ಲಾಕ್											
94	ಸರ್ವೆ ನಂ 26/1ಪಿ ಸಿ.ಎ ನಿವೇಶನ ಸಂಖ್ಯೆ: 8/ಎ,	–	8/ಎ	4427.00	ಶೈಕ್ಷಣಿಕ (ಸಾಮಾನ್ಯ)	10,615	10,000	58,74,076	4,69,92,605	85,19,759	442.70

ಷರತ್ತುಗಳು:

1. ಯಾವುದೇ ಸಿ.ಎ ನಿವೇಶನದ ಸಂಬಂಧ ಯಾವುದೇ ರೀತಿಯ ತಾಂತ್ರಿಕ/ಆಡಳಿತಾತ್ಮಕ/ಕಾನೂನಾತ್ಮಕ ನಿರ್ಬಂಧಗಳು ಕಂಡುಬಂದಲ್ಲಿ ಅಂತಹ ಸಿ.ಎ ನಿವೇಶನವನ್ನು ಯಾವುದೇ ಮುನ್ಸೂಚನೆಯನ್ನು ನೀಡದೆ ಹಂಚಿಕೆ ಪ್ರಕ್ರಿಯೆಯಿಂದ ಹಿಂಪಡೆಯಲಾಗುವುದು:

2. ನಾಗರಿಕ ಸೌಲಭ್ಯ ನಿವೇಶನಗಳು ಹಂಚಿಕೆಯಾಗದ ಪ್ರಕರಣಗಳಲ್ಲಿ ಅರ್ಜಿದಾರ ಸಂಸ್ಥೆಗಳು ಪಾವತಿಸಿದ ಆರಂಭಿಕ ಠೇವಣಿಯನ್ನು ಹಿಂದಿರುಗಿಸಲಾಗುವುದು. ಯಾವುದೇ ಬಡ್ಡಿಯನ್ನು ಪ್ರಾಧಿಕಾರದ ವತಿಯಿಂದ ನೀಡಲಾಗುವುದಿಲ್ಲ:

3. **ಹಂಚಿಕೆಗಳು:-** ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1989ರ ಅನುಸಾರ ಗುತ್ತಿಗೆ ಆಧಾರದ ಮೇರೆಗೆ ಹಂಚಿಕೆ ಮಾಡಲಾಗುವುದು.

4. **ನೋಂದಣಿ:-** ನಾಗರಿಕ ಸೌಲಭ್ಯ ನಿವೇಶನಕ್ಕೆ ಅರ್ಜಿ ಸಲ್ಲಿಸಲು ಅಪೇಕ್ಷೆ ಹೊಂದಿರುವ ಸಂಸ್ಥೆಗಳು ಕೆನರಾ ಬ್ಯಾಂಕ್, ಬಿಡಿಎ ಎಕ್ಸ್‌ಟೆನ್ಷನ್ ಕೌಂಟರ್‌ನಲ್ಲಿ ನಿಗಧಿತ ನೋಂದಣಿ ಶುಲ್ಕ ಪಾವತಿ ಮಾಡಿ ಬಿಡಿಎನಲ್ಲಿ ನೋಂದಣಿ ಮಾಡಿಸಬೇಕು. ದಿನಾಂಕ: **09.04.2025** ರಿಂದ ಕೆನರಾ ಬ್ಯಾಂಕ್, ಬಿಡಿಎ ಎಕ್ಸ್‌ಟೆನ್ಷನ್ ಕೌಂಟರ್‌ನಲ್ಲಿ ಸಿ.ಎ ನಿವೇಶನ ಹಂಚಿಕೆಗೆ ಅರ್ಜಿ ಪಡೆಯಬಹುದಾಗಿದೆ. ಸಂಬಂಧಪಟ್ಟ ಸಿ.ಎ ನಿವೇಶನಗಳ ಬಗ್ಗೆ ನೋಂದಣಿ ಶುಲ್ಕವನ್ನು ಪ್ರಕಟಣೆಯ ಕಾಲಂ 8 ರಲ್ಲಿ ತಿಳಿಸಲಾಗಿದೆ.

5. **ಅರ್ಜಿ:-** ಎ) ಅರ್ಜಿಯನ್ನು **ದಿನಾಂಕ: 09.05.2025 ಮಧ್ಯಾಹ್ನ 4.00 ಗಂಟೆ ಅಥವಾ ಅದಕ್ಕಿಂತ ಮುಂಚಿತವಾಗಿ** ವೈಯಕ್ತಿಕವಾಗಿ ಬಿಡಿಎಯಲ್ಲಿ ಇರುವ ಕೆನರಾ ಬ್ಯಾಂಕ್ ನಗದು ಕೌಂಟರಿನ ಮೂಲಕ ಬಿಡಿಎ ಆಯುಕ್ತರ ಕಛೇರಿಗೆ ತಲುಪುವಂತೆ ಖುದ್ದಾಗಿ ಸಲ್ಲಿಸಬಹುದು ಅಥವಾ ನೋಂದಣಿ ಅಂಚೆ ಮೂಲಕ ಕಳುಹಿಸಬಹುದು. ದಿನಾಂಕ ಮತ್ತು ಸಮಯದ ನಂತರ ಬರುವ ಮತ್ತು ದೋಷಯುಕ್ತವಾದ ಮತ್ತು ನಿಗಧಿಪಡಿಸಿದ ಶುಲ್ಕಗಳನ್ನು ಪಾವತಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಬಿ) ಹಂಚಿಕೆಯ ಸಂಬಂಧ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ. ಯಾವುದೇ ನಾಗರಿಕ ಸೌಲಭ್ಯ ನಿವೇಶನಕ್ಕಾಗಿ ಸಲ್ಲಿಸಲಾಗಿರುವ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

6. ಹೆಚ್ಚಿನ ಮಾಹಿತಿ, ಷರತ್ತುಗಳು ಮತ್ತು ನಿಬಂಧನೆಗಳಿಗಾಗಿ **www.kbda.karnataka.gov.in / www.bdabangalore.org** ವೀಕ್ಷಿಸಬಹುದಾಗಿದೆ.

7. ಸಿ.ಎ = ನಾಗರಿಕ ಸೌಲಭ್ಯ, ಎಸ್.ಸಿ = ಪರಿಶಿಷ್ಟ ಜಾತಿ, ಎಸ್.ಟಿ = ಪರಿಶಿಷ್ಟ ಪಂಗಡ, ಪಿ.ಹೆಚ್ = ವಿಕಲ ಚೇತನ, ಬಿ = ಬ್ಲಾಕ್, ಚ.ಮೀ = ಚದರ ಮೀಟರ್.

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.05.2025

ಸಹಿ/-
ಆಯುಕ್ತರು,
ಬೆಂಅಪ್ರಾ, ಬೆಂಗಳೂರು

ಹತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಚಾಲನೆ

‘1,600 ಕಿ.ಮೀ ಬ್ಲ್ಯಾಕ್, ವೈಟ್ ಟಾಪಿಂಗ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಗಳ ಗುಣಮಟ್ಟ ಹೆಚ್ಚಿಸಲು ನಗರದ 1,600 ಕಿ.ಮೀನಷ್ಟು ಉದ್ದದ ರಸ್ತೆಗಳನ್ನು ಬ್ಲ್ಯಾಕ್ ಮತ್ತು ವೈಟ್ ಟಾಪಿಂಗ್ ಮಾಡಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ 10 ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

ನಗರದಲ್ಲಿ ಈ ಹಿಂದೆ 196 ಕಿ.ಮೀ ಉದ್ದದ ರಸ್ತೆ ಕಾಮಗಾರಿ ನಡೆಸಲಾಗಿತ್ತು. ಈಗ 450 ಕಿ.ಮೀ ಉದ್ದದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಇನ್ನೂ 350 ಕಿ.ಮೀ ಉದ್ದದ ಕಾಮಗಾರಿ ನಿರ್ವಹಣಾ ಅವಧಿ ಬಾಕಿ ಉಳಿದಿದ್ದು, ಈ ರಸ್ತೆಗಳಲ್ಲಿ ಹಾನಿಯಾದರೆ ಗುತ್ತಿಗೆದಾರರೇ ಅದನ್ನು ಸರಿಪಡಿಸಬೇಕಾಗುತ್ತದೆ. ಹೀಗಾಗಿ ಈ ರಸ್ತೆಯ ಕಾಮಗಾರಿ ಕೈಗೆತ್ತಿಕೊಂಡಿಲ್ಲ ಎಂದು ಮಾಹಿತಿ ನೀಡಿದರು.

‘ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ ರಸ್ತೆಗಳ ಉನ್ನತೀಕರಣಕ್ಕೆ ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ₹6 ಸಾವಿರ ಕೋಟಿ ನೀಡಿದ್ದಾರೆ. ನಗರದ ಮುಕ್ಕಾಲು ಭಾಗದ ರಸ್ತೆಯನ್ನು ಬ್ಲ್ಯಾಕ್ ಹಾಗೂ ವೈಟ್ ಟಾಪಿಂಗ್ ಮಾಡಲಾಗುತ್ತದೆ. ಈ ರಸ್ತೆಗಳು 30 ವರ್ಷ ಬಾಳಿಕೆ ಬರುತ್ತವೆ. ಗುಣಮಟ್ಟದ ಕಾಮಗಾರಿ ನಡೆಯುತ್ತಿದ್ದು, ನಾನೇ ಈ ರಸ್ತೆ ಕಾಮಗಾರಿಗಳನ್ನು ಪರಿಶೀಲಿಸಿದ್ದೇನೆ. 1,600 ಕಿ.ಮೀ ಉದ್ದದ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳನ್ನು ಅಭಿವೃದ್ಧಿ ಮಾಡಲಾಗುತ್ತದೆ. ಎಲ್ಲ ಕಾಮಗಾರಿಗಳ ಗುಣಮಟ್ಟ ಪರೀಕ್ಷೆಗೆ ಪ್ರತ್ಯೇಕ ತಂಡ ರಚಿಸಲಾಗಿದೆ’ ಎಂದರು.

‘ನಗರ ಪೊಲೀಸ್ ಜಂಟಿ ಕಮಿಷನರ್ ಜತೆ ಚರ್ಚೆ ನಡೆಸಿದ್ದು, ಎಲ್ಲೆಲ್ಲಿ ರಸ್ತೆ ಸರಿಯಿಲ್ಲ ಎಂದು ಪೊಲೀಸರ ಗಮನಕ್ಕೆ ಬರುತ್ತದೆಯೋ ಅದನ್ನು ಪಾಲಿಕೆ ಆಯುಕ್ತರಿಗೆ ತಿಳಿಸಬೇಕು ಎಂದು ತಿಳಿಸಿದ್ದೇನೆ. ರಸ್ತೆ ಹದಗೆಟ್ಟಿರುವುದು ನಮ್ಮ ಎಂಜಿನಿಯರ್‌ಗಳು, ಶಾಸಕರ ಕಣ್ಣಿಗೆ ಕಾಣದಿರಬಹುದು. ಆದರೆ ಪೊಲೀಸ್ ಇಲಾಖೆಯವರ ಗಮನಕ್ಕೆ ಬಂದರೆ ಅದನ್ನು ಲಿಖಿತ ರೂಪದಲ್ಲಿ ಮಾಹಿತಿ ನೀಡುವಂತೆ ಸೂಚಿಸಿದ್ದೇನೆ’ ಎಂದು ತಿಳಿಸಿದರು.

‘ನಾವು ಕಸದ ಸಮಸ್ಯೆ ನಿಭಾಯಿಸುತ್ತಿದ್ದೇವೆ. ಯಾರು ಏನೇ ಟೀಕೆ ಮಾಡಿದರೂ, ಸಮಸ್ಯೆ ಬಗೆಹರಿಸುವುದು ನಮ್ಮ ಜವಾಬ್ದಾರಿ. ಇದಕ್ಕಾಗಿ ಟೆಂಡರ್ ಕರೆಯಲಾಗಿದೆ. ನಾವು ನಮ್ಮ ಕೆಲ ಮಾಡುತ್ತೇವೆ. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ’ ಎಂದರು.



ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಗಾಂಧಿನಗರದಲ್ಲಿ ರಸ್ತೆ ಕಾಮಗಾರಿಗಳಿಗೆ ಸೋಮವಾರ ಚಾಲನೆ ನೀಡಿದರು. ಸಚಿವ ದಿನೇಶ್ ಗುಂಡೂರಾವ್ ಉಪಸ್ಥಿತರಿದ್ದರು

ಬಿಬಿಎಂಪಿ ಸುದ್ದಿ

ಬ್ಲ್ಯಾಕ್ ಟಾಪಿಂಗ್ ವೈಶಿಷ್ಟ್ಯ

- ಮಳೆ ನೀರಿನಿಂದ ರಸ್ತೆ ಹಾಳಾಗದಂತೆ ಕ್ಯಾಂಬರ್ ಸ್ಲೋಪ್ ನೀಡಿ, ರಸ್ತೆಯ ಮೇಲ್ಮೈ ಅನ್ನು ಹೊಸದಾಗಿ ನಿರ್ಮಿಸುವುದು
- ಮೈಕ್ರೊ ಸರ್ಫೇಸಿಂಗ್ ಮಾಡಿ, ಮಳೆ ನೀರು ರಸ್ತೆಯೊಳಗೆ ಇಂಗದಂತೆ ಲಂಬಾಕಾರದ ರಸ್ತೆ ಗ್ರೇಟಿಂಗ್ ನಿರ್ಮಾಣ
- ಪಾದಚಾರಿ ಮಾರ್ಗ ಮತ್ತು ರಸ್ತೆಯ ಮಟ್ಟವನ್ನು ಏಕರೂಪದ ಮಟ್ಟದಲ್ಲಿ ನಿರ್ಮಿಸುವುದು
- ಹೆಗ್ಗಣಗಳಿಂದ ಕೊರೆತ ತಪ್ಪಿಸಲು ಪಾದಚಾರಿ ಮಾರ್ಗದ ತಳಪಾಯ ಕಾಂಕ್ರೀಟ್‌ನಲ್ಲಿ ಗಟ್ಟಿಮುಟ್ಟಾಗಿ ನಿರ್ಮಿಸುವುದು
- ರಸ್ತೆಯ ಮಳೆನೀರು ಚರಂಡಿಯೊಳಗೆ ಹರಿದು, ದೊಡ್ಡ ಕಾಲುವೆಗೆ ಸೇರುವಂತೆ ಚರಂಡಿ ಜಾಲ ವಿಸ್ತರಿಸುವುದು
- ರಸ್ತೆಯ ಜೊತೆಗೆ ಪಾದಚಾರಿ ಮಾರ್ಗ ನಿರ್ಮಿಸಿ, ಲೇನ್ ಮಾರ್ಕಿಂಗ್, ಕ್ಯಾಟ್ ಐಸ್, ಸುರಕ್ಷತಾ ಫಲಕಗಳನ್ನು ಅಳವಡಿಸುವುದು

ಎಲ್ಲೆಲ್ಲಿ ರಸ್ತೆ ಅಭಿವೃದ್ಧಿಗೆ ಚಾಲನೆ?

ವಿಧಾನಸಭೆ ಕ್ಷೇತ್ರ	ವೆಚ್ಚ (ಕೋಟಿಗಳಲ್ಲಿ)
ಮಲ್ಲೇಶ್ವರ/ಗಾಂಧಿನಗರ	₹16
ಮಹಾಲಕ್ಷ್ಮಿ ಲೇಔಟ್	₹15.5
ಆರ್.ಆರ್. ನಗರ	₹20
ಯಶವಂತಪುರ	₹75
ಬಸವನಗುಡಿ	₹20
ಚಿಕ್ಕಪೇಟೆ	₹20
ಶಿವಾಜಿನಗರ	₹21
ಒಟ್ಟು	₹187.50

‘ಕೆರೆಗಳಿಗೆ ಸಂಸ್ಕರಿಸಿದ ನೀರು ತುಂಬಿ’

ನಗರ ಜಿಲ್ಲೆಯಲ್ಲಿರುವ ಕೆರೆಗಳಿಗೆ ಕಲುಷಿತ ನೀರು ಹರಿಯದಂತೆ ಕ್ರಮ ಕೈಗೊಂಡು, ಎಲ್ಲ ಕೆರೆಗಳಿಗೂ ಸಂಸ್ಕರಿಸಿದ ನೀರನ್ನೇ ತುಂಬಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದರು.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅಧಿಕಾರಿಗಳಿಗೆ ಆದೇಶ ನೀಡಿದರು.

ಕೆರೆಗಳ ಸಂರಕ್ಷಣೆ ದೃಷ್ಟಿಯಿಂದ ಸಂಸ್ಕರಿಸಿದ ನೀರನ್ನು ತುಂಬಿಸುವ ಜವಾಬ್ದಾರಿಯನ್ನು ಬೆಂಗಳೂರು ಜಲಮಂಡಳಿಗೆ ವಹಿಸಲು ನಿರ್ಣಯ ಕೈಗೊಳ್ಳಲಾಯಿತು. ಇದರ ಜತೆಗೆ ಬೆಂಗಳೂರು ನಗರ ಜಿಲ್ಲೆಗೆ ಬಂದೊದಗಬಹುದಾದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಈಗಿನಿಂದಲೇ ಮುನ್ನೆಚ್ಚರಿಕೆ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಸೂಚನೆ ನೀಡಿದರು.

ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಹಳ್ಳಿಗಳಿಗೆ ಬೆಂಗಳೂರು ಜಲಮಂಡಳಿ ವತಿಯಿಂದ ಕುಡಿಯುವ ನೀರು ಪೂರೈಸಲು ಚರ್ಚಿಸಲಾಯಿತು.

ನಗರದಲ್ಲಿ ಕಟ್ಟಡ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಸುರಿಯುತ್ತಿರುವುದನ್ನು ತಪ್ಪಿಸಲು, ತ್ಯಾಜ್ಯ ಸಾಗಿಸುವ ಲಾರಿಗಳಿಗೆ ಜಿಪಿಎಸ್ ಅಳವಡಿಸಲು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಈ ಲಾರಿಗಳು ಕಸವನ್ನು ಎಲ್ಲಿಂದ ಸಂಗ್ರಹಿಸಿ, ಎಲ್ಲಿ ವಿಲೇವಾರಿ ಮಾಡುತ್ತವೆ ಎಂದು ಮೇಲ್ವಿಚಾರಣೆ ಮಾಡಬೇಕು ಎಂದು ಬಿಬಿಎಂಪಿ ಹಾಗೂ ಪೊಲೀಸ್ ಅಧಿಕಾರಿಗಳಿಗೆ ಶಿವಕುಮಾರ್ ನಿರ್ದೇಶನ ನೀಡಿದರು.

‘ಯಶವಂತಪುರ ವೃತ್ತದ ಬಳಿ ಸುಮಾರು 15 ಲೋಡ್‌ಗಳಷ್ಟು ಕಟ್ಟಡ ತ್ಯಾಜ್ಯವನ್ನು ರಸ್ತೆ ಪಕ್ಕದಲ್ಲಿ ಸುರಿದಿರುವುದನ್ನು ನಾನು ಹಾಗೂ ಪಾಲಿಕೆ ಆಯುಕ್ತರು ನೋಡಿದೆವು. ಹೀಗಾಗಿ ಎಲ್ಲ ತ್ಯಾಜ್ಯ ಸಾಗಿಸುವ ಲಾರಿ ಹಾಗೂ ವಾಹನಗಳಿಗೆ ಜಿಪಿಎಸ್ ಅಳವಡಿಸಬೇಕು ಎಂದು ಸೂಚಿಸಲಾಗಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಬಿಬಿಎಂಪಿ: ದರ ಪಟ್ಟಿ ರೂಪಿಸಲು ತಜ್ಞರ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೂಲ ಸೌಕರ್ಯ ಕಲ್ಪಿಸುವ ಯೋಜನೆಗಳಿಗೆ ದರಪಟ್ಟಿ ರೂಪಿಸಲು ತಜ್ಞರ ಸಮಿತಿಯನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ರಚಿಸಿದ್ದಾರೆ.

‘ಹಾಲಿ ಇರುವ ಸಾಮಾನ್ಯ ದರಪಟ್ಟಿಗಳು ನಗರದ ಪರಿಸ್ಥಿತಿಗೆ ಹೊಂದಾಣಿಕೆ ಆಗುವುದಿಲ್ಲ ಎಂದು ಅನುಷ್ಠಾನ ಸಂಸ್ಥೆಗಳು ಹಾಗೂ ಗುತ್ತಿಗೆದಾರರ ಕಳವಳ ವ್ಯಕ್ತಪಡಿಸಿದ್ದಾರೆ. ಮೂಲಸೌಕರ್ಯ ಯೋಜನೆಗಳಿಗೆ ಅಸಮರ್ಪಕ ಬೆಲೆ ನಿಗದಿ, ಸಂಚಾರ ದಟ್ಟಣೆ, ಕಾರ್ಮಿಕ ವರ್ಗದ ವಸತಿ ತೊಂದರೆ, ಸೀಮಿತ ಅವಧಿ ಕೆಲಸ, ಭಾರಿ ಮತ್ತು ಸರಕು ವಾಹನಗಳ ನಿರ್ಬಂಧಿತ ಪ್ರವೇಶ, ಜಮೀನಿನ ಲಭ್ಯತೆಯ ಕೊರತೆ ಸಮಸ್ಯೆಗಳನ್ನ ಪರಿಗಣಿಸಲಾಗಿಲ್ಲ ಎಂದು ತಿಳಿಸಿದ್ದಾರೆ. ಹೀಗಾಗಿ ನಗರಕ್ಕೆ ಪ್ರತ್ಯೇಕ ದರಪಟ್ಟಿ ರಚಿಸಲು ನಿರ್ಧರಿಸಲಾಗಿದೆ’ ಎಂದಿದ್ದಾರೆ.

‘ನಗರಕ್ಕೆ ಪ್ರತ್ಯೇಕ ದರಪಟ್ಟಿ ರಚಿಸಲು ಬಿಬಿಎಂಪಿಯ ನಿವೃತ್ತ ಎಂಜಿನಿಯರ್‌ಗಳ ತಂಡ ರಚಿಸಲು ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೂಚಿಸಿದ್ದಾರೆ. ಬಿಬಿಎಂಪಿ ‘ನಮ್ಮ ರಸ್ತೆ’ ಕೈಪಿಡಿಯನ್ನು ಹೊರತರಲಾಗಿದ್ದು, ಅದರ ವಿನ್ಯಾಸವನ್ನು ಅಧ್ಯಯನ ಮಾಡಿ ದರಪಟ್ಟಿ ರಚಿಸಬೇಕು ಎಂದು ತಜ್ಞರ ಸಮಿತಿಗೆ ಸೂಚಿಸಲಾಗಿದೆ’ ಎಂದರು.

ಸಮಿತಿಯು 30 ದಿನಗಳಲ್ಲಿ ಶಿಫಾರಸು ನೀಡಬೇಕು ಎಂದು ಸೂಚಿಸಲಾಗಿದೆ.

ತಜ್ಞರ ಸಮಿತಿ: ಅಧ್ಯಕ್ಷ– ಸೋಮಶೇಖರ್, ಬಿಬಿಎಂಪಿಯ ನಿವೃತ್ತ ಮುಖ್ಯ ಎಂಜಿನಿಯರ್; ಸದಸ್ಯರು– ವಿಜಯ ಕುಮಾರ್ ಹರಿದಾಸ್, ಮುಖ್ಯ ಎಂಜಿನಿಯರ್, ಬಿಬಿಎಂಪಿ, ಜಿ.ಸಿ. ಜಗದೀಶ್, ಅಧೀಕ್ಷಕ ಎಂಜಿನಿಯರ್, ಲೋಕೋಪಯೋಗಿ ಇಲಾಖೆ, ಗೋಪಾಲಕೃಷ್ಣ, ನಿವೃತ್ತ ಕಾರ್ಯಪಾಲಕ ಎಂಜಿನಿಯರ್ ಲೋಕೋಪಯೋಗಿ ಇಲಾಖೆ, ಜಗನ್ನಾಥ್, ನಿವೃತ್ತ ಕಾರ್ಯಪಾಲಕ ಎಂಜಿನಿಯರ್ ಲೋಕೋಪಯೋಗಿ ಇಲಾಖೆ, ಅನ್ವರ್ ಬಾಷಾ, ನಿವೃತ್ತ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಲೋಕೋಪಯೋಗಿ ಇಲಾಖೆ, ಎಸ್.ಸುಧೀಂದ್ರ, ಸಹಾಯಕ ಎಂಜಿನಿಯರ್ ಪಿಡಬ್ಲ್ಯುಡಿ. ಸಂಚಾಲಕ– ಬಾಲಕೃಷ್ಣ, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಬಿಬಿಎಂಪಿ.



ಬೆಂಗಳೂರು ಕರಗ

ಬೆಂಗಳೂರು ಕರಗ ಮಹೋತ್ಸವದಲ್ಲಿ ಸೋಮವಾರ ನಡೆದ ವಿಶೇಷ ಪೂಜೆಗಳು ಮತ್ತು ಮಹಾಮಂಗಳಾರತಿಯಲ್ಲಿ ಭಕ್ತರು ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಅಪಘಾತ: ಮಹಿಳೆ ಸಾವು

ಬೆಂಗಳೂರು: ನೆಲಮಂಗಲ ತಾಲ್ಲೂಕಿನ ಬೂದಿಹಾಳ್ ಗೇಟ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಸಂಜೆ ಎರಡು ಲಾರಿ ಮತ್ತು ಟಾಟಾ ಏಸ್ ಮಧ್ಯೆ ಸಂಭವಿಸಿದ ಸರಣಿ ಅಪಘಾತದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ತುಮಕೂರು ಜಿಲ್ಲೆಯ ಶಿರಾದ ತ್ರಿವೇಣಿ (25) ಮೃತಪಟ್ಟವರು. ಅಪಘಾತದಲ್ಲಿ ಗಾಯಗೊಂಡ ಇಬ್ಬರ ಪೈಕಿ, ಶಿವಕುಮಾರ್ ಅವರ ಸ್ಥಿತಿ ಗಂಭೀರವಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದರು.

ತ್ರಿವೇಣಿ ಅವರು ತಮ್ಮ ಕುಟುಂಬದ ಜತೆಗೆ ಟಾಟಾ ಏಸ್ ವಾಹನದಲ್ಲಿ ಬೆಂಗಳೂರಿಗೆ ಬರುತ್ತಿದ್ದರು. ಲಾರಿ, ಟಾಟಾ ಏಸ್ ಸೇರಿದಂತೆ ಇತರೆ ವಾಹನಗಳ ಮಧ್ಯೆ ಸಂಭವಿಸಿದ ಸರಣಿ ಅಪಘಾತದಿಂದ ಮಹಿಳೆ ಮೃತಪಟ್ಟಿದ್ದಾರೆ. ಅಪಘಾತದಿಂದ ತುಮಕೂರು– ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ವಾಹನ ಸವಾರರು ಪರದಾಡಿದರು.

ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಲೆ: ಆರೋಪಿಗಳು ಪರಾರಿ

ಪ್ರಜಾವಾಣಿ ವಾರ್ತೆ



ಸಮೀರ್

ಬೆಂಗಳೂರು: ಬನಶಂಕರಿ ಆರನೇ ಹಂತದ ಏಳನೇ ಬ್ಲಾಕ್‌ನ ತುರಹಳ್ಳಿ ಅರಣ್ಯ ಪಕ್ಕದ ರಸ್ತೆಯಲ್ಲಿ ಮೈಸೂರು ರಸ್ತೆಯ ಅಂಚೆಪಾಳ್ಯದ ನಿವಾಸಿ ಸಮೀರ್ (26) ಎಂಬುವರನ್ನು ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ.

ಕೃತ್ಯ ಎಸಗಿದ ಬಳಿಕ ಮೃತದೇಹವನ್ನು ರಸ್ತೆಯ ಬದಿಯಲ್ಲಿ ಎಸೆದು ಹೋಗಿದ್ದಾರೆ. ಮೃತದೇಹ ಗಮನಿಸಿದ ಸ್ಥಳೀಯರು ಹೊಯ್ಸಳಕ್ಕೆ ಕರೆ ಮಾಡಿ ಮಾಹಿತಿ ನೀಡಿದ್ದರು. ತಲೆಯಲ್ಲಿ ಗಾಯ ಆಗಿರುವುದು ಕಂಡುಬಂದಿದೆ. ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಗಳ ಪತ್ತೆಗೆ ತಂಡ ರಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಚಿನ್

ಸಾಫ್ಟ್‌ವೇರ್ ಎಂಜಿ

ಕೌಟುಂಬಿಕ ಕಲಹದಿಂದ ಬೇಸತ್ತಿದ್ದ ವ್ಯಕ್ತಿ

ಪ್ರಜಾವಾಣಿ ವಾರ್ತೆ



ಪ್ರಶಾಂತ್ ನಾಯರ್

ಬೆಂಗಳೂರು: ಕೌಟುಂಬಿಕ ಕಲಹದಿಂದ ಮನನೊಂದು ಸಾಫ್ಟ್‌ವೇರ್ ಎಂಜಿನಿಯರ್ ಪ್ರಶಾಂತ್ ನಾಯರ್ (40) ಅವರು ತಮ್ಮ ಫ್ಲ್ಯಾಟ್‌ನಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯ ತಂದೆ, ಸಿಡೇದಹಳ್ಳಿಯ ಸೌಂದರ್ಯ ನಗರದ ನಿವಾಸಿ ಎಂ.ಎನ್.ಕುಟ್ಟಿ ಅವರು ನೀಡಿದ ದೂರು ಆಧರಿಸಿ ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವಿನ ಪ್ರಕರಣ (ಯುಡಿಆರ್) ದಾಖಲಾಗಿದೆ.

ಗಾಣಿಗರಹಳ್ಳಿಯ ಡಿಎಕ್ಸ್ ಸ್ಮಾರ್ಟ್‌ನೆಸ್ಟ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ಪ್ರಶಾಂತ್ ನಾಯರ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಕೇರಳ ಮೂಲದ ಪ್ರಶಾಂತ್ ಅವರು 12 ವರ್ಷಗಳ ಹಿಂದೆ ಪೂಜಾ ನಾಯರ್ ಅವರನ್ನು ಮದುವೆ ಆಗಿದ್ದರು. ದಂಪತಿಗೆ ಎಂಟು ವರ್ಷದ ಹೆಣ್ಣು ಮಗುವಿದೆ. ವರ್ಷದಿಂದ ಈಚೆಗೆ ದಂಪತಿ ಮಧ್ಯೆ ಗಲಾಟೆ ನಡೆಯುತ್ತಿತ್ತು. ನಂತರ, ದಂಪತಿ ಪ್ರತ್ಯೇಕವಾಗಿ ವಾಸ ಮಾಡಲು ನಿರ್ಧರಿಸಿದ್ದರು. ಪ್ರಶಾಂತ್ ನಾಯರ್ ಅವರು ಗಾಣಿಗರಹಳ್ಳಿಯ ಡಿ.ಎಕ್ಸ್ ಸ್ಮಾರ್ಟ್‌ನೆಸ್ಟ್ ಅಪಾರ್ಟ್

ಹೆಣ್ಣು ಮಕ್ಕಳ ಕೊ

ಬೆಂಗಳೂರು: ಅಮೃತಹಳ್ಳಿ ಪೊಲೀಸ್ ಠಾಣಾ
ಬಾಡಿಗೆ ಮನೆಯಲ್ಲಿ ನೆಲಸಿದ್ದ ಇಬ್ಬರು ಹೆಣ್ಣು
ಕೊಂದಿದ್ದ ಮಲತಂದೆಗೆ ನಗರದ ಸಿಸಿಎಚ್ 51
ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ದ
ವಿಧಿಸಿದೆ.

ಸುಮಿತ್ ಮೋಹನ್ (31) ಶಿಕ್ಷೆಗೆ ಒಳಗಾ

ಕೃತ್ಯ ನಡೆದ 24 ಗಂಟೆಯೊಳಗೆ ಅಪರಾಧಿ
ಅಮೃತಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದ
ಪ್ರಕರಣದ ತನಿಖೆ ನಡೆಸಿ, ನವೆಂಬರ್‌ನಲ್ಲಿ ನ್ಯಾ
ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಧೀಶ ಸಿ.ಬಿ.ಸಂತೋಷ್ ಅವರು
ತಿಂಗಳಲ್ಲಿ ವಿಚಾರಣೆ ಪೂರ್ಣಗೊಳಿಸಿ, ಸುಮಿತ
ದೋಷಿ ಎಂದು ಘೋಷಿಸಿ ಜೀವಾವಧಿ ಶಿಕ್ಷೆ ಹ
ಸಾವಿರ ದಂಡ ವಿಧಿಸಿ ಆದೇಶಿಸಿದ್ದಾರೆ. ಸರ್ಕಾ
ಬಿ.ಎಚ್.ಭಾಸ್ಕರ್ ವಾದ ಮಂಡನೆ ಮಾಡಿದ್ದ

ಅಮೃತಹಳ್ಳಿ ಪೊಲೀಸ್ ಠಾಣೆಯ ಪೊಲೀ
ಇನ್‌ಸ್ಪೆಕ್ಟರ್ ಎಂ.ಅಂಬರೀಷ್ ಅವರು ತನಿಖೆ

...ನ್ನ ಸಾಗಣೆ ಪ್ರಕರಣ: ತರುಣ್ ಜಾಮೀನು ಅರ್ಜಿ ತಿರಸ್ಕಾರ

...ಣಿ ವಾರ್ತೆ

...ರು: ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ...ಗ ಬಂಧನದಲ್ಲಿ ಇರುವ ತರುಣ್ ...ರು ರಾಜು ಅವರ ಜಾಮೀನು ...ನ್ನು ತಿರಸ್ಕರಿಸಿ ಸೆಷನ್ಸ್ ನ್ಯಾಯಾಲಯವು ...ರ ಆದೇಶ ಹೊರಡಿಸಿದೆ. ...ೀನು ಅರ್ಜಿಯ ವಿಚಾರಣೆ ನಡೆಸಿದ್ದ ...ನ್ಯಾಯಾಲಯ ಆದೇಶವನ್ನು ...ತ್ತು. ಸೋಮವಾರ ಅರ್ಜಿಯನ್ನು ...ಆದೇಶ ಹೊರಡಿಸಲಾಗಿದೆ. ...ೋಪಿಗೆ ಜಾಮೀನು ನೀಡಿದರೆ ಸಾಕ್ಷ್ಯ ...ುವ ಸಾಧ್ಯತೆಯಿದೆ. ಆರೋಪಿಗೆ ... ನೀಡಬಾರದು' ಎಂದು ಕಂದಾಯ ...ರ್ದೇಶನಾಲಯದ (ಡಿಆರ್‌ಐ) ಪರ ...ವಾದ ಮಂಡನೆ ಮಾಡಿದ್ದರು. ...ಯಿಂದ ಚಿನ್ನವನ್ನು ಕಳ್ಳಸಾಗಣೆ ಮಾಡಿದ್ದ ...ಡಿ ನಟಿ ರನ್ಯಾ ರಾವ್ ಅವರನ್ನು ...ಅಧಿಕಾರಿಗಳು ಕೆಂಪೇಗೌಡ ಅಂತರರಾ-...ಮಾನ ನಿಲ್ದಾಣದಲ್ಲಿ ಮಾರ್ಚ್ 3ರಂದು ...ರು. ಮಾರ್ಚ್ 9ರಂದು ತರುಣ್ ...ಡಿಆರ್‌ಐ ಅಧಿಕಾರಿಗಳು ಬಂಧಿಸಿದ್ದರು. ...ಾಗಣೆಯಲ್ಲಿ ರನ್ಯಾ ರಾವ್ ಅವರಿಗೆ ...ವರು ನೆರವು ನೀಡಿದ್ದರು ಎಂಬ ...ಿದೆ. ಇನ್ನೊಂದೆಡೆ ರನ್ಯಾ ರಾವ್, ತರುಣ್ ಕೊಂಡೂರು ರಾಜು ಹಾಗೂ ...ನ್ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಆರ್ಥಿಕ ಅಪರಾಧಗಳ ...ಯವು ಏಪ್ರಿಲ್ 21ರ ವರೆಗೆ ವಿಸ್ತರಣೆ ಮಾಡಿದೆ.

ಮೂವರೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ. ಆರ್ಥಿಕ ಅಪರಾಧಗಳ ನ್ಯಾಯಾಲಯದ ನ್ಯಾಯಾಧೀಶರು ವಿಡಿಯೊ ಕಾನ್ಫರೆನ್ಸ್ ಮೂಲಕ ಮೂವರನ್ನೂ ವಿಚಾರಣೆ ನಡೆಸಿದರು.

ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ: ನೋಟಿಸ್



ಪ್ರಜ್ವಲ್ ರೇವಣ್ಣ

ಬೆಂಗಳೂರು: 'ಪ್ರಕರಣದ ಇತರ ಆರೋಪಿಗಳ ವಿರುದ್ಧದ ವಿಚಾರಣೆಗೆ ಮಧ್ಯಂತರ ತಡೆ ನೀಡಲಾಗಿದೆ ಎಂಬ ತಳಹದಿಯಲ್ಲಿ ನೀವೂ ಜಾಮೀನು ಕೋರಲು ಸಾಧ್ಯವಿಲ್ಲ' ಎಂದು ಮನೆ-ಕೆಲಸದಾಕೆಯ ಮೇಲಿನ ಅತ್ಯಾಚಾರ ಪ್ರಕರಣದ ಆರೋಪಿಯೂ ಆದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಹೈಕೋರ್ಟ್ ಸ್ಪಷ್ಟಪಡಿಸಿದೆ.

ಅತ್ಯಾಚಾರ ಆರೋಪದ ಮೊದಲ ಪ್ರಕರಣದಲ್ಲಿ ಎರಡನೇ ಬಾರಿ ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರ್ ಅವರು ಸೋಮವಾರ ವಿಚಾರಣೆ ನಡೆಸಿದರು.

ಪ್ರಜ್ವಲ್ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, 'ಆರೋಪಿತ ಅತ್ಯಾಚಾರ 2021ರಲ್ಲಿ ನಡೆದಿದೆ ಎನ್ನಲಾಗಿದ್ದು, ನಾಲ್ಕೂವರೆ ವರ್ಷಗಳ ಬಳಿಕ ದೂರು ದಾಖಲಿಸಲಾಗಿದೆ. ದೂರುದಾರರು ಇದಕ್ಕೆ ಯಾವುದೇ ವಿವರಣೆ ನೀಡಿಲ್ಲ. ಹೀಗಾಗಿ, ಅರ್ಜಿದಾರರನ್ನು ಜೈಲಿನಲ್ಲೇ ಇರುವಂತೆ ಮಾಡಲಾಗದು' ಎಂದರು.

ಇದಕ್ಕೆ, ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, 'ಪ್ರಜ್ವಲ್ ವಿರುದ್ಧ ನಾಲ್ಕು ಅತ್ಯಾಚಾರ ಪ್ರಕರಣ ದಾಖಲಾಗಿವೆ. ಇವರ ಜಾಮೀನು ಅರ್ಜಿ ಸುಪ್ರೀಂ ಕೋರ್ಟ್‌ನಲ್ಲೂ ತಿರಸ್ಕೃತವಾಗಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಇತರೆ ಆರೋಪಿಗಳ ವಿರುದ್ಧ ತಡೆಯಾಜ್ಞೆ ಇದ್ದರೂ ಮೇಲ್ನೋಟಕ್ಕೆ ಪ್ರಜ್ವಲ್ ವಿರುದ್ಧ ನಂಬಲರ್ಹ ಸಾಕ್ಷ್ಯಾಧಾರಗಳಿವೆ. ವಿಶೇಷ ಕಾರಣ ತೋರದ ಹೊರತು ಜಾಮೀನು ನೀಡಲಾಗುತ್ತದೆಯೇ' ಎಂದು ಪ್ರಶ್ನಿಸಿತಲ್ಲದೆ, 'ಯಾವುದಕ್ಕೂ ನಿಮ್ಮ ವಾದ ಆಲಿಸಲಾಗುವುದು' ಎಂದು ತಿಳಿಸಿತು. ಆಕ್ಷೇಪಣೆ ಸಲ್ಲಿಸುವಂತೆ ಪ್ರಾಸಿಕ್ಯೂಷನ್‌ಗೆ ಸೂಚಿಸಿ, ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿತು.

ದಾಳಿಯ ದಿನವೇ ಪ್ರಕರಣ ದಾಖಲಿಸಿದ್ದ ಲೋಕಾಯುಕ್ತ ಪೊಲೀಸರು

ಇನ್‌ಸ್ಪೆಕ್ಟರ್ ಕುಮಾರ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಎ.ವಿ.ಕುಮಾರ್

ಬೆಂಗಳೂರು: ಅನ್ನ-ಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎ.ವಿ. ಕುಮಾರ್, ಇಬ್ಬರು ಕಾನ್‌ಸ್ಟೆಬಲ್ ಸೇರಿದಂತೆ ಏಳು ಮಂದಿ ವಿರುದ್ಧ ಲೋಕಾಯುಕ್ತ ಪೊಲೀಸರು ಏಪ್ರಿಲ್ 1ರಂದೇ ಎಫ್‌ಐಆರ್ ದಾಖಲಿಸಿದ್ದು, ಈಗ ಬಹಿರಂಗವಾಗಿದೆ.

ಗುತ್ತಿಗೆದಾರ ಕೆ.ಕೆ.ಚನ್ನೇಗೌಡ ಅವರ ದೂರು ಆಧರಿಸಿ ಕಾನ್‌ಸ್ಟೆಬಲ್‌ಗಳಾದ ಉಮೇಶ್, ಅನಂತ್, ಖಾಸಗಿ ವ್ಯಕ್ತಿಗಳಾದ ಸಿ.ಪಿ.ಗವಿಗೌಡ, ಸಿ.ಕೆ.ದಿವ್ಯ, ಸೋಮಶೇಖರ್ ಆರಾಧ್ಯ, ದಿನೇಶ್ ಹಾಗೂ ಇತರೆ ನಾಲ್ಕು ಅಪರಿಚಿತ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಎಫ್‌ಐಆರ್ ಪ್ರತಿ ಲಭ್ಯವಾಗಿದೆ.

ಲಂಚಕ್ಕಾಗಿ ಒತ್ತಡ ಹೇರಿ, ದೂರುದಾರರ ಕಟ್ಟಡವನ್ನು ಆರೋಪಿಗಳಲ್ಲಿ ಒಬ್ಬರ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳಲು ಯತ್ನಿಸಿದ್ದ ಆರೋಪದಡಿ ಏ.1ರಂದು ಕೆಂಗೇರಿ ಮುಖ್ಯರಸ್ತೆಯ ಶ್ರೀಶೈಲಂ ಹೋಟೆಲ್ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದರು. ಆಗ ಕೆಲವರನ್ನು ವಶಕ್ಕೆ ಪಡೆಯಲಾಗಿತ್ತು.

'ಸಿವಿಲ್ ಗುತ್ತಿಗೆದಾರ ಚನ್ನೇಗೌಡ ಮತ್ತು ಅವರ ಪತ್ನಿ ಅನುಷಾ ವಿರುದ್ಧ ಸೋಮಶೇಖರ್ ಆರಾಧ್ಯ ಎಂಬುವವರು ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ 2024ರ ಜನವರಿಯಲ್ಲಿ ದೂರು ದಾಖಲಿಸಿದ್ದರು. ಈ ಇಬ್ಬರೂ ತಮ್ಮ ವಸತಿ ಕಟ್ಟಡವನ್ನು ಭೋಗ್ಯಕ್ಕೆ ನೀಡುತ್ತೇವೆಂದು ₹60 ಲಕ್ಷ ಪಡೆದುಕೊಂಡಿದ್ದರು. ಆದರೆ ಮನೆಯನ್ನೂ ನೀಡದೆ, ಹಣವನ್ನೂ ಪೂರ್ತಿ ಹಿಂದಿರುಗಿಸದೆ ವಂಚಿಸಿದ್ದಾರೆ' ಎಂಬುದು ಅವರ ಆರೋಪವಾಗಿತ್ತು.

'ಅನುಷಾ ಅವರು ಸರ್ಕಾರಿ ನೌಕರಿಯ-ಲ್ಲಿದ್ದು, ಪ್ರಕರಣ ಮುಂದುವರಿದರೆ ನೌಕರಿಗೆ ತೊಂದರೆಯಾಗುತ್ತದೆ ಎಂದು ಕುಮಾರ್ ಅವರು ಚನ್ನೇಗೌಡರಿಗೆ ತಿಳಿಸಿದ್ದರು. ಜತೆಗೆ ದೂರುದಾರರ ಜತೆ ರಾಜಿ ಮಾಡಿಕೊಂಡರೆ ಪ್ರಕರಣ ಮುಗಿಸಬಹುದು. ಇದಕ್ಕಾಗಿ ಮನೆಯನ್ನು ತಾವು ಹೇಳಿದವರಿಗೆ ಬರೆದುಕೊಡಿ ಎಂದು ಕುಮಾರ್ ಬೇಡಿಕೆ ಇಟ್ಟಿದ್ದರು' ಎಂದು ಮೂಲಗಳು ತಿಳಿಸಿವೆ.

'ಈ ಸಂಬಂಧ ಕುಮಾರ್ ಹಲವು ಬಾರಿ ಕರೆ ಮಾಡಿ ಒತ್ತಡ ಹೇರಿದರು. ₹ 4 ಕೋಟಿ ಮೌಲ್ಯದ ಕಟ್ಟಡವನ್ನು ₹ 60 ಲಕ್ಷಕ್ಕೆ ಕೇಳಿದರು. ಮನೆ ನೋಡಿಕೊಂಡು ಬರಲು ತಮ್ಮ ಅಧೀನ ಸಿಬ್ಬಂದಿ ಮತ್ತು ಸಂಬಂಧಿಗಳನ್ನೂ ಕಳುಹಿಸಿದ್ದರು ಎಂದು ಚನ್ನೇಗೌಡ ಮತ್ತು ಅನುಷಾ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು' ಎಂದು ತಿಳಿಸಿವೆ.

ಕಟ್ಟಡ ಮಾಲೀಕತ್ವವನ್ನು ತಮ್ಮವರಿಗೆ ವರ್ಗಾಯಿಸಿಕೊಳ್ಳುವುದರ ಸಂಬಂಧ ಕುಮಾರ್, ಮಂಗಳವಾರ ರಾತ್ರಿ ಸಭೆ ನಿಗದಿ ಮಾಡಿದ್ದರು. ಅದರಂತೆ ಚನ್ನೇಗೌಡ ನಾಗರಬಾವಿಯ ಹೋಟೆಲ್ ಒಂದಕ್ಕೆ ಬಂದಿದ್ದರು. ಕುಮಾರ್ ಅವರ ಮೂವರು ಸಂಬಂಧಿ ಮತ್ತು ಅನ್ನಪೂರ್ಣೇಶ್ವರಿ ಠಾಣೆಯ ಸಿಬ್ಬಂದಿ ಹೋಟೆಲ್‌ಗೆ ಬಂದಿದ್ದರು. ಇದೇ ವೇಳೆ ದಾಳಿ ನಡೆಸಿ ಐವರನ್ನು ವಶಕ್ಕೆ ಪಡೆಯಲಾಯಿತು. ಹೋಟೆಲ್‌ಗೆ ಹೊರಟಿದ್ದ ಕುಮಾರ್, ಇಲಾಖೆಯ ಜೀಪ್ ಅನ್ನು ಮನೆಯ ಸಮೀಪದ ರಸ್ತೆಯಲ್ಲೇ ಬಿಟ್ಟು ಓಡಿ ಹೋಗಿದ್ದರು.

ಗೋಪ್ಯವಾಗಿಯೇ ಉಳಿದಿದ್ದ ಮಾಹಿತಿ

ಇನ್‌ಸ್ಪೆಕ್ಟರ್ ಕುಮಾರ್ ಮತ್ತು ಇತರರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ, ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಆದರೆ, ಆ ಬಳಿಕ ಯಾವುದೇ ಪ್ರಕ್ರಿಯೆ ಮುಂದುವರಿಸಿರಲಿಲ್ಲ. ಎಫ್‌ಐಆರ್ ಬಗ್ಗೆಯೂ ಲೋಕಾಯುಕ್ತ ಪೊಲೀಸರು ಯಾವುದೇ ಮಾಹಿತಿ ಹಂಚಿಕೊಂಡಿರಲಿಲ್ಲ. ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಡಿವೈಎಸ್‌ಪಿ ವಸಂತ್ ಸಿ. ಅವರನ್ನು ಈ ಪ್ರಕರಣದ ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿತ್ತು ಎಂಬ ಮಾಹಿತಿ ಎಫ್‌ಐಆರ್‌ನಲ್ಲಿದೆ.

ಮುಖ್ಯಾಂಶಗಳು

- ಗುತ್ತಿಗೆದಾರ ಕೆ.ಕೆ.ಚನ್ನೇಗೌಡ ಅವರಿಂದ ದೂರು
- ₹4 ಕೋಟಿ ಮೌಲ್ಯದ ಕಟ್ಟಡವನ್ನು ₹60 ಲಕ್ಷಕ್ಕೆ ಮಾರಲು ಒತ್ತಡ
- ಜೀಪು ಬಿಟ್ಟು ಪರಾರಿಯಾಗಿದ್ದ ಕುಮಾರ್

...ನಿಯರ್ ಆತ್ಮಹತ್ಯೆ

...ಮನೆಯಲ್ಲಿ ನೇಣಿಗೆ ಶರಣು

...ಂಟ್‌ನಲ್ಲಿ ನೆಲಸಿದ್ದರು. ಏಪ್ರಿಲ್ ...ಂದು ದಂಪತಿ ಮಧ್ಯೆ ಗಲಾಟೆ ...ದಿತ್ತು. ಬಳಿಕ ಅಪಾರ್ಟ್‌ಮೆಂಟ್‌ಗೆ ...ಪಸಾಗಿದ್ದ ಪ್ರಶಾಂತ್ ಅದೇ ದಿನ ...ತ್ರಿ ಎಂಟರ ಸುಮಾರಿಗೆ ಆತ್ಮಹತ್ಯೆ ...ಡಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಮನನೊಂದು ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮಗನ ಸಾವಿನ ಕುರಿತು ಯಾರ ಮೇಲೂ ಅನುಮಾನ ಇರುವುದಿಲ್ಲ' ಎಂದು ತಂದೆ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಾಗಿದೆ.

...ಂದಿದ್ದ ತಂದೆಗೆ ಜೀವಾವಧಿ ಶಿಕ್ಷೆ

...ವ್ಯಾಪ್ತಿಯ ...ಮಕ್ಕಳನ್ನು ...1ನೇ ...ಂಡ ... ...ದ ಅಪರಾಧಿ. ...ಯನ್ನು ...ದ್ದರು. ...ಯಾಲಯಕ್ಕೆ ... ...ನಾಲ್ಕು ...ತ್ ಮೋಹನ್ ...ಾಗೂ ₹50 ...ಿ ವಕೀಲರಾಗಿ ...ರು. ...ಸ್ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಉತ್ತರ ಪ್ರದೇಶದ ಕುಟುಂಬವು ದಾಸರಹಳ್ಳಿಯ ಕಾವೇರಿ ಬಡಾವಣೆಯ ಬಾಡಿಗೆ ಮನೆಯೊಂದರ ಎರಡನೇ ಮಹಡಿಯಲ್ಲಿ ನೆಲಸಿತ್ತು. ಮನೆಯಲ್ಲಿ 14 ಹಾಗೂ 16 ವರ್ಷದ ಇಬ್ಬರು ಹೆಣ್ಣು ಮಕ್ಕಳು ತಾಯಿ ಹಾಗೂ ಮಲತಂದೆಯ ಜತೆಗೆ ನೆಲಸಿದ್ದರು. ಹೆಣ್ಣು ಮಕ್ಕಳ ತಾಯಿ ಅನಿತಾ ಅವರು ಮೊದಲ ಪತಿಯಿಂದ ವಿಚ್ಛೇದನ ಪಡೆದುಕೊಂಡಿದ್ದರು. ಡೆಹ್ರಾಡೂನ್‌ನ ಸುಮಿತ್ ಮೋಹನ್ ಎಂಬಾತನ ಜತೆಗೆ ಒಂಬತ್ತು ವರ್ಷದ ಹಿಂದೆ ಎರಡನೇ ಮದುವೆ ಆಗಿದ್ದರು. ಮೋಹನ್ ನಗರದಲ್ಲಿ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ. ತಾಯಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಹೆಣ್ಣು ಮಕ್ಕಳು ಸಮೀಪದ ಶಾಲೆಯಲ್ಲಿ ಓದುತ್ತಿದ್ದರು.

ತಾಯಿ ಇಲ್ಲದ ಸಂದರ್ಭದಲ್ಲಿ ಹೆಣ್ಣು ಮಕ್ಕಳ ಜತೆಗೆ ಗಲಾಟೆ ನಡೆದು ಇಬ್ಬರನ್ನೂ ಕೊಲೆ ಮಾಡಿ ಅಪರಾಧಿ ಸುಮಿತ್ ಮೋಹನ್ ಪರಾರಿ ಆಗಿದ್ದ.

ಎಂಜಿನಿಯರಿಂಗ್ ಸೀಟು ಹಂಚಿಕೆಯಲ್ಲಿ ಅಕ್ರಮದ ಆರೋಪ

ಬಿಎಂಎಸ್ ಟ್ರಸ್ಟ್, ಟ್ರಸ್ಟಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಮಯಗಳನ್ನು ಉಲ್ಲಂಘಿಸಿ ನಿಯಮಬಾಹಿರ ಹಾಗೂ ಅಕ್ರಮವಾಗಿ ಎಂಜಿನಿಯರಿಂಗ್ ಸೀಟುಗಳನ್ನು ಹಂಚಿಕೆ ಮಾಡಿ ಪ್ರವೇಶ ಕಲ್ಪಿಸಿದ್ದ ಆರೋಪದಡಿ ಬಿಎಂಎಸ್ ಎಜುಕೇಷನ್ ಟ್ರಸ್ಟ್ ಹಾಗೂ ಟ್ರಸ್ಟಿ ರಾಗಿಣಿ ನಾರಾಯಣ್ ಅವರ ವಿರುದ್ಧ ಹನುಮಂತನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಈ ಸಂಬಂಧ ವಕೀಲ ರಮೇಶ್ ನಾಯಕ್ ಅವರು ನ್ಯಾಯಾಲಯದಲ್ಲಿ ಖಾಸಗಿ ದೂರು (ಪಿಸಿಆರ್) ದಾಖಲಿಸಿದ್ದರು. ಎಸಿಜೆಎಂ 37ನೇ ನ್ಯಾಯಾಲಯದ ಸೂಚನೆ ಮೇರೆಗೆ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರರಿಗೆ ದಾಖಲೆಗಳನ್ನು ಸಲ್ಲಿಸುವಂತೆ ಸೂಚನೆ ನೀಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬುಲ್ ಟೆಂಪಲ್ ರಸ್ತೆಯಲ್ಲಿರುವ ಬಿಎಂಎಸ್ ಶೈಕ್ಷಣಿಕ ಟ್ರಸ್ಟ್ ಅಧೀನದಲ್ಲಿ ಸರ್ಕಾರದ ಅನುದಾನಿತ ಹಾಗೂ ಅನುದಾನೇತರ ನಾಲ್ಕು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಬಿಎಂಎಸ್ ಶೈಕ್ಷಣಿಕ ಟ್ರಸ್ಟ್‌ನ ರಾಗಿಣಿ ನಾರಾಯಣ ಅವರು ನಿಯಮಗಳ ಉಲ್ಲಂಘನೆ ಮಾಡಿ, ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸು-ತ್ತಿದ್ದಾರೆ. ನಾಲ್ಕು ಎಂಜಿನಿಯರಿಂಗ್ ಕಾಲೇಜುಗಳಲ್ಲಿ 2009ರಿಂದ ಕಾಲೇಜು ಮೆರಿಟ್ ಪಟ್ಟಿ ಬಗ್ಗೆ ಪ್ರಕಟಣಾ ಫಲಕದಲ್ಲಿ ಪ್ರಕಟಣೆ ಹೊರಡಿಸಿಲ್ಲ ಹಾಗೂ ನಿಯಮಾ-ವಳಿಗಳನ್ನು ಪಾಲನೆ ಮಾಡಿಲ್ಲ. ಅಲ್ಲದೇ ಪ್ರವೇಶ ಶುಲ್ಕ, ಟ್ಯೂಷನ್ ಶುಲ್ಕದ ಬಗ್ಗೆ ನಿಯಮಗಳ ಪಾಲನೆ ಮಾಡಿಲ್ಲ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ನಾಲ್ಕು ಕಾಲೇಜುಗಳಲ್ಲಿ 2021–22 ಹಾಗೂ 2022–23ರಲ್ಲಿ ಬಿ.ಇ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಯಲ್ಲಿ ಎನ್‌ಆರ್‌ಐ ಹಾಗೂ ಫಾರಿನ್ ನ್ಯಾಷನಲ್ ಕೋಟಾಗಳಡಿ ಸೀಟುಗಳ ಹಂಚಿಕೆ ನಿಯಮಾವಳಿಗಳ ಉಲ್ಲಂಘನೆ ಮಾಡಲಾಗಿದೆ. ಬಿಎಂಎಸ್ ಶೈಕ್ಷಣಿಕ ಟ್ರಸ್ಟ್ 2021–22ನೇ ಸಾಲಿನಲ್ಲಿ ಅಧಿಸೂಚನೆ ಹೊರಡಿಸಿತ್ತು. ಅಧಿಸೂ-ಚನೆಯಲ್ಲಿ ಎಐಸಿಟಿಇ ಹಾಗೂ ಯುಜಿಸಿ ನಿಯಮಗಳ ಉಲ್ಲಂಘನೆ ಮಾಡಿ ಸೀಟು ಹಂಚಿಕೆ ಮಾಡಲಾಗಿದೆ. ಈ ಬಗ್ಗೆ ಯಾವುದೇ ಪ್ರಕಟಣೆಗಳನ್ನೂ ಹೊರಡಿಸಿ-ರುವುದಿಲ್ಲ. ಅಕ್ರಮವಾಗಿ ಸೀಟು ಹಂಚಿಕೆ ಮಾಡಿ ಕೋಟ್ಯಂತರ ರೂಪಾಯಿ ಹಣ ಪಡೆದುಕೊಳ್ಳಲಾಗಿದೆ' ಎಂಬ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ.

ನಕಲಿ ದಾಖಲೆ ಸೃಷ್ಟಿಸಿ ವಂಚನೆ: ಆರೋಪಿ ಬಂಧನ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಮಾರಾಟ ಮಾಡಿ ವಂಚಿಸುತ್ತಿದ್ದ ಆರೋಪಿಯನ್ನು ಯಲಹಂಕ ನ್ಯೂಟೌನ್ ಠಾಣೆಯ ಪೊಲೀಸರು ಹೊರ ರಾಜ್ಯದಲ್ಲಿ ಬಂಧಿಸಿ ನಗರಕ್ಕೆ ಕರೆ ತಂದಿದ್ದಾರೆ.

ಪ್ರದೀಪ್ ಅಲಿಯಾಸ್ 'ಪಾಯಿಸನ್' ಪ್ರದೀಪ್ ಬಂಧಿತ ಆರೋಪಿ. 'ವಂಚನೆ ಸಂಬಂಧ ಇಬ್ಬರು ದೂರು ನೀಡಿದ್ದರು. ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಯಿತು. ಗೋವಾದಲ್ಲಿ ತಲೆಮರೆಸಿ-ಕೊಂಡಿದ್ದ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ವಿದ್ಯಾರಣ್ಯಪುರ, ಯಲಹಂಕ, ಯಲಹಂಕ ನ್ಯೂಟೌನ್ ಸೇರಿದಂತೆ ಹಲವು ಕಡೆಯ ನಿವಾಸಿಗಳಿಗೆ ಆರೋಪಿ ವಂಚಿಸಿದ್ದಾನೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ಬೇರೆಯವರ ನಿವೇಶನಕ್ಕೆ ಆರೋಪಿ ನಕಲಿ ದಾಖಲೆ ಸೃಷ್ಟಿ-ಸುತ್ತಿದ್ದ. ನಂತರ, ನನ್ನದೇ ನಿವೇಶನ ಎಂಬುದಾಗಿ ನಂಬಿಸಿ ಮಾರಾಟ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಆರೋಪಿ ಪ್ರದೀಪ್, ರೌಡಿಶೀಟರ್ ಆಟೊರಾಮನ ಶಿಷ್ಯ. ಆಟೊ ರಾಮನ ಜತೆಗೆ ಸೇರಿಕೊಂಡು ನಕಲಿ ದಾಖಲೆ ಸೃಷ್ಟಿಸುತ್ತಿದ್ದ. ಸರ್ಕಾರಿ ಅಧಿಕಾರಿಗಳನ್ನೇ ಹುಡುಕಿ ಅವರಿಗೆ ಮಾರಾಟ ಮಾಡುತ್ತಿದ್ದ. ಈ ರೀತಿ ದಂಧೆ ನಡೆಸಿ ಆರೋಪಿ ಕೋಟ್ಯಂತರ ರೂಪಾಯಿ ಗಳಿಸಿರುವುದು ತನಿಖೆಯಿಂದ ಪತ್ತೆಯಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾನ್‌ಸ್ಟೆಬಲ್‌ಗಳು, ಪೊಲೀಸ್ ಅಧಿಕಾರಿಗಳಿಗೂ ಆರೋಪಿ ವಂಚನೆ ನಡೆಸಿದ್ದಾನೆ ಎಂದು ಮೂಲಗಳು ತಿಳಿಸಿವೆ.

'ಪ್ರಕರಣದ ಕುರಿತು ಇಬ್ಬರು ಮಾತ್ರ ದೂರು ನೀಡಿದ್ದಾರೆ. ವಂಚನೆಗೆ ಒಳಗಾದ ಬಗ್ಗೆ ಯಾವುದೇ ಪೊಲೀಸ್ ಸಿಬ್ಬಂದಿ ದೂರು ನೀಡಿಲ್ಲ. ದೂರು ನೀಡಿದರೆ ತನಿಖೆ ನಡೆಸಲಾಗುವುದು' ಎಂದು ಪೊಲೀಸ್ ಅಧಿಕಾರಿ-ಯೊಬ್ಬರು ಹೇಳಿದರು.

ಚಿತ್ರಾವಳಿ



ಬೆಂಗಳೂರು ಬಿಲ್ಲವ ಅಸೋಸಿಯೇಷನ್ ಭಾನುವಾರ ಆಯೋಜಿಸಿದ್ದ ಸಮುದಾಯದ ವೃತ್ತಿಪರರು ಮತ್ತು ಉದ್ಯಮಿಗಳ ಸಮಾವೇಶದಲ್ಲಿ ಕೇಂದ್ರ ಹಣಕಾಸು ವ್ಯವಹಾರಗಳ ಇಲಾಖೆಯ ಅದರ್ ಮಲ್ಟಿಲ್ಯಾಟರಲ್ ಇನ್‌ಸ್ಟಿಟ್ಯೂಷನ್ಸ್ ವಿಭಾಗದ ನಿರ್ದೇಶಕ ಪ್ರಸನ್ನ ವಿ. ಸಾಲಿಯಾನ್ ಅವರನ್ನು ಸನ್ಮಾನಿಸಲಾಯಿತು. ಬಿಲ್ಲವ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಸಂಪತ್ ಕುಮಾರ್, ಉಪಾಧ್ಯಕ್ಷೆ ಜಯಂತಿ ವಿಜಯಕೃಷ್ಣ, ಅಧ್ಯಕ್ಷ ಎಂ. ವೇದಕುಮಾರ್, ಡಿವೈಎಸ್‌ಪಿ ಮಹೇಶ್ ಕುಮಾರ್, ನಿರೂಪಕ ಅವಿನಾಶ್ ಯುಹಾನ್, ಸ್ವಾರ್ಕ್ ಬಿಲ್ಲವ ಸಮಿತಿ ಅಧ್ಯಕ್ಷ ಪ್ರಶಾಂತ್ ಎಂ. ಕೋಟ್ಯಾನ್ ಮತ್ತು ಚೇತನಾ ಸಾಲಿಯಾನ್ ಇದ್ದರು



ಜಾನಪದ ವಿದ್ವಾಂಸ ಕೆ.ಚಿನ್ನಪ್ಪ ಗೌಡ ಅವರಿಗೆ 2023ನೇ ಸಾಲಿನ ಡಾ. ಜೀ.ಶಂ.ಪ ಪ್ರಶಸ್ತಿ ನೀಡಿ ಗೌರವಿಸಲಾಯಿತು.ಇತ್ತೀಚೆಗೆ ಬೀದರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಿನ್ನಪ್ಪ ಗೌಡರು ಭಾಗವಹಿಸಲು ಆಗದ ಕಾರಣ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಪ್ರಶಸ್ತಿ ನೀಡಿ ಗೌರವಿಸಿದರು

ಕ್ಷೇಮ ಕುಶಲ



ಕೆಂಗಣ್ಣು ಬೇನೆಗೆ ತ್ರಿಫಲೆಯ ಮದ್ದು

ಡಾ. ಸತ್ಯನಾರಾಯಣ ಭಟ್ ಪಿ.

ಕಚೇರಿಯ ಕೆಲಸ ಮುಗಿಸಿ ಮರಳುತ್ತಿದ್ದ ರಾಜಣ್ಣ. ಅದ್ಯಾಕೋ ಬೈಕ್ ಸವಾರಿಯ ಇದಿರು ಗಾಳಿಗೆ ಕಣ್ಣೊಳಗೆ ಕಸ ಬಿದ್ದಂತಾಯಿತು. ಮನೆಗೆ ಬಂದೊಡನೆ ಕಣ್ಣು ಚುಚ್ಚಲಾರಂಭ. ಸ್ವಲ್ಪ ನೀರೊಸರತೊಡಗಿತು. ಉರಿ ಮತ್ತು ಬಿಳಿಗುಡ್ಡೆಯ ನೋವು ಕ್ರಮೇಣ ಹೆಚ್ಚಿತು. ಮುಂಜಾನೆ ಎದ್ದಾಗ ಎಡಗಣ್ಣಿನ ರೆಪ್ಪೆ ತೆಗೆಯಲಾಗದೆ ಮೆತ್ತಿಕೊಂಡಿತ್ತು. ಕನ್ನಡಿ ಮುಂದೆ ನಿಂತಾಗ ರಾಜಣ್ಣನ ಎಡಗಣ್ಣು ನಿಗಿನಿಗಿ ಕೆಂಡದಂತೆ ಕೆಂಪಡರಿತ್ತು. ಬಲಗಣ್ಣು ಸಹ ಚುಚ್ಚಲಾರಂಭ. ರಾಜಣ್ಣ ವೈದ್ಯರ ಬಳಿಗೋಡಿದ. 'ಇದು ಮದ್ರಾಸ್ ಐ. ಬೇರೆಯವರಿಂದ ನಿಮಗೆ ಹರಡಿತೇನೋ' ಎಂದ ವೈದ್ಯರು ಮಾತ್ರೆ, ಕಣ್ಣಿಗೆ ಬಿಂದುಮದ್ದನ್ನು ನೀಡಿದರು. ಹಿಂದಿನ ದಿನ ತನ್ನ ಕಚೇರಿಯ ಸಹೋದ್ಯೋಗಿಯೊಬ್ಬರು ಊಟದ ವೇಳೆ ಪದೇ ಪದೇ ಕರವಸ್ತ್ರದಿಂದ ಕಣ್ಣೊರಸಿಕೊಂಡದ್ದು ರಾಜಣ್ಣನಿಗೆ ನೆನಪಾಯಿತು. ಆತ ಕೊಟ್ಟ ಬಳುವಳಿ ಇದು ಎಂಬುದು ರಾಜಣ್ಣನಿಗೆ ಖಾತರಿಯಾಯ್ತು.

ಎಲ್ಲ ಬಗೆಯ ಕಣ್ಣುಬೇನೆಯ ಮೂಲ 'ಅಭಿಷ್ಯಂದ' ಎನ್ನುತ್ತದೆ, ಆಯುರ್ವೇದ. ಸ್ಯಂದ ಪ್ರಸ್ರವಣೇ – ಎಂದರೆ ಅತಿಯಾಗಿ ಸುರಿಯುವಿಕೆ. ಕಣ್ಣು ಒಂದೇ ಸಮನೆ ನೀರು ಸುರಿಸುವ ಕಾಯಿಲೆ ಇದು. ಹಾಗಾಗಿ 'ಅಭಿಷ್ಯಂದ' ಹೆಸರು. ಮೂಗು ಕಟ್ಟಿ, ಅಸಾಧ್ಯ ನವೆ, ನೋವು ಮತ್ತು ರೆಪ್ಪೆಯಾದಿಯಾಗಿ ಎಲ್ಲ ಕಡೆ ತೊಂಡೆಹಣ್ಣಿನ ಬಣ್ಣದ ಕಂಗೆಟ್ಟ ಸ್ಥಿತಿ ಒದಗುತ್ತದೆ. ನೋಡುವುದು ಬಿಡಿ, ಕಣ್ಣೇ ಬಿಡಲಾಗದ ಅವಸ್ಥೆ. ವೈರಾಣು ಜನಿತ 'ಮದ್ರಾಸ್ ಐ' ಬಹುತೇಕ ಉಪಶಮನವಾಗಲು ಕನಿಷ್ಠ ಐದು ದಿನಗಳು ಅತ್ಯಗತ್ಯ. ದಿನದಿನವೂ ಪರಿಸ್ಥಿತಿ ಬಿಗಡಾಯಿಸುತ್ತಿಲ್ಲ ಎಂಬ ಖಾತರಿ ನಿಮಗಿರಲಿ. ಇತರ ರೋಗಗಳಿಂದ ತುಂಬಾ ತೊಂದರೆ ಅನುಭವಿಸುವವರಿಗೆ, ಹಿರಿಯರು ಕೊಂಚ ಹೆಚ್ಚಿನ ಎಚ್ಚರಿಕೆಯಲ್ಲಿ ಇರುವುದು ಅತ್ಯಗತ್ಯ. ವೈದ್ಯಕೀಯ ನೆರವನ್ನು ಖಂಡಿತ ಒದಗಿಸಬೇಕಾದೀತು.



ಮರಗಳ ಎಲೆಗಳು ಉದುರಿ ಹೂ ಬಿಡುವ ಕಾಲವೇ ವಸಂತ. ಅಂಥ ಹೂಗಳ ಪರಾಗ ಕಣದ ಒಗ್ಗದಿಕೆ (ಅಲರ್ಜಿ) ಸಹ ಕಣ್ಬೇನೆಯ ಕಾರಣ ಎನ್ನಲಾಗುತ್ತದೆ. ನೆಗಡಿ ಸಮಸ್ಯೆಗೆ ಮೂಲ ಎಂಬ ಶೋಧಪ್ರಬಂಧಗಳೂ ಇವೆ. ಅಂತಹದೇ ಸಮಸ್ಯೆ ಮೂಗು, ಹಣೆ ಮತ್ತು ಕಣ್ಣು ಗುಡ್ಡೆಗಳಲ್ಲುಂಟಾಗುವ ಸಂದರ್ಭವೇ 'ಕಂಜಕ್ಟಿವೈಟಿಸ್' ಎಂದರೆ 'ಅಭಿಷ್ಯಂದ'. ಇದು ಕೇವಲ ಅಲ್ಪಕಾಲದ ಕಿರಿಕಿರಿಯಷ್ಟೆ ಅಲ್ಲ, ಸಮಯಕ್ಕೆ ಸರಿಯಾಗಿ ಚಿಕಿತ್ಸೆ, ಪರಿಹಾರ ಒದಗದಿದ್ದರೆ ದೀರ್ಘಕಾಲದ ಕೆಡುಕಿಗೆ ದಾರಿ.

'ತ್ರಿಫಲಾ' ಎಂಬ ಮೂರು ಹಣ್ಣುಗಳು ಒಟ್ಟಾಗಿ ಬಳಕೆಯಾಗುವ ಯೋಗ ಆಯುರ್ವೇದದಲ್ಲಿ ಪ್ರಸಿದ್ಧ. ಇದು ಪುಡಿರೂಪದಲ್ಲಿ ಲಭ್ಯ. ಇದಕ್ಕೆ ನೀರನ್ನು ಬೆರೆಸಿ ಕುದಿಸಿ ಕಷಾಯವನ್ನು ತಯಾರಿಸಿ. ಹತ್ತಾರು ಬಾರಿ ಕಣ್ಣುಗಳನ್ನು ತೊಳೆಯಿರಿ. ಅತ್ಯುತ್ತಮ ಫಲಿತಾಂಶ ನಿಶ್ಚಿತ. ಬಿಸಿನೀರನ್ನು ಕೂಡಿಸಿ ಸೇವಿಸಿದರೆ ಲಘು ಭೇದಿಯಾದೀತು. ಕಣ್ಣಿನದಷ್ಟೆ ಅಲ್ಲ, ಕರುಳಿನ ರೋಗಕ್ಕೆ ಸಹ ತ್ರಿಫಲೆ ಪುಡಿಯ ಸೇವನೆ ರಾಮಬಾಣ. ಅದರ ಘೃತ ಸಹ ಲಭ್ಯ. ಸೇವನೆ ಹಾಗೂ ರೆಪ್ಪೆ ಮೇಲಿನ ಲೇಪನದಿಂದ ಅಪಾರ ಫಲಿತಾಂಶ ಸಿಗುತ್ತದೆ.

ಅರಿಶಿನಪುಡಿ ಬೆರೆಸಿದ ನೇತ್ರಬಿಂದುವನ್ನು ಬಳಸಿದರೆ ಲಾಭ. ಅರೆದ ಹಸಿ ಅರಿಶಿನ ಲೇಪದಿಂದ ಉರಿ ಆಗುತ್ತದೆ; ಆದರೆ ಸ್ರಾವ ದೂರ. ಹಾಲಿಗೆ ಅರಿಶಿನ ಪುಡಿ ಹಾಕಿ ನಿತ್ಯ ಕುಡಿದರೆ ರೋಗಪ್ರತಿಬಂಧಕ ಶಕ್ತಿ ಹೆಚ್ಚೀತು. ಜೇನಿನ ಬಳಕೆಯಿಂದ ಕಣ್ಣುರಿ ಖಂಡಿತ. ಪನ್ನೀರು ಬೆರೆಸಿ ಜೇನಿನ ತೀಕ್ಷ್ಣತೆ ಇಳಿಸಲಾದೀತು. ರೆಪ್ಪೆ ಮೇಲೆ ಹಚ್ಚಿ ಕೆಂಗಣ್ಣು ಪರಿಹಾರ ಕೂಡ ಸಾಧ್ಯ. ಜೇಷ್ಠಮಧು ಅಥವಾ ಅತಿಮಧುರ ಪುಡಿ ಲಭ್ಯ. ಅದರ ನಾನಾ ಬಗೆಯ ಬಳಕೆಯಿಂದ ಹಲವು ಬಗೆಯ ನೇತ್ರರೋಗಗಳನ್ನು ತಡೆಗಟ್ಟಬಹುದು.


ಮಸಾಲೆರಹಿತ ಸಾದಾ ಆಹಾರ ಸೇವನೆ, ವೈಯಕ್ತಿಕ ಶುಚಿತ್ವ. ದಿಂಬು ದಿರಸುಗಳ ಶಿಸ್ತು, ಸ್ವಚ್ಛತೆ, ಹಿತಮಿತದ ಸ್ನಾನದಿಂದ ರೋಗ ತಡೆ ಮತ್ತು ಉಲ್ಬಣತೆಗೆ ಕಡಿವಾಣ ಸಾಧ್ಯ. ನೆತ್ತಿಗೆ ತುಪ್ಪ ಮತ್ತು ತೆಂಗಿನೆಣ್ಣೆ ಬಿಸಿ ಬಿಸಿಯಾಗಿ ಹಚ್ಚಿರಿ. ಐದು ನಿಮಿಷದಲ್ಲಿ ಸ್ನಾನ ಮಾಡಿರಿ. ಇದರಿಂದ ಕಿವಿ, ಮೂಗು, ಗಂಟಲು ಮತ್ತು ಕಣ್ಣು ಬೇನೆಗಳಿಗೆ ಕಡಿವಾಣ! ಸರಿಯಾದ ಮಲಪ್ರವೃತ್ತಿ ಸಹ ಕಣ್ಣುರೋಗ ಮಾತ್ರ ಅಲ್ಲ, ಇತರ ರೋಗನಿಯಂತ್ರಣಕ್ಕೂ ಹೆದ್ದಾರಿ. ತ್ರಿಫಲದ ಸೇವನೆಯಿಂದ ಅಂತಹ ಪರಿಣಾಮ ಶತಸಿದ್ಧ. ❖

ಪಾರ್ಶ್ವವಾಯು: ಇರಲಿ ಎಚ್ಚರ

ಡಾ. ವಿನಯಾ ಶ್ರೀನಿವಾಸ್

'ಪಾರ್ಶ್ವವಾಯು' ಅಥವಾ 'ಸ್ಟ್ರೋಕ್' ಒಂದು ವೈದ್ಯಕೀಯ ತುರ್ತುಪರಿಸ್ಥಿತಿ. ವಯಸ್ಸಾದಂತೆ ಇದರ ಸಂಭವ ಹೆಚ್ಚು. ಮಿದುಳಿನ ರಕ್ತಪೂರೈಕೆಯಲ್ಲಿ ವ್ಯತ್ಯಯವಾಗುವುದೇ ಪಾರ್ಶ್ವವಾಯುವಿಗೆ ಮುಖ್ಯ ಕಾರಣ.

ಮಿದುಳು ನಮ್ಮ ಶರೀರದ ಬಹಳ ಮುಖ್ಯ ಅಂಗಾಂಗ. ದೇಹದ ಎಲ್ಲ ಕ್ರಿಯೆಗಳನ್ನು ನಿರ್ವಹಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಕೆಲವೇ ಕೆಲವು ಸೆಕೆಂಡುಗಳ ಕಾಲ ಅದರ ಕಾರ್ಯಕ್ಷಮತೆಯಲ್ಲಿ ವ್ಯತ್ಯಾಸವಾದರೂ ವ್ಯಕ್ತಿಯು ಸಮಸ್ಯೆಯನ್ನು ಎದುರಿಸುತ್ತಾನೆ. ಮಿದುಳು ಇಡಿಯಾಗಿ ಶರೀರವನ್ನು ನಿಯಂತ್ರಿಸಿದರೂ ಅದರ ಬೇರೆ ಬೇರೆ ಭಾಗಗಳು ಶರೀರದ ವಿವಿಧ ಕ್ರಿಯೆಗಳನ್ನು ನಿಭಾಯಿಸಲು ರಚನೆ ಮತ್ತು ವಿನ್ಯಾಸವನ್ನು ಪಡೆದಿರುತ್ತವೆ. ಯಾವ ಭಾಗದ ಮಿದುಳಿನ ಕಾರ್ಯಕ್ಷಮತೆಯಲ್ಲಿ ವ್ಯತ್ಯಯ ಆಗುತ್ತದೆಯೋ, ಆ ಭಾಗವು ನಿಯಂತ್ರಿಸುವ ಶರೀರದ ಕ್ರಿಯೆಯನ್ನು ಸಮರ್ಪಕವಾಗಿ ನಡೆಸಲು ಆ ವ್ಯಕ್ತಿ ಅಸಮರ್ಥನಾಗುತ್ತಾನೆ. ಒಮ್ಮೊಮ್ಮೆ ಸಂಪೂರ್ಣವಾಗಿ ಆ ಕ್ರಿಯೆಯನ್ನು ಮಾಡಲು ಆಗದೆಯೇ ಹೋಗಬಹುದು.



ಕೆಲವೇ ಸೆಕೆಂಡುಗಳು ಕಾಲ ಮಿದುಳಿಗೆ ರಕ್ತದ ಮತ್ತು ಆ ಮೂಲಕ ಆಮ್ಲಜನಕದ ಪೂರೈಕೆ ಸ್ಥಗಿತವಾದರೂ ಅಲ್ಲಿನ ಜೀವಕೋಶಗಳು ಮರಣ ಹೊಂದುತ್ತವೆ. ಒಮ್ಮೆ ಮರಣ ಹೊಂದಿದ ಜೀವಕೋಶಗಳು ಮತ್ತೆ ಮೊದಲಿನ ಸ್ಥಿತಿಗೆ ಬರಲಾರವು.

ರಕ್ತಪೂರೈಕೆ ಸ್ಥಗಿತ

ಮಿದುಳಿನ ರಕ್ತಪರಿಚಲನೆಯಲ್ಲಿ ಏರುಪೇರಾದಾಗ ಜೀವಕೋಶಗಳಿಗೆ ಆಮ್ಲಜನಕದ ಪೂರೈಕೆಯಲ್ಲಿಯೂ ಕೊರತೆಯಾಗುತ್ತದೆ. ಶೇ 85ರಷ್ಟು ಸಂದರ್ಭಗಳಲ್ಲಿ ಮಿದುಳಿನ ರಕ್ತನಾಳಗಳಲ್ಲಿ ತಡೆಯುಂಟಾಗುವುದರಿಂದ ಪೂರೈಕೆ ಸ್ಥಗಿತವಾಗುತ್ತದೆ. ಕೆಲವೊಮ್ಮೆ ರಕ್ತನಾಳಗಳಲ್ಲಿ ಬಿರುಕುಂಟಾಗಿ ರಕ್ತಸ್ರಾವವಾಗುವುದರಿಂದಲೂ ಪೂರೈಕೆ ಕ್ಷೀಣವಾಗುತ್ತದೆ. ರಕ್ತನಾಳಗಳಲ್ಲಿ ಕೊಬ್ಬಿನಾಂಶ ಶೇಖರವಾಗುವುದು ಅಲ್ಲಿ ತಡೆಯುಂಟಾಗಲು ಮುಖ್ಯ ಕಾರಣ. ಇನ್ನು ಕೆಲವು ಸಂದರ್ಭಗಳಲ್ಲಿ ದೇಹದ ಇತರ ಭಾಗದ ರಕ್ತಪರಿಚಲನೆಯಲ್ಲಿ ಹೆಪ್ಪುಗಟ್ಟಿದ ರಕ್ತವು ಮಿದುಳಿನ ರಕ್ತನಾಳಗಳತ್ತ ಚಲಿಸಿ ಬಂದು ಅಲ್ಲಿ ತಡೆಯುಂಟು ಮಾಡಬಹುದು.

ಅಪಾಯಕಾರಿ ಅಂಶಗಳು

ಅಧಿಕ ರಕ್ತದೊತ್ತಡ, ಮಧುಮೇಹ, ಹೆಚ್ಚಾದ ಕೊಬ್ಬಿನಾಂಶ, ಹೃದಯದ ಸಮಸ್ಯೆಗಳು, ಧೂಮಪಾನ, ಅತಿಯಾದ ಮದ್ಯಪಾನ, ಮಹಿಳೆಯರಲ್ಲಿ ಈಸ್ಟ್ರೋಜನ್ ಮಾತ್ರೆಗಳ ದೀರ್ಘಕಾಲದ ಬಳಕೆ ಮೊದಲಾದ ಅಂಶಗಳು ಪಾರ್ಶ್ವವಾಯು ಸಂಭವವನ್ನು ಹೆಚ್ಚಿಸುತ್ತವೆ.

ಗುಣಲಕ್ಷಣಗಳು

ಸಾಮಾನ್ಯವಾಗಿ ಪಾರ್ಶ್ವವಾಯುವಿನ ಲಕ್ಷಣಗಳು ವ್ಯಕ್ತಿಯಲ್ಲಿ ಹಠಾತ್ ಕಾಣಿಸಿಕೊಳ್ಳುತ್ತವೆ. ಒಂದು ಅಥವಾ ಎರಡೂ ಕೈಗಳ ಅಥವಾ ಕಾಲುಗಳ ಸ್ನಾಯುಗಳಲ್ಲಿ ಬಲಹೀನತೆ, ಮಾತಿನಲ್ಲಿ ತೊದಲು ಅಥವಾ ಮಾತು ನಿಂತುಹೋಗುವುದು, ಕೈ ಅಥವಾ ಕಾಲುಗಳ ಸ್ಪರ್ಶಜ್ಞಾನದಲ್ಲಿ ವ್ಯತ್ಯಾಸ, ಮುಖದ ಸ್ನಾಯುಗಳು ದುರ್ಬಲವಾಗಿ ಬಾಯಿಯು ಒಂದೆಡೆ ಎಳೆದಲ್ಪಟ್ಟಂತೆ ಕಾಣುವುದು, ಕಣ್ಣುಗಳ ದೃಷ್ಟಿ ಕ್ಷೀಣವಾಗುವುದು, ದೇಹದ ಸಮತೋಲನ ತಪ್ಪಿದಂತಾಗುವುದು, ತಲೆಸುತ್ತು ಮತ್ತು ವಾಂತಿ, ಅಪರೂಪದ ಸಂದರ್ಭಗಳಲ್ಲಿ ಪ್ರಜ್ಞೆ ಇಲ್ಲದಂತಾಗುವುದು ಮೊದಲಾದುವು ಪಾರ್ಶ್ವವಾಯುವಿನ ಲಕ್ಷಣಗಳು. ಒಬ್ಬ ವ್ಯಕ್ತಿಯಲ್ಲಿಯೇ ಈ ಎಲ್ಲ ಲಕ್ಷಣಗಳೂ ಕಾಣಬೇಕೆಂದಿಲ್ಲ. ಮಿದುಳಿನ ಯಾವ ಭಾಗದಲ್ಲಿ ಜೀವಕೋಶಗಳು ನಿಷ್ಕ್ರಿಯವಾಗಿರುತ್ತವೆಯೋ ಆ ಭಾಗವು ನಿಯಂತ್ರಿಸುವ ಶರೀರದ ಕ್ರಿಯೆಯಲ್ಲಿ ಮಾತ್ರ ವ್ಯತ್ಯಾಸವನ್ನು ಕಾಣಬಹುದು. ಹಾಗಾಗಿ ಮೇಲಿನ ಯಾವುದೇ ಲಕ್ಷಣ ಕಂಡುಬಂದರೂ ನಿರ್ಲಕ್ಷ್ಯ ಮಾಡಬಾರದು.

ಎಚ್ಚರಿಕೆಗಳು

- ಮಧುಮೇಹಿಗಳು ಮತ್ತು ರಕ್ತದೊತ್ತಡದಿಂದ ಬಳಲುವವರು ನಿಯಮಿತವಾಗಿ ತಪಾಸಣೆ ಮತ್ತು ಚಿಕಿತ್ಸೆಯಿಂದ ಕ್ರಮವಾಗಿ ರಕ್ತದ ಸಕ್ಕರೆ ಅಂಶವನ್ನು ಮತ್ತು ರಕ್ತದೊತ್ತಡವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು.
- ಹೃದಯದ ಸಮಸ್ಯೆಯಿಂದ ಬಳಲುವವರು ನಿಯಮಿತವಾಗಿ ವೈದ್ಯರ ಸಲಹೆಯಂತೆ ಔಷಧೋಪಚಾರದಲ್ಲಿರಬೇಕು.
- ನಿಯಮಿತ ವ್ಯಾಯಾಮ ಮತ್ತು ಸಮರ್ಪಕ ಆಹಾರ ಕ್ರಮವನ್ನು ಅಳವಡಿಸಿಕೊಂಡು ಶರೀರದ ಕೊಬ್ಬಿನಾಂಶವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು.
- ಆನುವಂಶೀಯವಾಗಿ ಶರೀರದಲ್ಲಿ ಕೊಬ್ಬಿನಾಂಶ ಹೆಚ್ಚಿದ್ದರೆ ಅದಕ್ಕೆ ಸೂಕ್ತಚಿಕಿತ್ಸೆಯನ್ನು ತಪ್ಪದೆ ತೆಗೆದುಕೊಳ್ಳಬೇಕು.
- ಧೂಮಪಾನ ಮತ್ತು ಮದ್ಯಪಾನಗಳನ್ನು ವರ್ಜಿಸಬೇಕು.
- ಮಹಿಳೆಯರು ಈಸ್ಟ್ರೋಜನ್ ಮಾತ್ರೆಗಳ ದೀರ್ಘಕಾಲದ ಬಳಕೆಯ ಮುನ್ನ ವೈದ್ಯರ ಸಲಹೆಯನ್ನು ಪಡೆಯಬೇಕು.
- ಪಾರ್ಶ್ವವಾಯು ಲಕ್ಷಣಗಳಿಂದ ಬಳಲುವ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಮರೆಯದೆ ಆತನ ಹಳೆಯ ವೈದ್ಯಕೀಯ ದಾಖಲೆಗಳನ್ನು ಕೊಂಡೊಯ್ಯಬೇಕು.

ಸುವರ್ಣ ಸಮಯ

ಚಿಕಿತ್ಸೆಯನ್ನು ಆರಂಭಿಸುವ ಮೊದಲು ಇಂತಹ ಲಕ್ಷಣಗಳಿರುವ ವ್ಯಕ್ತಿಯನ್ನು ಒಂದಿಷ್ಟು ಪರೀಕ್ಷೆಗೆ ಒಳಪಡಿಸಿ ಕಾರಣವನ್ನು ದೃಢಪಡಿಸಿಕೊಳ್ಳುವುದು ಬಹಳ ಮುಖ್ಯ. 'ಸಿಟಿ ಸ್ಕ್ಯಾನ್' ಮತ್ತು 'ಎಂ. ಆರ್. ಐ. ಸ್ಕ್ಯಾನ್' ಪರೀಕ್ಷೆಗಳು ಈ ನಿಟ್ಟಿನಲ್ಲಿ ಸಹಕಾರಿ. ಇದರೊಂದಿಗೆ ಕಾರಣಗಳನ್ನು ಪತ್ತೆ ಮಾಡಲು ಪೂರಕವಾಗುವ ಇತರ ತಪಾಸಣೆಗಳನ್ನೂ ವೈದ್ಯರು ಸೂಚಿಸಬಹುದು. ಇಸಿಜಿ, ರಕ್ತದ ಸಕ್ಕರೆ ಅಂಶ, ಕೊಬ್ಬಿನಾಂಶದ ತಪಾಸಣೆ ಮತ್ತು ಮಿದುಳಿನ ರಕ್ತನಾಳಗಳ ಆ್ಯಂಜಿಯೋಗ್ರಾಮ್ ಕೂಡ ಕಾರಣಗಳನ್ನು ತಿಳಿಸಲು ಮತ್ತು ಮುಂದಿನ ಚಿಕಿತ್ಸೆ ಹಾಗೂ ಜೀವನಶೈಲಿಯ ಮಾರ್ಪಾಡನ್ನು ಸೂಚಿಸಲು ನೆರವಾಗುತ್ತವೆ.

ವ್ಯಕ್ತಿಯಲ್ಲಿ ಪಾರ್ಶ್ವವಾಯುವಿನ ಲಕ್ಷಣ ಕಂಡು ಬಂದ ಕೂಡಲೇ ಸುಸಜ್ಜಿತ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಅತ್ಯವಶ್ಯಕ. ಜೀವಕೋಶಗಳು ಮರಣ ಹೊಂದುವ ಪ್ರಕ್ರಿಯೆಯಲ್ಲಿರುವಾಗಲೇ ರಕ್ತನಾಳಗಳಲ್ಲಿನ ತಡೆಗೆ ಮುಖ್ಯ ಕಾರಣವಾದ ರಕ್ತದ ಹೆಪ್ಪನ್ನು ಕರಗಿಸುವ ಔಷಧಗಳ ತಕ್ಷಣ ಬಳಕೆಯಿಂದ ಜೀವಕೋಶಗಳನ್ನು ಅಪಾಯದಿಂದ ಪಾರು ಮಾಡಬಹುದು. ಆ ಮೂಲಕ ಮುಂದೆ ಆಗಬಹುದಾದ ಶಾಶ್ವತ ನ್ಯೂನತೆಗಳನ್ನು ತಡೆಗಟ್ಟಬಹುದು. ಹಾಗಾಗಿಯೇ ಗುಣಲಕ್ಷಣಗಳು ಕಂಡ ಸುಮಾರು ಒಂದು ತಾಸನ್ನು 'ಸುವರ್ಣ ಸಮಯ' ಎಂದು ಗುರುತಿಸುತ್ತೇವೆ. ಅಷ್ಟೇ ಅಲ್ಲದೆ, ಇತ್ತೀಚಿನ ದಿನಗಳಲ್ಲಿ ಶಸ್ತ್ರಚಿಕಿತ್ಸೆ ಇಲ್ಲದೆಯೇ ಕಾಲಿನ ಅಥವಾ ಕೈಗಳ ರಕ್ತನಾಳಗಳ ಮೂಲಕ ಒಂದು ನಾಳವನ್ನು ತೂರಿಸಿ ಮಿದುಳಿನ ರಕ್ತನಾಳದೊಳಗಿನ ಹೆಪ್ಪನ್ನು ಹೋಗಲಾಗಿಸಿ ಪರಿಚಲನೆಯನ್ನು ಸರಾಗ ಮಾಡುವ ಸೌಲಭ್ಯಗಳೂ ಕೆಲವು ಆಸ್ಪತ್ರೆಗಳಲ್ಲಿವೆ. ಈ ಚಿಕಿತ್ಸಾ ಕ್ರಮವನ್ನೂ ತಕ್ಷಣ ಮಾಡಿದರೆ ಜೀವಕೋಶಗಳ ಮರಣವನ್ನು ತಡೆದು ಮುಂದಿನ ಅಪಾಯಗಳಿಂದ ವ್ಯಕ್ತಿಯನ್ನು ಪಾರು ಮಾಡಬಹುದು. ❖

ಸಿಇಟಿ- ನೀಟ್ ಪರೀಕ್ಷೆ ದಿಕ್ಸೂಚಿ

PUC-CET: PHYSICS

45) A man weighing 70 kg, riding a motorbike weighing 230 kg at 54 km hr^{-1}, accelerates at 1 ms^{-2} for 10s, when suddenly a child rushes onto the road. The rider manages to apply the brakes screeching to bring his vehicle to a halt in 3s, just in time to save the child. What should have been the average retarding force on the vehicle?

(a) 1.5 N (b) 4.5 N
(c) 3.5 N (d) None of the above


Ans: d

Expln:- Total mass = m = 70 + 230 = 300 kg.
Velocity after $t = 10^5$ is S = u + at;
$V = 15 + 1 \times 10 = 25\ ms^{-1}$.
Hence initial momentum $P_1 = m \times V$
$= 7500\ kgms^{-}$
Vehicle comes to rest after time t = 35
Hence final momentum $P_2 = 0$

$$F = \frac{dp}{dt} = \frac{P_2 - P_1}{t} = \frac{0 - 7500}{3} = 2.5\ kgN.$$


(∴ **None of the answers given is correct.**)

46) In the circuit shown, the end A is at potential V_0, and end B is grounded. The electric current indicated in the circuit is.............



(A) $V_0/2R$ (B) V_0/R
(C) $V_0/3R$ (D) V_0/R
Ans:- (C) $V_0/3R$

47) The graph showing the variation of the magnetic field strength (B) with distance (r) from a long current conductor is



Ans: (C)
Expln:-

For a straight conductor, $B = \frac{\mu_0}{4\pi}(I/d)$; $B \propto 1/d$.

Hence the graph C is correct.

48) Inside a cyclotron, a charged article is subjected to both an electric field and a magnetic field. It gains kinetic energy due to.............

(A) Only the electric field
(B) only the magnetic field
(C) Both the fields (D) none of the fields.

Ans: (A) Only the electric field

Expln:- In a cyclotron electric field helps to increase the kinetic energy of the particle, where as, magnetic field helps to change the direction of charged particle.

49) A certain length of insulated wire can be bent to form either a single circular loop (case I) or a double loop of smaller radius (case II). When the same steady current is passed through the wire, the ratio of the magnetic field at the centre in case I to that in case II is

(A) 1 (B) 2
(C) 1/2 (D) 1/4


Ans: (D) 1/4

Expln:- For a circular loop $B \propto n/R$
Case 1 → $n_1 = 1$; $R_1 = R$
Case 2 → $n_2 = 2$; $R_2 = R/2$

$$\frac{B_1}{B_2} = \frac{n_1}{n_2} \times \frac{R_1}{R_2} \Rightarrow \frac{1}{2} \times \frac{R/2}{R} = 1/4$$

∴ $B_1 : B_2 = 1 : 4$.

50) A rod of length 2 m slides with a speed of 5 ms^{-1} on a rectangular conducting frame as shown in figure. There exists a uniform magnetic field of 0.04 T perpendiculars to the plane of the figure. If the resistance of the rod is 3Ω then the current through the rod is



A). 1.33 A B) 75mA
C). 133 mA D). 0.75 A

Ans: c

We know that the current,
$i = Blv/R = (0.04 \times 2 \times 5)/3 = 133$ mA

51) The ratio of magnetic field at the centre of a current carrying circular coil to its magnetic moment is 'x'. If the current and the radius both are doubled then the new ratio will become

A) x/8 B). 2x
C). 4x D). x/4

Answer: a

Expln:- Magnetic field at the center of the current carrying loop is given by
$B = (\mu_0/4\pi) \times (2\pi i/a) = (\mu_0 i)/2a$.
Magnetic moment at the center of the current carrying loop is given by $M = i\pi a^2$
thus $B/M = \mu_0/(2\pi a^3) = x$ (given) when both current and radius are doubled ratio become x/8 times.

52) A point charge +q, is placed at a distance d from an isolated conducting plane. The field at a point p on the other side of the plane is.............

a) Directed perpendicular to the plane and away from the plane.
b) Directed perpendicular to the plane but towards the plane.
c) Directed radially away from the point charge.
d) Directed radially towards the point charge.

Ans:- (a)

NEET: BIOLOGY

57) Which of the following statements are correct about Klinefelter's Syndrome?

A. This disorder was first described by Langdon Down (1866).
B. Such an individual has overall masculine development. However, the feminine development is also expressed.
C. The affected individual is short stature.
D. Physical, psychomotor and mental development is retarded.
E. Such individuals are sterile.

Choose the correct answer from the options given below:

a) A and E only b) A and B only
c) C and D only d) B and E only

Ans:- (d) Klinefelter's Syndrome is a genetic disorder that also caused due to the presence of an additional copy of X chromosome resulting into a karyotype of 47, XXY. Such an individual has overall masculine development, however, the feminine development (development of breast, i.e., Gynaecomastia) is also expressed. Such individuals are sterile. Down syndrome was first described by Langdon down (1866). In this disorder affected individual is physically, psychomotorly and mentally retarded.

58) Identify the set of correct statements: A. The flowers of Vallisneria are colourful and produce nectar
B. The flowers of water lily are not pollinated by water.
C. In most of water-pollinated species, the pollen grains are protected from wetting.
D. Pollen grains of some hydrophytes are long and ribbon like.
E. In some hydrophytes, the pollen grains are carried passively inside water.

Choose the correct answer from the options given below

(a) C, D and E only (b) A, B, C and D only
(c) A, C, D and E only (d) B, C, D and E only

Ans- (d)

Expln:- Flowers of Vallisneria are not colourful and do not produce nectar. Waterlily is pollinated by insect or wind. In water-pollinated species, pollen grains are protected from wetting by a mucilaginous covering. In some hydrophytes such as Vallisneria pollen grains are carried passively by water current.

59) Assimilatory power is

a) $NADPH_2$ b) ATP
c) ATP and $NADPH_2$ d) $FADH_2$

Ans:- c; {Expln- The products of the light reaction are ATP, $NADPH_2$, and O_2. The oxygen is liberated from the plants. ATP and $NADPH_2$ are used in the dark reaction for the reduction of carbon dioxide to form carbohydrates (carbon assimilation). Hence, these products of light reaction (ATP and $NADPH_2$) are called assimilatory power.}

60) Eco RI cleaves the DNA strands to produce

a) Blunt ends b) sticky ends
c) satellite ends d) ori replication end

Ans:- b;

Expln- Eco RI comes from Escherichia coli RY 13. It is a sticky end type cutting restriction enzyme. It recognises the base sequence of G ↓ AATTC on the DNA strand and cleave at the site to produce DNA fragments. These fragments have sticky ends which can be joined easily with other fragment carrying complementary sticky ends.

61) Statement I:- Women are at the peak of conception on the 14^{th} day of ovulation.
Statement II:- Vasectomy is the method normally employed to avoid conception in females.

a) I is wrong, II is right
b) I is right, II is wrong
c) Both I and II are right
d) Both I and II wrong

Ans:- b;

Expln- Both LH and FSH hormones attain a peak level in the middle of menstrual cycle (about 14^{th} day). The rapid secretion of LH leading to maximum level during the mid-cycle called LH surge induces rupture of Graafian follicle and thereby releasing the ovum (ovulation)

It the ovum meets sperm during this time, conception can occur. Vasectomy is the contraception method used in males.

62) Which taxonomic term may be suggested for any rank in the classification?

a) Class b) order
c) Species d) Taxon

Ans:- d;

Expln- Each category of classification is a part of overall taxonomic arrangement, it is called taxonomic category.

Each taxonomic category referred to as a unit of classification and represent a rank and commonly termed as taxon (pl).

63) Which of the following is *not* the function of insulin?

a) increase the oxidation of glucose in the cells
b) increases the permeability of cell membrane to glucose
c) initiates the formation of hepatic glycogen from excess of glucose
d) initiates the conversion of glycogen to glucose

Ans:- d;

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆಯ್ದ ಸಂಘ–ಸಂಸ್ಥೆಗಳಿಗೆ ನೇರವಾಗಿ ಆರ್ಥಿಕ ನೆರವು

ಅರ್ಜಿಗಿಲ್ಲ ಮನ್ನಣೆ, ಶಿಫಾರಸಿಗೆ ಮಣೆ

• ವರುಣ ಹೆಗಡೆ


ಕನ್ನಡ ಭವನ

ಬೆಂಗಳೂರು: ಅನುದಾನದ ಕೊರತೆಯಿಂದಾಗಿ 2024–25ನೇ ಸಾಲಿನ 'ಧನಸಹಾಯ' ಯೋಜನೆಯಡಿ ಆರ್ಥಿಕ ನೆರವು ಒದಗಿಸದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿಫಾರಸುಗಳಿಗೆ ಮಣಿದು ಆಯ್ದ ಸಂಘ–ಸಂಸ್ಥೆಗಳಿಗೆ ಲಕ್ಷಾಂತರ ರೂಪಾಯಿ ಅನುದಾನ ನೀಡಿದೆ.

ನಾಡಿನ ಕಲೆ ಮತ್ತು ಸಂಸ್ಕೃತಿಯ ಸಂರಕ್ಷಣೆ ಹಾಗೂ ಸಂವರ್ಧನೆ 'ಧನಸಹಾಯ' ಯೋಜನೆಯ ಆಶಯವಾಗಿದೆ. ಸಾಂಸ್ಕೃತಿಕ ವಾತಾವರಣ ನಿರ್ಮಿಸಲು ಶ್ರಮಿಸುತ್ತಿರುವ ಸಂಘ–ಸಂಸ್ಥೆಗಳಲ್ಲಿ ಹೆಚ್ಚಿನವು ಇಲಾಖೆಯ ಧನಸಹಾಯವನ್ನು ನಂಬಿಕೊಂಡು, ವರ್ಷಪೂರ್ತಿ ಕಾರ್ಯಕ್ರಮಗಳನ್ನು ನಡೆಸುತ್ತವೆ. ಅಂತಹ ಕಲಾವಿದರಿಗೆ ವಾದ್ಯ ಪರಿಕರ ಮತ್ತು ವೇಷ ಭೂಷಣಗಳ ಖರೀದಿಗೆ ಈ ಯೋಜನೆ ಸಹಕಾರಿಯಾಗಿದೆ. ಯೋಜನೆಗೆ ನಿಗದಿತ ಅನುದಾನ ಇರದ ಕಾರಣ ಇಲಾಖೆಯು 2024–25ನೇ ಸಾಲಿಗೆ ಧನಸಹಾಯ ನೀಡುವ ಪ್ರಕ್ರಿಯೆ ನಡೆಸಿಲ್ಲ. ಆದರೆ, ಇದೇ ವೇಳೆ 60ಕ್ಕೂ ಅಧಿಕ ಸಂಘ–ಸಂಸ್ಥೆಗಳಿಗೆ ₹5 ಕೋಟಿಗೂ ಅಧಿಕ ಅನುದಾನವನ್ನು ನೇರವಾಗಿ ನೀಡಲಾಗಿದೆ.

ಅನುದಾನದ ಕೊರತೆಯಿಂದ ಇಲಾಖೆಯು 2023–24ನೇ ಸಾಲಿನ ಧನಸಹಾಯವನ್ನು ಇದೇ ಮೊದಲ ಬಾರಿ ನಾಲ್ಕು ಕಂತುಗಳಲ್ಲಿ ನೀಡಿತ್ತು. 2024–25ನೇ ಸಾಲಿನ ಧನಸಹಾಯವನ್ನು ಈ ಹಿಂದಿನಂತೆ ಒಂದೇ ಬಾರಿ ನೀಡಲಾಗುತ್ತದೆ ಎಂಬ ಭರವಸೆಯಲ್ಲಿ ಸಂಘ–ಸಂಸ್ಥೆಗಳು ಕಾರ್ಯಕ್ರಮಗಳನ್ನು ನಡೆಸಿದ್ದವು. ಆದರೆ, ಅನುದಾನ ನೀಡದಿದ್ದರಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ.

ಅರ್ಜಿ ಸಲ್ಲಿಸದಿದ್ದರೂ ಅನುದಾನ: ಧನಸಹಾಯ ಯೋಜನೆಯಡಿ ಅನುದಾನ ಪಡೆಯಲು ನೋಂದಾಯಿತ ಸಂಘ–ಸಂಸ್ಥೆಗಳು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು. ಜತೆಗೆ, ನಡೆಸಿರುವ ಕಾರ್ಯಕ್ರಮಗಳ ಬಗ್ಗೆ ಅಗತ್ಯ ದಾಖಲಾತಿಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಒದಗಿಸಬೇಕು. ಇಲಾಖೆಯ ವಲಯ ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಜಿಲ್ಲಾ ಸಮಿತಿಯು ಸಂಘ–ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ, ಅಗತ್ಯ ಅನುದಾನಕ್ಕೆ ಶಿಫಾರಸು ಮಾಡಲಿದೆ. ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುತ್ತಿರುವ ಸಂಘ– ಸಂಸ್ಥೆಗಳಿಗೆ ಮಾತ್ರ, ವಿಶೇಷ ಸಂದರ್ಭದಲ್ಲಿ ಆರ್ಥಿಕ ನೆರವು ನೀಡುವ ಅಧಿಕಾರ ಸರ್ಕಾರಕ್ಕಿದೆ ಎಂದು ಧನಸಹಾಯ ಮಾರ್ಗಸೂಚಿ ಹೇಳುತ್ತದೆ. ಈ ಅವಕಾಶದಡಿ ವಿವಿಧ ಸಂಘ–ಸಂಸ್ಥೆಗಳಿಗೆ ನೇರವಾಗಿ ₹92 ಲಕ್ಷ ಬಿಡುಗಡೆ ಮಾಡಿ ಆದೇಶ ಹೊರಡಿಸಿದ್ದ ಇಲಾಖೆ, ಪ್ರತ್ಯೇಕವಾಗಿಯೂ ಉತ್ಸವ, ಕಾರ್ಯಕ್ರಮಗಳಿಗೆ ಲಕ್ಷಾಂತರ ರೂಪಾಯಿ ನೀಡಿದೆ.

'ಅನುದಾನದ ಕೊರತೆ ಕಾರಣ ನೀಡಿ 2024–25ನೇ ಸಾಲಿನ ಧನಸಹಾಯ ಪ್ರಕ್ರಿಯೆ ನಡೆಸದ ಇಲಾಖೆ, ಪ್ರಭಾವಿಗಳು ಹಾಗೂ ಶಿಫಾರಸು ಪತ್ರ ತಂದವರಿಗೆ ಲಕ್ಷಾಂತರ ರೂಪಾಯಿ ಅನುದಾನ ನೀಡಿರುವುದು ವಿಪರ್ಯಾಸ. ಇದರಿಂದಾಗಿ ಧನಸಹಾಯ ಯೋಜನೆಯಲ್ಲಿ ಪಾರದರ್ಶಕತೆ ಮರೆಯಾಗಲಿದೆ. ಸರ್ಕಾರದ ಈ ರೀತಿಯ ನಡೆಯಿಂದ ನಿಯಮಿತವಾಗಿ ಸಾಂಸ್ಕೃತಿಕ ಚಟುವಟಿಕೆ ನಡೆಸುತ್ತಿರುವ ಸಂಘ–ಸಂಸ್ಥೆಗಳು ಧನಸಹಾಯ ಯೋಜನೆಯ ಬಗ್ಗೆ ವಿಶ್ವಾಸ ಕಳೆದುಕೊಳ್ಳುತ್ತಿವೆ' ಎಂದು ಕಲಾವಿದ ಜಯಸಿಂಹ ಎಸ್. ಬೇಸರ ವ್ಯಕ್ತಪಡಿಸಿದರು.

ತಲಾ ₹1 ಕೋಟಿ ನೆರವು



ರಾಜ್ಯದಲ್ಲಿ ಏಳು ಸಾವಿರಕ್ಕೂ ಅಧಿಕ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿವೆ. 'ಧನಸಹಾಯ' ಯೋಜನೆಯಡಿ ಅರ್ಜಿ ಸಲ್ಲಿಸುವ ನಾಲ್ಕು ಸಾವಿರಕ್ಕೂ ಹೆಚ್ಚು ಸಂಘ–ಸಂಸ್ಥೆಗಳಲ್ಲಿ ಒಂದು ಸಾವಿರದಿಂದ 1,500 ಸಂಘ–ಸಂಸ್ಥೆಗಳಿಗೆ ವಾರ್ಷಿಕ ಧನಸಹಾಯ ಒದಗಿಸಲಾಗುತ್ತಿತ್ತು. ಯೋಜನೆಯಡಿ ಗರಿಷ್ಠ ₹5 ಲಕ್ಷದವರೆಗೆ ಅನುದಾನ ಒದಗಿಸಲು ಮಾತ್ರ ಅವಕಾಶವಿದೆ. ಆದರೆ, ವಿಶೇಷ ಅಧಿಕಾರದಡಿ ಅಮೆರಿಕ ಕನ್ನಡ ಕೂಟಗಳ ಆಗರ (ಅಕ್ಕ) ನಡೆಸುವ 12ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ, ಟೊರಾಂಟೊದಲ್ಲಿರುವ ಕನ್ನಡ ಸಂಘದ ಸುವರ್ಣ ಸಮಾರಂಭಕ್ಕೆ ತಲಾ ₹1 ಕೋಟಿ ನೀಡಲಾಗಿದೆ. ಕರ್ನಾಟಕ ರಕ್ಷಣಾ ವೇದಿಕೆಯ 'ಹೆಸರಾಯಿತು ಕರ್ನಾಟಕ ಐವತ್ತರ ಸಂಭ್ರಮ' ಕಾರ್ಯಕ್ರಮಕ್ಕೆ ₹50 ಲಕ್ಷ ಒದಗಿಸಲಾಗಿದೆ.

'ವಿವೇಚನಾ ಅಧಿಕಾರದ ಅನುಸಾರ ಕೆಲ ಸಂಘ–ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಧನಸಹಾಯದ ಮಾರ್ಗಸೂಚಿಯಲ್ಲಿ ಇದಕ್ಕೆ ಅವಕಾಶ ಇದೆ. ಅನುದಾನದ ಕೊರತೆಯಿಂದ ಈ ಬಾರಿ ಧನಸಹಾಯ ಪ್ರಕ್ರಿಯೆ ನಡೆಸಿಲ್ಲ' ಎಂದು ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅಧಿಕ ನೆರವು ಪಡೆದ ಆಯ್ದ ಸಂಸ್ಥೆಗಳು

ಸಂಸ್ಥೆ	ಆರ್ಥಿಕ ನೆರವು
ಅಮೆರಿಕ ಕನ್ನಡ ಕೂಟಗಳ ಆಗರ, ಅಮೆರಿಕ	₹1 ಕೋಟಿ
ಕನ್ನಡ ಸಂಘ, ಕೆನಡಾ	₹1 ಕೋಟಿ
ಕರ್ನಾಟಕ ರಕ್ಷಣಾ ವೇದಿಕೆ, ಬೆಂಗಳೂರು	₹50 ಲಕ್ಷ
ಕರ್ನಾಟಕ ರಾಜ್ಯೋತ್ಸವ ಸಮಿತಿ, ಬೆಂಗಳೂರು	₹25 ಲಕ್ಷ
ಕಲಾ ಸಾಂಗತ್ಯ ಚಿಣ್ಣರ ಬಿಂಬ ಚಾರಿಟಬಲ್ ಟ್ರಸ್ಟ್	₹25 ಲಕ್ಷ
ಬಸವ ಕಲಾನಿಕೇತನ ಸಂಘ, ಬಾಗಲಕೋಟೆ	₹25 ಲಕ್ಷ
ಹಸ್ತಶಿಲ್ಪ ಟ್ರಸ್ಟ್, ಮಣಿಪಾಲ್	₹20 ಲಕ್ಷ
ನೊಣಬ ಲಿಂಗಾಯತ ಸಂಘ, ತುಮಕೂರು	₹15 ಲಕ್ಷ
ರಾಮಸೇವಾ ಮಂಡಳಿ, ರಾಮಸೇವಾ ಸೆಲೆಬ್ರೆಷನ್ ಟ್ರಸ್ಟ್	₹10 ಲಕ್ಷ
ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ, ಸುರತ್ಕಲ್	₹5 ಲಕ್ಷ
ಇಂಟರ್‌ನ್ಯಾಷನಲ್ ಪರ್ಫಾರ್ಮಿಂಗ್ ಆರ್ಟ್ಸ್ ಫೆಸ್ಟಿವಲ್ ಫೌಂಡೇಷನ್, ನವದೆಹಲಿ	₹5 ಲಕ್ಷ
ಚಿತ್ತರಗಿ ಚಿಜ್ಯೋತಿ ಸಾಂಸ್ಕೃತಿಕ ಕಲಾ ವೇದಿಕೆ ಹಾಗೂ ಕ್ರೀಡಾ ಯುವಕ ಸಂಘ, ಚಿತ್ರದುರ್ಗ	₹5 ಲಕ್ಷ

'ಪೋಕ್ಸೊ: ಬಿಎಸ್‌ವೈಗೆ ಅರಿವಿರಲಿಲ್ಲವೇ?'

ಒಂದನೇ ಪುಟದಿಂದ...

ಈ ಮಾತಿಗೆ ನ್ಯಾಯಪೀಠ, 'ಇಂತಹ ಅಹಿತಕರ ಘಟನೆಗಳಲ್ಲಿ ಭಾಗಿಯಾಗುವುದಕ್ಕೂ ಮುನ್ನ ಯಡಿಯೂರಪ್ಪ ಅವರಿಗೆ ಈ ಬಗ್ಗೆ ಅರಿವಿರಬೇಕಿತ್ತಲ್ಲವೇ' ಎಂದು ಅಸಮಾಧಾನ ವ್ಯಕ್ತಪಡಿಸಿತು. 'ಹಿರಿಯ ರಾಜಕೀಯ ನಾಯಕರು 'ಇಂತಹವು'ಗಳನ್ನೆಲ್ಲಾ ಮೀರಿ ನಡೆದುಕೊಳ್ಳಬೇಕು' ಎಂದು ಮೌಖಿಕವಾಗಿ ನುಡಿಯಿತು.

ಇದಕ್ಕೆ ಪ್ರತಿಕ್ರಿಯಿಸಿದ ನಾಗೇಶ್, 'ಆರೋಪದಲ್ಲಿ ಸ್ವಲ್ಪವಾದರೂ ಹುರುಳಿರಬೇಕು. ಆದರೆ, ಯಡಿಯೂರಪ್ಪ ವಿರುದ್ಧ ಮಾಡಲಾಗಿರುವ ಈ ಆರೋಪ ಸುಳ್ಳು' ಎಂದು ಸಮಜಾಯಿಷಿ ನೀಡಲು ಮುಂದಾದರು.

ಆಗ ಪೀಠವು, 'ಅರ್ಜಿದಾರರ ಪ್ರವಾಸ ನಿರ್ಬಂಧದಲ್ಲಿ ಸಡಿಲಿಕೆ ಮಾಡಬಹುದೇ ಎಂಬುದನ್ನು ಪರಿಶೀಲಿಸಿ' ಎಂದು ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್ ಅವರಿಗೆ ಸೂಚಿಸಿ, 'ಯಡಿಯೂರಪ್ಪ ಅವರಿಗೆ ವಿಧಿಸಲಾಗಿರುವ ಪ್ರವಾಸ ನಿರ್ಬಂಧ ಮುಂದುವರಿಯಲಿದೆ' ಎಂದು ವಿಚಾರಣೆ ಮುಂದೂಡಿತು.

'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012 (ಪೋಕ್ಸೊ) ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಂಜ್ಞೇಯ ಅಪರಾಧ ಎಂದು ಪರಿಗಣಿಸಿರುವುದನ್ನು ರದ್ದುಪಡಿಸಬೇಕು. ಸಂಜ್ಞೇಯ ಅಪರಾಧದ ಬಗ್ಗೆ ಹೊಸದಾಗಿ ಪರಿಗಣಿಸುವಂತೆ ಹೊರಡಿಸಲಾಗಿದ್ದ ಆದೇಶದಲ್ಲಿ ಕೆಲವೊಂದು ಕಾನೂನು ಅಂಶಗಳನ್ನು ಸ್ಪಷ್ಟಪಡಿಸಬೇಕು' ಎಂದು ಯಡಿಯೂರಪ್ಪ ಕೋರಿದ್ದಾರೆ.

ಸರ್ಕಾರದ ಅಕ್ರಮ: ಟನ್‌ಗಟ್ಟಲೇ ದಾಖಲೆ– ಎಚ್‌ಡಿಕೆ

'ಅಭಿವೃದ್ಧಿ ಕೆಲಸಕ್ಕೆ ಅಡ್ಡಿ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕಾಂಗ್ರೆಸ್ ಸರ್ಕಾರ ದ್ವೇಷ ರಾಜಕಾರಣ ಮಾಡುತ್ತಿದ್ದು, ಹೆಜ್ಜೆ–ಹೆಜ್ಜೆಗೂ ಅಡ್ಡಿಪಡಿಸುತ್ತಿದೆ. ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಮಾಡಲು ಬಿಡುತ್ತಿಲ್ಲ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ನಗರದಲ್ಲಿ ಸೋಮವಾರ ಮಾಧ್ಯಮ ದವರೊಂದಿಗೆ ಮಾತನಾಡಿ, 'ರಾಜ್ಯದ ಕಾಂಗ್ರೆಸ್ ಸರ್ಕಾರದ ಅಕ್ರಮ ಮತ್ತು ಅಧಿಕಾರ ದುರುಪಯೋಗಗಳ ಬಗ್ಗೆ ನನ್ನ ಬಳಿ ಟನ್‌ಗಟ್ಟಲೇ ದಾಖಲೆಗಳಿರುವು ದರಿಂದಲೇ, ಸರ್ಕಾರ ನನ್ನ ಮೇಲೆ ಯುದ್ಧ ಶುರು ಮಾಡಿ, ಸುಮ್ಮನಾಗಿಸಲು ಪ್ರಯತ್ನಿಸುತ್ತಿದೆ' ಎಂದು ಹೇಳಿದರು.

'ಕರ್ನಾಟಕ ಸಿ.ಡಿ, ಪೆನ್‌ಡ್ರೈವ್ ತಯಾರಿಸುವ ರಾಜ್ಯವಾಗಿದೆ ಎಂದು ಕಾಂಗ್ರೆಸ್ ಸಚಿವರೇ ಹೇಳಿದ್ದಾರೆ. ಆ ಬಗ್ಗೆ ಯಾವ ತನಿಖೆ ಮಾಡಿದ್ದೀರಾ ಪರಮೇಶ್ವರ ಅವರೇ? ಸಿದ್ದರಾಮಯ್ಯಗೆ ಮಾಹಿತಿ ಇಲ್ಲವಾ?, ಯಾರ ಮನೆ ಮೇಲೆ ದಾಳಿ ಮಾಡಿಸಿದರು, ಏನೇನು ಸಿಕ್ಕಿತ್ತು, ಏಕೆ ಸುಪಾರಿ ಕೊಟ್ಟರು?, ತನಿಖೆ ನಡೆಸಿ ಸತ್ಯ ಹೊರ ತರುತ್ತಾರಾ?' ಎಂದು ಪ್ರಶ್ನಿಸಿದರು.



ಬಿಜೆಪಿಯವರು ಪಕ್ಷ ಸಂಘಟನೆಗಾಗಿ ಪ್ರತಿಭಟಿಸುತ್ತಿದ್ದಾರೆ. ನಾವೂ ಸಂಘಟನೆಗಾಗಿ ಹೋರಾಡುತ್ತಿದ್ದೇವೆ. ನಮ್ಮ ನಡುವೆ ಸಮನ್ವಯ ಕೊರತೆ ಆಗದಂತೆ ನೋಡಿಕೊಳ್ಳಬೇಕು

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

'ಮಾಜಿ ಪ್ರಧಾನಮಂತ್ರಿ ಮಗ, ಎರಡು ಬಾರಿ ಸಿಎಂ, ಕೇಂದ್ರ ಮಂತ್ರಿಯಾಗಿ ನಾನು ಒತ್ತುವರಿ ಮಾಡಲು ಸಾಧ್ಯವೇ? ಕಂದಾಯ ಪ್ರಕರಣಕ್ಕೆ ಡಿವೈಎಸ್‌ಪಿ ತನಿಖಾಧಿಕಾರಿ ಮಾಡಿದ್ದು ಇತಿಹಾಸದಲ್ಲೇ ಮೊದಲು. ನನಗೇ ಈ ಪರಿಸ್ಥಿತಿ ತಂದವರು ಇನ್ನೆಷ್ಟು ಮನೆಗಳನ್ನು ಹಾಳು ಮಾಡಿದ್ದೀರಿ' ಎಂದು ಕೇಳಿದರು.

ಮಂಡ್ಯಕ್ಕೆ ವೈದ್ಯಕೀಯ ಕಾಲೇಜು, ರಸ್ತೆ ಸಾರಿಗೆ ವಿಭಾಗ ಬರಲು ತಾವೇ ಕಾರಣವೆಂದಿರುವ ಸಚಿವ ಎನ್. ಚಲುವರಾಯಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, 'ಆ ಜೋಕರ್‌ಗೆ ನಾನು ಉತ್ತರಿಸಬೇಕಾ. ಐಟಿ ಬಗ್ಗೆಯೂ ಹೇಳಿದ್ದಾರೆ. ಐಟಿ ಎಂದರೆ ಏನೆಂದು ಗೊತ್ತಾ' ಎಂದರು.

'2004ರಲ್ಲಿ ಅವರು ನನ್ನಿಂದ ಸಚಿವರಾದರು. ಪಾಪ, ನನ್ನನ್ನು ಮುಖ್ಯಮಂತ್ರಿ ಮಾಡಿದವರು ಅವರೇ ಅಲ್ಲವೇ. ಸಚಿವರಾಗುವ ಮುಂಚೆ ಏನೇನಾಯ್ತು ನೆನಪಿಸಿಕೊಳ್ಳಪ್ಪ. ನನ್ನ ಆರೋಗ್ಯ ಕೆಟ್ಟಿದ್ದೇ ಇಂಥವರ ಸಹವಾಸದಿಂದ. ಕೆರೆ ನುಂಗಿ ಅಣ್ಣನ ಹೆಸರಿಗೆ ರಿಜಿಸ್ಟರ್ ಮಾಡಿಸಿ, ಗಿಫ್ಟ್ ಪಡೆಯುವವರು ನನ್ನ ಬಗ್ಗೆ ಮಾತನಾಡುತ್ತೀರಾ' ಎಂದು ಕೇಳಿದರು.

ತಲೆಮರೆಸಿಕೊಂಡ ತೆನ್ನಿರ ಮೈನಾ

ಬೆಂಗಳೂರು: ಕೊಡಗು ಜಿಲ್ಲೆಯ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಅವರ ಆತ್ಮಹತ್ಯೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಹೆಣ್ಣೂರು ಠಾಣೆ ಪೊಲೀಸರು, ವಿಚಾರಣೆಗೆ ಹಾಜರಾಗುವಂತೆ ಪ್ರಕರಣದ ಆರೋಪಿ ತೆನ್ನಿರ ಮೈನಾ ಅವರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

'ಏಳು ದಿನಗಳ ಒಳಗೆ ವಿಚಾರಣೆಗೆ ಬಂದು ಪ್ರಕರಣದ ಕುರಿತು ವಿವರಣೆ ನೀಡಬೇಕು' ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ ಎಂದು ಗೊತ್ತಾಗಿದೆ. ಮತ್ತೊಂದೆಡೆ ಆರೋಪಿ ತೆನ್ನಿರ ಮೈನಾ ಅವರು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ವಿನಯ್ ಅವರ ಮೊಬೈಲ್, ಲ್ಯಾಪ್‌ಟಾಪ್ ಹಾಗೂ ಮರಣ ಪತ್ರವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗಿತ್ತು. ತಜ್ಞರು ಪರಿಶೀಲನೆ ನಡೆಸಿ ಕೆಲವೇ ದಿನಗಳಲ್ಲಿ ವರದಿ ಸಲ್ಲಿಸಲಿದ್ದಾರೆ. ವರದಿ ಬಂದ ಬಳಿಕ ವಿನಯ್ ಅವರು ಮರಣ ಪತ್ರ ಹಾಕಿದ್ದು ಯಾವ ಗ್ರೂಪ್‌ಗೆ ಎಂಬುದು ಗೊತ್ತಾಗಲಿದೆ. ವಿನಯ್ ಕೊನೆಯದಾಗಿ ಯಾರಿಗೆ ಸಂದೇಶ ಕಳುಹಿಸಿದ್ದರು. ಕೊನೆಯ ದಿನ ಯಾವೆಲ್ಲ ಸ್ಥಳಕ್ಕೆ ಭೇಟಿ ನೀಡಿದ್ದರು ಎಂಬುದು ಗೊತ್ತಾಗಲಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮುಳ್ಳಯ್ಯನಗಿರಿ ಸಂಚಾರ 2 ತಿಂಗಳು ನಿಷೇಧ

ಚಿಕ್ಕಮಗಳೂರು: ಸೀತಾಳಯ್ಯನಗಿರಿಯಿಂದ ಮುಳ್ಳಯ್ಯನಗಿರಿ ತನಕ ಕಾಂಕ್ರೀಟ್‌ರಸ್ತೆ ಮತ್ತು ಮೋರಿ ನಿರ್ಮಾಣ ಕಾಮಗಾರಿ ಆರಂಭವಾಗಿದ್ದು, ಎರಡು ತಿಂಗಳು ಎಲ್ಲಾ ವಾಹನಗಳ ಸಂಚಾರ ನಿಷೇಧಿಸಿ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಆದೇಶ ಹೊರಡಿಸಿದ್ದಾರೆ.

'ಕಿರಿದಾದ ರಸ್ತೆಯಲ್ಲಿ ಪ್ರವಾಸಿ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಿದ್ದು ರಸ್ತೆ ಅಗಲಗೊಳಿಸುವುದು ಅವಶ್ಯವಾಗಿದೆ ಎಂದು ಉಪ ವಿಭಾಗಾಧಿಕಾರಿ ವರದಿ ಸಲ್ಲಿಸಿದ್ದಾರೆ. ಹಾಗಾಗಿ ರಸ್ತೆ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ವಾಹನ ಸಂಚಾರ ಸಾಧ್ಯವಿಲ್ಲದ ಕಾರಣ ನಿಷೇಧಿಸಲಾಗಿದೆ' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

2ನೇ ವಿಮಾನ ನಿಲ್ದಾಣ ಸ್ಥಳ ಪರಿಶೀಲನೆ ಇಂದು



ಬೆಂಗಳೂರು: ನಗರದ ಸಮೀಪ ಎರಡನೇ ವಿಮಾನ ನಿಲ್ದಾಣಕ್ಕೆ ಸೂಕ್ತ ಸ್ಥಳ ಗುರುತಿಸಲು ಬಂದಿರುವ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ಅಧಿಕಾರಿಗಳ ತಂಡವು ಕನಕಪುರ ರಸ್ತೆಯ ಎರಡು ಮತ್ತು ನೆಲಮಂಗಲ-ಕುಣಿಗಲ್ ರಸ್ತೆಯ ಒಂದು ಸ್ಥಳಕ್ಕೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಲಿದೆ.

ಉದ್ದೇಶಿತ ಮೂರು ಸ್ಥಳಗಳ ಮಾಹಿತಿಯನ್ನು ಈ ತಂಡಕ್ಕೆ ಕರ್ನಾಟಕ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಖುಷ್ಬು ಗೋಯಲ್ ಅವರು ಸೋಮವಾರ ನೀಡಿದರು. ತಂಡವು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರನ್ನು ಬುಧವಾರ ಭೇಟಿ ಮಾಡಿ ಚರ್ಚೆ ನಡೆಸಲಿದೆ.

ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಕನಕಪುರ ರಸ್ತೆ ಕಡೆಯಿಂದ ಸ್ಥಳ ವೀಕ್ಷಣೆ ಆರಂಭಿಸಲಿರುವ ಎಎಐ ತಂಡವು ಬಳಿಕ ನೆಲಮಂಗಲಕ್ಕೆ ತೆರಳಲಿದೆ.

ಸ್ಥಳ ಪರಿಶೀಲಿಸಿದ ತಕ್ಷಣ ಓಕೆ ಎನ್ನುವುದಿಲ್ಲ: 'ಕೇಂದ್ರದ ತಂಡ ಸ್ಥಳಗಳ ಪರಿಶೀಲಿಸಿದ ತಕ್ಷಣ ಓಕೆ ಎನ್ನುವುದಿಲ್ಲ. ಅದರ ಅನುಕೂಲ ನೋಡಬೇಕಾಗುತ್ತದೆ' ಎಂದು ಎಂ.ಬಿ. ಪಾಟೀಲ ತಿಳಿಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಪಾಟೀಲ, 'ಬೆಳಗಾವಿ, ಹುಬ್ಬಳ್ಳಿ ನಡುವೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾಡಬೇಕೆಂಬ ಒತ್ತಾಯವಿದೆ. ಆ ಭಾಗದಿಂದಲೇ ನೇರವಾಗಿ ವಿದೇಶಗಳಿಗೆ ಹೋಗಲು ನಿಲ್ದಾಣ ಮಾಡಬೇಕಿದೆ' ಎಂದರು.

ಶಿರಾ-ಚಿತ್ರದುರ್ಗ ನಡುವೆ ಜಿಲ್ಲಾ ವಿಮಾನ ನಿಲ್ದಾಣ: ಎರಡನೇ ವಿಮಾನ ನಿಲ್ದಾಣ ವಿಚಾರವಾಗಿ ಟಿ.ಬಿ. ಜಯಚಂದ್ರ ನೇತೃತ್ವದಲ್ಲಿ 33 ಶಾಸಕರ ಸಹಿ ಸಂಗ್ರಹದ ವಿಚಾರವಾಗಿ ಮಾತನಾಡಿದ ಅವರು, 'ಜಯಚಂದ್ರ ನಮ್ಮ ಪಕ್ಷದ ಹಿರಿಯ ನಾಯಕರು. ಇದು ಜಿಲ್ಲಾ ವಿಮಾನ ನಿಲ್ದಾಣ ಅಲ್ಲ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ. ನಾನೂ ಅವರಿಗೆ ಇದನ್ನು ಹೇಳಿದ್ದೇನೆ. ಶಿರಾ-ಚಿತ್ರದುರ್ಗ ನಡುವೆ ಜಿಲ್ಲಾ ವಿಮಾನ ನಿಲ್ದಾಣ ಆಗಲಿದೆ' ಎಂದರು.

ಕೆಪಿಎಸ್‌ಸಿ: ನೀಲಿ ಬಾಲ್ ಪಾಯಿಂಟ್ ಪೆನ್ನು ಕಡ್ಡಾಯ



ಬೆಂಗಳೂರು: ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಗ್ರೂಪ್ 'ಎ' ವೃಂದದ ಸಹಾಯಕ ನಿಯಂತ್ರಕರು (ಹೈದರಾಬಾದ್ ಕರ್ನಾಟಕ ವೃಂದ) 15 ಹುದ್ದೆಗಳ ನೇಮಕಾತಿಗೆ ನಡೆಯಲಿರುವ ಮುಖ್ಯ ಪರೀಕ್ಷೆಯಲ್ಲಿ ನೀಲಿ ಬಾಲ್ ಪಾಯಿಂಟ್ ಪೆನ್ನು ಬಳಕೆಯನ್ನು ಕೆಪಿಎಸ್‌ಸಿ ಕಡ್ಡಾಯಗೊಳಿಸಿದೆ.

ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯ ಮುಖಪುಟದಲ್ಲಿರುವ ವಿವರಗಳನ್ನು ನೀಲಿ ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ಭರ್ತಿ ಮಾಡಬೇಕು. ಬ್ಲೇಡ್, ರಬ್ಬರ್ ಅಥವಾ ವೈಟ್ನರ್ ಉಪಯೋಗಿಸಿ ತಿದ್ದುಪಡಿ ಮಾಡಲು ಅವಕಾಶ ಇಲ್ಲ. ತಿದ್ದುಪಡಿ ಮಾಡಿದರೆ ಅಂತಹ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯನ್ನು ಅಸಿಂಧುಗೊಳಿಸಲಾಗುವುದು ಎಂದೂ ಎಚ್ಚರಿಕೆ ನೀಡಿದೆ.

ಪರೀಕ್ಷಾ ಸಮಯದಲ್ಲಿಯೂ ನೀಲಿ ಬಾಲ್ ಪಾಯಿಂಟ್ ಪೆನ್ನು ಹೊರತುಪಡಿಸಿ ಯಾವುದೇ ಕಾರಣಕ್ಕೂ ಬೇರೆ ಬಣ್ಣಗಳ ಶಾಯಿಯ ಪೆನ್ನು ಬಳಸಬಾರದು. ಹೈಲೈಟರ್ ಕೂಡಾ ಬಳಸಬಾರದು ಎಂದು ಕೆಪಿಎಸ್‌ಸಿ ತಿಳಿಸಿದೆ.

ಗುರುರಾಜ ಕುಲಕರ್ಣಿಗೆ 'ಛಂದ ಪುಸ್ತಕ ಬಹುಮಾನ'

ಬೆಂಗಳೂರು: 'ಛಂದ ಪುಸ್ತಕ' ಪ್ರತಿ ವರ್ಷ ಹಸ್ತಪ್ರತಿಗೆ ನೀಡುವ 'ಛಂದ ಪುಸ್ತಕ ಬಹುಮಾನ'ಕ್ಕೆ ಈ ಬಾರಿ ಗದಗ ಜಿಲ್ಲೆಯ ನರಗುಂದದ ಗುರುರಾಜ ಕುಲಕರ್ಣಿ ಅವರ ಕಥೆಗಳು ಆಯ್ಕೆಯಾಗಿವೆ.

70 ಕಥೆಗಾರರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಕಥೆಗಾರ್ತಿ ವಸುಮತಿ ಉಡುಪ ಆಯ್ಕೆಗಾರರಾಗಿದ್ದರು. ಬೆಂಗಳೂರಿನಲ್ಲಿ ನೆಲಸಿ ಮೈಕ್ರೋಚಿಪ್ ವಿನ್ಯಾಸಕಾರರಾಗಿ ಕೆಲಸ ಮಾಡುತ್ತಿರುವ ಗುರುರಾಜ ಕುಲಕರ್ಣಿ ಅವರ ಕಥೆಗಳು ಆಯ್ಕೆಯಾಗಿದ್ದು, ₹40 ಸಾವಿರ ಬಹುಮಾನ, ಫಲಕ, ಪ್ರಶಸ್ತಿ ಪತ್ರ ನೀಡಲಾಗುವುದು. ಜುಲೈಯಲ್ಲಿ ಪುಸ್ತಕವಾಗಿ ಪ್ರಕಟಣೆ ಮಾಡಲಾಗುವುದು.


ಗುರುರಾಜ ಕುಲಕರ್ಣಿ

ದೀಪಾ ಹಿರೇಗುತ್ತಿ, ಸಣ್ಣಳ್ಳಿ ಹನುಮಂತ, ಕುಸುಮಾ ಆಯರಹಳ್ಳಿ, ಶ್ರೀಧರ ಹೆಗಡೆ, ಮೋಹನಕುಮಾರ ಬಣಕಾರ, ಶೀಲಾ ಪೈ ಅವರ ಕಥೆಗಳು ಮೆಚ್ಚುಗೆ ಪಡೆದಿದ್ದು, ಪ್ರಶಸ್ತಿ ಫಲಕ ಮತ್ತು ತಲಾ ₹2,000 ಬಹುಮಾನ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

ರಾಜ್ಯ ಅಧ್ಯಕ್ಷ ಸ್ಥಾನಕ್ಕೆ ಭಾನುಪ್ರಕಾಶ್ ಶರ್ಮ, ರಘುನಾಥ್ ಪೈಪೋಟಿ

ಬ್ರಾಹ್ಮಣ ಸಂಘದ ಚುನಾವಣೆ: ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಕ್ಕೆ (ಎಕೆಬಿಎಂಎಸ್) ಇದೇ 13ರಂದು ಚುನಾವಣೆ ನಡೆಯಲಿದ್ದು, ಪ್ರಚಾರ ಬಿರುಸುಗೊಂಡಿದೆ.

ಈ ಬಾರಿ ವೈದಿಕ ವಿದ್ವಾಂಸ ಭಾನುಪ್ರಕಾಶ್ ಶರ್ಮ ಹಾಗೂ ಕಳೆದ ಚುನಾವಣೆಯಲ್ಲಿ ಸ್ಪರ್ಧಿಸಿ ಕಡಿಮೆ ಅಂತರದಲ್ಲಿ ಪರಾಭವಗೊಂಡಿದ್ದ ಎಸ್. ರಘುನಾಥ್ ಅವರು ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಾಗಿ ಕಣದಲ್ಲಿದ್ದಾರೆ.

ಇಲ್ಲಿವರೆಗೆ ಎಕೆಬಿಎಂಎಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಉದ್ಯಮಿಗಳು, ರಾಜಕಾರಣಿಗಳು, ಅಧಿಕಾರಿ ವರ್ಗದವರು ಸ್ಪರ್ಧಿಸುತ್ತಿದ್ದರು. ಇದೇ ಮೊದಲ ಬಾರಿಗೆ ವೈದಿಕ ವಿದ್ವಾಂಸರೊಬ್ಬರು ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಎಕೆಬಿಎಂಎಸ್ ಹಾಲಿ ಅಧ್ಯಕ್ಷ ಹಾಗೂ ವಕೀಲ ಅಶೋಕ ಹಾರನಹಳ್ಳಿ ಅವರ ಬೆಂಬಲದೊಂದಿಗೆ ಶ್ರೀರಂಗಪಟ್ಟಣದ ಭಾನುಪ್ರಕಾಶ್ ಶರ್ಮ ಸ್ಪರ್ಧಿಸಿದ್ದಾರೆ. ಮೂರು ದಶಕಗಳಿಂದ ಮಹಾಸಭಾ ಸದಸ್ಯರಾಗಿ, ಮೂರು ಬಾರಿ ಉಪಾಧ್ಯಕ್ಷರಾಗಿದ್ದರು.



ಸಮುದಾಯದ ಶೈಕ್ಷಣಿಕ ಕೇಂದ್ರಗಳು, ಆಸ್ಪತ್ರೆ ನಿರ್ಮಾಣದ ಮೂಲಕ ಸಂಘಟನೆಗೆ ಆದ್ಯತೆ ನೀಡಲಾಗುತ್ತದೆ. ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ

ಎಸ್. ರಘುನಾಥ್, ಅಭ್ಯರ್ಥಿ



ಸಂಘಟನೆ, ಸ್ವಾವಲಂಬನೆ, ಸಂಸ್ಕಾರದ ಮೂಲಕ ಸಮುದಾಯದ ಅಭಿವೃದ್ಧಿಯ ಸಂಕಲ್ಪ ಮಾಡಿದ್ದೇನೆ. ಎಲ್ಲೆಡೆಯಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ

ಭಾನುಪ್ರಕಾಶ್ ಶರ್ಮ, ಅಭ್ಯರ್ಥಿ

ಉದ್ಯಮಿ ಆಗಿರುವ ಎಸ್. ರಘುನಾಥ್ ಅವರು ಬೆಂಗಳೂರು ನಗರದ ಬಿಜೆಪಿ ಸಂಘಟನಾ ಕಾರ್ಯದರ್ಶಿಯಾಗಿದ್ದವರು. ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ಸಂಘಟನೆಯಲ್ಲಿ ಸಕ್ರಿಯರಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದ ಲಕ್ಷ್ಮೀಕಾಂತ ಮತ್ತು ಅವರ ತಂಡ, ಈ ಬಾರಿ ರಘುನಾಥ್ ಅವರನ್ನು ಬೆಂಬಲಿಸಿದೆ. ಹೀಗಾಗಿ ಈ ಚುನಾವಣೆ ಎರಡು ತಂಡಗಳ ನಡುವಿನ ಪೈಪೋಟಿಯ ಅಖಾಡವಾಗಿದೆ.

ಇಬ್ಬರೂ ಅಭ್ಯರ್ಥಿಗಳು ತಮ್ಮ ಬೆಂಬಲಿಗರೊಂದಿಗೆ ರಾಜ್ಯದಾದ್ಯಂತ ಬಿರುಸಿನ ಪ್ರವಾಸ ಕೈಗೊಂಡಿದ್ದಾರೆ. ಜಿಲ್ಲಾ ಘಟಕದ ಅಧ್ಯಕ್ಷರು, ಪದಾಧಿಕಾರಿಗಳನ್ನು ಭೇಟಿಯಾಗಿ, ಸರಣಿ ಸಭೆಗಳನ್ನು ನಡೆಸುತ್ತಿದ್ದಾರೆ. ಸುದ್ದಿಗೋಷ್ಠಿಗಳ ಮೂಲಕ ಮತಯಾಚಿಸುತ್ತಿದ್ದಾರೆ.

ಈ ಬಾರಿ ರಾಜ್ಯಾಧ್ಯಕ್ಷರ ಆಯ್ಕೆ ಜೊತೆಗೆ, ಪ್ರತಿ ಜಿಲ್ಲೆಯ ಪ್ರತಿನಿಧಿಯ ಆಯ್ಕೆಗೂ ಚುನಾವಣೆ ನಡೆಯುತ್ತಿದೆ. ಈಗಾಗಲೇ 10 ಜಿಲ್ಲಾ ಪ್ರತಿನಿಧಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ ಕಡೆ ಚುನಾವಣೆ ನಡೆಯಲಿದೆ.

ಈ ಚುನಾವಣೆಯಲ್ಲಿ 66,000 ಮತದಾರರಿದ್ದಾರೆ. ಕಳೆದ ಚುನಾವಣೆಯಲ್ಲಿ ಅಶೋಕ ಹಾರನಹಳ್ಳಿ, ರಘುನಾಥ್ ಮತ್ತು ಲಕ್ಷ್ಮೀಕಾಂತ ಕಣದಲ್ಲಿದ್ದರು. ಸುಮಾರು 11 ಸಾವಿರ ಮತಗಳು ಚಲಾವಣೆಯಾಗಿದ್ದವು. ರಘುನಾಥ್ ಅವರು 447 ಮತಗಳ ಅಂತರದಲ್ಲಿ ಪರಾಭವಗೊಂಡಿದ್ದರು.

ಕಳೆದ ಚುನಾವಣೆ ವಿವರ

ಮತದಾರರ ಸಂಖ್ಯೆ	41,500
ಮತ ಚಲಾವಣೆಯಾಗಿದ್ದು	10,400
ಅಶೋಕ ಹಾರನಹಳ್ಳಿ	4,450
ಎಸ್.ರಘುನಾಥ	4,000
ಲಕ್ಷ್ಮೀಕಾಂತ	1,950

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಯಾವುದೂ ಶಾಶ್ವತ ಅಲ್ಲ. ಮೃತ್ಯು ಒಂದೇ ಸತ್ಯ. ಹೀಗಿರುವಾಗ, ಅತಿ ಚಿಂತೆಯಿಂದ ಆಗುವ ಪ್ರಯೋಜನವಾದರೂ ಏನು?

-ಡಿ.ವಿ.ಜಿ.

ನ್ಯಾಯಮೂರ್ತಿಗಳ ಆಸ್ತಿ ಘೋಷಣೆ ಸಕಾಲದಲ್ಲಿ ಕೈಗೊಂಡ ಸೂಕ್ತ ನಿರ್ಣಯ

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳು ತಮ್ಮ ಆಸ್ತಿಯ ವಿವರವನ್ನು ಬಹಿರಂಗಪಡಿಸಬೇಕು ಎಂಬ ತೀರ್ಮಾನವನ್ನು ಕೋರ್ಟ್‌ನ ಪೂರ್ಣಪೀಠವು ತೆಗೆದುಕೊಂಡಿರುವುದು ಸ್ವಾಗತಾರ್ಹ. ನ್ಯಾಯಮೂರ್ತಿ ಯಶವಂತ್ ವರ್ಮಾ ಅವರು ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಆಗಿದ್ದಾಗ ಅವರ ಅಧಿಕೃತ ನಿವಾಸದಲ್ಲಿ ನೋಟಿನ ಕಂತೆಗಳು ಅರ್ಧ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದು ವರದಿಯಾದ ನಂತರದಲ್ಲಿ ಪೂರ್ಣಪೀಠವು ಈ ತೀರ್ಮಾನ ಕೈಗೊಂಡಿದೆ. ನ್ಯಾಯಮೂರ್ತಿ ವರ್ಮಾ ಅವರನ್ನು ಈಗ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿದೆ. ಅವರ ಅಧಿಕೃತ ನಿವಾಸದಲ್ಲಿ ನೋಟುಗಳ ಕಂತೆಗಳು ದೊರೆತ ವರದಿಗಳು ಹಲವು ಪ್ರಶ್ನೆಗಳನ್ನು ಮೂಡಿಸಿವೆ. ಪೂರ್ಣಪೀಠ ಈಗ ಕೈಗೊಂಡಿರುವ ತೀರ್ಮಾನದ ಪ್ರಕಾರ, ನ್ಯಾಯಮೂರ್ತಿಗಳು ತಮ್ಮ ಆಸ್ತಿಯ ವಿವರಗಳನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗೆ (ಸಿಜೆಐ) ಸಲ್ಲಿಸಬೇಕಿದೆ. ನ್ಯಾಯಮೂರ್ತಿಗಳು ಗಣನೀಯ ಮೌಲ್ಯದ ಯಾವುದೇ ಆಸ್ತಿಯನ್ನು ಖರೀದಿಸಿದರೆ ಅದರ ಬಗ್ಗೆಯೂ ವರದಿ ನೀಡಬೇಕಾಗುತ್ತದೆ. ಪೂರ್ಣಪೀಠದ ತೀರ್ಮಾನವು ಸಿಜೆಐ ಅವರಿಗೂ ಅನ್ವಯವಾಗುತ್ತದೆ. ಆದರೆ, ನ್ಯಾಯಮೂರ್ತಿಗಳ ಆಸ್ತಿ-ಹೊಣೆಯ ವಿವರಗಳನ್ನು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು ಕಡ್ಡಾಯವಲ್ಲ; ಅದು ಐಚ್ಛಿಕವಾಗಿರುತ್ತದೆ. ವರದಿಗಳ ಪ್ರಕಾರ, ಸಿಜೆಐ ಸಂಜೀವ್ ಖನ್ನಾ ಸೇರಿದಂತೆ ಮೂವತ್ತು ಮಂದಿ ನ್ಯಾಯಮೂರ್ತಿಗಳು ತಮ್ಮ ಆಸ್ತಿಯ ವಿವರಗಳನ್ನು ಈಗಾಗಲೇ ಘೋಷಿಸಿದ್ದಾರೆ.



ನ್ಯಾಯಾಂಗದಲ್ಲಿ ಇನ್ನಷ್ಟು ಹೆಚ್ಚು ಪಾರದರ್ಶಕತೆ ಹಾಗೂ ಉತ್ತರದಾಯಿತ್ವ ತರಲು ಕ್ರಮ ಕೈಗೊಳ್ಳಬೇಕಾದ ಅಗತ್ಯ ಇದೆ

ನ್ಯಾಯಮೂರ್ತಿಗಳು ತಮ್ಮ ಆಸ್ತಿಯ ವಿವರವನ್ನು ಘೋಷಿಸಬೇಕು ಎಂಬ ವಿಚಾರವು ಹಲವು ವರ್ಷಗಳಿಂದ ಚರ್ಚೆಯಲ್ಲಿದೆ. 1997ರಲ್ಲಿ ಒಂದು ನಿರ್ಣಯ ಕೈಗೊಂಡಿದ್ದ ಸುಪ್ರೀಂ ಕೋರ್ಟ್, ಎಲ್ಲ ನ್ಯಾಯಮೂರ್ತಿಗಳು ತಮ್ಮ ಆಸ್ತಿಯ ವಿವರವನ್ನು ಸಿಜೆಐ ಅವರಿಗೆ ಸಲ್ಲಿಸಬೇಕು ಎಂದು ಶಿಫಾರಸು ಮಾಡಿತ್ತು. ಹೈಕೋರ್ಟ್‌ನ ನ್ಯಾಯಮೂರ್ತಿಗಳು ಈ ವಿವರವನ್ನು ತಾವು ಕರ್ತವ್ಯ ನಿರ್ವಹಿಸುವ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರಿಗೆ ಸಲ್ಲಿಸಬೇಕಿತ್ತು. ಆದರೆ ಇದು ನ್ಯಾಯಾಂಗದ ಪರಿಶೀಲನೆಗೆ ಮಾತ್ರ ಲಭ್ಯವಾಗಿರುತ್ತಿತ್ತು, ವಿವರಗಳನ್ನು ಸಾರ್ವಜನಿಕರ ಗಮನಕ್ಕೆ ತರುವ ಪ್ರಸ್ತಾವ ಆ ಶಿಫಾರಸಿನಲ್ಲಿ ಇರಲಿಲ್ಲ. ಆ ಶಿಫಾರಸು ಕೂಡ, ವಿವರ ಸಲ್ಲಿಸುವುದು ಐಚ್ಛಿಕವಾಗಿರುತ್ತದೆ, ವಿವರಗಳನ್ನು ಗೋಪ್ಯವಾಗಿ ಇರಿಸಲಾಗುತ್ತದೆ ಎಂದು ಹೇಳಿತ್ತು. 2005ರ ಮಾಹಿತಿ ಹಕ್ಕು ಕಾಯ್ದೆಯು 'ಸಾರ್ವಜನಿಕ ಹಿತಾಸಕ್ತಿ ಇಲ್ಲದಿದ್ದರೆ' ವೈಯಕ್ತಿಕ ಮಾಹಿತಿಯನ್ನು ಸಾರ್ವಜನಿಕಗೊಳಿಸುವುದು ಅಗತ್ಯವಿಲ್ಲ ಎನ್ನುತ್ತದೆ. ಹೀಗಾಗಿ, ಆಸ್ತಿ ಘೋಷಣೆಯು ಕಡ್ಡಾಯ ಅಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಆಸ್ತಿ ವಿವರವನ್ನು ಬಹಿರಂಗಪಡಿಸುವ ಅಗತ್ಯ ಇಲ್ಲದಿದ್ದಾಗ, ಅದನ್ನು ಗೋಪ್ಯವಾಗಿಯೇ ಇರಿಸಿಕೊಳ್ಳಬಹುದು ಎಂದು ಕೂಡ ಕೋರ್ಟ್ ಹೇಳಿತ್ತು. ಈಗ ಪೂರ್ಣಪೀಠ ಕೈಗೊಂಡಿರುವ ತೀರ್ಮಾನವು ಈ ನಿಲುವಿಗಿಂತ ಭಿನ್ನವಾಗಿದೆ.

ನ್ಯಾಯಮೂರ್ತಿಗಳು ಆಸ್ತಿ ಘೋಷಣೆ ಮಾಡುವುದು ಕಡ್ಡಾಯವಾಗಬೇಕು ಎಂದು ಕಾನೂನು ಕುರಿತ ಸಂಸದೀಯ ಸಮಿತಿಯೊಂದು 2023ರಲ್ಲಿ ಶಿಫಾರಸು ಮಾಡಿತ್ತು. ಆದರೆ, ಆ ಶಿಫಾರಸು ಆಧರಿಸಿ ಯಾವುದೇ ಕ್ರಮ ಜರುಗಿಸಿರಲಿಲ್ಲ. ಚುನಾವಣಾ ಕಣಕ್ಕೆ ಇಳಿಯುವ ಅಭ್ಯರ್ಥಿಗಳು ತಮ್ಮ ಆಸ್ತಿ ವಿವರಗಳನ್ನು ಘೋಷಿಸಿಕೊಳ್ಳುವುದು ಕಡ್ಡಾಯ. ಚುನಾಯಿತ ಪ್ರತಿನಿಧಿಗಳು ಕೂಡ ತಮ್ಮ ಆಸ್ತಿ ವಿವರವನ್ನು ಬಹಿರಂಗಪಡಿಸಬೇಕು. ಅವರು ತಮ್ಮ ಆಸ್ತಿ ವಿವರಗಳನ್ನು ಬಹಿರಂಗಪಡಿಸಿದಾಗ, ಆ ಬಗ್ಗೆ ಒಂದಿಷ್ಟು ಚರ್ಚೆಗಳು ನಡೆದಿರುವ ನಿದರ್ಶನಗಳು ಹಲವು ಇವೆ. ಸಾರ್ವಜನಿಕ ಜೀವನದಲ್ಲಿ ಇರುವವರ ಜೀವನದ ಬಗ್ಗೆ ಪರಿಶೀಲನೆ ನಡೆಯುವುದು ಒಳ್ಳೆಯದು ಎಂಬ ದೃಷ್ಟಿಕೋನದಿಂದ ಗಮನಿಸಿದಾಗ, ಇಂತಹ ಪ್ರಶ್ನೆಗಳು ಮೂಡಬೇಕಿರುವುದು ಸೂಕ್ತ ಎಂಬುದು ಗೊತ್ತಾಗುತ್ತದೆ. ಆಸ್ತಿಯನ್ನು ಘೋಷಿಸಿಕೊಳ್ಳುವ ಅಗತ್ಯ ಇಲ್ಲ ಎಂಬುದು ಇನ್ನಷ್ಟು ಪ್ರಶ್ನೆಗಳು ಮೂಡಲು ಕಾರಣವಾಗಬಹುದು. ಅದರಲ್ಲೂ ಮುಖ್ಯವಾಗಿ, ಸಾರ್ವಜನಿಕ ಜೀವನದಲ್ಲಿ ಇರುವ ವ್ಯಕ್ತಿಯ ಮೇಲೆ ಆರೋಪಗಳು ಎದುರಾದಾಗ, ಪ್ರಶ್ನೆಗಳು ಹೆಚ್ಚು ತೀವ್ರವಾಗಿ ಇರಬಹುದು. ನ್ಯಾಯಮೂರ್ತಿಗಳ ವಿರುದ್ಧ ಕ್ರಮ ಜರುಗಿಸುವುದು ಕಠಿಣ. ಅವರ ವರ್ಗಾವಣೆಗೆ ಕಾರಣ ಏನು ಎಂಬುದು ಕೂಡ ಬಹಿರಂಗವಾಗುವುದಿಲ್ಲ. ನ್ಯಾಯಾಂಗದಲ್ಲಿ ಇನ್ನಷ್ಟು ಹೆಚ್ಚು ಪಾರದರ್ಶಕತೆ ಹಾಗೂ ಉತ್ತರದಾಯಿತ್ವ ತರಲು ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯ ಇದೆ. ನ್ಯಾಯಾಂಗದ ಮೇಲೆ ಸಾರ್ವಜನಿಕರು ಇರಿಸಿರುವ ವಿಶ್ವಾಸ ಕುಗ್ಗಲು ಅವಕಾಶ ಮಾಡಿಕೊಡಬಾರದು. ನ್ಯಾಯಾಂಗದಲ್ಲಿ ಉನ್ನತ ಹುದ್ದೆಯಲ್ಲಿ ಇರುವ ನ್ಯಾಯಮೂರ್ತಿಗಳು ತಮ್ಮ ಆಸ್ತಿ ವಿವರ ಘೋಷಿಸಬೇಕು ಎಂಬುದು ಉತ್ತಮ ಕ್ರಮ, ಆಸ್ತಿ ವಿವರವು ಸಾರ್ವಜನಿಕರ ಪರಿಶೀಲನೆಗೆ ಲಭ್ಯವಾಗುವಂತೆ ಮಾಡಬೇಕು.

ದಿನದ ಟ್ವೀಟ್

ಬದುಕು ಹೈರಾಣಾಗಿಸಲು ಪೈಪೋಟಿಯೇ?



ಸ್ಟೇಟೋ ಸೆಂಟ್ರಲ್ಲೋ ಕಾಂಗ್ರೆಸ್ಸೋ ಬಿಜೆಪಿಯೋ, ಒಟ್ಟಿಗೆ ಇಬ್ರೂ ಸೇರಿ ಮಂದೀನ ಪಸಂದಾಗಿ ಮಂಗ ಮಾಡ್ತಾರೆ! ಅವ್ರು ರುಬ್ತಾರೆ, ನಾವು ರುಬ್ಬಿಸ್ಕೋಬೇಕು. ಅಷ್ಟೇ, ಜನಸಾಮಾನ್ಯರಾದ ನಮ್ಮ ಬದುಕು #LPGCylinder

ರಾಮಚಂದ್ರ ಎಮ್., ಬರಹಗಾರ

ಕಿಡಿನುಡಿ



ವೈಯಕ್ತಿಕವಾಗಿ ನಾನು, ರಾಜ್ಯದಲ್ಲಿ ರಚನಾತ್ಮಕವಾಗಿ ಕಾರ್ಯನಿರ್ವಹಿಸುವ ಸಮರ್ಥ ವಿರೋಧ ಪಕ್ಷ ಇರಬೇಕೆಂದು ಬಯಸುವವನು. ರಾಜ್ಯವು ಬಿಜೆಪಿ ಮುಕ್ತ ಆಗಬೇಕೆಂದು ಬಯಸುವಷ್ಟು ಕೆಟ್ಟ ಮನಸ್ಸು ನನಗಿಲ್ಲ. ನಮ್ಮ ಆಡಳಿತದಲ್ಲಿ ತಿಳಿದೋ ತಿಳಿಯದೆಯೋ ತಪ್ಪುಗಳಾಗಿದ್ದರೆ ಅದನ್ನು ನಮ್ಮ ಗಮನಕ್ಕೆ ತರುವುದು ವಿರೋಧ ಪಕ್ಷದ ಮುಖ್ಯ ಕರ್ತವ್ಯ. ಆದರೆ ರಾಜ್ಯದಲ್ಲಿರುವ ವಿರೋಧ ಪಕ್ಷ ತನ್ನ ಒಳಜಗಳ ಮತ್ತು ಅಸಾಮರ್ಥ್ಯದಿಂದ ರಾಜ್ಯದ ಜನತೆ ಎದುರು ನಗೆಪಾಟಲಿಗೀಡಾಗಿದೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 8-4-2000

• ಅರಮನೆಗೆ ಲಗ್ಗೆ ಹಾಕಿದ ಸಾಹಸಿಗಳು

ಬೆಂಗಳೂರು, ಏ. 7– ನಗರದ ಹೃದಯ ಭಾಗದಲ್ಲಿರುವ ಅರಮನೆ ಮೈದಾನಕ್ಕೆ ಇಂದು ವಿಶೇಷ ಕಳೆ. ಅಲ್ಲಿಯ 200 ಎಕರೆ ಪ್ರದೇಶದಲ್ಲಿ ಜಲಕ್ರೀಡೆ, ವಾಯುಕ್ರೀಡೆ, ಬಣ್ಣಬಣ್ಣದ ಬಲೂನುಗಳ ಹಾರಾಟ, ಅಶ್ವಾರೋಹಿ ಪ್ರದರ್ಶನ. ಜತೆಗೆ ಡೇರೆ ಹಾಕಿಕೊಂಡು ರಾತ್ರಿ ಕಳೆಯುವ ಅವಕಾಶ... ಇವೆಲ್ಲಾ ಸಾಹಸೋತ್ಸವದ ಅಂಗವಾಗಿ ಏರ್ಪಾಡಾಗಿದ್ದ ವಿಶೇಷ ಕಾರ್ಯಕ್ರಮಗಳು.

ಅರಮನೆ ಮೈದಾನವೆಂದರೆ ಅದು ಮಲೆನಾಡಿನ ಪುಟ್ಟ ಗುಡ್ಡಬೆಟ್ಟವಿದ್ದಂತೆ. ಅಲ್ಲಿ ನೆರಳಿಗೆ ಗಿಡಮರಗಳ ಸಮೂಹಗಳಿವೆ. ಜಲಕ್ರೀಡೆಗೆ ಪುಟ್ಟ ಕೊಳವಿದೆ. ಬಂಡೆಗಳನ್ನು ಏರುವವರಿಗೆ ಸವಾಲೆಸೆಯುವ ಕಲ್ಲುಬಂಡೆಗಳಿವೆ. ಚಾರಣಕ್ಕೆ ವಿಶಾಲ ಪ್ರಾಂಗಣವಿದೆ. ವಾಯುಕ್ರೀಡೆಗೆ ಹೇಳಿ ಮಾಡಿಸಿಟ್ಟಂಥ ಪ್ರಶಾಂತ ವಾತಾವರಣವಿದೆ. ಇವನ್ನೆಲ್ಲಾ ಸಮರ್ಪಕವಾಗಿ ಬಳಸುವಂತೆ ಏರ್ಪಾಡಾಗಿದ್ದ ಸಾಹಸೋತ್ಸವದ ಉದ್ಘಾಟನೆಯೂ ಸಾಹಸ ಪ್ರದರ್ಶನದ ಮೂಲಕವಾಗಿಯೇ ನಡೆದಿದ್ದು ಅರ್ಥಪೂರ್ಣವಾಗಿತ್ತು.

• ಬೆಟ್ಟಿಂಗ್ ಹಗರಣದಲ್ಲಿ ಕ್ರೊನಿಯೆ

ನವದೆಹಲಿ, ಏ. 7– ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ನಾಯಕ ಹ್ಯಾನ್ಸಿ ಕ್ರೊನಿಯೆ ಮತ್ತು ತಂಡದ ಇತರ ನಾಲ್ವರು ಆಟಗಾರರು, ಕಳೆದ ತಿಂಗಳು ಭಾರತದ ವಿರುದ್ಧ ನಡೆದ ಒಂದು ದಿನದ ಕ್ರಿಕೆಟ್ ಸರಣಿಯ ಸಂದರ್ಭದಲ್ಲಿ ಪೂರ್ವ ನಿಯೋಜಿತ ಒಪ್ಪಂದ ಹಾಗೂ ಭಾರಿ ಮೊತ್ತದ ಬೆಟ್ಟಿಂಗ್ ವ್ಯವಹಾರದಲ್ಲಿ ಪಾಲ್ಗೊಂಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ, ದೆಹಲಿ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡಿರುವ ಕುತೂಹಲಕರ ಸಂಗತಿ ಬೆಳಕಿಗೆ ಬಂದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಭಾರತೀಯನೊಬ್ಬನನ್ನು ಇಂದು ಬಂಧಿಸಿದ್ದಾರೆ. ವಿಶ್ವ ಕ್ರಿಕೆಟ್ ರಂಗದಲ್ಲಿ ಹುಬ್ಬೇರಿಸುವಂತೆ ಮಾಡಿದ ಈ ಅನಿರೀಕ್ಷಿತ ಘಟನೆಯಲ್ಲಿ ಕ್ರೊನಿಯೆ ಅವರೊಂದಿಗೆ ಹರ್ಷೆಲ್ ಗಿಬ್ಸ್, ನಿಕಿ ಬೊಯೆ, ಪೀಟರ್ ಸ್ಟ್ರೈಡಮ್ ಮತ್ತು ಹೆನ್ರಿ ವಿಲಿಯಮ್ಸ್ ಅವರ ಹೆಸರುಗಳು ಸೇರಿವೆ.

50 ವರ್ಷಗಳ ಹಿಂದೆ

ಮಂಗಳವಾರ, 8-4-1975

• ಅಧ್ಯಕ್ಷರೇ ಇಲ್ಲ- ಎಲ್ಲವೂ ಅನಿಶ್ಚಿತ

ಬೆಂಗಳೂರು, ಏ. 7– ಸಾಹಿತ್ಯ, ಸಂಗೀತ, ನಾಟಕ, ಲಲಿತಕಲೆಗಳ ಅಭಿವೃದ್ಧಿಗಾಗಿ ರಚಿತವಾದ ರಾಜ್ಯದ ಮೂರು ಅಕಾಡೆಮಿಗಳ ಪೈಕಿ ಎರಡು ಅಕಾಡೆಮಿಗಳು ಅನಾಥವಾಗಿ ನಾಳೆಗೆ ಒಂದು ವರ್ಷವಾಯಿತು.

1974ರ ಏಪ್ರಿಲ್ 8ರಂದು ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸುಧಾ ರೆಡ್ಡಿ ಮತ್ತು ಸಂಗೀತ- ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಮಾಲತಿ ರಾಮಕೃಷ್ಣ ರಾವ್ ಅವರು ತಮ್ಮ ಅಧಿಕಾರದ ಅವಧಿ ಮುಗಿದಿದ್ದರಿಂದ ನಿವೃತ್ತರಾದರು.

ಅಕಾಡೆಮಿಗಳ ಅಧ್ಯಕ್ಷರನ್ನು ಸರ್ಕಾರವೇ ನಾಮಕರಣ ಮಾಡಬೇಕು. ಈ ಕೆಲಸ ಮಾಡಲು ಸರ್ಕಾರಕ್ಕೆ 'ಸಮಯವಿಲ್ಲ'. ಆದ್ದರಿಂದ ಒಂದು ವರ್ಷದಿಂದ ಎರಡು ಅಕಾಡೆಮಿಗಳೂ ಸ್ಥಗಿತವಾಗಿವೆ.

• ಬರ್ಲಿನ್ ಚಿತ್ರೋತ್ಸವಕ್ಕೆ ಕನ್ನಡದ 'ಕಂಕಣ'

ಬೆಂಗಳೂರು, ಏ. 7– ಕನ್ನಡ ಚಲನಚಿತ್ರ 'ಕಂಕಣ'ವು ಬರ್ಲಿನ್ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ ಎಂದು ತಿಳಿದುಬಂದಿದೆ.

ತ್ರಿವೇಣಿ ಅವರ ಇದೇ ಹೆಸರಿನ ಕಾದಂಬರಿ ಆಧಾರಿತ ಈ ಚಿತ್ರದ ನಿರ್ಮಾಪಕರು ಮಯೂರ ಫಿಲಂಸ್. ಇದರ ನಿರ್ದೇಶಕರು ಪ್ರಸಾದ್.

ಹಿಂದಿ, ಇಂಗ್ಲಿಷ್ ಕುರಿತ ಚರ್ಚೆಗೆ ಭಾವನಾತ್ಮಕ ನೆಲೆ ಒದಗಿಸಬೇಕಾದ ಅಗತ್ಯ ಇಲ್ಲ

ಭಾಷಾ ರಾಜಕೀಯದ ವಾಗ್ವಾದ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ತ್ರಿಭಾಷಾ ಸೂತ್ರದ ವಾಗ್ವಾದಗಳೆಲ್ಲ ಹಿಂದಿ ಅಥವಾ ಹಿಂದಿಯ ಪರವಾದ ಚರ್ಚೆಗಳಾಗಿ ಉಳಿದು ಕನ್ನಡದ ಪ್ರಶ್ನೆಯು ಕಳೆದೇ ಹೋಗುವುದು ಈ ಚರ್ಚೆಗಳ ಲಕ್ಷಣವಾಗಿದೆ. ಆದರೆ ಕನ್ನಡಕ್ಕೆ ಬದಲಿಗಳಿಲ್ಲ. ಕರ್ನಾಟಕದಲ್ಲಿ ಕನ್ನಡ ಕಲಿಕೆ, ಕನ್ನಡ ಮತ್ತು ಅದರ ಸಹಭಾಷೆಗಳ ಯಜಮಾನಿಕೆ ಪ್ರಶ್ನಾತೀತವಾಗಿ ಇರಬೇಕು. ಆದ್ದರಿಂದ ಈ ಚರ್ಚೆಯನ್ನು ತುಲನಾತ್ಮಕವಾಗಿ ಹಿಂದಿ ಮತ್ತು ಇಂಗ್ಲಿಷ್‌ನ ಚರ್ಚೆಯಾಗಿ ಮಾತ್ರವೇ ಬೆಳೆಸಬೇಕಾದ ಅಗತ್ಯವಿದೆ.

ಹಿಂದಿ, ಇಂಗ್ಲಿಷ್ ಎರಡೂ ಕರ್ನಾಟಕಕ್ಕೆ ಪರಕೀಯ ಭಾಷೆಗಳೇ ಆಗಿರುವುದರಿಂದ ಈ ಚರ್ಚೆಗೆ ಭಾವನಾತ್ಮಕ ನೆಲೆ ಒದಗಿಸಬೇಕಾದ ಅಗತ್ಯವಿಲ್ಲ. ಹಿಂದಿ ಪ್ರತಿಪಾದನೆಯೊಂದಿಗೆ ರಾಷ್ಟ್ರೀಯತೆಯ ವಿಚಾರ ಸೇರಿಕೊಂಡಿದೆ. ರಾಷ್ಟ್ರೀಯತೆಯು ಭಾವನಾತ್ಮಕ ಅಂಶವೂ ಹೌದು, ಕರ್ನಾಟಕದ ಅಗತ್ಯವೂ ಹೌದು. ಆದರೆ ಹಿಂದಿ ಭಾಷೆಯು ರಾಷ್ಟ್ರೀಯತೆಯ ಅಂಶವಲ್ಲ. ಆದ್ದರಿಂದ ಹಿಂದಿಯನ್ನು ರಾಷ್ಟ್ರೀಯತೆಯೊಂದಿಗೆ ಬೆಸೆಯುವ ತಂತ್ರಗಾರಿಕೆಯನ್ನು ಪರಿಗಣಿಸದೆಯೇ ವ್ಯಾವಹಾರಿಕ ಅಗತ್ಯದ ನೆಲೆಯಲ್ಲಿ ಪರಿಗಣಿಸಬೇಕಾಗುತ್ತದೆ.

ಹಿಂದಿಯನ್ನು ರಾಷ್ಟ್ರೀಯ ಏಕತೆಯೊಂದಿಗೆ ಬೆಸೆಯುವ ಚಿಂತನೆಗಳು ಸ್ವಾತಂತ್ರ್ಯ ಹೋರಾಟದ ಕಾಲದವು. ಚೆನ್ನೈಯಲ್ಲಿ ಹಿಂದಿ ಪ್ರಚಾರ ಸಭಾವನ್ನು ಗಾಂಧೀಜಿ ಪ್ರಾರಂಭಿಸಿದರು. ಆದರೆ ಆಗ ಭಾರತವು ಆಧುನಿಕ ಅರ್ಥದಲ್ಲಿ, ಒಂದು ರಾಷ್ಟ್ರವಾಗಿ ರೂಪುಗೊಂಡಿರಲಿಲ್ಲ. ಆಗ ರಾಷ್ಟ್ರೀಯ ಏಕತೆಯನ್ನು ತರಬಲ್ಲ ಸಾಧನಗಳನ್ನು ಹುಡುಕಾಡುತ್ತಿದ್ದಾಗ ಭಾಷೆಯೂ ಒಂದು ಸಾಧನ ಆಗಬಲ್ಲದು ಎಂದನಿಸಿ, ಹಿಂದಿಯನ್ನು ಇಡೀ ಭಾರತದ ಸಂಪರ್ಕ ಭಾಷೆಯಾಗಿ ರೂಪಿಸಬೇಕೆಂಬ ಚಿಂತನೆ ಹುಟ್ಟಿಕೊಂಡಿದ್ದರೆ ಅದು ಸಹಜ. ಆದರೆ ಇಂದು ರಾಷ್ಟ್ರೀಯ ಏಕತೆಗೂ ಹಿಂದಿಗೂ ಯಾವ ಸಂಬಂಧವೂ ಇಲ್ಲ. ಏಕೆಂದರೆ ಹಿಂದಿ ಎಲ್ಲರ ಭಾಷೆಯಾಗದೆಯೇ ಭಾರತವು ಒಂದು ರಾಷ್ಟ್ರವಾಗಿ ಉಳಿಯಲು ಸಮರ್ಥವಿದೆ ಎಂಬುದನ್ನು ಹಿಂದಿನ 75 ವರ್ಷಗಳಲ್ಲಿ ದೃಢೀಕರಿಸಿ ಆಗಿದೆ. ತ್ರಿಭಾಷಾ ಸೂತ್ರವನ್ನು ಕೂಡ ಒಪ್ಪದೇ ಇದ್ದ ತಮಿಳುನಾಡು ಸಹ ಭಾರತೀಯ ಒಕ್ಕೂಟದಲ್ಲೇ ಉಳಿದು ರಾಷ್ಟ್ರೀಯ ಏಕತೆಯ ಚೌಕಟ್ಟಿನಿಂದ ಹೊರಹೋಗಿಲ್ಲ. ಅಂದರೆ ರಾಷ್ಟ್ರೀಯ ಏಕತೆ ಸಾಧಿಸಲು ಸಂವಿಧಾನವೇ ಸಮರ್ಥವಾಗಿದೆ ಎಂದು ಅರ್ಥ.

ಯಾವುದೇ ಭಾಷೆಯ ಉಪಯೋಗವು ಸಂವಹನ, ಜ್ಞಾನ ಗಳಿಕೆ ಮತ್ತು ಜ್ಞಾನದ ಮುಖಾಂತರ ಅನ್ನ ಗಳಿಕೆಗೆ ಸಂಬಂಧಪಟ್ಟದ್ದಾಗಿರುತ್ತದೆ. ಈ ಮೂರರಲ್ಲಿ ವರ್ತಮಾನದಲ್ಲಿ ಭಾಷಾ ಕಲಿಕೆಗೆ ಜನರ ಬೇಡಿಕೆ ಇರುವುದು ಅನ್ನ ಗಳಿಕೆಯ ಸಾಧನವಾಗಿ ಯಾವ ಭಾಷೆಗೆ ಹೆಚ್ಚು ಉಪಯುಕ್ತತೆ ಇದೆ ಎನ್ನುವುದಕ್ಕಾಗಿದೆ. ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಇಂಗ್ಲಿಷ್‌ಗೇ ಅನ್ನ ಗಳಿಕೆಯ ಶಕ್ತಿ ಜಾಸ್ತಿ ಇದೆ ಎನ್ನುವುದರಲ್ಲಿ ಯಾರಲ್ಲೂ ಅನುಮಾನಗಳು ಇಲ್ಲ. ಉದಾಹರಣೆಗೆ, ಸರ್ಕಾರದ ನೇಮಕಾತಿಯಲ್ಲಿ ಸಮಾನತೆಯ ತತ್ವ ಇರುವುದರಿಂದ ಹಿಂದಿ ಭಾಷಾ ಅಧ್ಯಾಪಕರಿಗೂ ಇಂಗ್ಲಿಷ್ ಭಾಷಾ ಅಧ್ಯಾಪಕರಿಗೂ ಸಮಾನ ವೇತನವೇ ಸಿಗುತ್ತದೆ. ಆದರೆ ಖಾಸಗಿ ಸಂಸ್ಥೆಗಳಿಗೆ ಬಂದಾಗ ವ್ಯತ್ಯಾಸ ಗೊತ್ತಾಗುತ್ತದೆ. ಹಿಂದಿಯನ್ನು ಕಲಿಸುವವರಿಗಿಂತ ಇಂಗ್ಲಿಷನ್ನು ಕಲಿಸುವವರಿಗೆ ನಾಲ್ಕು ಪಟ್ಟು ಜಾಸ್ತಿ ವೇತನ ಕೊಡುವ ವ್ಯವಸ್ಥೆಯೂ ಇದೆ ಮತ್ತು ಇದು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಹಿಂದಿ ಭಾಷಾ ವಲಯವಾದ ಉತ್ತರ ಭಾರತದಲ್ಲೂ ಇಂಗ್ಲಿಷನ್ನು ಕಲಿಸುವವರಿಗಿಂತ ಜಾಸ್ತಿ ವೇತನವನ್ನು ಹಿಂದಿಯನ್ನು ಕಲಿಸುವವರಿಗೆ ಕೊಡುತ್ತಿಲ್ಲ. ಅಂದರೆ ಹಿಂದಿಗಿಂತ ಇಂಗ್ಲಿಷ್ ಹೆಚ್ಚು ಸಶಕ್ತವಾಗಿದೆ ಎಂಬುದನ್ನು ಹಿಂದಿ ಭಾಷಾ ವಲಯದ ರಾಜ್ಯಗಳ ಜನರೂ ಒಪ್ಪಿಕೊಂಡಿದ್ದಾರೆ.

ಎರಡನೆಯದಾಗಿ, ಸಾಂವಿಧಾನಿಕವಾಗಿ ಹಿಂದಿಯು ಒಕ್ಕೂಟ ಸರ್ಕಾರದ ಆಡಳಿತ ಭಾಷೆ. ಆದರೆ ಒಕ್ಕೂಟ ಸರ್ಕಾರವೂ ಹಿಂದಿಯನ್ನು ಕಲಿಯುವವರಿಗೆ ವಿಶೇಷ ಸ್ಕಾಲರ್‌ಶಿಪ್, ಕಲಿಸುವವರಿಗೆ ವಿಶೇಷ ಭತ್ಯೆ ಅಥವಾ ಉದ್ಯೋಗ ಖಾತರಿಯಂತಹ ಯೋಜನೆಗಳನ್ನು ರೂಪಿಸಿಲ್ಲ. ಅಂದರೆ ಹಿಂದಿಗೆ ವಿಶೇಷ ಪ್ರೋತ್ಸಾಹ ಕೊಟ್ಟು ಹಿಂದಿ ಪರಿಣತರನ್ನು ರೂಪಿಸಬೇಕಾದಷ್ಟು ಮಹತ್ವ ಇಲ್ಲ ಎನ್ನುವುದು ಸರ್ಕಾರಕ್ಕೂ ಗೊತ್ತಿದೆ. ಅಂದರೆ ಅನ್ನ ಗಳಿಕೆಯ ಭಾಷೆಯಾಗಿ ಕನ್ನಡಕ್ಕಿಂತ ಜಾಸ್ತಿ ಶಕ್ತಿ ಹಿಂದಿಗೆ ಇಲ್ಲ. ಆದರೆ ಕನ್ನಡಕ್ಕಿಂತ ಜಾಸ್ತಿ ವ್ಯಾಪ್ತಿ ಹಿಂದಿಗೆ ಇದೆ.

ಹಿಂದಿಯ ಪರವಾಗಿರುವ ಬಹುಮುಖ್ಯವಾದ ವಾದವೆಂದರೆ, ಇಂಗ್ಲಿಷ್ ಉನ್ನತ ಮಟ್ಟದ ವ್ಯವಹಾರಕ್ಕೆ ಸಾಕಾಗುತ್ತದೆ, ಆದರೆ ಸಾಮಾನ್ಯ ವ್ಯವಹಾರದ ಭಾಷೆಯಾಗಿ ಇಂಗ್ಲಿಷ್‌ಗೆ ಉತ್ತರ ಭಾರತದಲ್ಲಿ ಮಹತ್ವ ಇಲ್ಲ ಎನ್ನುವುದು. ಈ ವಾದ ಸರಿಯಾಗಿಯೇ ಇದೆ. ಐಎಎಸ್ ಅಧಿಕಾರಿ ವರ್ಗದ ಮಟ್ಟದಲ್ಲಿ, ಕಂಪನಿಯ ನೌಕರರ ಮಟ್ಟದಲ್ಲಿ ಇಂಗ್ಲಿಷ್ ನಡೆಯುತ್ತದೆ. ಆದರೆ ಉತ್ತರ ಭಾರತದಲ್ಲಿ ಬೀದಿ ಬದಿಯಲ್ಲಿ ವ್ಯಾಪಾರ ಮಾಡಬೇಕಾದರೆ, ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ವ್ಯಕ್ತಿ, ಹೋಟೆಲ್ ಮಾಣಿ ಆಗಬೇಕಾದರೆ ಹಿಂದಿಯನ್ನು ಮಾತನಾಡಲು ಬರಬೇಕಾಗುತ್ತದೆ. ಆದರೆ ಈ ಉದ್ಯೋಗಗಳ ಮೂಲಕ ಅನ್ನ ಸಂಪಾದಿಸುವವರು ಕರ್ನಾಟಕದಲ್ಲೇ ಅದನ್ನು ಮಾಡುತ್ತಾರೆ; ಲಖನೌ, ಜೈಪುರ, ದೆಹಲಿಗೆಲ್ಲ ಯಾಕೆ ಹೋಗುತ್ತಾರೆ?

ಕರ್ನಾಟಕದಲ್ಲಿ ವ್ಯವಹರಿಸಲು ಹಿಂದಿಯ ಅಗತ್ಯವೂ ಇಲ್ಲ, ಇಂಗ್ಲಿಷ್‌ನ ಅಗತ್ಯವೂ ಇಲ್ಲ. ಹೋಟೆಲ್ ಮಾಲೀಕರ ಬಳಿ ಮಾತಾಡಿದರೆ ಸಾಕು, ಕೆಲಸಕ್ಕೆ ಜನ ಸಿಗುತ್ತಿಲ್ಲ ಎನ್ನುವುದೇ ಅವರ ಮುಖ್ಯ ದೂರಾಗಿರುತ್ತದೆ.



ಕರ್ನಾಟಕದ ಹೋಟೆಲ್‌ಗಳಲ್ಲೇ ಉದ್ಯೋಗ ಇರುವಾಗ ಹಿಂದಿಯನ್ನು ಕಲಿತು ಉತ್ತರ ಭಾರತಕ್ಕೆ ಹೋಗಿ ಹೋಟೆಲ್ ಮಾಣಿಯಾಗಿ ಸಾಧಿಸುವುದಾದರೂ ಏನಿದೆ? ಆದರೂ ಕರ್ನಾಟಕದಿಂದ ಉತ್ತರ ಭಾರತಕ್ಕೆ ಹೋಗುವ ವಲಸೆ ಕಾರ್ಮಿಕರಿಗೆ ಮೂರು ತಿಂಗಳ 'ಸಂವಹನ ಹಿಂದಿ ಕಲಿಕೆ' ಕೋರ್ಸುಗಳನ್ನು ಅಲ್ಲಿನ ರಾಜ್ಯ ಸರ್ಕಾರಗಳು ಮಾಡಬೇಕು. ಅದೇ ರೀತಿ, ಉತ್ತರ ಭಾರತದಿಂದ ಕರ್ನಾಟಕಕ್ಕೆ ಬರುವ ವಲಸೆ ಕಾರ್ಮಿಕರಿಗೆ 'ಸಂವಹನ ಕನ್ನಡ ಕಲಿಕೆ'ಯ ಕೋರ್ಸನ್ನು ಕರ್ನಾಟಕ ಸರ್ಕಾರ ಮಾಡಬೇಕು. ಇನ್ನು ಉಳಿದಿರುವುದು ಜ್ಞಾನ ಗಳಿಕೆಯ ಸಾಧನವಾಗಿ ಹಿಂದಿಗೆ ಇರುವ ಮಹತ್ವ. ಜ್ಞಾನವನ್ನು ತಾನು ಮೂಲ ಭಾಷೆಯಲ್ಲೇ ಓದಿಕೊಂಡು ಗಳಿಸಿಕೊಳ್ಳಬೇಕು ಎನ್ನುವವನಿಗೆ ಕೂಡ, ಆಧುನಿಕ ಜ್ಞಾನ ಮೂಲಗಳು ಇಂಗ್ಲಿಷ್‌ನಲ್ಲಿವೆ, ಪುರಾತನ ಜ್ಞಾನ ಮೂಲಗಳು ಸಂಸ್ಕೃತದಲ್ಲಿವೆ, ಯುರೋಪಿನ ಪುರಾತನ ಜ್ಞಾನ ಮೂಲಗಳು ಲ್ಯಾಟಿನ್ ಭಾಷೆಯಲ್ಲಿವೆ. ಅಂದರೆ ಈ ನೆಲೆಯಲ್ಲೂ ಹಿಂದಿಗೆ ಪ್ರಮುಖ ಪಾತ್ರವೇನೂ ಇಲ್ಲ.

ಹಿಂದಿಯು ಸಂಗೀತಾತ್ಮಕ ಗುಣವಿರುವ ಒಂದು ಸುಂದರ ಭಾಷೆ. ಸ್ವ-ಇಚ್ಛೆಯಿಂದ ಹಿಂದಿ ಕಲಿಯಲು ಬಯಸಿದವರಿಗೆ ಕಲಿಕೆಗೆ ಅವಕಾಶ ಇರಬೇಕು. ಹಿಂದಿ ಕಲಿಕೆಗೆ ವಿರೋಧ ಮಾಡಬೇಕಾದ ಯಾವ ಅಗತ್ಯವೂ ಇಲ್ಲ. ಆದರೆ ಹಿಂದಿ ಪ್ರತಿಪಾದನೆಯ ಹಿಂದಿರುವ, 'ಭಾರತೀಯರೆಲ್ಲರನ್ನೂ ಹಿಂದಿಯ ಅಧೀನಕ್ಕೆ ಒಳಪಡಿಸಬೇಕು' ಎನ್ನುವ ಮನೋಧರ್ಮವನ್ನು ವಿರೋಧಿಸಬೇಕು ಮತ್ತು ಆ ವಿರೋಧವು ಭಾಷಾಂಧತೆಯಾಗದ ಹಾಗೆ ಎಚ್ಚರ ವಹಿಸಬೇಕು. ಉದಾಹರಣೆಗೆ, ಇಂಗ್ಲಿಷ್‌ನ ಪ್ರಬಲ ಪ್ರತಿಪಾದಕರಲ್ಲಿ ಕೆಲವರು ಸಂಸ್ಕೃತದ ಪದಗಳನ್ನೆಲ್ಲ ಕಿತ್ತು ಹಾಕಿದ ಕನ್ನಡವನ್ನು ರೂಪಿಸುವ ಪ್ರತಿಪಾದನೆ ನಡೆಸಿದ್ದಾರೆ. ವಾಸ್ತವದಲ್ಲಿ ಇದೆಲ್ಲ ಆಗುವುದಿಲ್ಲ. 'ಪಿರಿದು' ಎಂಬ ಒಂದು ಪದ 'ಹಿರಿದು' ಎಂದು ಸಾರ್ವತ್ರಿಕವಾಗಿ ರೂಪಾಂತರಗೊಳ್ಳಬೇಕಾದರೆ ಇನ್ನೂರು ವರ್ಷಗಳು ಬೇಕಾಗಿತ್ತು.

ಕನ್ನಡದಿಂದ ಸಂಸ್ಕೃತ ಪದಗಳನ್ನು ತೆಗೆಯುತ್ತೇವೆ, ಹಿಂದಿ ಪದಗಳನ್ನು ತೆಗೆಯುತ್ತೇವೆ ಎನ್ನುವುದೆಲ್ಲ ವಾಸ್ತವದಲ್ಲಿ ಕಾರ್ಯಸಾಧ್ಯವಾಗುವುದಿಲ್ಲ. ಹಿಂದಿಯ ಪ್ರತಿಪಾದಕರು ಸಂಸ್ಕೃತದ ಪ್ರತಿಪಾದಕರೂ ಆಗಿರುವುದರಿಂದ ಈ ರೀತಿಯ ಭಾಷಾಂಧತೆಗಳು ಹುಟ್ಟಿಕೊಂಡಿವೆ. ಆದರೆ ಸಂಸ್ಕೃತಕ್ಕೆ ಅದರದೇ ರಾಜಕೀಯ ಪ್ರಭುತ್ವದ ಭಾಷಾ ವಲಯವಿಲ್ಲ. ಮೂಲ ರೂಪದಲ್ಲಿ ಅದು ಸಂವಹನ ಭಾಷೆ ಆಗಿಯೂ ಇಲ್ಲ. ಆದ್ದರಿಂದ ಸಂಸ್ಕೃತವನ್ನು ಹೇರಿಕೆ ಮಾಡಲು ಸಾಧ್ಯವಿಲ್ಲ. ಆದರೆ ಇತರ ಭಾರತೀಯ ಭಾಷೆಗಳಲ್ಲಿ ಪದಗಳಾಗಿ, ವ್ಯಾಕರಣವಾಗಿ, ಛಂದಸ್ಸಾಗಿ ಸಂಸ್ಕೃತದ ಅಸ್ತಿತ್ವವಿದೆ. ಆದ್ದರಿಂದಲೇ ಗೋವಾ ವಿಮೋಚನಾ ಚಳವಳಿಯ ನಾಯಕ ಟಿ.ಬಿ. ಕುನ್ಹ, ಸಂಸ್ಕೃತವು ಭಾರತವನ್ನು ಒಗ್ಗೂಡಿಸುತ್ತದೆ ಎಂದಿದ್ದರು.

ಸಂಸ್ಕೃತದ ಪ್ರತಿಪಾದಕರು ಸಂಸ್ಕೃತವನ್ನು ಬೆಳೆಸುವುದೆಂದರೆ ಇತರ ಭಾರತೀಯ ಭಾಷೆಗಳನ್ನು ಸಬಲೀಕರಿಸುವುದೇ ಆಗಿದೆ ಎಂದು ಅರ್ಥ ಮಾಡಿಕೊಳ್ಳಬೇಕಿದೆ. ಅಂತಹ ಇತರ ಭಾರತೀಯ ಭಾಷೆಗಳಲ್ಲಿ ಹಿಂದಿಯೂ ಒಂದಾಗಿದೆಯೇ ವಿನಾ ಕರ್ನಾಟಕದಲ್ಲಿ ಕನ್ನಡ ಮತ್ತು ಅದರ ಸಹ ಭಾಷೆಗಳ ಯಜಮಾನಿಕೆಗೆ ಪರ್ಯಾಯ ಅಲ್ಲ. ಇಂಗ್ಲಿಷ್ ಕೂಡ ಕರ್ನಾಟಕದಲ್ಲಿ ಕನ್ನಡ ಮತ್ತದರ ಸಹ ಭಾಷೆಗಳ ಯಜಮಾನಿಕೆಗೆ ಪರ್ಯಾಯವಲ್ಲ.

ಚುರುಮುರಿ



ಕಲಬೆರಕೆ ಕಾಂಡ

• ಡಿ.ಎಸ್.ಲಿಂಗರಾಜು

'ಇಂದು ನಾನು ಪೊಂದುವೆನಾನಂದವಾ, ಸಂದೇಹವಿಲ್ಲದೆ ಬಡ ನರರ ಹುರಿದು ಸಂಡಿಗೆಯ ಮಾಡಿ, ಕರುಳಕಿತ್ತು ಶಾವಿಗೆಯ ಪಾಯಸವ ಮಾಡಿ ಕುಡಿಯುವೆ...' ತುರೇಮಣೆ ನಾಟಕದ ದಿರುಸಿಲ್ಲದೇ ಘೋರ ಶೂರ್ಪನಖಿಯ ಪದ್ಯ ಹಾಡಿಕ್ಯಬತ್ತಿದ್ದರು.

'ಏನ್ಸಾ, ಏನು ವಿಶೇಷ? ಹೊತ್ನಂತೇ ಗ್ಯಾನಪದ ಗೀತೆ ಹಾಡಿಕ್ಯ ಬತ್ತಿದ್ದರಿ? ಅದ್ಯಾರು ನಿಮ್ಮ ಮೂಗು ಕೂದೋರು?' ತುರೇಮಣೆಗೆ ಕೇಳಿದೆ.

'ಯಾರಿಗೇಳನಪ್ಪಾ ನಮ್ಮ ಪ್ರಾಬ್ಲಮ್ಮು. ರಾಜಕೀಯದ ಕಲಬೆರಕೆಯ ಹೊಡೆತಕ್ಕೆ ನಮ್ಮ ಮೂಗು-ಬಾಯಿ, ನಾಲಿಗೆ, ಕಣ್ಣು ಕೆಟ್ಟು ಕೆರ ಹಿಡಿದೋಗ್ಯವೆ. ಬಾಯಲ್ಲಿ ಮಾತ್ರ ಜನದ ಆಶಯವೇ ಮುಖ್ಯ ಅಂತರೆ ಕನೋ. ಬರೀ ಗಾಳಿಗಂಟಲು, ಗಿಲೀಟು ಮಾತು, ಚಿತಾವಣೆ, ಬಂಡಾಟ' ನಿಟ್ಟುಸಿರುಬುಟ್ಟರು.

'ಸರ್ಕಾರದ ಎಲ್ಲಾ ನಿಗಮ-ಮಂಡಳಿಗಳು ಕುಲಗೆಟ್ಟು ಹಗರಣ ಮಾಡಿಕ್ಯಂದವೆ. ನೇಮಕಾತಿಗಳಲ್ಲಿ ಭ್ರಷ್ಟಾಚಾರ ಬೇರುಬುಟ್ಟದೆ. ರಾಜಕಾರಣಿಗಳ ಹೆಸರು ಬರೆದು ನೇಣಾಕ್ಯಂದರೂ ಕ್ರಮ ಇಲ್ಲ. ಬರೀ ಟ್ವಿಸ್ಟ್ ಮಾತ್ರ. ಹನಿಟ್ರಾಪ್ ಅಂತರೆ, ಸುಮ್ಮಗಾಯ್ತರೆ. ಸುಳ್ಳು ಮಾತಾಡಿ ಮಾತಾಡಿ ತಳ್ಳಾಯ್ತರೆ' ಬೇಜಾರು ಮಾಡಿಕ್ಯಂದೆ.

'ರಾಜಕೀಯದೋರ ತೆವಲಿಗೆ ಹಾಲು-ನೀರು, ಕರಂಟು, ಎಣ್ಣೆ, ಡೀಜೆಲ್ಲು, ಟೋಲು ರೇಟು ಮ್ಯಾಕ್ಕೋಗಿ ಅಟ್ಟ ಸೇರಿಕ್ಯಂಡವೆ. ಅಷ್ಟೇ ಯಾಕೆ ಮಂಜಮ್ಮನಂತಾ ಮಂಜಮ್ಮನೂ ಟೀ ರೇಟು ಏರಿಸ್ತಳಂತೆ. ಮೊನ್ನೆ ಮಲ್ಲೇಶಣ್ಣ ಹಂಗಂತಿದ್ದ' ಯಂಟಪ್ಪಣ್ಣ ಸಾರಣೆ ಮಾಡಿತು.

'ಅಧಿಕಾರ ಸಿಕ್ಕೂಗಂಟ ಆಕ್ರೋಶ. ಸಿಂಹಾಸನ ಸಿಕ್ಕಿದ ಮೇಲೆ ಗಡಿಬಿಡಿ. ಇಕ್ಕಡೆ ಮೈತ್ರಿಯಲ್ಲಿ ಅಹಂ-ಖಾರ ಕಾಣ್ತಾ ಅದೆ' ಅಂತಂದೆ.

'ರಾಜಕಾರಣಿಗಳು ಅಧಿಕಾರ ಕೊಡ್ಲಿ ಅಂತ ಗುನ್ನಂಪಟ್ಟೆ ಇಕ್ಯಂದು ದಿಲ್ಲಿಗೋಗಿ 'ನಾನು ಯಾವುದೇ ಹೊಣೆ ಹೊರಲು ಸಿದ್ಧ' ಅಂತ ನುಲಿಯದು ಕಂಡಿಲ್ಲವಾ?' ತುರೇಮಣೆ ವಿವರಿಸಿದರು.

'ದಿಟ ಕನೇಳಿ ಸಾ. ಕಾಸು ಮಾಡಕ್ಕೆ ಕೋಡ್‌ವರ್ಡ್ ಮಾಡಿಕ್ಯಂದವೆ. ಉಪ್ಪುಖಂಡ ಎಲ್ಲಾ ರಾಜಕೀಯದೋರಿಗೆ. ನಮಗೆ ಮಾತ್ರ ಉಪ್ಪೆಸರು-ರಾಗಿಮುದ್ದೇನೇ ಗತಿ. ಸಾಲಾಯ ತಸ್ಮೈ ನಮಃ' ಅಂತ ನಗಾಡಿದೆ.

ಸಂಗತ

ಪ್ರಚಾರಪ್ರಿಯ ಲೇಖಕ: ನೇಪಥ್ಯಕ್ಕೆ ವಾಚಕ

ಪುಸ್ತಕವೊಂದು ಪ್ರಕಟವಾದ ನಂತರ ಸಹಲೇಖಕರನ್ನು ತಲುಪುತ್ತಿರುವಷ್ಟು ಶರವೇಗದಲ್ಲಿ ಓದುಗರನ್ನು ತಲುಪುತ್ತಿಲ್ಲ ಎಂಬುದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ

• ರಾಜಕುಮಾರ ಕುಲಕರ್ಣಿ

ಸಾಹಿತ್ಯ ಸಮಾರಂಭವೊಂದರಲ್ಲಿ ಭೇಟಿಯಾದ ಲೇಖಕಮಿತ್ರರೊಬ್ಬರು ಸಾಹಿತ್ಯ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ತುಂಬ ಆತಂಕದಿಂದ ಮಾತನಾಡಿದರು. ಪ್ರತಿವರ್ಷ ಪ್ರಕಟವಾಗುತ್ತಿರುವ ಅಸಂಖ್ಯಾತ ಪುಸ್ತಕಗಳು, ಲೇಖಕರ ಪ್ರಚಾರದ ಭರಾಟೆ, ಪ್ರಶಸ್ತಿಗಳ ಮಹಾಪೂರ, ಹೊಗಳಿ ಹೊನ್ನ ಶೂಲಕ್ಕೆ ಏರಿಸುತ್ತಿರುವ ವಿಮರ್ಶಾ ಪ್ರವೃತ್ತಿ... ಹೀಗೆ ಮಾತಿನುದ್ದಕ್ಕೂ ಅನೇಕ ಸಂಗತಿಗಳ ಕುರಿತು ಬೇಸರ ವ್ಯಕ್ತಪಡಿಸಿದರು. ಮಾತಿನ ಕೊನೆಯಲ್ಲಿ, ಪ್ರಕಟ ಆಗುತ್ತಿರುವ ಪುಸ್ತಕಗಳು ಓದುಗರನ್ನು ತಲುಪುತ್ತಿವೆಯೇ, ಸದ್ಯದ ಸಾಹಿತ್ಯಕ ವಾತಾವರಣ ಪ್ರಜ್ಞಾವಂತ ಓದುಗರನ್ನು ಬೆಳೆಸುತ್ತಿದೆಯೇ ಎಂದು ಪ್ರಶ್ನಿಸಿದರು. ಸಾಹಿತ್ಯಲೋಕ ಈ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸಬೇಕಾದ ತುರ್ತು ಅಗತ್ಯ ಇಂದು ಎದುರಾಗಿದೆ.

ಪುಸ್ತಕವೊಂದು ಪ್ರಕಟವಾದ ನಂತರ ಅದು ಸಹಲೇಖಕರನ್ನು ಶರವೇಗದಲ್ಲಿ ತಲುಪುತ್ತಿದೆಯೇ ವಿನಾ ಓದುಗರನ್ನಲ್ಲ. ಒಂದರ್ಥದಲ್ಲಿ ಪುಸ್ತಕಗಳು ಲೇಖಕರ ನಡುವೆ ಪರಸ್ಪರ ವಿನಿಮಯಗೊಳ್ಳುತ್ತಿವೆಯೇ ಹೊರತು ಮಾರಾಟವಾಗುತ್ತಿಲ್ಲ. ಪುಸ್ತಕ ಬಿಡುಗಡೆಯಂತಹ ಕಾರ್ಯಕ್ರಮಗಳಲ್ಲೂ ಸಭಾಂಗಣಗಳು ಪ್ರಕಾಶಕರು ಮತ್ತು ಲೇಖಕರಿಂದ ಭರ್ತಿಯಾಗಿರುತ್ತವೆ, ಓದುಗರ ಸಂಖ್ಯೆ ತೀರಾ ಕಡಿಮೆಯಿರುತ್ತದೆ.

ವಾಟ್ಸ್‌ಆ್ಯಪ್ ಮತ್ತು ಫೇಸ್‌ಬುಕ್‌ನಂತಹ ಸಾಮಾಜಿಕ ಮಾಧ್ಯಮಗಳಲ್ಲಿ ಹೊಸ ಪುಸ್ತಕಗಳ ಕುರಿತು ಚರ್ಚೆಗಳಾಗುತ್ತಿರುವುದು ಕೂಡ ಲೇಖಕರ ಸಮೂಹದಿಂದಲೇ ಎನ್ನುವುದು ಗಮನಿಸಬೇಕಾದ ಸಂಗತಿ. ಲೇಖಕರೇ ಸಹಲೇಖಕರ ಕೃತಿಗಳನ್ನು ಚರ್ಚಿಸುವಾಗ ಅಲ್ಲಿ ಮೆಚ್ಚುಗೆ ಮತ್ತು ಹೊಗಳಿಕೆ ಮುನ್ನೆಲೆಗೆ ಬರುತ್ತಿವೆ. ಕೃತಿಯೊಂದರ ಕುರಿತು ಮೆಚ್ಚುಗೆಯ ಮಾತನಾಡಿದ ವ್ಯಕ್ತಿಯ ಹಿನ್ನೆಲೆಯನ್ನು ಕೆದಕಿದರೆ ಆತ ಕೂಡ ಮೂಲದಲ್ಲಿ ಕವಿ, ಕಥೆಗಾರ, ಲೇಖಕನಾಗಿರುವ ಸಾಧ್ಯತೆಯೇ ಹೆಚ್ಚು. ತಿದ್ದಿ ಬುದ್ಧಿ ಹೇಳಬೇಕಾದ ಕೆಲವು ಹಿರಿಯ ಲೇಖಕರು ಕೆಟ್ಟ ಕೃತಿಗಳನ್ನೂ ಹೊಗಳುತ್ತಿರುವುದು ದುರಂತದ ಸಂಗತಿ.

ಪುಸ್ತಕವೊಂದು ಪ್ರಕಟವಾದ ನಂತರ ಅದು ಓದುಗರಿಗೆ ಸೇರಿದ್ದು, ಲೇಖಕ ನೇಪಥ್ಯಕ್ಕೆ ಸರಿದು ಕೃತಿ ಮುನ್ನೆಲೆಗೆ ಬರಬೇಕು. ಓದುಗರ ಸಮೂಹದಲ್ಲಿ ಓದಿದ ಪುಸ್ತಕಗಳ ಕುರಿತು ಚರ್ಚೆ, ಸಂವಾದಗಳಾಗಬೇಕು. ವಿಪರ್ಯಾಸವೆಂದರೆ, ಇಂದು ಪುಸ್ತಕಗಳ ಕುರಿತು ಚರ್ಚಿಸುತ್ತಿರುವವರಲ್ಲಿ ಲೇಖಕರದೇ ಸಿಂಹಪಾಲಿದೆ. ಲೇಖಕರಲ್ಲಿ ಸೆಲೆಬ್ರಿಟಿಗಳಾಗುವ ಉಮೇದು ಹೆಚ್ಚುತ್ತಿದೆ. ಚರ್ಚೆ ಮತ್ತು ಸಂವಾದಗಳಲ್ಲಿ ಉತ್ಸವಮೂರ್ತಿಯಂತೆ ಲೇಖಕರು ಪಾಲ್ಗೊಳ್ಳುತ್ತಿದ್ದಾರೆ. ಲೇಖಕರಲ್ಲಿನ ಈ ಜನಪ್ರಿಯತೆಯ ಮೋಹ ಸಾಹಿತ್ಯದ ಗುಣಮಟ್ಟದ ಕುಸಿತಕ್ಕೆ ಕಾರಣವಾಗುತ್ತಿದೆ.

ಅನೇಕ ಸಂದರ್ಭಗಳಲ್ಲಿ ಪ್ರಕಾಶಕರ ಹೆಸರಿನಲ್ಲಿ ಲೇಖಕರೇ ತಮ್ಮ ಪುಸ್ತಕಗಳ ಪ್ರಕಟಣೆಗೆ ಬಂಡವಾಳ ಹೂಡುತ್ತಾರೆ. ಪುಸ್ತಕದ ಮುಖಪುಟ, ಪುಟವಿನ್ಯಾಸ, ಹಿರಿಯ ಲೇಖಕರಿಂದ ಮುನ್ನುಡಿ ಮತ್ತು ಹಿನ್ನುಡಿ, ಪುಸ್ತಕ ಬಿಡುಗಡೆ, ಮಾರಾಟ ಈ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದಾರೆ. ಒಂದರ್ಥದಲ್ಲಿ ಪ್ರಕಾಶಕರ ಜವಾಬ್ದಾರಿಯನ್ನು ಪ್ರಜ್ಞಾಪೂರ್ವಕವಾಗಿ ತಮ್ಮ ಮೇಲೆ ಹೇರಿಕೊಳ್ಳುತ್ತಿದ್ದಾರೆ. ಈ ಎಲ್ಲ ಚಟುವಟಿಕೆಗಳ ಪರಿಣಾಮವಾಗಿ, ಕೃತಿಯ ನಿಜವಾದ ಅಂತಃಸತ್ವವಾದ ಬರವಣಿಗೆಯು ನಿಸ್ತೇಜ ಮತ್ತು ನೀರಸವಾಗುತ್ತಿದೆ.

ಫ್ರೆಂಚ್ ಕಾದಂಬರಿಕಾರ ವಿಕ್ಟರ್ ಹ್ಯೂಗೊ ಬರೆದ 'ದಿ ಹಂಚ್‌ಬ್ಯಾಕ್ ಆಫ್ ನೋಟ್ರೊಡಮ್' ಕಾದಂಬರಿ ಪ್ರಕಟವಾಗಿ ಎರಡು ಶತಮಾನಗಳಾದರೂ ಮಹತ್ವದ ಕೃತಿಯಾಗಿ ಉಳಿದಿದೆ. ಕಮೂ, ಕಾಫ್ಕಾ ಅವರನ್ನು ಓದುಗರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಕುವೆಂಪು, ಶಿವರಾಮ ಕಾರಂತ, ದೇವನೂರ ಮಹಾದೇವ, ಅನಂತಮೂರ್ತಿ, ಲಂಕೇಶ್, ಶ್ರೀಕೃಷ್ಣ ಆಲನಹಳ್ಳಿ ಅವರಂತಹ ಕನ್ನಡದ ಮಹತ್ವದ ಲೇಖಕರ ಕೃತಿಗಳು ಸದ್ಯದ ಸಂದರ್ಭದಲ್ಲೂ ಓದುಗರ ಸಮೂಹದಲ್ಲಿ ಚರ್ಚೆಗೆ ಒಳಗಾಗುತ್ತಿವೆ. ಗಟ್ಟಿಯಾದ ಮತ್ತು ಎಲ್ಲ ಕಾಲಕ್ಕೂ ಸಲ್ಲಬಹುದಾದ ವಿಷಯವಸ್ತು ಪುಸ್ತಕವೊಂದನ್ನು ನೂರಾರು ವರ್ಷಗಳಾದರೂ ಓದುಗರ ನೆನಪಿನಲ್ಲಿ ಹಚ್ಚಹಸಿರಾಗಿ ಉಳಿಸಬಲ್ಲದು. ಪ್ರಚಾರ ಮತ್ತು ಗಿಮಿಕ್ ಪುಸ್ತಕದ ಜನಪ್ರಿಯತೆಗೆ ನೆರವಾಗಲಾರವು.



ಇಂದು ಪ್ರಶಸ್ತಿ ಕೊಡಮಾಡುವ ಸಂದರ್ಭದಲ್ಲಿ ಕಿರಿಯ ಲೇಖಕರಿಗೆ ಆದ್ಯತೆ ನೀಡಲಾಗುತ್ತಿದೆ. ಇದು ಕಿರಿಯ ಲೇಖಕರ ಬೆಳವಣಿಗೆಗೆ ತೊಡಕಾಗುತ್ತಿದೆ. ಪ್ರಶಸ್ತಿಯ ಮೊತ್ತಕ್ಕಿಂತ ಪ್ರಶಸ್ತಿಪತ್ರ ಸಿಕ್ಕರೆ ಸಾಕು ಎಂದು ಮೊತ್ತವನ್ನು ತೆರೆಮರೆಯಲ್ಲಿ ವ್ಯವಸ್ಥಾಪಕರಿಗೆ ಹಿಂದಿರುಗಿಸುವ ಔದಾರ್ಯವನ್ನು ಅನೇಕ ಬರಹಗಾರರು ಪ್ರದರ್ಶಿಸುತ್ತಿದ್ದಾರೆ. ಕೃತಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಓದುಗರನ್ನೂ ಒಳಗಾಗಿಸಿಕೊಳ್ಳುವುದು ತುಂಬ ಅರ್ಥಪೂರ್ಣ ನಡೆಯಾಗುತ್ತದೆ. ಹೀಗೆ ಮಾಡುವುದರಿಂದ ಓದುಗರಿಗೆ ಕೃತಿಗಳನ್ನು ಪರಿಚಯಿಸಿ ಓದುಗರ ಸಮೂಹವೊಂದು ಬೆಳೆಯುವಂತಹ ವಾತಾವರಣ ಸೃಷ್ಟಿಸಿದಂತೆ ಆಗುತ್ತದೆ.

'ಪ್ರತಿಯೊಬ್ಬ ಲೇಖಕ ಎದುರಿಸಲೇಬೇಕಾದ ಕೆಲವು ಪ್ರಶ್ನೆಗಳಿವೆ- ನಾನಿದನ್ನು ಯಾಕೆ ಬರೆಯುತ್ತೇನೆ? ಯಾರಿಗಾಗಿ ಬರೆಯುತ್ತಿದ್ದೇನೆ?' ಎಂದು ಯಶವಂತ ಚಿತ್ತಾಲರು ಬರವಣಿಗೆ ಕುರಿತು ಹೇಳಿರುವ ಮಾತು ಕಿರಿಯ ಲೇಖಕರಿಗೆ ನೀತಿಪಾಠದಂತಿದೆ. 'ಓದುಗರಿಗಾಗಿ' ಬರೆಯುತ್ತಿದ್ದೇನೆ ಎನ್ನುವ ಮಾನಸಿಕ ಸಿದ್ಧತೆ ಪ್ರತಿ ಬರಹಗಾರನಿಗೆ ಅಗತ್ಯ. ಅದು ಗಟ್ಟಿ ಬರವಣಿಗೆಗೆ ಕಾರಣವಾಗಿ ಆ ಮೂಲಕ ಪ್ರಜ್ಞಾವಂತ ಓದುಗರನ್ನು ಬೆಳೆಸಲು ನೆರವಾಗುತ್ತದೆ.

ಪ್ರಚಾರದ ಗೀಳಿಗೆ ಒಳಗಾಗುವ ಲೇಖಕನಾಗಲೀ ಅವನ ಬರವಣಿಗೆಯಾಗಲೀ ಹೆಚ್ಚು ದಿನ ಬಾಳಲಾರವು ಎನ್ನುವ ಸತ್ಯವನ್ನು ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡುತ್ತಿರುವ ಕಿರಿಯ ಲೇಖಕರು ಅರ್ಥಮಾಡಿಕೊಳ್ಳಬೇಕಿದೆ.

ವಾಚಕರ ವಾಣಿ

ವಿಶ್ವವಿದ್ಯಾಲಯಗಳ ಪುನಶ್ಚೇತನ ಅಗತ್ಯ

ತನ್ನ ನಿವೃತ್ತ ನೌಕರರಿಗೆ ಪಿಂಚಣಿ ನೀಡಲು ಕೂಡ ಮುಂದಿನ ದಿನಗಳಲ್ಲಿ ಕಷ್ಟವಾಗಬಹುದು ಎಂಬ ಆತಂಕವನ್ನು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಇತ್ತೀಚೆಗೆ ವ್ಯಕ್ತಪಡಿಸಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಮೈಸೂರು ವಿಶ್ವವಿದ್ಯಾಲಯ ಸೇರಿದಂತೆ ಅನೇಕ ವಿಶ್ವವಿದ್ಯಾಲಯಗಳ ಆರ್ಥಿಕ ಸ್ಥಿತಿ ಶೋಚನೀಯವಾಗಿದೆ. ರಾಜ್ಯದಲ್ಲಿ ಜಿಲ್ಲೆಗೊಂದರಂತೆ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡ ನಂತರ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಇದೊಂದು ಅವೈಜ್ಞಾನಿಕ ನಡೆಯಾಗಿದ್ದು, ಆರ್ಥಿಕ ಸಮಸ್ಯೆಗಳಷ್ಟೇ ಅಲ್ಲದೆ ಇನ್ನೂ ಹತ್ತು ಹಲವಾರು ಗಂಭೀರ ಸಮಸ್ಯೆಗಳನ್ನು ಸೃಷ್ಟಿಸಿದೆ. ಅನೇಕ ವಿಶ್ವವಿದ್ಯಾಲಯಗಳಿಗೆ ತಮ್ಮ ಆರ್ಥಿಕ ಸಂಪನ್ಮೂಲಗಳನ್ನು ತಾವೇ ರೂಢಿಸಿಕೊಳ್ಳಬೇಕಾದ ಅನಿವಾರ್ಯ ಇದೆ. ಕೆಲವು ವಿಶ್ವವಿದ್ಯಾಲಯಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಅನುದಾನ ದೊರೆಯುತ್ತಿದ್ದರೂ ಸಾಕಾಗದೆ ಹೆಣಗಾಡುತ್ತಿವೆ. ಜ್ಞಾನಕಾಶಿಗಳಂತಿರುವ ವಿಶ್ವವಿದ್ಯಾಲಯಗಳಿಗೆ ಇಂತಹ ದುಃಸ್ಥಿತಿ ಬಂದಿರುವುದು ಶೋಚನೀಯ.ವಿಶ್ವವಿದ್ಯಾಲಯಗಳ ಪುನಶ್ಚೇತನಕ್ಕೆ ಸರ್ಕಾರ ಶೀಘ್ರ ಗಮನ ಹರಿಸಬೇಕು.

ಕೆ.ವಿ.ವಾಸು, ಮೈಸೂರು

ಇಂತಹವರು ನೇಮಕಗೊಂಡಿದ್ದು ಹೇಗೆ?

ಮಧ್ಯಪ್ರದೇಶದ ಆಸ್ಪತ್ರೆಯೊಂದರಲ್ಲಿ ನಕಲಿ ಹೃದ್ರೋಗ ತಜ್ಞನೊಬ್ಬ ಶಸ್ತ್ರಚಿಕಿತ್ಸೆ ನಡೆಸಿದ್ದರಿಂದ 7 ಜನ ಸಾವನ್ನಪ್ಪಿರುವುದಾಗಿ ವರದಿಯಾಗಿದೆ. ಹಳ್ಳಿ, ಸಣ್ಣ ಪಟ್ಟಣಗಳಲ್ಲಿ ನಕಲಿ ವೈದ್ಯರು ಪ್ರ್ಯಾಕ್ಟೀಸ್ ಮಾಡುವುದು, ವೈದ್ಯರು ಶಸ್ತ್ರಚಿಕಿತ್ಸೆಯ ನಂತರ ಅರ್ಧ ಹೊಲಿಗೆ ಹಾಕಿ ಬಿಡುವುದು, ಹತ್ತಿಯನ್ನು, ಶಸ್ತ್ರಚಿಕಿತ್ಸಾ ಉಪಕರಣಗಳನ್ನು ದೇಹದಲ್ಲಿ ಹಾಗೇ ಬಿಟ್ಟು ಹೊಲಿಗೆ ಹಾಕುವುದು, ದೇಹದಲ್ಲಿ ಆಪರೇಷನ್ ಮಾಡಬೇಕಾದ ಸ್ಥಳವನ್ನು ಬಿಟ್ಟು ಬೇರೆ ಎಲ್ಲೋ ಕೊಯ್ಯುವಂತಹ ಪ್ರಕರಣಗಳು ಆಗೊಮ್ಮೆ ಈಗೊಮ್ಮೆ ಮಾಧ್ಯಮಗಳಲ್ಲಿ ಸುದ್ದಿಯಾಗುವುದು ಮಾಮೂಲಿಯಾಗಿದೆ. ಆದರೆ ನಕಲಿ ವೈದ್ಯನೊಬ್ಬ ಹೃದಯ ಶಸ್ತ್ರಚಿಕಿತ್ಸೆ ಮಾಡಿದ್ದನ್ನು ಅರಗಿಸಿಕೊಳ್ಳುವುದು ಕಷ್ಟ.

ಈ ಪ್ರಕರಣದಲ್ಲಿ ಆ ವೈದ್ಯ ಅಪರಾಧಿ ಎನ್ನುವುದರಲ್ಲಿ ಸಂದೇಹವಿಲ್ಲ ಮತ್ತು ಅವನಿಗೆ ತಕ್ಕ ಶಿಕ್ಷೆಯಾಗಬೇಕು. ಆದರೆ, ಅದಕ್ಕಿಂತ ಹೆಚ್ಚು ಶಿಕ್ಷೆಯನ್ನು ಆತನನ್ನು ನೇಮಕ ಮಾಡಿಕೊಂಡವರಿಗೆ ನೀಡಬೇಕು. ನಾಲ್ಕನೇ ದರ್ಜೆಯ ಒಬ್ಬ ಸಾಮಾನ್ಯ ನೌಕರನನ್ನು ಆಯ್ಕೆ ಮಾಡುವಾಗಲೂ ಆತನ ಹಿನ್ನೆಲೆಯನ್ನು ವಿಸ್ತೃತವಾಗಿ ಪರಿಶೀಲನೆ ಮಾಡುವ ವ್ಯವಸ್ಥೆ ಇರುವಾಗ, ಹೃದ್ರೋಗ ತಜ್ಞನನ್ನು ನೇಮಿಸಿಕೊಳ್ಳುವಾಗ ಆತನ ಪದವಿಪತ್ರ, ಹಿನ್ನೆಲೆಯನ್ನು ಸರಿಯಾಗಿ ಪರಿಶೀಲಿಸದಿರುವುದು ಅಕ್ಷಮ್ಯ ಅಪರಾಧ.

ರಮಾನಂದ ಶರ್ಮಾ, ಬೆಂಗಳೂರು

ಮಹಾತ್ಮನ ಆತ್ಮಚರಿತ್ರೆ: ಓದು ಕಡ್ಡಾಯವಾಗಲಿ

ಭೂಗತ ಪಾತಕಿ, ಮಹಾರಾಷ್ಟ್ರದ ಲಕ್ಷ್ಮಣ್ ತುಕಾರಾಂ ಗೋಲೆ, ಜೈಲಿನಲ್ಲಿ ಮಹಾತ್ಮ ಗಾಂಧಿ ಅವರ ಆತ್ಮಕಥನವನ್ನು ಓದಿ ಮನಃಪರಿವರ್ತನೆಗೊಂಡು ಹೊಸ ಮನುಷ್ಯನಾದ ಕಥೆಯನ್ನು ಮಾಧ್ಯಮಗಳಲ್ಲಿ ಓದಿ ಮನಸ್ಸು ಮುದಗೊಂಡಿತು. ಆಹಾ, ಎಂತಹ ಪರಿವರ್ತನೆ! ಗಾಂಧೀಜಿಯ ನಡೆ- ನುಡಿ, ಸರಳ ಹಾಗೂ ಪಾರದರ್ಶಕ ಜೀವನ ಎಂದಿಗೂ ಎಲ್ಲರಿಗೂ ಅನುಕರಣೀಯ. ಅಂತೆಯೇ ದೇಶದ ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ ದೇಶದ ಜನ ಗಾಂಧೀಜಿಯ ಒಂದು ಕರೆಗೆ ಓಗೊಟ್ಟು ನಿಲ್ಲುತ್ತಿದ್ದರು. ಪರಸ್ಪರ ದ್ವೇಷ, ಅಸೂಯೆ, ಅಧಿಕಾರದಾಹದ ದಳ್ಳುರಿಯಲ್ಲಿ ನಿತ್ಯ ಬೇಯುತ್ತಿರುವ ನಮ್ಮ ಇಂದಿನ ರಾಜಕೀಯ ವಲಯದ ಎಲ್ಲ ಜನಪ್ರತಿನಿಧಿಗಳು ಮಹಾತ್ಮನ ಆತ್ಮಕಥೆಯನ್ನು ಓದಲಿ, ಪುನಃ ಓದಲಿ. ಇಂದಿನ ಯುವಜನಾಂಗಕ್ಕೆ ಮಹಾತ್ಮನ ಆತ್ಮಚರಿತ್ರೆಯ ಓದು ಕಡ್ಡಾಯಗೊಳ್ಳಲಿ. ಮಹಾತ್ಮನ ಬದುಕು, ಬರಹ ಕೆಲವು ಹೃದಯಗಳನ್ನಾದರೂ ಪ್ರಭಾವಿಸಬಹುದು, ಬದಲಿಸಬಹುದು.

ವೆಂಕಟೇಶ ಮಾಚಕನೂರ, ಧಾರವಾಡ

ಜನಪ್ರತಿನಿಧಿಗಳೇನು ಸರ್ಕಾರಿ ನೌಕರರೇ?

ರಾಜ್ಯದ ಶಾಸಕರು ಮತ್ತು ಸಚಿವರು ತಮ್ಮ ವೇತನ ಹಾಗೂ ವಿವಿಧ ಭತ್ಯೆಗಳನ್ನು ಸರಿಸುಮಾರು ಶೇಕಡ 100ರಷ್ಟು ಹೆಚ್ಚಿಸಿಕೊಂಡಿರುವುದು ಎಷ್ಟು ಸರಿ? ಅವರೇನು ಸರ್ಕಾರಿ ನೌಕರರೇ? ಶಾಸಕರಾಗಿರುವ ಅವಧಿಯಲ್ಲಿ ಟಿ.ಎ, ಡಿ.ಎ.ಯಂತಹ ಭತ್ಯೆಗಳನ್ನು ತೆಗೆದುಕೊಳ್ಳಲಿ. ನಿಗದಿತ ವೇತನ, ಪಿಂಚಣಿ ತೆಗೆದುಕೊಳ್ಳಲು ಇವರು ನೌಕರರಲ್ಲ. ಶಾಸಕರಾಗಿದ್ದಾಗ ಯೋಗ್ಯವಿದ್ದುದನ್ನು ನ್ಯಾಯಯುತವಾಗಿ ಪಡೆದುಕೊಳ್ಳುವುದಕ್ಕೆ ಅದು ಸೀಮಿತವಾಗಬೇಕು.

ಸರ್ಕಾರದ ಬಳಿ ಶಿಕ್ಷಕರ ವೇತನಕ್ಕೆ ಹಣವಿಲ್ಲ, ಪಿಂಚಣಿಗೆ, ಬಡ್ತಿಗೆ, ಅತಿಥಿ ಶಿಕ್ಷಕರ ಪಗಾರಕ್ಕೆ ಹಣವಿಲ್ಲ. ಬಹು ಪ್ರಮುಖ ಕ್ಷೇತ್ರ ಶಿಕ್ಷಣ. ಅದಕ್ಕೇ ಬಜೆಟ್ಟಿನಲ್ಲಿ ಬಡತನ ಕಾಡುತ್ತದೆ. ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರು ಮೈಸೂರಿನಲ್ಲಿ ನಡೆದ ಶರಣ ಸಾಹಿತ್ಯ ಸಮ್ಮೇಳನದಲ್ಲಿ ಹೀಗೆ ಹೇಳಿದ್ದಾರೆ: 'ಶಾಸನಸಭೆಗಳಿಗೆ ಕಳಪೆ ಸಾಮಗ್ರಿ ಕಳುಹಿಸುತ್ತಿರುವುದರಿಂದ, ಅಲ್ಲಿ ಅನುಭವ ಮಂಟಪದಲ್ಲಿ ನಡೆಯುತ್ತಿದ್ದಂತಹ ಚರ್ಚೆಗಳು ನಡೆಯುತ್ತಿಲ್ಲ. ಅಂತಲೇ ಮೌಲ್ಯಗಳು ಕುಸಿಯುತ್ತಿವೆ, ಧಾರ್ಮಿಕ ದ್ವೇಷ ಹೆಚ್ಚಾಗಿದೆ'. ಶರಣರ ಚಳವಳಿಯಂತೆ ಈಗ ಒಂದು ಚಳವಳಿಯ ಅಗತ್ಯವಿದೆ. ಅಂದಾಗ ಅನುಭವ ಮಂಟಪದಂತೆ ಮೌಲ್ಯಯುತ ಚರ್ಚೆ ಸಾಧ್ಯವಾಗುತ್ತದೆ.

ಕೆ.ಬಿ.ಬ್ಯಾಳಿ, ಕುಕನೂರು

ಲೆಕ್ಕಾಚಾರದ ಬದುಕಿನಲ್ಲಿ ಶಿಥಿಲಗೊಳ್ಳುತ್ತಿದೆ ಸಂಬಂಧ

'ಸಂಬಂಧಗಳು ಮನುಷ್ಯತ್ವ ಮರೆತಾಗ...' ಎಂಬ ದೀಪಾ ಹಿರೇಗುತ್ತಿ ಅವರ ಲೇಖನ (ಸಂಗತ, ಏ. 5) ಸಕಾಲಿಕ. ಮನುಷ್ಯನು ಸಂತೋಷ, ಸಾಮರಸ್ಯ, ಸೌಹಾರ್ದದ ಬದುಕಿಗೆ ವಿಮುಖನಾಗಿ ಸಂಪತ್ತಿನ ತೋರಿಕೆ, ಸಂಪತ್ತಿನ ಕ್ರೋಡೀಕರಣ ಮತ್ತು ಪ್ರಪಂಚವನ್ನು ಮರೆತು ತನ್ನ ಸುಖವನ್ನಷ್ಟೇ ಬಯಸುವ ಸ್ವಾರ್ಥದಿಂದ ಬದುಕುತ್ತಿರುವುದು ದುರದೃಷ್ಟಕರ. ಈಗ ದುಡ್ಡೇ ಎಲ್ಲವೂ ಆಗಿಬಿಟ್ಟಿದೆ. ಅಪ್ಪ-ಮಗ, ಅಣ್ಣ-ತಮ್ಮ, ಗಂಡ-ಹೆಂಡತಿ, ಗೆಳೆಯ-ಗೆಳೆಯರ ನಡುವಿನ ಸಂಬಂಧಗಳು ಶಿಥಿಲಗೊಳ್ಳುತ್ತಿವೆ. ಈ ಕಾಲದ ಮನುಷ್ಯ ಲೆಕ್ಕಾಚಾರದಲ್ಲಿ ಇದ್ದಾನೆ. ಗಂಡನನ್ನು ಹೆಂಡತಿ, ಹೆಂಡತಿಯನ್ನು ಗಂಡ, ಅಪ್ಪನನ್ನು ಮಗ, ಮಗನನ್ನು ಅಪ್ಪ ಕೊಲ್ಲುವ, ಹೆಣ್ಣುಮಕ್ಕಳ ಮೇಲಿನ ಶೋಷಣೆ, ಅತ್ಯಾಚಾರದಂತಹ ವಿಚಾರಗಳು ಈಗ ಮಾಮೂಲಾಗಿವೆ. ಮಾಧ್ಯಮಗಳಿಗೆ ಇಂಥ ಸಮಾಚಾರಗಳು ಆಹಾರವಾಗಿ, ಜನರಿಗೆ ಚಲನಚಿತ್ರದಂತೆ ಕಂಡುಬರುತ್ತಿವೆ.

ರಾಜಶೇಖರ ಕುಕ್ಕುಂದಾ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮಕ್ಕಳ ಶಾಲಾ ಪ್ರವೇಶಕ್ಕೆ ಕನಿಷ್ಠ ವಯಸ್ಸಿನ ನಿಯಮ; ವಯೋಮಿತಿ ಸಡಿಲಿಕೆಗೆ ಪೋಷಕರ ಮನವಿ

ಒಂದನೇ ತರಗತಿ ‘6 ವರ್ಷ’ದ ಸಂದಿಗ್ಧ

ಒಂದನೇ ತರಗತಿಗೆ ಮಕ್ಕಳು ಪ್ರವೇಶ ಪಡೆಯುವ ವಯಸ್ಸಿನ ವಿಚಾರವು ರಾಜ್ಯದಲ್ಲಿ ಪೋಷಕರ ಕಳವಳಕ್ಕೆ ಕಾರಣವಾಗಿದೆ. ಮಕ್ಕಳು ಕನಿಷ್ಠ 6 ವರ್ಷ ಪೂರೈಸಿರಬೇಕು ಎನ್ನುವ ರಾಜ್ಯ ಸರ್ಕಾರದ 2022ರ ಆದೇಶವನ್ನು ಶಾಲೆಗಳು ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಪಾಲಿಸಲು ಮುಂದಾಗಿವೆ. ಇದರಿಂದ ರಾಜ್ಯದ ಲಕ್ಷಾಂತರ ಮಕ್ಕಳು ಯುಕೆಜಿ ಅನ್ನು ಮತ್ತೆ ಒಂದು ವರ್ಷ ಪುನರಾವರ್ತಿಸಬೇಕಾಗಿ ಬಂದಿದೆ. ಪೋಷಕರ ಆರ್ಥಿಕ ಹೊರೆ ಮತ್ತು ಮಕ್ಕಳ ಮಾನಸಿಕ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು, ಇತರೆ ಕೆಲ ರಾಜ್ಯಗಳಂತೆ, ಈ ಬಾರಿ ಶಾಲಾ ಪ್ರವೇಶದ ವಯೋಮಿತಿಯಲ್ಲಿ ಸಡಿಲಿಕೆ ಮಾಡುವಂತೆ ಪೋಷಕರು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಪ್ರತಿ ವರ್ಷವೂ ಇಂಥದ್ದೇ ಸ್ಥಿತಿ ಉದ್ಭವಿಸುವುದರಿಂದ ಸರ್ಕಾರ ಸಂದಿಗ್ಧಕ್ಕೆ ಸಿಲುಕಿದೆ

ಪ್ರಜಾವಾಣಿ ವಾರ್ತೆ



ಮಕ್ಕಳನ್ನು ಪ್ರಾಥಮಿಕ ಶಾಲೆಯ ಒಂದನೇ ತರಗತಿಗೆ ದಾಖಲಾತಿ ಮಾಡುವ ವಯಸ್ಸು ರಾಜ್ಯದಲ್ಲಿ ಹಲವು ಬಾರಿ ಬದಲಾವಣೆಗೆ ಒಳಗಾಗಿದೆ. ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮ 20ರ ಅನ್ವಯ ಪೂರ್ವ ಪ್ರಾಥಮಿಕಕ್ಕೆ (ಎಲ್‌ಕೆಜಿ) ಮಕ್ಕಳನ್ನು ಸೇರಿಸಲು ಆಯಾ ಶೈಕ್ಷಣಿಕ ವರ್ಷದ ಜೂ.1ಕ್ಕೆ 3 ವರ್ಷ 10 ತಿಂಗಳು ಮತ್ತು ಪ್ರಾಥಮಿಕ ಶಾಲೆಯ ಒಂದನೇ ತರಗತಿಗೆ ಸೇರಿಸಲು 5 ವರ್ಷ 10 ತಿಂಗಳು ಪೂರೈಸಿರಬೇಕು ಎಂದು ವಯೋಮಿತಿ ನಿಗದಿಪಡಿಸಲಾಗಿತ್ತು.

ನಂತರ ರಾಜ್ಯದಲ್ಲಿ ಆರ್‌ಟಿಇ ಕಾಯ್ದೆ 2009 ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012ರ ಅನ್ವಯ 2018ರಲ್ಲಿ ನಿಯಮ ಬದಲಾಯಿಸಿ, ಒಂದನೇ ತರಗತಿಗೆ ಸೇರಲು ಮಗುವಿಗೆ ಕನಿಷ್ಠ 5 ವರ್ಷ 5 ತಿಂಗಳು (ಗರಿಷ್ಠ 7 ವರ್ಷ) ಆಗಿರಬೇಕು ಎಂದು ಶಿಕ್ಷಣ ಇಲಾಖೆ ಆದೇಶ ಹೊರಡಿಸಿತು. 2020ರಲ್ಲಿ ಮತ್ತೊಂದು ಆದೇಶ ಹೊರಡಿಸಿ, ಎಲ್‌ಕೆಜಿಗೆ ಸೇರಲು ಮಗು 3 ವರ್ಷ 5 ತಿಂಗಳು, ಒಂದನೇ ತರಗತಿಗೆ ಸೇರಲು 5 ವರ್ಷ 5 ತಿಂಗಳು ಪೂರೈಸಿರಬೇಕು ಎಂದು ನಿಯಮ ರೂಪಿಸಿತು.

ದೇಶದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಯಾದ ನಂತರ ರಾಜ್ಯ ಸರ್ಕಾರವು ಜು.2022ರಲ್ಲಿ ಮತ್ತೊಂದು ಆದೇಶ ಹೊರಡಿಸಿ, ಒಂದನೇ ತರಗತಿಗೆ ಪ್ರವೇಶ ಪಡೆಯುವ (2023–24ನೇ ಸಾಲಿನ) ಮಕ್ಕಳು ಆಯಾ ಶೈಕ್ಷಣಿಕ ವರ್ಷದ ಜೂನ್ 1ಕ್ಕೆ ಅನ್ವಯವಾಗುವಂತೆ ಕಡ್ಡಾಯವಾಗಿ 6 ವರ್ಷ ಪೂರೈಸಿರಲೇಬೇಕು ಎಂದಿತು. ನಿಯಮದ ಬಗ್ಗೆ ಹಲವರು ಆಕ್ಷೇಪಣೆ ಎತ್ತಿದ್ದರಿಂದ ಅದರ ಜಾರಿಯನ್ನು ಸರ್ಕಾರ ಮುಂದೂಡಿತು. ನಿಯಮಕ್ಕೆ ತಿದ್ದುಪಡಿ ತಂದು, 2025–26ನೇ ಸಾಲಿನಿಂದ ಇದು ಜಾರಿಗೆ ಬರಲಿದೆ ಎಂದು ನವೆಂಬರ್ 2022ರಲ್ಲಿ ಪ್ರಕಟಿಸಿತು.


ನಿಯಮದ ಪ್ರಕಾರ, 2025 ಜೂನ್ 1ಕ್ಕೆ 6 ವರ್ಷ ತುಂಬಿರುವ ಮಕ್ಕಳಿಗೆ ಮಾತ್ರ ಒಂದನೇ ತರಗತಿಗೆ ಪ್ರವೇಶ ನೀಡುವುದಾಗಿ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳು ಹೇಳುತ್ತಿವೆ. ಇದರಿಂದ ರಾಜ್ಯದಲ್ಲಿ 6 ವರ್ಷ ತುಂಬದ ಯುಕೆಜಿಯ ಮಕ್ಕಳು ಮತ್ತೆ ಒಂದು ವರ್ಷ ಯುಕೆಜಿ ಪುನರಾವರ್ತಿಸಬೇಕಾಗುತ್ತದೆ. ರಾಜ್ಯದಲ್ಲಿ ಇಂಥ ಸುಮಾರು ಐದು ಲಕ್ಷ ಮಕ್ಕಳು ಇದ್ದು, ಅವರ ಶೈಕ್ಷಣಿಕ ಜೀವನ ಸಂದಿಗ್ಧಕ್ಕೆ ಸಿಲುಕಿದೆ ಎಂದು ಪೋಷಕರು ಅಳಲು ತೋಡಿಕೊಳ್ಳುತ್ತಿದ್ದಾರೆ. ಬಹುತೇಕ ಶಾಲೆಗಳು ಮಕ್ಕಳನ್ನು ಎಲ್‌ಕೆಜಿಗೆ ಸೇರಿಸಿಕೊಳ್ಳುವಾಗ ಈ ಬಗ್ಗೆ ಮಾಹಿತಿ ನೀಡಿರಲಿಲ್ಲ; ಈಗ ದಿಢೀರ್ ನಿಯಮ ಮುಂದಿಡುತ್ತಿವೆ ಎನ್ನುವುದು ಪೋಷಕರ ಆರೋಪ. ಇಂಥ ಮಕ್ಕಳ ಪಟ್ಟಿಯಲ್ಲಿ ಒಂದೆರಡು ದಿನದ ವ್ಯತ್ಯಾಸ ಇರುವವರು, ವಾರಗಳ, ತಿಂಗಳ ವ್ಯತ್ಯಾಸ ಇರುವವರೂ ಇದ್ದಾರೆ.

ಯುಕೆಜಿ ಪುನರಾವರ್ತನೆ ಮಾಡುವುದು ಎಂದರೆ, ಲಕ್ಷಾಂತರ ರೂಪಾಯಿ ಫೀಸು ಕಟ್ಟಬೇಕು. ಆರ್ಥಿಕ ಹೊರೆ ಒಂದೆಡೆ ಇದ್ದರೆ, ಇನ್ನೊಂದೆಡೆ, ಓದಿದ ತರಗತಿಯನ್ನೇ ಮತ್ತೊಂದು ವರ್ಷ ಓದಬೇಕಾಗಿರುವುದರಿಂದ ಮಕ್ಕಳು ಮಾನಸಿಕವಾಗಿ ಆಘಾತಕ್ಕೊಳಗಾಗುತ್ತಾರೆ. ಮಕ್ಕಳ ಮುಂದಿನ ವಿದ್ಯಾಭ್ಯಾಸ ಮತ್ತು ವೃತ್ತಿಜೀವನದ ಮೇಲೆಯೂ ಇದು ಪರಿಣಾಮ ಬೀರುತ್ತದೆ. ಹಾಗಾಗಿ ಈಗ ಒಂದನೇ ತರಗತಿ ಸೇರುವ ವಿಚಾರದಲ್ಲಿ ತೊಂದರೆ ಎದುರಿಸುತ್ತಿರುವ ಮಕ್ಕಳ ವಯೋಮಿತಿ ಸಡಿಲಿಕೆ ಮಾಡಬೇಕು ಎನ್ನುವುದು ಪೋಷಕರ ವಾದ. ವಿಪಕ್ಷಗಳ ಕೆಲವು ಮುಖಂಡರು, ಮನಃಶಾಸ್ತ್ರಜ್ಞರು ಮತ್ತು ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗವೂ ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಪತ್ರ ಬರೆದಿದ್ದು, ಮಕ್ಕಳ ಹಿತ ಕಾಯುವಂತೆ ಒತ್ತಾಯಿಸಿವೆ. ಆದರೆ, ಪ್ರತಿ ವರ್ಷವೂ ಇಂಥದ್ದೇ ಪರಿಸ್ಥಿತಿ ಉದ್ಭವಿಸುವುದರಿಂದ ಯಾವ ನಿರ್ಧಾರ ತಳೆಯಬೇಕು ಎನ್ನುವ ಬಗ್ಗೆ ಸರ್ಕಾರ ಸಂದಿಗ್ಧಕ್ಕೆ ಸಿಲುಕಿದೆ.

ರಾಜ್ಯ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿ ಬದಲಿಗೆ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ರೂಪಿಸಲು ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಆಯೋಗವನ್ನು ನೇಮಿಸಿದೆ. ಒಂದನೇ ತರಗತಿಗೆ ಮಕ್ಕಳ ದಾಖಲಾತಿ ವಯಸ್ಸಿನ ವಿಚಾರವನ್ನೂ ರಾಜ್ಯ ಸರ್ಕಾರವು ಆಯೋಗಕ್ಕೆ ವಹಿಸಿದೆ. ಅದು ನೀಡುವ ಸಲಹೆ–ಸೂಚನೆ ಆಧರಿಸಿ ತೀರ್ಮಾನ ಕೈಗೊಳ್ಳುವುದಾಗಿ ಸರ್ಕಾರ ತಿಳಿಸಿದೆ. 2025–26ರ ಶಾಲಾ ಪ್ರವೇಶಗಳು ಈಗಾಗಲೇ ಆರಂಭವಾಗಿರುವುದರಿಂದ ಸರ್ಕಾರ ತಡಮಾಡದೇ ಶೀಘ್ರವಾಗಿ ತನ್ನ ನಿಲುವು ಪ್ರಕಟಿಸಬೇಕು ಎನ್ನುವುದು ಪೋಷಕರ ಒತ್ತಾಯ.


ಆಧಾರ: ಪಿಟಿಐ, ಕರ್ನಾಟಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆದೇಶಗಳು, ಎನ್‌ಇಪಿ 2020, ಯುನಿಸೆಫ್

ಕೆಲವು ರಾಜ್ಯಗಳಲ್ಲಿ ವಿನಾಯಿತಿ



ಒಂದನೇ ತರಗತಿಗೆ ಮಕ್ಕಳ ದಾಖಲಾತಿ ವಯೋಮಿತಿಯು ಆರು ವರ್ಷ ಆಗಿರಬೇಕು ಎನ್ನುವ ನಿಯಮವನ್ನು ಅಳವಡಿಸಿಕೊಳ್ಳುವಂತೆ ಎನ್‌ಇಪಿ ಜಾರಿಯಾದ ನಂತರ ಕೇಂದ್ರ ಸರ್ಕಾರವು ಎಲ್ಲ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೂ ಪ್ರತಿವರ್ಷ ಜ್ಞಾಪನಾ ಪತ್ರಗಳನ್ನು ಬರೆಯುತ್ತಲೇ ಇದೆ. ಆರ್‌ಟಿಇ ಕಾಯ್ದೆ 2009 ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012 ಕೂಡ ಒಂದನೇ ತರಗತಿಗೆ ಪ್ರವೇಶ ಪಡೆಯಲು ಮಗು ಆರು ವರ್ಷ ಪೂರೈಸಿರಬೇಕು ಎಂದು ಹೇಳುತ್ತದೆ. ಆದರೂ ದೇಶದ ವಿವಿಧ ರಾಜ್ಯಗಳಲ್ಲಿ ಒಂದನೇ ತರಗತಿಗೆ ಸೇರಲು ನಿಗದಿಪಡಿಸಲಾಗಿರುವ ಮಕ್ಕಳ ವಯಸ್ಸಿನಲ್ಲಿ ವ್ಯತ್ಯಾಸಗಳಿವೆ.

ಎನ್‌ಇಪಿ ಅಳವಡಿಸಿಕೊಂಡಿರುವ ಕೆಲವು ರಾಜ್ಯಗಳಲ್ಲಿಯೂ 2025–26ನೇ ಶೈಕ್ಷಣಿಕ ವರ್ಷದಲ್ಲಿ ಒಂದನೇ ತರಗತಿಗೆ ಸೇರುವ ಮಕ್ಕಳ ವಯಸ್ಸಿನಲ್ಲಿ ವಿನಾಯಿತಿ ನೀಡಲಾಗಿದೆ. ಹಿಮಾಚಲ ಪ್ರದೇಶದಲ್ಲಿ ಮಾ.31ಕ್ಕೆ ಅನ್ವಯವಾಗುವಂತೆ ಆರು ವರ್ಷ ಪೂರೈಸಿರಬೇಕು ಎಂದು ನಿಯಮ ಮಾಡಲಾಗಿದೆ. ಆದರೆ, ಈ ನಿಯಮದಿಂದ 2024–25, 2025–26, 2026–27ರಲ್ಲಿ ಒಂದನೇ ತರಗತಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಲಾಗಿದೆ. ಮಹಾರಾಷ್ಟ್ರದಲ್ಲಿ ಮಕ್ಕಳ ವಯಸ್ಸಿನ ಕಟ್ ಆಫ್ ದಿನಾಂಕವನ್ನು ಜು.1ಕ್ಕೆ ನಿಗದಿಪಡಿಸಲಾಗಿದೆ. ಇದೇ ರೀತಿ ಹರಿಯಾಣದಲ್ಲಿ ಸೆ.1, ಒಡಿಶಾದಲ್ಲಿ ಅ.1, ಜಮ್ಮು–ಕಾಶ್ಮೀರದಲ್ಲಿ ಸೆ.30 ಕಟ್ ಆಫ್ ದಿನಾಂಕವಾಗಿದೆ. ಕೇರಳದಲ್ಲಿ ಒಂದನೇ ತರಗತಿಗೆ ಸೇರುವ ಮಕ್ಕಳ ವಯಸ್ಸನ್ನು 5 ವರ್ಷದಿಂದ 6 ವರ್ಷಕ್ಕೆ ಹೆಚ್ಚಿಸಲಾಗಿದೆ.




ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರ ಎನ್‌ಇಪಿ ಭಾಗವಾಗಿ ಶಾಲಾ ಪ್ರವೇಶದ ವಯೋಮಿತಿಯನ್ನು ಆರು ವರ್ಷಕ್ಕೆ ನಿಗದಿ ಮಾಡಿತ್ತು. ವಯೋಮಿತಿ ಸಡಿಲಿಸುವಂತೆ ಹಲವು ಪೋಷಕರು ಮನವಿ ಮಾಡಿದ್ದಾರೆ. ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಎನ್‌ಇಪಿ ರದ್ದು ಮಾಡಲು ಕ್ರಮ ಕೈಗೊಂಡಿದೆ. ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ರೂಪಿಸಲು ಆಯೋಗ ರಚಿಸಿದೆ. ಪೋಷಕರ ವಿನಂತಿಯನ್ನು ಆಯೋಗದ ಗಮನಕ್ಕೂ ತರಲಾಗಿದೆ. ರಾಜ್ಯ ಶಿಕ್ಷಣ ನೀತಿ ಆಯೋಗದ ಶಿಫಾರಸಿನ ಆಧಾರದಲ್ಲಿ ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ವಯೋಮಿತಿ ಸಡಿಲಗೊಳಿಸುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳಲಾಗುವುದು

ಮಧು ಬಂಗಾರಪ್ಪ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ

ಆರು ವರ್ಷ ಏಕೆ?

ಮಗುವಿನ ಮಿದುಳು ಬೆಳವಣಿಗೆ ಹೊಂದಲು ಮತ್ತು ಅದು ಗಂಟೆಗಟ್ಟಲೇ ತರಗತಿಯಲ್ಲಿ ಕುಳಿತು ಪಾಠ ಕೇಳಲು, ವಿಷಯ ಗ್ರಹಿಸಲು ಅದಕ್ಕೆ ಕನಿಷ್ಠ ಆರು ವರ್ಷವಾದರೂ ಬೇಕಾಗುತ್ತದೆ. ಕೆಲವು ಮಕ್ಕಳು ಅದಕ್ಕೂ ಮುನ್ನವೇ ಉತ್ತಮ ಬೆಳವಣಿಗೆ ಕಾಣಬಹುದು, ಕೆಲವರು ಆರು ವರ್ಷದ ನಂತರವೂ ಸಮರ್ಪಕ ಬೆಳವಣಿಗೆ ಕಾಣದೇ ಇರಬಹುದು. ಅಂಥ ಮಕ್ಕಳಿಗೆ ವಿಶೇಷ ರೀತಿಯ ಬೋಧನೆ, ಕಲಿಕಾ ಕ್ರಮಗಳ ಅಗತ್ಯ ಇರುತ್ತದೆ ಎನ್ನುತ್ತಾರೆ ಮನಃಶಾಸ್ತ್ರಜ್ಞರು. ಯುನಿಸೆಫ್ 3ರಿಂದ 6 ವರ್ಷದವರೆಗಿನ ಶಿಕ್ಷಣವನ್ನು ಬುನಾದಿ ಶಿಕ್ಷಣ ಎಂದೂ, 6ರಿಂದ 11ದ ವರ್ಷದವರೆಗಿನ ಶಿಕ್ಷಣವನ್ನು ಪ್ರಾಥಮಿಕ ಶಿಕ್ಷಣ ಎಂದೂ ವರ್ಗೀಕರಿಸಿದೆ. ಒಂದನೇ ತರಗತಿಗೆ ಪ್ರವೇಶ ಪಡೆಯಲು ಹೆಚ್ಚಿನ ದೇಶಗಳಲ್ಲಿ 6 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸು, ಕೆಲವು ದೇಶಗಳಲ್ಲಿ 5 ವರ್ಷ, ಇನ್ನೂ ಕೆಲವು ದೇಶಗಳಲ್ಲಿ 4 ವರ್ಷ ಮತ್ತು ಅದಕ್ಕಿಂತ ಕಡಿಮೆ ವಯಸ್ಸನ್ನೂ ನಿಗದಿಪಡಿಸಲಾಗಿದೆ.

ಮರ್ಡರ್ ಮಿಸ್ಟರಿ ಸುತ್ತ ‘ಅಜ್ಞಾತವಾಸಿ’



ಜನಾರ್ದನ್ ಚಿಕ್ಕಣ್ಣ ನಿರ್ದೇಶನದ, ‘ಕವಲುದಾರಿ’, ‘ಸಪ್ತ ಸಾಗರದಾಚೆ ಎಲ್ಲೋ’ ಖ್ಯಾತಿಯ ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ಮಾಣದ ‘ಅಜ್ಞಾತವಾಸಿ’ ಸಿನಿಮಾ ಏ.11ಕ್ಕೆ ಬಿಡುಗಡೆಯಾಗುತ್ತಿದೆ. ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಮರ್ಡರ್ ಮಿಸ್ಟರಿ ಜಾನರ್‌ನಲ್ಲಿ ಸಿನಿಮಾವಿದೆ. ಈ ಜಾನರ್‌ನಲ್ಲಿ ಹಲವು ಸಿನಿಮಾಗಳು ಬಂದಿದ್ದರೂ ಚಿತ್ರಕಥೆ ಭಿನ್ನ ಸ್ಪರ್ಶ ನೀಡಿ ತೆರೆಗೆ ತರಲಿದೆ ಚಿತ್ರತಂಡ.

ಕೃಷ್ಣರಾಜ್ ಅವರು ಅಜ್ಞಾತವಾಸಿ ಚಿತ್ರಕ್ಕೆ ಕಥೆ ಬರೆದಿದ್ದಾರೆ. ‘ಇದು ಮಲೆನಾಡಿನ ಸಣ್ಣ ಹಳ್ಳಿಯೊಂದರಲ್ಲಿ ನಡೆಯುವ ಕಾಲ್ಪನಿಕ ಕಥೆ. ಹಳ್ಳಿಯಲ್ಲಿ ಪೊಲೀಸ್ ಸ್ಟೇಷನ್ ಸ್ಥಾಪನೆಯಾಗಿ 25 ವರ್ಷವಾಗಿರುತ್ತದೆ. ಯಾವುದೇ ಸಣ್ಣ ಕೇಸ್ ಕೂಡ ಅಲ್ಲಿ ದಾಖಲಾಗಿರುವುದಿಲ್ಲ. 1997ರಲ್ಲಿ ಅಲ್ಲೊಂದು ಕೊಲೆ ಪ್ರಕರಣ ದಾಖಲಾಗುತ್ತದೆ. ಅನುಭವ ಇಲ್ಲದ ಪೊಲೀಸ್ ಅಲ್ಲಿಗೆ ಬಂದಾಗ ಈ ಕೇಸ್ ಹೇಗೆ ಬಗೆಹರಿಸುತ್ತಾರೆ ಎಂಬುವುದೇ ಕಥೆ’ ಎಂದಿದ್ದಾರೆ ಜನಾರ್ದನ್ ಚಿಕ್ಕಣ್ಣ.

‘ನಿರ್ದೇಶಕನೊಬ್ಬ ಬೆಳೆಯಲಿ ಎಂದು ಮತ್ತೊರ್ವ ನಿರ್ದೇಶಕ ಈ ರೀತಿ ಸಿನಿಮಾ ಮಾಡುತ್ತಿರುವುದು ಖುಷಿಯ ವಿಚಾರ. ಜನಾರ್ದನ್ ಕಥೆ ಹೇಳಿದಾಗ ಎಲ್ಲಾ ಪಾತ್ರಗಳ ಮೇಲೆ ಹೊಟ್ಟೆ ಕಿಚ್ಚು ಬಂದಿತ್ತು. ಎಲ್ಲಾ ಪಾತ್ರಗಳು ಅಷ್ಟು ಚೆನ್ನಾಗಿವೆ. ಒಳ್ಳೆಯ ಸಿನಿಮಾಗಳ ಸಾಲಿಗೆ ಈ ಚಿತ್ರವನ್ನು ಜನಾರ್ದನ್, ಹೇಮಂತ್ ಸೇರಿಸುತ್ತಾರೆ’ ಎಂದರು ನಟ ರಂಗಾಯಣ ರಘು. ಪಾವನ ಗೌಡ, ಸಿದ್ದು ಮೂಲಿಮನೆ, ಶರತ್ ಲೋಹಿತಾಶ್ವ, ರವಿಶಂಕರ್ ಗೌಡ ತಾರಾಬಳಗದಲ್ಲಿದ್ದಾರೆ. ಅದ್ವೈತ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ, ಭರತ್ ಎಂ.ಸಿ ಸಂಕಲನ ಚಿತ್ರಕ್ಕಿದೆ.

ಅಂತಿಮ ಹಂತದಲ್ಲಿ ‘ಕರಳೆ’ ಚಿತ್ರೀಕರಣ



‘ಕಲಿವೀರ’, ‘ಕನ್ನಡ ದೇಶದೊಳ್’ ಚಿತ್ರ ನಿರ್ದೇಶಿಸಿದ್ದ ಅವಿರಾಮ್ ಕಂಠೀರವ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ. ಚಿತ್ರಕ್ಕೆ ‘ಕರಳೆ’ ಎಂಬ ಶೀರ್ಷಿಕೆ ಇಡಲಾಗಿದ್ದು, ಇತ್ತೀಚೆಗೆ ಸಿನಿಮಾದ ಪೋಸ್ಟರ್ ಬಿಡುಗಡೆಯಾಯಿತು.

ಇದೊಂದು ನೈಜ ಘಟನೆ ಆಧಾರಿತ ಚಿತ್ರವಾಗಿದೆ ಎಂದಿದೆ ಚಿತ್ರತಂಡ. ಈಗಾಗಲೇ ಎರಡು ಹಂತದ ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ ಮೂರನೇ ಹಂತದ ಚಿತ್ರೀಕರಣಕ್ಕೆ ಸಜ್ಜಾಗಿದೆ.

‘ಇದು ಮಹಿಳಾ ಪ್ರಧಾನ ಚಿತ್ರವಾಗಿದೆ. ಚಿತ್ರದಲ್ಲಿ ಸಮಾಜದ ವಾಸ್ತವ ಅಂಶಗಳನ್ನೇ ಚಿತ್ರಿಸಲಾಗಿದೆ. ಈಗಾಗಲೇ ಚಿಂತಾಮಣಿ, ಮದ್ದೂರು, ಹುಲಿರಾಯನದುರ್ಗ ಸೇರಿ ಹಲವು ಕಡೆ 52 ದಿನ ಶೂಟಿಂಗ್ ನಡೆಸಲಾಗಿದೆ. ಇನ್ನೂ 20 ದಿನ ಶೂಟಿಂಗ್ ಬಾಕಿ ಇದೆ’ ಎಂದಿದ್ದಾರೆ ಅವಿರಾಮ್. ಭಾರತ ಮತ್ತು ಚೀನಾ ದೇಶದಲ್ಲಿ ನಡೆದ ಘಟನೆಗಳಿಗೆ ಚಿತ್ರದ ಕಥೆ ಸಾಮ್ಯತೆ ಹೊಂದಿರುವ ಕಾರಣ ಕನ್ನಡ ಮತ್ತು ಚೈನೀಸ್ ಭಾಷೆಗಳಲ್ಲಿ ಸಿನಿಮಾ ನಿರ್ಮಾಣಕ್ಕೆ ಅವಿರಾಮ್ ನಿರ್ಧರಿಸಿದ್ದಾರೆ.


ಅವಿರಾಮ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಮನೆಯೊಂದರ ಮೇಲೆ ಜನರ ಗುಂಪು ದಾಳಿ ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ಸಿಕಂದರ್’ ಸಿನಿಮಾ ನೋಡಿದ ಕೆಲವರು ಬಾಲಿವುಡ್ ನಟ ಸಲ್ಮಾನ್ ಖಾನ್ ಅವರ ಮುಂಬೈ ನಿವಾಸದ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದನೆ ಮಾಡುತ್ತಿದ್ದಾರೆ. ಸಲ್ಮಾನ್ ಖಾನ್ ಮತ್ತು ಅವರ ಕುಟುಂಬಸ್ಥರು ಸುರಕ್ಷಿತವಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದೂ ಅವರು ತಮ್ಮ ಪೋಸ್ಟ್‌ಗಳಲ್ಲಿ ಉಲ್ಲೇಖಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಈ ವಿಚಾರದ ಸತ್ಯಾಸತ್ಯತೆ ತಿಳಿಯಲು ಗೂಗಲ್‌ನಲ್ಲಿ ಕೀವರ್ಡ್ ಸರ್ಚ್ ಮಾಡಿದಾಗ, ಘಟನೆ ನಡೆದಿದೆ ಎನ್ನುವುದರ ಬಗ್ಗೆ ಯಾವುದೇ ವರದಿ ಕಂಡುಬರಲಿಲ್ಲ. ನಂತರ ಇನ್‌ವಿಡ್ ಟೂಲ್ ಮತ್ತು ಗೂಗಲ್ ಲೆನ್ಸ್ ಮೂಲಕ ವಿಡಿಯೊದ ಕೀಫ್ರೇಮ್‌ಗಳನ್ನು ಪರಿಶೀಲಿಸಿದಾಗ, ಅದು ಸಿರಿಯಾಕ್ಕೆ ಸಂಬಂಧಿಸಿದ ವಿಡಿಯೊ ಎನ್ನುವುದು ತಿಳಿಯಿತು. ಸರ್ಕಾರದ ರಕ್ಷಣಾ ಪಡೆಗಳ ಮೇಲೆ ಬಶರ್ ಅಲ್ ಅಸ್ಸಾದ್ ಬೆಂಬಲಿಗರು ದಾಳಿ ನಡೆಸಿದ ವಿಡಿಯೊ ಎನ್ನುವುದು ಹಲವು ಮಾಧ್ಯಮಗಳಲ್ಲಿ ವರದಿಯಾಗಿರುವುದು ಕಂಡಿತು. ಸಿರಿಯಾದ ವಿಡಿಯೊ ಅನ್ನು ಸಲ್ಮಾನ್ ಖಾನ್ ಮನೆಯ ವಿಡಿಯೊ ಎಂದು ಪ್ರತಿಪಾದನೆ ಮಾಡಿ ಸುಳ್ಳು ಹರಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಘನ ಉದ್ದೇಶಕ್ಕೆ ಬದುಕು ಮೀಸಲಿಡಬೇಕು

ನುಡಿ ಬೆಳಗು


ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ
168

ಹೋಮ್ ವರ್ಕ್ ಮಾಡದ ಮಕ್ಕಳು ಶಾಲೆಗೆ ಹೆದರಿ ಹೋಗ್ತಾರೆ, ಹೋಮ್ ವರ್ಕ್ ಮಾಡಿದ ಮಕ್ಕಳು ಶಾಲೆಗೆ ನಕ್ಕೋತ ಹೋಗುತ್ತಾರೆ. ಹಾಗೆ ನಾವೂ ಜೀವನದಲ್ಲಿ ಸರಿಯಾದ ಹೋಮ್ ವರ್ಕ್ ಮಾಡಿಕೊಂಡಿದ್ದರೆ ಸಾವು ಕೂಡಾ ನಮ್ಮನ್ನು ಬೆದರಿಸುವುದಿಲ್ಲ. ಅದಕ್ಕಾಗಿಯೇ ಶರಣರು ಹೇಳುತ್ತಾರೆ, ‘ಕಣ್ಣು ಮೀಸಲು ಶಿವನ; ಕೈ ಮೀಸಲು ಶಿವನ. ಕಾಲು ಮೀಸಲು ಶಿವನ; ನಾಲಗೆ ಮೀಸಲು ಶಿವನ. ಕಿವಿ ಮೀಸಲು ಶಿವನ; ನಾಸಿಕ ಮೀಸಲು ಶಿವನ. ತನುಮನವೆಲ್ಲಾ ಮೀಸಲು ಶಿವನ. ಈ ಮೀಸಲು ಬೀಸರವಾಗದಂತಿರ್ದಡೆ ಆತನೇ ಜಗದೀಶ ಕಾಣಾ ರಾಮನಾಥ’ ಎಂದು. ಯಾರು ತನು ಮನ ಎಲ್ಲವನ್ನು ಕೆಡಿಸಿಕೊಂಡಿಲ್ಲವಲ್ಲ, ಅವರು ದೇವರು ಎಂದು ಶರಣರು ಹೇಳುತ್ತಾರೆ. ದೇಶಕ್ಕಾಗಿ, ಧರ್ಮಕ್ಕಾಗಿ, ಲೋಕಕಲ್ಯಾಣಕ್ಕಾಗಿ ನಮ್ಮ ಇಂದ್ರಿಯಗಳನ್ನು ಮೀಸಲಾಗಿಡಬೇಕು ಅದು ಬ್ರಹ್ಮಚರ್ಯ.

ನೀವೆಲ್ಲ ಭಗತ್ ಸಿಂಗ್ ಬಗ್ಗೆ ಕೇಳಿದ್ದೀರಿ. ಭಗತ್ ಸಿಂಗ್‌ನನ್ನು ಲಾಹೋರ್ ಜೈಲಿನಲ್ಲಿ ಇಟ್ಟಿದ್ದರು. ಆತನನ್ನು ಗಲ್ಲಿಗೇರಿಸಲಾಯಿತು. 23 ವರ್ಷದ ಅವನಿಗೆ ಗಲ್ಲು ಶಿಕ್ಷೆಯಾಗಿದ್ದು ಯಾತಕ್ಕೆ? ಕೊಲೆ ಮಾಡಿದ್ದಕ್ಕೆ ಅಲ್ಲ; ದೇಶದ ಸಲುವಾಗಿ. ಗಲ್ಲು ಹಾಕುವ ದಿನ ಆತ ನಗುತ್ತಾ ಹೋಗುತ್ತಿದ್ದ. ಆಗ ಜೈಲರ್ ‘ಸಾಯಲು ಹೊರಟಿರುವ ನೀನು ನಗುತ್ತಿದ್ದೀಯಲ್ಲ’ ಎಂದು ಕೇಳಿದ. ಆಗ ಭಗತ್ ಸಿಂಗ್, ‘ನೀನು ಇದನ್ನು ನೋಡಲು ಪುಣ್ಯ ಮಾಡಿದ್ದಿ. ಏನನ್ನು ನೋಡಲು ಪುಣ್ಯ ಮಾಡಿದ್ದಿ? ಭಾರತದ ದೇಶಪ್ರೇಮಿಗಳು ಸಾವನ್ನೂ ಕೂಡಾ ಎಷ್ಟು ಧೈರ್ಯದಿಂದ ಎದುರಿಸುತ್ತಾರೆ ಎನ್ನುವುದನ್ನು ನೋಡಲು ನೀನು ಪುಣ್ಯ ಮಾಡಿದ್ದಿ’ ಎಂದ. ಇದು ಭಗತ್ ಸಿಂಗ್.

ಮುಂದೆ ಹೋಗುವಾಗ ತಾಯಿ ಬಂದಿರುತ್ತಾಳೆ. ಆಕೆಯ ಕಣ್ಣಿನಲ್ಲಿ ನೀರು. ಆಕೆಯ ಕಣ್ಣೀರನ್ನು ಒರೆಸಿದ ಭಗತ್ ಸಿಂಗ್, ‘ಅಮ್ಮಾ ಯಾರ ಕಣ್ಣಿನಲ್ಲಾದರೂ ನೀರು ಬರಲಿ. ಆದರೆ ಭಗತ್ ಸಿಂಗ್‌ನ ತಾಯಿಯ ಕಣ್ಣಿನಲ್ಲಿ ನೀರು ಬರಬಾರದು’ ಎಂದ. ಅದಕ್ಕೆ ತಾಯಿ ವಿದ್ಯಾವತಿ ‘ಮಗನೇ ಭಗತ್, ಇದು ದುಃಖದ ಕಣ್ಣೀರಲ್ಲ. ನನ್ನ ಗರ್ಭದ ಮೇಲೆ ಬಂದ ಸಿಟ್ಟಿನ ಕಣ್ಣೀರು. ಯಾಕೆ ನನ್ನ ಗರ್ಭದ ಮೇಲೆ ಸಿಟ್ಟು ಎಂದರೆ ಭಗತ್ ಸಿಂಗ್‌ನಂತಹ ಒಬ್ಬನೇ ಗಂಡು ಮಗುವಿಗೆ ಜನ್ಮ ನೀಡುವ ಸಾಮರ್ಥ್ಯ ನನ್ನ ಗರ್ಭಕ್ಕೆ ಇತ್ತು. ಅಕಸ್ಮಾತ್ ಹತ್ತು ಜನ ಗಂಡು ಮಕ್ಕಳಿಗೆ ಜನ್ಮ ನೀಡುವ ಶಕ್ತಿ ನನ್ನ ಗರ್ಭಕ್ಕೆ ಬಂದಿದ್ದರೆ ಆ ಹತ್ತೂ ಮಂದಿಯನ್ನು ದೇಶ ಸೇವೆ ಮಾಡಿ ಎಂದು ಕಳಿಸುತ್ತಿದ್ದೆ ನಾನು’ ಎಂದಳು. ಆಗ ಭಗತ್ ಸಿಂಗ್ ‘ಅವ್ವಾ ಬೇಸರ ಮಾಡಿಕೊಳ್ಳಬೇಡ. ಇಲ್ಲಿ ಒಬ್ಬನೇ ಭಗತ್ ಸಿಂಗ್ ಇಲ್ಲ. ಈ ದೇಶದ ಯಾವ ಯಾವ ಮನೆಯಲ್ಲಿ ವಿದ್ಯಾವತಿ ಅಂತಹ ತಾಯಿ ಇರ್ತಾಳೆ, ಅವರ ಗರ್ಭದಲ್ಲಿ ಭಗತ್ ಸಿಂಗ್ ನಂತಹ ಮಕ್ಕಳೇ ಹುಟ್ಟುತ್ತಾರೆ’ ಎಂದ. ಇದು ರಾಷ್ಟ್ರಪ್ರೇಮ. ಭಗತ್ ಸಿಂಗ್ ತನ್ನ ಜೀವನವನ್ನು ದೇಶಕ್ಕಾಗಿ ಮೀಸಲಿಟ್ಟುಬಿಟ್ಟಿದ್ದ. ನಾವೂ ಕೂಡ ಘನ ಉದ್ದೇಶಕ್ಕೆ ನಮ್ಮ ಬದುಕನ್ನು ಮೀಸಲು ಮಾಡಬೇಕು. ನಾವು ನಮ್ಮ ಬದುಕನ್ನು ಕೆಡಿಸಿಕೊಳ್ಳಬಾರದು. ಇದೇ ಬ್ರಹ್ಮಚರ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಏಪ್ರಿಲ್ 8, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ಏಕಾದಶಿ ಗಂ. 21-14 ನಕ್ಷತ್ರ: ಆಶ್ಲೇಷ ಗಂ. 07-55 ಯೋಗ: ಶೂಲ ಗಂ. 18-10 ಕರಣ: ವಣಿಜ ಗಂ. 08-33, ಮೀನ ಮಾಸದ 25 ನೇ ದಿನ, ಮಳೆನಕ್ಷತ್ರ: ರೇವತಿ 3.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-25 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 09 ಶವ್ವಾಲ್
ದಿನ ವಿಶೇಷ : ಕಾಮದ ಏಕಾದಶಿ, ಅದೃಷ್ಟ ಸಂಖ್ಯೆ : 2, 6

ಮೇಷ: ಬುದ್ಧಿವಂತಿಕೆಯನ್ನು ಉಪಯೋಗಿಸಿಕೊಂಡಲ್ಲಿ ಪಾಲುದಾರಿಕೆ ಮತ್ತು ಸಹಭಾಗಿತ್ವದ ವ್ಯವಹಾರಗಳಿಂದ ವರಮಾನ ಪಡೆದುಕೊಳ್ಳುವಿರಿ. ಸಣ್ಣ ಕೈಗಾರಿಕೋದ್ಯಮಿಗಳಿಗೆ ರಫ್ತು ವ್ಯಾಪಾರಗಳಿಂದ ಹೇರಳ ಲಾಭ.

ವೃಷಭ: ನಿರಂತರ ಕೆಲಸ ಗಳಿಂದ ಹೊರ ಬಂದು ವಿಶ್ರಾಂತಿ ಪಡೆಯಲು ಪ್ರಯತ್ನಿಸಿ. ಹಣವನ್ನು ಮಿತವಾಗಿ ಬಳಸಿ. ತೃಪ್ತಿಕರ ಜೀವನ ನಡೆಸಲು ಸಹಬಾಳ್ವೆ ಸಾಮರಸ್ಯ ಮುಖ್ಯ ಎನ್ನುವುದು ಮನವರಿಕೆ ಆಗುವುದು.

ಮಿಥುನ: ಅವಿವಾಹಿತ ಹೆಣ್ಣುಮಕ್ಕಳಿಗೆ ಅನಿರೀಕ್ಷಿತವಾಗಿ ಕಂಕಣಬಲ ಕೂಡಿಬರುವುದು. ಕುಶಲಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯ. ವೈಯಕ್ತಿಕ ವಿಷಯಗಳ ಬಗ್ಗೆ ನಿಗಾ ವಹಿಸಿ.

ಕರ್ಕಾಟಕ: ಪ್ರಾಪಂಚಿಕ ವಿಚಾರವನ್ನು ಬಿಟ್ಟು ಆಧ್ಯಾತ್ಮಿಕ ವಿಚಾರಗಳ ಕಡೆಗೆ ಗಮನ ಹರಿಯಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿನ ಪ್ರಗತಿ ಕಂಡು ಸಮಾಧಾನವಾಗುವುದು. ಷೇರು ವ್ಯವಹಾರಗಳಿಂದ ಲಾಭ ಪಡೆಯಬಹುದು.

ಸಿಂಹ: ಉತ್ತಮ ಹೆಸರಿಗೆ ಕೇಡನ್ನು ಬಯಸುವವರು ಎದುರಾಗುವರು. ಕೆಲವೊಂದು ನಿರ್ಧಾರಗಳನ್ನು ಗೌಪ್ಯವಾಗಿಡುವುದು ಉತ್ತಮ. ಅವಶ್ಯಕ ವಸ್ತುಗಳ ಗಳಿಕೆಯಿಂದ ಸಂತೋಷ ಉಂಟಾಗುತ್ತದೆ.

ಕನ್ಯಾ: ಕೆಲವು ವಾರಗಳಿಂದ ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ಬ್ಯಾಂಕ್ ಕೆಲಸಗಳ ಬಗ್ಗೆ ಓಡಾಟ ಜಾಸ್ತಿಯಾಗಲಿದೆ. ಐಟಿ ಸಂಸ್ಥೆಗಳ ಕೆಲಸಗಳಲ್ಲಿ ಒತ್ತಡ ಕಡಿಮೆಯಾಗಲಿದೆ.

ತುಲಾ: ವ್ಯಾಪಾರದಲ್ಲಿ ಅಭಿವೃದ್ಧಿ ಕಂಡು ಅದನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಹಣ ತೊಡಗಿಸುವಿರಿ. ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣದಲ್ಲಿ ಇರುವುದು. ಉದ್ದಿಮೆದಾರರಿಗೆ ಕ್ಲೇಶ ಕಂಡುಬರಲಿದೆ.

ವೃಶ್ಚಿಕ: ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆ ಅನುಭವಕ್ಕೆ ಬಂದಲ್ಲಿ ವೈದ್ಯರನ್ನು ಭೇಟಿ ಮಾಡಿ. ಸಾಹಿತ್ಯ ವಿಷಯಗಳ ಬಗ್ಗೆ ಅಥವಾ ಪೌರಾಣಿಕ ವಿಚಾರಗಳ ಬಗ್ಗೆ ಆಸಕ್ತಿ ಮೂಡಲಿದೆ.

ಧನು: ಕೋರ್ಟಿನ ಸನ್ನಿವೇಶಗಳು ಪರವಾಗಿರುವಂತೆ ತೋರುವುದರಿಂದ ನಿರಾಳವಾಗಿ ಮುಂದುವರಿಯಿರಿ. ಸ್ವಂತ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ. ಜೀವನದಲ್ಲಿ ಅಧಿಕಾರದ ಹುದ್ದೆಯನ್ನು ಹೊಂದುವಿರಿ.

ಮಕರ: ಇತರರನ್ನು ಹೀಯಾಳಿಸುವ ಅಥವಾ ನಿಂದನೆ ಮಾಡುವ ಮನೋಭಾವವನ್ನು ಕಡಿಮೆ ಮಾಡಿಕೊಳ್ಳಿ. ಉದ್ಯೋಗಾಪೇಕ್ಷಿಗಳಿಗೆ ಗುತ್ತಿಗೆ ಆಧಾರಿತ ಉದ್ಯೋಗ ಸಿಗಲಿದೆ. ಕೆಂಪು ಬಣ್ಣ ಶುಭವನ್ನು ಉಂಟುಮಾಡುತ್ತದೆ.

ಕುಂಭ: ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೂ ಆಯ-ವ್ಯಯದ ಬಗ್ಗೆ ಸದಾ ಗಮನವಿರಲಿ. ನಿರೀಕ್ಷಿಸುತ್ತಿದ್ದ ಹಣ ಕೈ ಸೇರಲಿದೆ. ಎಲ್ಲವೂ ಷರತ್ತುಗಳ ರೀತಿಯಲ್ಲಿ ಕಾಣಲಿದೆ.

ಮೀನ: ವಿದ್ಯಾರ್ಥಿಗಳಿಗೆ ಏಕಾಗ್ರತೆ ಹೊಂದಿದ ಶಿಸ್ತುಬದ್ಧ ಅಭ್ಯಾಸವು ಉತ್ತಮ ಫಲವನ್ನು ದೊರಕಿಸಿ ಕೊಡಲಿದೆ. ಕಠಿಣ ಕಾರ್ಯಾಗಾರದಿಂದ ಬಿಡುಗಡೆ ಬೇಕೆನಿಸಲಿದೆ. ವ್ಯಾಪಾರದಲ್ಲಿ ಹಣವನ್ನು ಪಡೆಯಲು ಕಷ್ಟವಾಗಬಹುದು.

ಪದಬಂಧ 6005

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಪ್ಪವಾಗಿ ಯೋಗ್ಯವಾದುದು ಬಂದಿದೆ (4)
3.ಕಮಾಲಾಕಾರದ ಸೈನ್ಯರಚನೆ (4)
5.ಲಾವಣಿ ಹೇಳುವವರು ಧರಿಸಿರುವ ಮೇಲುಹೊದಿಕೆ (3)
6.ಅವನ ಸರ ಧರಿಸಲು ಇಷ್ಟೊಂದು ಅರ್ಜೆಂಟು! (4)
8.ತಡವಾಗಿ ಬಂದು ಬಡಿಗೆ ತೋರಿಸಿದಾಗ ತಬ್ಬಿಬ್ಬು! (4)
10.ಅಂತರಿಕ್ಷದಲ್ಲಿ ಕಾಣದಂತೆ ಕಣ್ಮರೆಯಾಗುವುದು (4)
12.ಎರಡು ಮೂಲ ಬಣ್ಣಗಳ ಮಿಶ್ರಣದಿಂದಾದ ವರ್ಣ (4)
13.ಕ್ಷಾತ್ರ ಧರ್ಮಕ್ಕೆ ಸೇರಿರುವವನು (3)
16.ಕಾವ್ಯಾದಿ ಲಕ್ಷಣಗಳನ್ನು ಬಲ್ಲವನು (4)
17.ಲಿಖಿತ ದಾಖಲೆ ಪತ್ರ (4)

ಮೇಲಿಂದ ಕೆಳಕ್ಕೆ
1.ಹಗಲು ವೇಳೆಯಿದು (2)
2.ವಿಳಾಸ ಗುರುತಿಸಿದ ಶೋಧಕ (4)
3.ಪರಿಚಿತನಾದವ ಭಾರೀ ನೈಪುಣ್ಯವುಳ್ಳವನು (4)
4.ಮಾಗಿರುವ ಕಾಯಿ (2)
7.ಚೈತ್ರ ವೈಶಾಖ ಮಾಸಗಳಲ್ಲಿ ಬರುವ ಋತು (3)
9.ಬಡಕಲು ಮೈಯುಳ್ಳ ನಿರ್ಗತಿಕ (3)
11.ಅತಿ ಉಪದ್ರವ ಕೊಡುತ್ತಾ ಬೆಂಬಿಡದೆ ಕಾಡುವವ (4)
12.ಶಾಲೆಯಲ್ಲಿ ಗೆಲುವನ್ನು ಗಳಿಸಿದವನು (4)
14.ಖರ್ಚು ಕಳೆದು ಉಳಿದುದು ಉಲ್ಟಾ ಆಗಿಬಿಟ್ಟಿದೆ (2)
15.ಧಾನ್ಯದ ಸಿಪ್ಪೆ (2)

1			2	■	3			4
	■	■		■		■	■	
■	■	■	5			■	■	■
6	7			■	8		9	
■		■	■	■	■	■		■
10			11	■	12			
■	■	■	13			■	■	■
14	■	■		■		■	■	15
16				■	17			

6004ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಾದಾಚಾರಿ 3.ಸ್ವಾನುಭವ
5.ಜರ್ಜರಿತ 7.ಸಮಿತಿ
8.ನಿರಪರಾಧಿ 10.ಆಕಾಂಕ್ಷೆ
11.ಸಭಾಗೃಹ 15.ಮಹಾಪ್ರಾಣ
16.ವಿಕಸನ

ಮೇಲಿಂದ ಕೆಳಕ್ಕೆ:
1.ಪಾರಿಜ 2.ಚಾಕರಿ
3.ಸ್ವಾಮ್ಯ 4.ವದಂತಿ
6.ತವರ 7.ಸಮಾಧಿ
8.ನಿರೀಕ್ಷೆ 9.ರಾಕ್ಷಸ
10.ಆಶ್ರಮ 12.ಭಾವುಕ
13.ಹವನ 14.ಗುಣ

ಸುಡೊಕು 6390

		1		7		6		2
			2		9			
2	8			1			9	5
	5		7		4	8		
				8		5		9
8		6	5					4
6				5		9		7
	7		1	3			5	
5		3		6		1		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6389 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಮುಂಬೈ ಧಾರಣೆ

ಶೇಂಗಾ ಎಣ್ಣೆ (10 ಕೆಜಿಗೆ)

07-04-2025

ಕಚ್ಚಾ (ತೆರಿಗೆ ಬಿಟ್ಟು)	1380 (1380)
ಒಂದು ವಾರದ ಡೆಲಿವರಿ	1375 (1375)
ಪಾಮ್ ವಾರದ ಡೆಲಿವರಿ	1323 (1338)
ಸೂರ್ಯಕಾಂತಿ ಎಣ್ಣೆ ಕಚ್ಚಾ	1335 (1340)

ಆವರಣದಲ್ಲಿ ಹಿಂದಿನ ವಹಿವಾಟಿನ ದರ


ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1370 (1370)
ಸೋಯಾ (ರಿಫೈನ್ಡ್)	₹1290 (1290)
ಸೂರ್ಯಕಾಂತಿ (ರಿಫೈನ್ಡ್)	₹1400 (1405)
ಪಾಮೋಲಿನ್	₹1325 (1340)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100ಕ್ಕೆ	₹480
12 ಕ್ಕೆ	₹66

ಮೈಸೂರು

100ಕ್ಕೆ	₹470

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹281-578

ದ್ವಿತಳಿ (ಬಿ.ವಿ) ₹300-685

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹198

ಆರ್‌ಎಸ್‌ಎಸ್-5 ₹190

ಗುಡ್ ಲಾಟ್ ₹182

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹27000
ಎಸಿ	₹16520
ಆರ್‌ಪಿ	₹22000
ಆರ್‌ಸಿ	₹12475

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹9100-12000
ತಿಪಟೂರು	₹17200-18826

ವಿನಿಮಯ ದರ

$ ಡಾಲರ್	85.76
£ ಪೌಂಡ್	110.21
€ ಯುರೊ	94.12
¥ ಯೆನ್ (100ಕ್ಕೆ)	58

ಸಂಕ್ಷಿಪ್ತ ಸುದ್ದಿ

ಚಿನ್ನದ ದರ ₹1,550, ಬೆಳ್ಳಿ ₹3 ಸಾವಿರ ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹1,550 ಕಡಿಮೆಯಾಗಿದ್ದು, ₹91,450ರಂತೆ ಮಾರಾಟವಾಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹91 ಸಾವಿರ ಆಗಿದೆ.

ಬೆಳ್ಳಿ ದರ ಕೆ.ಜಿಗೆ ₹3 ಸಾವಿರ ಕಡಿಮೆಯಾಗಿ ₹92,500 ಆಗಿದೆ. ಕಳೆದ ಐದು ವಹಿವಾಟಿನಲ್ಲಿ ಬೆಳ್ಳಿ ದರವು ಕೆ.ಜಿಗೆ ₹10,500 ಇಳಿದಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ದರ ಇಳಿಕೆಯಾಗಿದ್ದರಿಂದ ದೇಶದ ಮಾರುಕಟ್ಟೆಯಲ್ಲೂ ಧಾರಣೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ರೂಪಾಯಿ ಮೌಲ್ಯ 32 ಪೈಸೆ ಕುಸಿತ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು 32 ಪೈಸೆ ಇಳಿಕೆಯಾಗಿದೆ. ಪ್ರತಿ ಡಾಲರ್ ಮೌಲ್ಯ ₹85.76 ಆಗಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 180 ದೇಶಗಳ ಮೇಲೆ ಪ್ರತಿ ಸುಂಕ ವಿಧಿಸಿದ್ದಾರೆ. ಚೀನಾ ಸಹ ಅಮೆರಿಕದ ಮೇಲೆ ಸುಂಕ ವಿಧಿಸಿದೆ. ಇದು ಜಾಗತಿಕ ಮಾರುಕಟ್ಟೆಯಲ್ಲಿ ವ್ಯಾಪಾರದ ಬಿಕ್ಕಟ್ಟು ಸೃಷ್ಟಿಸಿದ್ದರಿಂದ ಜಗತ್ತಿನಾದ್ಯಂತ ಷೇರು ಮಾರುಕಟ್ಟೆ ಕುಸಿತ ದಾಖಲಿಸಿವೆ. ಇದು ದೇಶದ ಮಾರುಕಟ್ಟೆಯ ಮೇಲೂ ಪರಿಣಾಮ ಬೀರಿದ್ದು, ರೂಪಾಯಿ ಮೌಲ್ಯ ಇಳಿಕೆಯಾಗಿದೆ.

‘ಅಮೆರಿಕಕ್ಕೆ ದೇಶದ ರಫ್ತು ಶೇ 6ರಷ್ಟು ಇಳಿಕೆ ಸಾಧ್ಯತೆ’

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಅಮೆರಿಕಕ್ಕೆ ದೇಶದ ಸರಕುಗಳ ರಫ್ತು ಪ್ರಮಾಣ ₹49,440 ಕೋಟಿಯಷ್ಟು (ಶೇ 6.41) ಕಡಿಮೆಯಾಗುವ ನಿರೀಕ್ಷೆ ಇದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಸೋಮವಾರ ಹೇಳಿದೆ.

ಸಮುದ್ರದ ಉತ್ಪನ್ನಗಳು, ಚಿನ್ನದ ಉತ್ಪನ್ನಗಳು, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಲಯದ ಸರಕುಗಳ ರಫ್ತು ಇಳಿಕೆಯಾಗಬಹುದು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ‘ಪ್ರತಿ ಸುಂಕ’ ನೀತಿಯೇ ಇಳಿಕೆಗೆ ಕಾರಣವಾಗಲಿದೆ ಹೇಳಿದೆ.

2024ರಲ್ಲಿ ಅಮೆರಿಕಕ್ಕೆ ದೇಶದ ಸರಕುಗಳ ರಫ್ತು ಮೌಲ್ಯ ₹7.70 ಲಕ್ಷ ಕೋಟಿಯಷ್ಟಾಗಿತ್ತು.ಆದರೆ, ಜವಳಿ ಉತ್ಪನ್ನಗಳು, ಉಡುಪುಗಳು, ಸೆರಾಮಿಕ್ ಉತ್ಪನ್ನಗಳು, ಅಜೈವಿಕ ರಾಸಾಯನಿಕಗಳು ಮತ್ತು ಔಷಧಗಳ ರಫ್ತಿನಲ್ಲಿ ಸಾಧಾರಣ ಗಳಿಕೆ ಕಾಣಲಿದೆ ಎಂದು ಹೇಳಿದೆ.

ತರುಣ್ ಪ್ಲಸ್: 25 ಸಾವಿರ ಫಲಾನುಭವಿಗಳು

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಮುದ್ರಾ ಯೋಜನೆಯ (ಪಿಎಂಎಂವೈ) ತರುಣ್ ಪ್ಲಸ್ ವಿಭಾಗದ ಅಡಿಯಲ್ಲಿ ಕಳೆದ ನಾಲ್ಕು ತಿಂಗಳಲ್ಲಿ 25 ಸಾವಿರ ಜನರು ನೋಂದಾಯಿಸಿಕೊಂಡಿದ್ದಾರೆ. ಇವರಿಗೆ ₹20 ಲಕ್ಷದವರೆಗೆ ಸಾಲ ನೀಡಲಾಗಿದೆ ಎಂದು ಕೇಂದ್ರ ಹಣಕಾಸು ಸೇವೆಗಳ ಕಾರ್ಯದರ್ಶಿ ಎಂ.ನಾಗರಾಜು ಸೋಮವಾರ ಹೇಳಿದ್ದಾರೆ.

ಕಳೆದ ವರ್ಷ ಜುಲೈನಲ್ಲಿ ಮಂಡಿಸಿದ್ದ 2024–25ನೇ ಸಾಲಿನ ಬಜೆಟ್‌ನಲ್ಲಿ ತರುಣ್ ಪ್ಲಸ್ ಅಡಿಯಲ್ಲಿನ ಸಾಲದ ಮಿತಿಯನ್ನು ₹10 ಲಕ್ಷದಿಂದ ₹20 ಲಕ್ಷಕ್ಕೆ ಹೆಚ್ಚಿಸುವ ಕುರಿತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಪ್ರಸ್ತಾಪಿಸಿದ್ದರು. ಅಕ್ಟೋಬರ್ 25ರಂದು ಇದು ಜಾರಿಗೆ ಬಂದಿತ್ತು.

ನಾಲ್ಕು ತಿಂಗಳಲ್ಲಿ 24,557 ಹೊಸ ಸಾಲಗಾರರು ತರುಣ್ ಪ್ಲಸ್ ವರ್ಗದ ಅಡಿಯಲ್ಲಿ ಸಾಲವನ್ನು ಪಡೆದಿದ್ದು, ಇದರ ಮೊತ್ತ ₹3,790 ಕೋಟಿಗಳಷ್ಟಾಗಿದೆ.

ಕೊಯ್ಲು ಆರಂಭ; ಕಳೆಗಟ್ಟಿದ ಮಾವು ಮಂಡಿಗಳು: ಉತ್ತಮ ಬೆಲೆಯ ನಿರೀಕ್ಷೆ

ಮಂಡಿಗೆ ಬಂದ ಮಾವಿನಕಾಯಿ

• ಓದೇಶ ಸಕಲೇಶಪುರ



ರಾಮನಗರದ ಎಪಿಎಂಸಿಯಲ್ಲಿರುವ ಮಾವು ಮಂಡಿಯಲ್ಲಿ ಮಾರಾಟಕ್ಕೆ ಸಿದ್ಧವಾಗಿರುವ ಮಾವಿನಕಾಯಿಗಳು

ರಾಮನಗರ: ಹಣ್ಣುಗಳ ರಾಜ ಎನಿಸಿರುವ ಮಾವಿನಹಣ್ಣಿನ ಋತು ಶುರುವಾಗಿದೆ. ಮಳೆ ಬೀಳುತ್ತಿದ್ದಂತೆಯೇ ಜಿಲ್ಲೆಯಲ್ಲಿ ಮಾವಿನ ಕೊಯ್ಲು ಶುರುವಾಗಿದೆ. ವಿವಿಧ ಜಾತಿಯ ಕಾಯಿಗಳು ಇಲ್ಲಿನ ಎಪಿಎಂಸಿಯಲ್ಲಿರುವ ಮಾವು ಮಂಡಿಗಳಿಗೆ ಬರತೊಡಗಿವೆ. ಸದ್ಯದಲ್ಲೇ ಹಣ್ಣುಗಳ ಘಮಲು ಇಡೀ ಮಾರುಕಟ್ಟೆಯನ್ನು ಆವರಿಸಲಿದೆ.

ಬರ ಮತ್ತು ಹವಾಮಾನ ವೈಪರೀತ್ಯ ದಿಂದಾಗಿ ಕಳೆದ ಸಲ ಶೇ 90ರಷ್ಟು ಬೆಳೆ ಕೈ ಕೊಟ್ಟಿತ್ತು. ಮಾವು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದರು. ಈ ಸಲ ಮಳೆ ಜೊತೆಗೆ ಬೆಳೆಯೂ ಚನ್ನಾಗಿದ್ದು, ಉತ್ತಮ ಬೆಲೆಯ ನಿರೀಕ್ಷೆ ಮೂಡಿಸಿದೆ.

ರಾಜ್ಯದಲ್ಲೇ ಮೊದಲ ಬಾರಿಗೆ ರಾಮನಗರ ಜಿಲ್ಲೆಯ ಮಾವು ಮಾರುಕಟ್ಟೆ ಪ್ರವೇಶಿಸುವುದು ವಾಡಿಕೆ. ಬಳಿಕ ಕೋಲಾರ, ಹುಬ್ಬಳ್ಳಿ– ಧಾರವಾಡ ಮಾವು ಮಾರುಕಟ್ಟೆ ಪ್ರವೇಶಿಸುತ್ತವೆ.

ಬಾದಾಮಿ ಹೆಚ್ಚು: ‘ರಾಮನಗರ ಜಿಲ್ಲೆಯ ಬೆಳೆಗಾರರು ಶೇ 90ರಷ್ಟು ಬಾದಾಮಿ ತಳಿಯ ಮಾವು ಬೆಳೆಯುತ್ತಾರೆ. ಉಳಿದ ಶೇ 5ರಷ್ಟು ಸೇಂದೂರ ಬಿಟ್ಟರೆ ರಸಪೂರಿ, ತೋತಾಪುರಿ, ಅಮರಪಾಲಿ, ಮಲ್ಲಿಕಾ ತಳಿಯ ಮಾವನ್ನು ಅತಿ ಕಡಿಮೆ ಪ್ರಮಾಣದಲ್ಲಿ ಜಿಲ್ಲೆಯ ಕೆಲವೆಡೆ ಬೆಳೆಯಲಾಗುತ್ತದೆ’ ಎಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಎಂ.ಎಸ್. ರಾಜು ‘ಪ್ರಜಾವಾಣಿ’ಗೆ ತಿಳಿಸಿದರು.

ಸಗಟು ದರ ಪ್ರತಿ ಕೆ.ಜಿ.ಗೆ (₹ಗಳಲ್ಲಿ)

ಮಾವು	ದರ (ಕನಿಷ್ಠ-ಗರಿಷ್ಠ)
ಬಾದಾಮಿ	120-160
ಸೇಂದೂರ	70-100
ರಸಪೂರಿ	150
ಮಲ್ಲಿಕಾ	110-120
ತೋತಾಪುರಿ	20-25

ಅಂಕಿ ಅಂಶ

31,723 ಹೆಕ್ಟೇರ್ ಮಾವು ಬೆಳೆಯುವ ಪ್ರದೇಶ

30 ಸಾವಿರ ಜಿಲ್ಲೆಯಲ್ಲಿರುವ ಮಾವು ಬೆಳೆಗಾರರು

‘ತೋಟಗಾರಿಕಾ ಇಲಾಖೆ ಸಿಬ್ಬಂದಿ ಜಿಲ್ಲೆಯ ಹಲವು ತೋಟಗಳಿಗೆ ತೆರಳಿ ಸಮೀಕ್ಷೆ ನಡೆಸಿದ್ದು, ಶೇ 70ರಷ್ಟು ಇಳುವರಿ ಚೆನ್ನಾಗಿರುವುದು ಕಂಡು ಬಂದಿದೆ. ಇತ್ತೀಚೆಗೆ ಸುರಿದ ಮಳೆಯಿಂದ ಮಾವಿನ ಕಾಯಿಗಳಿಗೆ ಅಷ್ಟಾಗಿ ಹೊಡೆತ ಬಿದ್ದಿಲ್ಲ. ಸದ್ಯ ಮಾರುಕಟ್ಟೆಯ ಕೆಲವೆಡೆ ಸೇಂದೂರ ಹಣ್ಣು ಸಿಗುತ್ತಿವೆ. ಈ ತಿಂಗಳ ಮೂರನೇ ವಾರದಲ್ಲಿ ಬಾದಾಮಿ ಮಾವು ಮಾರುಕಟ್ಟೆ ಪ್ರವೇಶಿಸಲಿದೆ. ಜೂನ್ ಅಂತ್ಯದವರೆಗೆ ಮಾವಿನ ಋತು ಇರಲಿದೆ’ ಎಂದು ಹೇಳಿದರು.

ಮಳೆಗೆ ಉದುರಿದ ಕಾಯಿ: ‘ನೀರಾವರಿ ವ್ಯವಸ್ಥೆ ಮಾವಿನ ತೋಟಗಳಲ್ಲಿ ಫಸಲು ಉತ್ತಮವಾಗಿದ್ದು, ಮಳೆ ಯಾಶ್ರಿತ ತೋಟಗಳಲ್ಲಿ ಅಷ್ಟಾಗಿ ಹೇಳಿಕೊಳ್ಳು ವಂತಿಲ್ಲ. ಈಗಾಗಲೇ ಸುರಿದ ಮಳೆಗೆ ಸಣ್ಣ ಕಾಯಿಗಳು ಉದುರಿವೆ’ ಎಂದು ಮಾವು ಬೆಳೆಗಾರರಾದ ಶಿವಕುಮಾರ್ ಹಾಗೂ ಕುಮಾರ್ ಹೇಳಿದರು.

‘ಕಾಯಿಗಳು ಮರದಲ್ಲೇ ಹಣ್ಣಾಗಲಿ ಎಂದು ಇನ್ನೂ ಸ್ವಲ್ಪ ದಿನ ಬಿಡಬೇಕು ಎನಿಸುತ್ತದೆ. ಆದರೆ, ಮತ್ತೇನಾದರೂ ಜೋರಾಗಿ ಮಳೆ ಸುರಿದರೆ ಅಥವಾ ಆಲಿಕಲ್ಲು ಮಳೆಯಾದರೆ ಕಾಯಿಗಳು ನೆಲ ಕಚ್ಚಲಿವೆ. ಹಾಗಾಗಿ, ಬಲಿತ ಕಾಯಿಗಳನ್ನು ಕೊಯ್ಲು ಮಾಡಿ ಮಂಡಿಗೆ ತಂದು ಹಾಕುತ್ತಿದ್ದೇವೆ’ ಎಂದು ಅವರು ತಿಳಿಸಿದರು.

ಶೇ 70ರಷ್ಟು ಇಳುವರಿ ನಿರೀಕ್ಷೆ

‘ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಲ ಮಾವು ಬೆಳೆ ಉತ್ತಮವಾಗಿದ್ದು, ಶೇ 70ರಷ್ಟು ಇಳುವರಿ ನಿರೀಕ್ಷಿಸಲಾಗಿದೆ. ಕೊಯ್ಲು ಶುರುವಾಗಿ ಕಾಯಿಗಳು ಮಂಡಿಗೆ ಬರಲು ಶುರುವಾಗಿದೆ. ಕೆಲವೆಡೆ ಸೇಂದೂರ ಹಣ್ಣು ಸಿಗುತ್ತಿವೆ. ಇನ್ನೂ 20 ದಿನದೊಳಗೆ ಪೂರ್ಣ ಪ್ರಮಾಣದಲ್ಲಿ ಹಣ್ಣುಗಳು ಮಾರುಕಟ್ಟೆಗೆ ಬರಲಿವೆ. ಕಾಯಿಗಳನ್ನು ಹಣ್ಣು ಮಾಡಲು ಯಾವುದೇ ರಾಸಾಯನಿಕ ಸಿಂಪಡಿಸದೆ, ಸ್ವಾಭಾವಿಕವಾಗಿಯೇ ಹಣ್ಣು ಮಾಡಿ ಗ್ರಾಹಕರಿಗೆ ಮಾರಾಟ ಮಾಡುವಂತೆ ಬೆಳೆಗಾರರು ಮತ್ತು ವ್ಯಾಪಾರಿಗಳಿಗೆ ಜಾಗೃತಿ ಮೂಡಿಸುತ್ತಿದ್ದೇವೆ’ ಎಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಎಂ.ಎಸ್. ರಾಜು ‘ಪ್ರಜಾವಾಣಿ’ಗೆ ತಿಳಿಸಿದರು.

ಹೊರ ರಾಜ್ಯಗಳಿಗೆ ಮಾವು

‘ಜಿಲ್ಲೆಯ ಮಾವು ರಾಜ್ಯದ ವಿವಿಧ ಭಾಗ ಅಲ್ಲದೇ ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕೇರಳ, ಗುಜರಾತ್‌ಗೆ ಹೋಗುತ್ತದೆ. ಕಾಯಿಗಳ ಕೊಯ್ಲು ಶುರುವಾಗುತ್ತಿದ್ದಂತೆ ಅಲ್ಲಿನ ವ್ಯಾಪಾರಿಗಳು ಬಂದು ಖರೀದಿಸುತ್ತಾರೆ. ಹಿಂದೆ ನಾವೇ ತೋಟಗಳನ್ನು ವಹಿಸಿಕೊಂಡು ಕೊಯ್ಲು ಮಾಡುತ್ತಿದ್ದೆವು. ಇತ್ತೀಚೆಗೆ ಹವಾಮಾನ ವೈಪರೀತ್ಯದಿಂದಾಗಿ ವ್ಯಾಪಾರಿಗಳು ತೋಟಗಳನ್ನು ವಹಿಸಿಕೊಳ್ಳುವುದು ಕಡಿಮೆಯಾಗಿದೆ. ರೈತರೇ ಕೊಯ್ಲು ಮಾಡಿಕೊಂಡು ತರುತ್ತಾರೆ. ಈ ಸಲ ಕೆಲವೆಡೆ ಉತ್ತಮ ಫಸಲು ಇದ್ದರೆ, ಉಳಿದೆಡೆ ಅಷ್ಟಕಷ್ಟೆ ಇದೆ ಎಂದು ರೈತರು ಹೇಳುತ್ತಿದ್ದಾರೆ’ ಎಂದು ರಾಮನಗರದ ಎಪಿಎಂಸಿಯಲ್ಲಿ ನಾಲ್ಕು ದಶಕದಿಂದ ಮಾವು ವ್ಯಾಪಾರ ಮಾಡುತ್ತಿರುವ ಎಚ್.ಎಂ.ಎ ಟ್ರೇಡರ್ಸ್ ಮಾಲೀಕ ಅಂಜುಂ ಪಾಷಾ ‘ಪ್ರಜಾವಾಣಿ’ ತಿಳಿಸಿದರು.

ಷೇರುಪೇಟೆಯಲ್ಲಿ ಮಹಾಪತನ

ಒಂದನೇ ಪುಟದಿಂದ...

ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ನಿಫ್ಟಿ ಸೂಚ್ಯಂಕವು 742 ಅಂಶ (ಶೇ 3.24) ಕುಸಿಯಿತು. ವಹಿವಾಟಿನ ನಡುವಿನಲ್ಲಿ ಸೂಚ್ಯಂಕವು 1,160 ಅಂಶಗಳವರೆಗೆ ಕುಸಿದಿತ್ತು. ಸೆನ್ಸೆಕ್ಸ್‌ನಲ್ಲಿ ಹಿಂದುಸ್ತಾನ್ ಯೂನಿಲಿವರ್ ಹೊರತುಪಡಿಸಿದರೆ ಬೇರೆ ಎಲ್ಲ ಕಂಪನಿಗಳ ಷೇರು ಮೌಲ್ಯ ಕುಸಿಯಿತು.

ಶುಕ್ರವಾರದ ವಹಿವಾಟಿನಲ್ಲಿ ಅಮೆರಿಕದ ಷೇರುಪೇಟೆಗಳು ತೀವ್ರ ಕುಸಿತ ದಾಖಲಿಸಿದ್ದವು. ನಾಸ್ಡಾಕ್ ಮತ್ತು ಡವ್ ಸೂಚ್ಯಂಕಗಳು ಕನಿಷ್ಠ ಶೇ 5.5ರಷ್ಟು ಕುಸಿದಿದ್ದವು.

2024ರ ಜೂನ್ 4ರಂದು ನಡೆದ ವಹಿವಾಟಿನಲ್ಲಿ ಸೆನ್ಸೆಕ್ಸ್ ಶೇ 5.74ರಷ್ಟು, ನಿಫ್ಟಿ ಶೇ 5.93ರಷ್ಟು ಕುಸಿದಿದ್ದವು. ಆ ದಿನದ ನಂತರದ ಭಾರಿ ಕುಸಿತ ಸೋಮವಾರ ದಾಖಲಾಗಿದೆ. ಕೋವಿಡ್ ಸಾಂಕ್ರಾಮಿಕ ಹರಡುವುದನ್ನು ತಡೆಯಲು ದೇಶದಲ್ಲಿ ಲಾಕ್‌ಡೌನ್ ಜಾರಿಗೊಳಿಸಿದಾಗ ಸೆನ್ಸೆಕ್ಸ್ ಮತ್ತು ನಿಫ್ಟಿ 2020ರ ಮಾರ್ಚ್ 23ರಂದು ಶೇ 13ಕ್ಕೂ ಹೆಚ್ಚು ಕುಸಿತ ದಾಖಲಿಸಿದ್ದವು.

ಬೇರೆ ದೇಶಗಳ ಜೊತೆ ಹೋಲಿಸಿದರೆ, ಟ್ರಂಪ್ ಅವರ ನೀತಿಯಿಂದಾಗಿ ಭಾರತದ ಮೇಲೆ ಆಗುವ ಪರಿಣಾಮವು ಸೀಮಿತವಾಗಿ ಇರಬಹುದಾದರೂ, ಹೂಡಿಕೆದಾರರು ಎಚ್ಚರಿಕೆಯಿಂದ ಹೆಜ್ಜೆ ಇರಿಸಬೇಕು ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಸಲಹೆ ನೀಡಿದ್ದಾರೆ.

ಷೇರು ಮಾರಾಟದ ಒತ್ತಡವು ಅದೆಷ್ಟು ತೀವ್ರವಾಗಿತ್ತೆಂದರೆ ಬಿಎಸ್‌ಇಯ ಎಲ್ಲ ವಲಯಗಳ ಸೂಚ್ಯಂಕಗಳೂ ಇಳಿಕೆ ಕಂಡವು.

ತಜ್ಞರು ಏನು ಹೇಳಿದರು?

ಅಮೆರಿಕ ಹೇರಿರುವ ಸುಂಕ ಮತ್ತು ಅದಕ್ಕೆ ಪ್ರತಿಯಾಗಿ ಇತರ ದೇಶಗಳು ತಾವೂ ಸುಂಕ ಹೇರುವ ಕ್ರಮವು ವಾಣಿಜ್ಯ ಸಮರಕ್ಕೆ ದಾರಿ ಮಾಡಿಕೊಡಬಹುದು ಎಂಬ ಭೀತಿಯಿಂದಾಗಿ ಮಾರುಕಟ್ಟೆಗಳು ಕುಸಿದಿವೆ. ಅಮೆರಿಕದಲ್ಲಿ ಹಣದುಬ್ಬರ ಹೆಚ್ಚಳ, ಬೆಳವಣಿಗೆ ಕುಂಠಿತವಾಗಿ ಆರ್ಥಿಕ ಹಿಂಜರಿತ ಎದುರಾಗುವ ಸಾಧ್ಯತೆಯ ಕಾರಣದಿಂದಾಗಿ ಐ.ಟಿ ಮತ್ತು ಲೋಹ ವಲಯದ ಷೇರುಗಳು ಹೆಚ್ಚು ಕುಸಿತ ಕಂಡಿವೆ.

ವಿನೋದ್ ನಾಯರ್, ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ

ಅಮೆರಿಕ ಷೇರುಪೇಟೆಗಳಲ್ಲಿ ಶುಕ್ರವಾರ ಕಂಡುಬಂದ ಕುಸಿತದ ನಂತರ, ವಿಶ್ವದ ಇತರ ಸೂಚ್ಯಂಕಗಳು ಕುಸಿಯುವುದು ಖಚಿತವಾಗಿತ್ತು. ಇಸ್ಪೀಟಿನ ಕಾರ್ಡ್ ಬಳಸಿ ಕಟ್ಟಿದ ಮನೆ ಕುಸಿದುಬಿದ್ದಂತೆ ಅವೂ ಕುಸಿದವು. ಟ್ರಂಪ್ ಘೋಷಿಸಿರುವ ಪ್ರತಿಸುಂಕವು ಆರ್ಥಿಕ ಹಿಂಜರಿತಕ್ಕೆ ಕಾರಣವಾಗಬಹುದು ಎಂಬ ಭೀತಿ ಮನೆಮಾಡಿದೆ.

ಪ್ರಶಾಂತ್ ತಾಪ್ಸೆ, ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಹಿರಿಯ ಉಪಾಧ್ಯಕ್ಷ

ತಹವ್ವುರ್ ರಾಣಾ ಅರ್ಜಿ ತಿರಸ್ಕಾರ

ನ್ಯೂಯಾರ್ಕ್ (ಪಿಟಿಐ): ಭಾರತದ ವಶಕ್ಕೆ ಒಪ್ಪಿಸುವ ಕುರಿತ ಆದೇಶಕ್ಕೆ ತಡೆಯಾಜ್ಞೆ ಕೋರಿ ಮುಂಬೈನಲ್ಲಿ ದಾಳಿಯ ಕೃತ್ಯದ ಆರೋಪಿ ತಹವ್ವುರ್ ರಾಣಾ ಸಲ್ಲಿಸಿದ್ದ ಅರ್ಜಿಯನ್ನು ಅಮೆರಿಕದ ಸುಪ್ರೀಂ ಕೋರ್ಟ್ ತಳ್ಳಿಹಾಕಿದೆ.

ಪಾಕಿಸ್ತಾನದ ಮೂಲದ, ಕೆನಡಾ ಪ್ರಜೆಯಾಗಿರುವ 64 ವರ್ಷ ವಯಸ್ಸಿನ ರಾಣಾ ಪ್ರಸ್ತುತ ಲಾಸ್ ಏಂಜಲೀಸ್‌ನ ಜೈಲಿನಲ್ಲಿ ಇದ್ದಾನೆ. ರಾಣಾ ಅರ್ಜಿಯನ್ನು ತಿರಸ್ಕರಿಸಲಾ ಗಿದೆ ಎಂಬುದನ್ನು ಸುಪ್ರೀಂ ಕೋರ್ಟ್ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಪ್ರತಿಸುಂಕ: ಚರ್ಚೆಗೆ 50 ರಾಷ್ಟ್ರಗಳ ಒಲವು

ಫ್ಲಾರಿಡಾ (ಎ.ಪಿ): ‘ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ‘ಪ್ರತಿಸುಂಕ’ ನೀತಿಯಿಂದ ತತ್ತರಿಸಿರುವ ಸುಮಾರು 50 ರಾಷ್ಟ್ರಗಳು ಅಮೆರಿಕದ ಜೊತೆ ಸಂಧಾನಕ್ಕೆ ಮುಂದಾಗಿವೆ’ ಎಂದು ಶ್ವೇತಭವನದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಜಾಗತಿಕ ವ್ಯಾಪಾರ ವ್ಯವಸ್ಥೆಯ ಏರುಪೇರು, ಮಾರುಕಟ್ಟೆಯ ಹಿಂಜರಿತ ಕುರಿತು ಈ ದೇಶಗಳು ಕಳವಳ ವ್ಯಕ್ತಪಡಿಸಿವೆ ಎಂದು ಟ್ರಂಪ್ ಅವರ ಸಲಹೆಗಾರರು ಅಭಿಪ್ರಾಯಪಟ್ಟಿದ್ದಾರೆ.


ಟ್ರಂಪ್ ಆಡಳಿತದ ಪ್ರತಿಸುಂಕ ವ್ಯವಸ್ಥೆ ಬುಧವಾರ ಜಾರಿಗೆ ಬಂದಿದೆ. ಮಾರುಕಟ್ಟೆಯಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ. ಆರ್ಥಿಕ ಸ್ಥಿತಿ ಕುರಿತು ಅಸ್ಪಷ್ಟತೆ ಮುಂದುವರಿದಿದೆ.

ಅಮೆರಿಕದ ಆರ್ಥಿಕ ಇಲಾಖೆಯ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್, ‘ನ್ಯಾಯಯುತ-ವಲ್ಲದ ವ್ಯಾಪಾರ ಕುರಿತು ಚರ್ಚಿಸುವ ಪ್ರಶ್ನೆಯೇ ಇಲ್ಲ. ಚರ್ಚೆಗೆ ಆಸಕ್ತಿ ಹೊಂದಿರುವ ರಾಷ್ಟ್ರಗಳ ಪ್ರಸ್ತಾವ ಏನು? ಅದು ವಿಶ್ವಾಸಾರ್ಹವೇ ಎಂದಷ್ಟೇ ಅಮೆರಿಕ ಗಮನಿಸಲಿದೆ’ ಎಂದಿದ್ದಾರೆ.

ಶ್ವೇತಭವನದ ಆರ್ಥಿಕ ಸಲಹೆಗಾರ ಕೆವಿನ್ ಹ್ಯಾಸೆಟ್ ಅವರು, ‘ಅಮೆರಿಕದ ವ್ಯಾಪಾರ ಪ್ರತಿನಿಧಿಗಳ ಕಚೇರಿ ಮಾಹಿತಿ ಆಧರಿಸಿ 50 ರಾಷ್ಟ್ರಗಳು ಚರ್ಚೆಗೆ ಮುಂದಾಗಿವೆ‘ ಎಂದರು.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಸೋಮವಾರ ಶ್ವೇತಭವನಕ್ಕೆ ಭೇಟಿ ನೀಡುತ್ತಿದ್ದು, ಪ್ರತಿಸುಂಕ ನೀತಿ ಜೊತೆಗೆ ಗಾಜಾದ ಯುದ್ಧಸ್ಥಿತಿ ಕುರಿತೂ ಚರ್ಚಿಸುವರು. ಇಸ್ರೇಲ್‌ಗೆ ಅನ್ವಯಿಸುವಂತೆ ಹೊಸ ನೀತಿನಲ್ಲಿ ಅಮೆರಿಕ ಶೇ 17ರಷ್ಟು ಪ್ರತಿಸುಂಕ ಹೇರಿದೆ.

ಚೀನಾ ಮೇಲೆ ಇನ್ನಷ್ಟು ಸುಂಕ –ಎಚ್ಚರಿಕೆ



ವಾಷಿಂಗ್ಟನ್ (ಎ.ಪಿ): ‘ಚೀನಾದ ಉತ್ಪನ್ನಗಳ ಮೇಲೆ ಮತ್ತಷ್ಟು ಅಧಿಕ ಪ್ರತಿಸುಂಕ ವಿಧಿಸಲಾಗುವುದು’ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಎಚ್ಚರಿಸಿದ್ದಾರೆ.

ಪ್ರತಿಸುಂಕಕ್ಕೆ ಪ್ರತಿರೋಧ ತೋರಲಾಗುವುದು ಎಂದು ಚೀನಾ ಕಳೆದ ವಾರ ಪ್ರಕಟಿಸಿತ್ತು. ಈ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲ ತಾಣದಲ್ಲಿ ಟ್ರಂಪ್ ಈ ಮಾತು ಹೇಳಿದ್ದಾರೆ.

‘ಟ್ರೂತ್’ ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ಅವರು, ‘ಚೀನಾ ವಿಧಿಸಿರುವ ಹೆಚ್ಚುವರಿ ಶೇ 34 ಸುಂಕವನ್ನು ಏ.8 ರೊಳಗೆ ಹಿಂಪಡೆಯದಿದ್ದರೆ ಅಮೆರಿಕ 9ರಿಂದ ಅನ್ವಯವಾಗುವಂತೆ ಚೀನಾದ ಉತ್ಪನ್ನಗಳ ಮೇಲೆ ಶೇ 50 ರಷ್ಟು ಪ್ರತಿ ಸುಂಕ ವಿಧಿಸಲಿದೆ’ ಎಂದು ಹೇಳಿದ್ದಾರೆ.

ಫ್ಲಾರಿಡಾ ವರದಿ (ಎ.ಪಿ): ಪ್ರತಿಸುಂಕವು ಮಾರುಕಟ್ಟೆಗೆ ಚೇತರಿಕೆ ನೀಡುವ ‘ಔಷಧ’ವಾಗಿದ್ದು, ಸುಂಕ ಕುರಿತ ಒತ್ತಡಕ್ಕೆ ಮಣಿಯುವುದಿಲ್ಲ’ ಎಂದು ಟ್ರಂಪ್ ತಿಳಿಸಿದ್ದಾರೆ.

ಬಿಸಿಲ ಬೇಗೆ: ಪೌರಕಾರ್ಮಿಕರ ಹಿತ ನಿರ್ಲಕ್ಷ್ಯ ಸಲ್ಲ–ಹೈಕೋರ್ಟ್

ಮುನ್ನೆಚ್ಚರಿಕೆ ಕ್ರಮ ಜಾರಿಗೆ ಕಟ್ಟಪ್ಪಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಪೌರಕಾರ್ಮಿಕರು ಅಥವಾ ನೈರ್ಮಲ್ಯ ಕಾರ್ಮಿಕರನ್ನು ಬಿಸಿಗಾಳಿ ಹಾಗೂ ಸೂರ್ಯನ ಅತಿಯಾದ ತಾಪಮಾನದಿಂದ ರಕ್ಷಿಸುವಂತೆ ಹೊರಡಿಸಲಾಗಿರುವ ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಕಟ್ಟಪ್ಪಣೆ ಮಾಡಿದೆ.

ಈ ಸಂಬಂಧ, ‘ಅಖಿಲ ಭಾರತ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್’ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ಅರ್ಜಿದಾರರ ಕೋರಿಕೆಗೆ ಸಂಬಂಧಿಸಿದಂತೆ ಪೌರಾಡಳಿತ ನಿರ್ದೇಶಕರು ಇದೇ 2ರಂದು ಹೊರಡಿಸಿರುವ ಸುತ್ತೋಲೆಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರಲ್ಲದೆ, ‘ಸುತ್ತೋಲೆಯ ಅನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ‘ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು’ ಎಂದು ಆದೇಶಿಸಿತು. ‘ಒಂದು ವೇಳೆ ಸುತ್ತೋಲೆ ಜಾರಿಗೊಳಿಸುವಲ್ಲಿ ಸರ್ಕಾರ ವಿಫಲವಾಗಿರುವುದು ಕಂಡು ಬಂದರೆ ಅರ್ಜಿದಾರರು ಪುನಃ ನ್ಯಾಯಾಲಯದ ಮೆಟ್ಟಿಲೇರಲು ಸ್ವತಂತ್ರರಿದ್ದಾರೆ’ ಎಂದು ಸೂಚಿಸಿ ಅರ್ಜಿ ವಿಲೇವಾರಿ ಮಾಡಿತು.

‘ಬೇಸಿಗೆ ಸಮಯದಲ್ಲಿ ಪೌರ ಕಾರ್ಮಿಕರ ರಕ್ಷಣೆಗೆ ಸಂಬಂಧಿಸಿದಂತೆ ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ 2025ರ ಮಾರ್ಚ್ 12ರಂದು ಹೊರಡಿಸಿರುವ ಆದೇಶವನ್ನು ಪಾಲನೆ ಮಾಡುವಂತೆ ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಮುನ್ನೆಚ್ಚರಿಕೆ ಕ್ರಮಗಳು

- ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಶಾಖದ ಅಲೆಗಳ ದುಷ್ಪರಿಣಾಮ ನಿಭಾಯಿಸಲು ನಿರ್ದಿಷ್ಟ ಸಮಸ್ಯೆ ಹಾಗೂ ಶಾಖದ ಅಲೆಗಳ ನೇರ ದುಷ್ಪರಿಣಾಮಗಳಿಗೆ ಒಳಗಾಗುವ ಪ್ರದೇಶಗಳನ್ನು ಗುರುತಿಸಿ ಕ್ರಮ ವಹಿಸಬೇಕು
- ಕಟ್ಟಡ ನಿರ್ಮಾಣ ಕಾರ್ಮಿಕರು, ಪೌರಕಾರ್ಮಿಕರು, ಅಂಗನವಾಡಿ ನೌಕರರು, ಅಸಂಘಟಿತ ಕಾರ್ಮಿಕರು ಹೆಚ್ಚಿನ ರೀತಿಯಲ್ಲಿ ಶಾಖದ ಅಲೆಗಳಿಗೆ ಗುರಿಯಾಗುವ ಸಂಭವ ಇರುತ್ತದೆ. ಹೀಗಾಗಿ, ಕಾರ್ಮಿಕರ ಒತ್ತಡ ಕಡಿಮೆ ಮಾಡಲು ಸಮಯ ಬದಲಾವಣೆ, ಸಾರ್ವಜನಿಕರು ಕಚೇರಿಗೆ ಭೇಟಿ ನೀಡುವ ಸಮಯ ಬದಲಾಯಿಸುವುದು
- ಪೌರಕಾರ್ಮಿಕರ ಕಾರ್ಯ ನಿರ್ವಹಣೆಗೆ ಅನುಕೂಲವಾಗಲು ಸ್ಥಳೀಯ ಬಿಸಿಲಿನ ಪರಿಸ್ಥಿತಿಗೆ ಅನುಗುಣವಾಗಿ ಸಮಯ ನಿಗದಿಪಡಿಸಬೇಕು. ಕೆಲಸದ ಸಮಯದಲ್ಲಿ ಕುಡಿಯುವ ನೀರು ಹಾಗೂ ಉಪಾಹಾರ ಒದಗಿಸಬೇಕು
- ಅಸಂಘಟಿತ ಹಾಗೂ ಕಟ್ಟಡ ಕಾರ್ಮಿಕರು ಕೆಲಸ ಮಾಡುವ ಸ್ಥಳಗಳಲ್ಲಿ ಆಟದ ಮೈದಾನ ಹಾಗೂ ಪಾರ್ಕ್‌ಗಳಲ್ಲಿ ಕುಡಿಯುವ ನೀರು ಪೂರೈಸುವುದು
- ರಾಜ್ಯದಲ್ಲಿ ಶಾಖದ ಪರಿಣಾಮಗಳಿಗೆ ಒಳಗಾಗುವ ಜನರ ನಿಖರ ಸಂಖ್ಯೆ ತಿಳಿಯಲು ಸಂಬಂಧಿಸಿದ ಸಿಬ್ಬಂದಿಗೆ ‘ಹೀಟ್ ವೇವ್ ವಿಜ್ಞಾನ’ ಅರ್ಥ ಮಾಡಿಸಬೇಕು
- ಮಾರುಕಟ್ಟೆ, ಬಸ್ ನಿಲ್ದಾಣ ಮತ್ತು ಜನಸಂದಣಿ ಸ್ಥಳಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಹಾಗೂ ನೆರಳಿನ ವ್ಯವಸ್ಥೆ ಕಲ್ಪಿಸುವುದು

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ	
ಅಪಿ	52601-53002
ಬೆಟ್ಟೆ	24700-25100
ಕೆಂಪುಗೋಟು	19600-20000
ರಾಶಿ	52100-52500
ಶಿವಮೊಗ್ಗ	
ಬೆಟ್ಟೆ	50599-55599
ಗೊರಬಲು	17169-25559
ರಾಶಿ	42669-54689
ಸರಕು	62799-62799

ಸಿದ್ದಾಪುರ	
ಬಿಳಿಗೋಟು	24989-29809
ಚಾಲಿ	34399-40509
ಕೋಕ	14319-22689
ಕೆಂಪುಗೋಟು	19219-21609
ರಾಶಿ	40499-47099
ತಟ್ಟಿಬೆಟ್ಟೆ	27689-34289
ಶಿರಸಿ	
ಬೆಟ್ಟೆ	27011-38518
ಬಿಳಿಗೋಟು	15100-31399
ಚಾಲಿ	35011-41499

ಕೆಂಪುಗೋಟು	11399-23699
ರಾಶಿ	40088-45911
ಯಲ್ಲಾಪುರ	
ಅಪಿ	58421-64821
ಬಿಳಿಗೋಟು	13899-31669
ಚಾಲಿ	31869-41111
ಕೋಕ	4612-14899
ಕೆಂಪುಗೋಟು	15099-24899
ರಾಶಿ	40109-57721
ತಟ್ಟಿಬೆಟ್ಟೆ	26706-36821

ಇಸ್ರೇಲ್ ವಾಯುದಾಳಿ: 57 ಸಾವು

ಡೀರ್ ಅಲ್ ಬಲಾಹ್ (ಎಪಿ): ಗಾಜಾಪಟ್ಟಿಯ ವಿವಿಧೆಡೆ ಇಸ್ರೇಲ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ ಕಳೆದ 24 ಗಂಟೆಯಲ್ಲಿ 57 ಮಂದಿ ಸತ್ತಿದ್ದಾರೆ. ‘137 ಜನರು ಗಾಯಗೊಂಡಿದ್ದಾರೆ’ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ.

ಕೇಂದ್ರ ಗಾಜಾದ ಡೀರ್ ಅಲ್ ಬಲಾಹ್ ಮತ್ತು ಆಸುಪಾಸಿನ ಜನವಸತಿ ಪ್ರದೇಶದಿಂದ ಕೂಡಲೇ ಸ್ಥಳಾಂತರಗೊಳ್ಳುವಂತೆ ಪ್ಯಾಲೆಸ್ಟೀನಿಯನ್ನರಿಗೆ, ಇಸ್ರೇಲ್ ಸೇನೆ ಭಾನುವಾರ ರಾತ್ರಿ ಸೂಚಿಸಿತ್ತು. ಬಳಿಕ ವೈಮಾನಿಕ ದಾಳಿ ನಡೆಸಿದೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಲು ಅಮೆರಿಕಕ್ಕೆ ತೆರಳಿರುವಾಗಲೇ ಈ ದಾಳಿ ನಡೆದಿದೆ.

ಜಬಾಲಿಯದಲ್ಲಿನ ನಿರಾಶ್ರಿತರ ಶಿಬಿರ, ಖಾನ್ ಯೂನಸ್‌ನಲ್ಲಿನ ಮನೆ, ಗಾಜಾ ನಗರದ ಬೇಕರಿ ಬಳಿ ಸ್ಫೋಟ ಸಂಭವಿಸಿವೆ. ಪತ್ರಕರ್ತೆ, ಶಿಶು ಮೃತಪಟ್ಟವರಲ್ಲಿ ಸೇರಿದ್ದಾರೆ.

ಇಸ್ರೇಲ್ ಮತ್ತು ಹಮಾಸ್ ನಡುವೆ 18 ತಿಂಗಳಿಂದ ನಡೆಯುತ್ತಿರುವ ಯುದ್ಧದಲ್ಲಿ, 50,752 ಮಂದಿ ಮೃತಪಟ್ಟಿದ್ದಾರೆ ಮತ್ತು 1,15,475 ಮಂದಿ ಗಾಯಗೊಂಡಿದ್ದಾರೆ.

ಸಂಬಂಧ ಹಳಸಿದಾಗ ಕ್ರಿಮಿನಲ್ ಪ್ರಕರಣ: ಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಬಂಧಗಳು ಹಳಸಿದಾಗ ಕ್ರಿಮಿನಲ್ ಪ್ರಕರಣ ದಾಖಲು ಮಾಡುವ ಪ್ರವೃತ್ತಿಯು ಹೆಚ್ಚಾಗುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಸೋಮವಾರ ಕಳವಳ ವ್ಯಕ್ತಪಡಿಸಿದೆ.

ಸಮ್ಮತಿಯ ಸಂಬಂಧವೊಂದ-ರಲ್ಲಿ ಮದುವೆಯ ಸಾಧ್ಯತೆ ಇದ್ದಿತ್ತು ಎಂದಾದರೆ, ಸಂಬಂಧ ಮರಿದುಬಿದ್ದ ನಂತರದಲ್ಲಿ ಅಲ್ಲಿ ಇದ್ದಿದ್ದು ಮದುವೆಯ ಸುಳ್ಳು ಭರವಸೆ ಎಂಬ ಬಣ್ಣ ನೀಡಲು ಆಗುವುದಿಲ್ಲ ಎಂದು ಕೋರ್ಟ್ ಹೇಳಿದೆ.

ಮಹಿಳೆಯೊಬ್ಬರನ್ನು 2014ರಲ್ಲಿ ದುರ್ಬಳಕೆ ಮಾಡಿಕೊಂಡ ಆರೋಪ ಎದುರಿಸುತ್ತಿದ್ದ ನ್ಯಾಯಾಂಗ ಅಧಿಕಾರಿ-ಯಾಗಿದ್ದ ಬಿಸ್ವಜ್ಯೋತಿ ಚಟರ್ಜಿ ಅವರ ವಿರುದ್ಧದ ಕ್ರಿಮಿನಲ್ ಪ್ರಕ್ರಿಯೆಗಳನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಎಸ್.ಸಿ. ಶರ್ಮಾ ಅವರು ಇದ್ದ ವಿಭಾಗೀಯ ಪೀಠವು ರದ್ದುಪಡಿಸಿದೆ.

ಚಟರ್ಜಿ ಹಾಗೂ ದೂರುದಾರ ಮಹಿಳೆಯ ನಡುವೆ ಇದ್ದಿದ್ದು ಸಮ್ಮತಿಯ ಸಂಬಂಧವಾಗಿತ್ತು ಎಂದು ಹೇಳಿದೆ.

ತಾನು ಪತ್ನಿಯಿಂದ ಬೇರೆಯಾಗಿ-ರುವುದಾಗಿ ಚಟರ್ಜಿ ತನಗೆ ತಿಳಿಸಿದ್ದರು ಎಂಬುದನ್ನು ಮಹಿಳೆಯೇ ಹೇಳಿದ್ದಾರೆ. ಚಟರ್ಜಿ ಅವರ ವೈಯಕ್ತಿಕ ಹಾಗೂ ವೃತ್ತಿಸಂಬಂಧಿ ವಿವರಗಳ ಅರಿವು ಇದ್ದ ಮಹಿಳೆಯು ಅವರಿಂದ ಹಣಕಾಸಿನ ನೆರವು ಪಡೆಯುತ್ತಿದ್ದರು. ಚಟರ್ಜಿ ಅವರೊಂದಿಗೆ ಸಂಬಂಧ ಬೆಳೆಸುವ ಮುನ್ನ ಮಹಿಳೆಯು ಸಾಕಷ್ಟು ಆಲೋಚನೆ ನಡೆಸಿರಬೇಕು ಎಂದು ಪೀಠವು ಹೇಳಿದೆ.

ಮದುವೆಯಾಗುವ ಭರವಸೆಯ ಕಾರಣಕ್ಕೆ ಸಂಬಂಧ ಉಂಟಾಗಿತ್ತು ಎಂದು ಭಾವಿಸುವುದಾದರೂ, ಮದುವೆಯ ಭರವಸೆ ನೀಡಿ ಅತ್ಯಾಚಾರ ಎಸಗಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಚಟರ್ಜಿ ಅವರು ಹೆಂಡತಿಯಿಂದ ಬೇರೆ ಇದ್ದಾರಾದರೂ, ಅವರಿಗೆ ಮದುವೆ ಆಗಿದೆ ಎಂಬುದು ಮಹಿಳೆಗೆ ಮೊದಲ ದಿನದಿಂದಲೂ ತಿಳಿದಿತ್ತು ಎಂದು ವಿವರಿಸಿದೆ.

ಬಾಂಧವ್ಯ ವೃದ್ಧಿ: ಪೋರ್ಚುಗಲ್, ಭಾರತ ಸಹಮತ



ಭಾರತ–ಪೋರ್ಚುಗಲ್ ರಾಜತಾಂತ್ರಿಕ ಸಂಬಂಧದ 50ನೇ ವರ್ಷದ ನೆನಪಿಗೆ ತಂದ ವಿಶೇಷ ಅಂಚೆ ಚೀಟಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪೋರ್ಚುಗಲ್ ಅಧ್ಯಕ್ಷ ಮಾರ್ಸೆಲೊ ರೆಬೆಲೊ ಡಿ ಸೌಸಾ ಬಿಡುಗಡೆಗೊಳಿಸಿದರು ಪಿಟಿಐ ಚಿತ್ರ

ಲಿಸ್ಬನ್ (ಪಿಟಿಐ): ವ್ಯಾಪಾರ, ಹೂಡಿಕೆ, ಮರುಬಳಕೆ ಇಂಧನ ಮತ್ತು ಸಂಪರ್ಕ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಬಾಂಧವ್ಯವನ್ನು ಇನ್ನಷ್ಟು ಬಲಪಡಿಸಲು ಭಾರತ ಮತ್ತು ಪೋರ್ಚುಗಲ್ ಸೋಮವಾರ ಸಮ್ಮತಿಸಿವೆ.

ಎರಡು ದಿನದ ಭೇಟಿಗಾಗಿ ಇಲ್ಲಿಗೆ ಆಗಮಿಸಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದ್ವಿಪಕ್ಷೀಯ ಬಾಂಧವ್ಯ ಕುರಿತು ಪೋರ್ಚುಗಲ್‌ನ ಅಧ್ಯಕ್ಷ ಮಾರ್ಸೆಲೊ ರೆಬೆಲೊ ಡಿ’ಸೌಸಾ ಅವರೊಂದಿಗೆ ಮಾತುಕತೆ ನಡೆಸಿದರು.

ಪೋರ್ಚುಗಲ್ ಅಧ್ಯಕ್ಷರ ನಿವಾಸ ದಲ್ಲಿ ನಡೆದ ಸಭೆಯಲ್ಲಿ ಉಭಯ ದೇಶ ಗಳು ವಿಶ್ವಸಂಸ್ಥೆ ಹಾಗೂ ಬಹುಹಂತದ ಇತರೆ ವೇದಿಕೆಗಳಲ್ಲೂ ಪರಸ್ಪರ ಸಹಕಾರ ಬಲಪಡಿಸಲು ಸಮ್ಮತಿಸಿದವು.

ಸಮಾನ ಆಸಕ್ತಿಯ ಜಾಗತಿಕ ಮತ್ತು ಪ್ರಾದೇಶಿಕ ವಿಷಯಗಳನ್ನು ಕುರಿತು ಚರ್ಚಿಸಿದೆವು. ಮುಖ್ಯವಾಗಿ ವಿಜ್ಞಾನ, ತಂತ್ರಜ್ಞಾನ, ಮರುಬಳಕೆ ಇಂಧನ, ಹೂಡಿಕೆ ಕ್ಷೇತ್ರಗಳಲ್ಲಿ ಸಹಕಾರ ಕುರಿತು ಚರ್ಚಿಸಲಾಯಿತು ಎಂದು ಮುರ್ಮು ಅವರು ತಿಳಿಸಿದರು.

ಇದೇ ವೇಳೆ ಉಭಯ ನಾಯಕರು ಒಟ್ಟಾಗಿ, ಉಭಯ ದೇಶಗಳ ನಡುವಣ ಐವತ್ತನೇ ವರ್ಷದ ಸ್ಮರಣಾರ್ಥ ಹೊರತರಲಾದ ಅಂಚೆಚೀಟಿಯನ್ನು ಬಿಡುಗಡೆ ಮಾಡಿದರು.

ಈ ಮೂಲಕ 27 ವರ್ಷಗಳ ತರುವಾಯ ಭಾರತದ ರಾಷ್ಟ್ರಪತಿಯು ಪೋರ್ಚುಗಲ್‌ಗೆ ಭೇಟಿ ನೀಡಿದಂತಾಯಿತು. ಪೋರ್ಚುಗಲ್‌ನಲ್ಲಿ ಭಾರತದ ಮೂಲದ ಸುಮಾರು 1.25 ಲಕ್ಷ ಜನರು ವಾಸವಿದ್ದಾರೆ. .

ದುಬೈಗೆ ಮಾಜಿ ರಾಷ್ಟ್ರಪತಿ ಭೇಟಿ- (ದುಬೈ ವರದಿ): ದುಬೈನಲ್ಲಿ ಇದೇ 23-24ರಂದು ನಡೆಯುವ ‘ಎಸ್‌ಸಿಎಂ ಮಧ್ಯಪೂರ್ವ ವ್ಯಾಪಾರ ಸಮಾವೇಶ’ದಲ್ಲಿ ಭಾರತದ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಭಾರತ –ನೇಪಾಳ ಸುಪ್ರೀಂ ಕೋರ್ಟ್ ನಡುವೆ ಒಪ್ಪಂದ

ಕಠ್ಮಂಡು (ಪಿಟಿಐ): ಭಾರತ ಮತ್ತು ನೇಪಾಳ ದೇಶಗಳ ಸುಪ್ರೀಂ ಕೋರ್ಟ್‌ಗಳು ಸೋಮವಾರ ಇಲ್ಲಿ ನ್ಯಾಯಾಂಗ ಸಹಕಾರ ಮತ್ತು ಅಭಿವೃದ್ಧಿ ಕುರಿತ ಒಪ್ಪಂದಕ್ಕೆ ಸಹಿ ಹಾಕಿದವು.

ಭಾರತ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನೇಪಾಳದ ಮುಖ್ಯ ನ್ಯಾಯಮೂರ್ತಿ ಪ್ರಕಾಶ್ ಮನ್ ಸಿಂಗ್ ರಾವುತ್ ಅವರು ಸಹಿ ಹಾಕಿದರು. ಭಾರತದ ಕಾನೂನು ಖಾತೆ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರೂ ಉಪಸ್ಥಿತರಿದ್ದರು.

ಉಭಯ ದೇಶಗಳ ನಡುವೆ ನ್ಯಾಯಾಂಗ ಸಹಕಾರ, ಬಾಂಧವ್ಯ ವೃದ್ಧಿ, ಸಾಮರ್ಥ್ಯ ಅಭಿವೃದ್ಧಿ ಹಾಗೂ ತರಬೇತಿ ಕುರಿತಂತೆ ಈ ಒಪ್ಪಂದವು ಸಾಂಸ್ಥಿಕ ಚೌಕಟ್ಟನ್ನು ಒದಗಿಸಲಿದೆ ಎಂದು ಇಲ್ಲಿನ ಭಾರತೀಯ ರಾಯಭಾರ ಕಚೇರಿಯು ಮಾಹಿತಿ ನೀಡಿದೆ.

ಇಂದಿನಿಂದ ಎಐಸಿಸಿ ಅಧಿವೇಶನ • ತಳಮಟ್ಟದಲ್ಲಿ ಸಾಂಸ್ಥಿಕ ಬಲವರ್ಧನೆಗೆ ಒತ್ತು

ಪುನರುಜ್ಜೀವನಕ್ಕೆ 'ಕೈ' ಕಾರ್ಯಸೂಚಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್‌ನ ಉನ್ನತ ನಾಯಕರು ಇದೇ 8 ಹಾಗೂ 9ರಂದು ಅಹಮದಾಬಾದ್‌ನಲ್ಲಿ ಒಗ್ಗೂಡಿ ರಾಷ್ಟ್ರೀಯ ರಾಜಕೀಯ ಸವಾಲುಗಳು ಹಾಗೂ ಪ್ರಮುಖ ವಿಷಯಗಳನ್ನು ಚರ್ಚಿಸಲಿದ್ದಾರೆ. ಸತತ ಸೋಲಿನಿಂದ ಕಂಗೆಟ್ಟಿರುವ ಪಕ್ಷವನ್ನು ಪುನರುಜ್ಜೀವನಗೊಳಿಸಲು ತಳಮಟ್ಟದಲ್ಲಿ ಸಾಂಸ್ಥಿಕ ಬಲವರ್ಧನೆಗೆ ಮಾರ್ಗಸೂಚಿ ರೂಪಿಸಲಿದ್ದಾರೆ.

ಬಿಜೆಪಿ ವಿರುದ್ಧ ಹೋರಾಟಕ್ಕೆ ಪಕ್ಷದ ಜಿಲ್ಲಾ ಘಟಕಗಳಿಗೆ ಹೆಚ್ಚಿನ ಅಧಿಕಾರ ನೀಡಿ ಪುನರುಜ್ಜೀವನಕ್ಕೆ ಭದ್ರ ಬುನಾದಿ ಹಾಕುವ ಆಶಯದಿಂದ ಎರಡು ದಿನಗಳ ಎಐಸಿಸಿ ಅಧಿವೇಶನಕ್ಕೆ ಮಂಗಳವಾರ ಚಾಲನೆ ಸಿಗಲಿದೆ. ದೇಶ ಹಾಗೂ ರಾಜ್ಯಗಳು ಎದುರಿಸುತ್ತಿರುವ ಸವಾಲುಗಳ ಕುರಿತು ಚರ್ಚಿಸಿ, 2025ಕ್ಕೆ ಪಕ್ಷದ ಕಾರ್ಯಸೂಚಿಯನ್ನು ರೂಪಿಸಲು 'ನ್ಯಾಯದ ಹಾದಿ: ನಿರ್ಣಯ, ಸಮರ್ಪಣೆ ಮತ್ತು ಹೋರಾಟ' ಎಂಬ ಘೋಷವಾಕ್ಯದೊಂದಿಗೆ ಈ ಅಧಿವೇಶನ ಸಂಘಟಿಸಲಾಗಿದೆ. 2025 ಅನ್ನು ಸಾಂಸ್ಥಿಕ ಪುನರುಜ್ಜೀವನದ ವರ್ಷವೆಂದು ಪಕ್ಷವು ಬೆಳಗಾವಿ ಅಧಿವೇಶನದಲ್ಲೇ ಘೋಷಿಸಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಮೈತ್ರಿಕೂಟವು ಎನ್‌ಡಿಎ ಮೈತ್ರಿಕೂಟಕ್ಕೆ ಸಮಬಲದ ಪೈಪೋಟಿ ನೀಡಿತ್ತು. ನಂತರ ಹರಿಯಾಣ, ಮಹಾರಾಷ್ಟ್ರ ಹಾಗೂ ದೆಹಲಿ ವಿಧಾನಸಭಾ ಚುನಾವಣೆಗಳಲ್ಲಿ ಹೀನಾಯವಾಗಿ ಸೋತಿತ್ತು. ಪಕ್ಷವು ಸರಣಿ ಹಿನ್ನಡೆಗಳನ್ನು ಗಳಿಸಿ ಚೈತನ್ಯ ಕಳೆದುಕೊಂಡಿರುವ ಹೊತ್ತಿನಲ್ಲಿ ಈ ಅಧಿವೇಶನ ಆರಂಭವಾಗುತ್ತಿದೆ. ಪಕ್ಷ ಸಂಘಟನೆ, ಬದಲಾದ ಕಾಲಘಟ್ಟದಲ್ಲಿ ರಾಜಕೀಯ, ಆರ್ಥಿಕ ಪರಿಸ್ಥಿತಿ ಕುರಿತು ಪಕ್ಷ ತೆಗೆದುಕೊಳ್ಳಬೇಕಾದ ನಿಲುವುಗಳ ಚಿಂತನ - ಮಂಥನ, ನಿರ್ಣಯ ಈ ಸಭೆಯ ಪ್ರಮುಖ ಕಾರ್ಯಸೂಚಿ.

ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿಕೂಟದ ಪಾಲುದಾರರೊಂದಿಗೆ ಎನ್‌ಡಿಎ ವಿರುದ್ಧ ಹೋರಾಡಲು ಪಕ್ಷ ಸಜ್ಜಾಗುತ್ತಿದೆ. ಮುಂದಿನ ವರ್ಷ ಪಕ್ಷವು ಕೇರಳ, ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಪ್ರಮುಖ ಚುನಾವಣಾ ಸಮರಗಳನ್ನು ಎದುರಿಸಲಿದೆ. ಈ ಚುನಾವಣೆಗಳಿಗೆ ಪಕ್ಷವು ತನ್ನ ಕಾರ್ಯತಂತ್ರವನ್ನು ಅಂತಿಮಗೊಳಿಸಲಿದೆ.

ಪಕ್ಷದಲ್ಲಿ ಅಧಿಕಾರ ವಿಕೇಂದ್ರೀಕರಣಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ವೇದಿಕೆ ಸಜ್ಜುಗೊಳಿಸಿದ್ದಾರೆ. ಪಕ್ಷದ ಕೇಂದ್ರ ನಾಯಕತ್ವವು ರಾಷ್ಟ್ರ ರಾಜಧಾನಿಯಲ್ಲಿ ಮೂರು ಸಭೆಗಳನ್ನು ಸಂಘಟಿಸಿ 862 ಜಿಲ್ಲಾ ಘಟಕಗಳ ಅಧ್ಯಕ್ಷರೊಂದಿಗೆ ಸಮಾಲೋಚನೆ ನಡೆಸಿದೆ. ಜಿಲ್ಲಾ ನಾಯಕರ ಅಹವಾಲುಗಳನ್ನು ಆಲಿಸಿದೆ. ಜಿಲ್ಲಾ ಅಧ್ಯಕ್ಷರಿಗೆ ಅಭೂತಪೂರ್ವ ಅಧಿಕಾರ ಸಿಗಲಿದೆ ಎಂದು ಕೇಂದ್ರ ನಾಯಕತ್ವವು ಸೂಚ್ಯವಾಗಿ ತಿಳಿಸಿದೆ. ಈ ಬಗ್ಗೆ ವಿಸ್ತೃತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳುವ ನಿರೀಕ್ಷೆ ಇದೆ.

ಕಾರ್ಯಸೂಚಿ

- ಅಧಿವೇಶನದ ಮೊದಲ ದಿನ ಸರ್ದಾರ್ ವಲ್ಲಭಭಾಯಿ ಪಟೇಲ್ ಸ್ಮಾರಕದಲ್ಲಿ ಖರ್ಗೆ ಅಧ್ಯಕ್ಷತೆಯಲ್ಲಿ ವಿಸ್ತೃತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ನಡೆಯಲಿದೆ. ಈ ಸಭೆಯಲ್ಲಿ, ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು ಮತ್ತು ಕೇಂದ್ರ ಚುನಾವಣಾ ಸಮಿತಿ ಸದಸ್ಯರು ಸೇರಿದಂತೆ 169 ನಾಯಕರು ಭಾಗವಹಿಸಲಿದ್ದಾರೆ.
- ಏ.9ರಂದು ಸಬರಮತಿ ನದಿ ದಂಡೆಯಲ್ಲಿ ಪ್ರತಿನಿಧಿ ಅಧಿವೇಶನ ನಡೆಯಲಿದೆ. ಎಐಸಿಸಿಯ 1,725 ಸದಸ್ಯರು ಸೇರಿದಂತೆ ಸುಮಾರು 2,000 ಪ್ರತಿನಿಧಿಗಳು ಹೊಸ ಮಾರ್ಗಸೂಚಿಗೆ ಅನುಮೋದನೆ ನೀಡಲಿದ್ದಾರೆ.
- ಈ ಅಧಿವೇಶನದಲ್ಲಿ ಸೈದ್ಧಾಂತಿಕ ತರಬೇತಿ, ಸೋಷಿಯಲ್ ಎಂಜಿನಿಯರಿಂಗ್, ಪಕ್ಷ ವಿರೋಧಿ ಚಟುವಟಿಕೆಗಳನ್ನು ಮಟ್ಟ ಹಾಕುವುದು, ಪಕ್ಷ ಪರ ನಿರೂಪಣೆ ಮತ್ತು ಚುನಾವಣೆಗಳು, ನಿಧಿಗಳು, ಮಾಧ್ಯಮ, ಸಾಮಾಜಿಕ ಮಾಧ್ಯಮ ಮತ್ತು ಆಸ್ತಿಗಳು ಮತ್ತು ಆಸ್ತಿಗಳ ನಿರ್ವಹಣೆ ಸೇರಿದಂತೆ ಭವಿಷ್ಯದ ಕಾರ್ಯಗಳ ಕುರಿತು ನಾಯಕರು ಸ್ಪಷ್ಟ ತೀರ್ಮಾನ ತೆಗೆದುಕೊಳ್ಳುವ ನಿರೀಕ್ಷೆ ಇದೆ.

ಅಧಿವೇಶನದಲ್ಲಿ ದೇಶಕ್ಕೆ ಸಂದೇಶ– ಖರ್ಗೆ



ಬೆಂಗಳೂರು: 'ಗುಜರಾತ್‌ನ ಅಹಮದಾಬಾದ್‌ನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಮತ್ತು ಕಾರ್ಯಕಾರಿ ಸಮಿತಿ ಸಭೆ ಮಂಗಳವಾರ ನಡೆಯಲಿದೆ. ಈ ಸಭೆಯಲ್ಲಿ ಅನೇಕ ವಿಷಯಗಳ ಕುರಿತು ಚರ್ಚೆ ಮಾಡುತ್ತೇವೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಸಭೆಯಲ್ಲಿ ಚರ್ಚಿಸಲು ಕಾರ್ಯಸೂಚಿ ಸಿದ್ಧಪಡಿಸಿಕೊಂಡಿದ್ದೇವೆ. ಕೆಲವು ನಿರ್ಣಯಗಳನ್ನು ಅಂಗೀಕರಿಸುತ್ತೇವೆ. ಈ ಹಿಂದೆ ತೆಗೆದುಕೊಂಡಿರುವ ನಿರ್ಣಯಗಳನ್ನು ಅಧಿಕೃತಗೊಳಿಸುತ್ತೇವೆ' ಎಂದರು. 'ಸಭೆಯ ಬಳಿಕ ದೇಶಕ್ಕೆ ಅಧಿಕೃತ ಸಂದೇಶ ಕೊಡುತ್ತೇವೆ. ಆ ಸಂದೇಶ ಏನೆಂದು ಇಲ್ಲಿ ಹೇಳುವುದು ಸರಿಯಲ್ಲ' ಎಂದೂ ಹೇಳಿದರು.

ಪಕ್ಷ ಸಂಘಟನೆ ವರ್ಷವೆಂದು ಘೋಷಿಸಿದ್ದರೂ ಕೆಲವು ರಾಜ್ಯಗಳಲ್ಲಿ ಪದಾಧಿಕಾರಿಗಳ ನೇಮಕಾತಿ ಬಾಕಿ ಉಳಿದಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಖರ್ಗೆ, 'ಎಲ್ಲವನ್ನೂ ಮಾಡುತ್ತಿದ್ದೇವೆ. ಈಗಾಗಲೇ ಬಿಹಾರ, ಉತ್ತರ ಪ್ರದೇಶ, ಅಸ್ಸಾಂ ರಾಜ್ಯಗಳ ಅಧ್ಯಕ್ಷರ ನೇಮಕ ಮಾಡಿದ್ದೇವೆ' ಎಂದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಸಿ.ಎಂ, ಡಿಸಿಎಂ ಭಾಗಿ

ಎರಡು ದಿನಗಳ ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ.


ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮತ್ತಿತರ ವಿಷಯಗಳ ಕುರಿತು ಸಿದ್ದರಾಮಯ್ಯ ಅವರು ಹೈಕಮಾಂಡ್ ನಾಯಕರ ಜತೆಗೆ ಈಗಾಗಲೇ ಚರ್ಚೆ ನಡೆಸಿದ್ದಾರೆ. ಪರಿಷತ್‌ಗೆ ನಾಮನಿರ್ದೇಶನ ಮಾಡಲು ಉಭಯ ನಾಯಕರು ಸಮಾಲೋಚಿಸಿ ಪಟ್ಟಿಯನ್ನು ಸಿದ್ಧಪಡಿಸುವಂತೆ ಖರ್ಗೆ ಅವರು ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದರು. ಆ ಬಳಿಕ ಉಭಯ ನಾಯಕರು ಸಮಾಲೋಚನೆ ನಡೆಸಿಲ್ಲ. ಅಧಿವೇಶನದ ಬಳಿಕ ಇಬ್ಬರು ನಾಯಕರು ಸಮಾಲೋಚಿಸಿ ಹೈಕಮಾಂಡ್‌ಗೆ ಪಟ್ಟಿ ಕಳುಹಿಸುವ ಸಂಭವ ಇದೆ. ಈ ಅಧಿವೇಶನದ ಬಳಿಕ ಕೆಪಿಸಿಸಿಯ ಕೆಲವೊಂದು ಪದಾಧಿಕಾರಿಗಳನ್ನು ಬದಲಾಯಿಸುವ ಸಾಧ್ಯತೆ ಇದೆ.

ದೇಣಿಗೆ ಸಂಗ್ರಹ: ಬಿಜೆಪಿಗೆ ಅಗ್ರಸ್ಥಾನ


2023–24ನೇ ಆರ್ಥಿಕ ವರ್ಷದಲ್ಲಿಯೂ ಬಿಜೆಪಿಯೇ ಅಧಿಕ ಪ್ರಮಾಣದ ದೇಣಿಗೆ ಸಂಗ್ರಹಿಸಿದೆ. ವಿವಿಧ ರಾಷ್ಟ್ರೀಯ ಪಕ್ಷಗಳಿಂದ ಒಟ್ಟು ₹2,544.28 ಕೋಟಿ ದೇಣಿಗೆ ಸಂಗ್ರಹವಾಗಿದೆ. ಇದರಲ್ಲಿನ ಸಿಂಹ ಪಾಲು ಅಂದರೆ, ₹2,244 ಕೋಟಿ ದೇಣಿಗೆಯನ್ನು ಬಿಜೆಪಿ ಒಂದೇ ಸಂಗ್ರಹಿಸಿದೆ. ಕಾಂಗ್ರೆಸ್ ಪಕ್ಷದ ದೇಣಿಗೆ ಸಂಗ್ರಹವು ಏರಿಕೆ ಕಂಡಿದೆ.

ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಕಾಂಗ್ರೆಸ್‌ಗೆ ದೊರೆತ ದೇಣಿಗೆ ಮೊತ್ತದ ಹೋಲಿಕೆಯಲ್ಲಿ ಪಕ್ಷದ ದೇಣಿಗೆ ಸಂಗ್ರಹವು ಶೇ 252ರಷ್ಟು ಏರಿಕೆಯಾಗಿದೆ. ಆದರೆ, ಕಾಂಗ್ರೆಸ್‌ಗೆ ಹೋಲಿಸಿಕೊಂಡರೆ, ಬಿಜೆಪಿಯ ದೇಣಿಗೆ ಸಂಗ್ರಹದ ಏರಿಕೆ ಪ್ರಮಾಣವು ಕಡಿಮೆ (ಶೇ 211) ಇದೆ. ಆಮ್ ಆದ್ಮಿ ಪಕ್ಷದ ದೇಣಿಗೆ ಸಂಗ್ರಹ ಮಾತ್ರ ತೀವ್ರ ಕುಸಿತ ಕಂಡಿದೆ.

ರಾಷ್ಟ್ರೀಯ ಪಕ್ಷಗಳು ಚುನಾವಣಾ ಆಯೋಗಕ್ಕೆ ನೀಡಿದ ಮಾಹಿತಿಯನ್ನು ಸಂಗ್ರಹಿಸಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ಸಿದ್ಧಪಡಿಸಿದ್ದು, ಇದನ್ನು ಸೋಮವಾರ ಬಿಡುಗಡೆ ಮಾಡಿದೆ.



ಬಿಜೆಪಿಗೆ ಕಾರ್ಪೊರೇಟ್ ಬೆಂಬಲ



(ಆವರಣದಲ್ಲಿ ಇರುವುದು ದೇಣಿಗೆಗಳಿಂದ ಪಡೆದ ಮೊತ್ತ)

ಆಧಾರ: ಎಡಿಆರ್ ವರದಿ

ಐವರು ಪೊಲೀಸರ ವಿರುದ್ಧ ಎಫ್‌ಐಆರ್‌ಗೆ ಆದೇಶ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಬದ್ಲಾಪುರ ಶಾಲೆಯಲ್ಲಿ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಅಕ್ಷಯ್ ಶಿಂದೆ (24) ಸಾವಿಗೆ ಕಾರಣರಾಗಿದ್ದಾರೆ ಎನ್ನಲಾದ ಐವರು ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಸರ್ಕಾರಕ್ಕೆ ಬಾಂಬೆ ಹೈಕೋರ್ಟ್ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ ಡೇರೆ ಮತ್ತು ನೀಲಾ ಗೋಖಲೆ ಅವರಿದ್ದ ಪೀಠವು, ಪ್ರಕರಣದ ತನಿಖೆ ನಡೆಸಲು ವಿಶೇಷ ತಂಡವನ್ನು ರಚಿಸುವಂತೆ ಅಪರಾಧ ದಳದ ಜಂಟಿ ಪೊಲೀಸ್ ಆಯುಕ್ತರಿಗೆ ನಿರ್ದೇಶಿಸಿತು.

ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲು ಸರ್ಕಾರ ಹಿಂಜರಿಯುತ್ತಿದೆ ಎಂದು ತರಾಟೆಗೆ ತೆಗೆದುಕೊಂಡ ಪೀಠವು 'ಇಂತಹ ನಡೆಯು ರಾಜ್ಯದ ನ್ಯಾಯಸಮ್ಮತೆಯನ್ನು ಹಾಳು ಮಾಡುತ್ತದೆ ಹಾಗೂ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಜನಸಾಮಾನ್ಯರ ನಂಬಿಕೆಯನ್ನು ದುರ್ಬಲಗೊಳಿಸುತ್ತದೆ' ಎಂದು ಹೇಳಿತು.

'ಎಸ್‌ಐಟಿಯು ಪ್ರಕರಣದ ಹಿಂದಿನ ಪಿತೂರಿಯನ್ನು ಬಯಲಿಗೆಳೆಯುತ್ತದೆ ಎಂಬ ಭರವಸೆ ಇದೆ' ಎಂದೂ ಪೀಠ ಹೇಳಿದೆ.

ಠಾಣೆ ಜಿಲ್ಲೆಯ ಬದ್ಲಾಪುರ ಪಟ್ಟಣದ ಶಾಲೆಯೊಂದರಲ್ಲಿ ಇಬ್ಬರು ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಪ್ರಕರಣದ ಆರೋಪಿ ಶಿಂದೆಯನ್ನು ಬಂಧಿಸಲಾಗಿತ್ತು. ಬಳಿಕ ಪೊಲೀಸ್ ಶೂಟ್‌ಔಟ್‌ನಲ್ಲಿ ಆತ ಸಾವಿಗೀಡಾಗಿದ್ದ.

'ತಪ್ಪುಗಳಿಂದ ಪಕ್ಷ ಪಾಠ ಕಲಿಯುತ್ತಿದೆ'

ಬಿಹಾರದಲ್ಲಿ ಕಾಂಗ್ರೆಸ್ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡಿಲ್ಲ: ರಾಹುಲ್ ಗಾಂಧಿ

ಪ್ರಜಾವಾಣಿ ವಾರ್ತೆ/ಪಿಟಿಐ

ಪಟ್ನಾ (ಪಿಟಿಐ): 'ತುಳಿತಕ್ಕೊಳಗಾದವರಿಗೆ ಶಕ್ತಿ ತುಂಬುವ ವಿಚಾರದಲ್ಲಿ ಕಾಂಗ್ರೆಸ್ ಆಲಸ್ಯ ತೋರಿತ್ತು. ಬಿಹಾರದಲ್ಲಿ ನಾವು ಎಷ್ಟು ಉತ್ಸಾಹದಿಂದ ಕೆಲಸ ಮಾಡಬೇಕಿತ್ತೋ ಅಷ್ಟು ಉತ್ಸಾಹದಿಂದ ಕೆಲಸ ಮಾಡಿಲ್ಲ. ನಮ್ಮ ತಪ್ಪನ್ನು ಒಪ್ಪಿಕೊಂಡ ಪಕ್ಷದ ಮೊದಲ ವ್ಯಕ್ತಿ ನಾನು. ಈ ತಪ್ಪಿನಿಂದ ಪಕ್ಷವು ಪಾಠ ಕಲಿಯುತ್ತಿದೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅಭಿಪ್ರಾಯಪಟ್ಟರು.

ರಾಹುಲ್ ಗಾಂಧಿ ಅವರು ಬಿಹಾರದಲ್ಲಿ ಸೋಮವಾರ ಸರಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಪಟ್ನಾದಲ್ಲಿ ನಡೆದ 'ಸಂವಿಧಾನ ಸುರಕ್ಷಾ ಸಮ್ಮೇಳನ'ದಲ್ಲಿ ಮಾತನಾಡಿ, 'ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳು, ಅತೀ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಬಿಹಾರದಲ್ಲಿ 'ಮಹಾಮೈತ್ರಿ ಕೂಟ'ವು (ಕಾಂಗ್ರೆಸ್ ಮತ್ತು ಆರ್‌ಜೆಡಿ ಒಕ್ಕೂಟ) ಕೆಲಸ ಮಾಡಲಿದೆ' ಎಂದು ಅವರು ಹೇಳಿದರು.



'ಪಲಾಯನ ನಿಲ್ಲಿಸಿ, ಉದ್ಯೋಗ ನೀಡಿ' ಪಾದಯಾತ್ರೆಯಲ್ಲಿ ರಾಹುಲ್ ಗಾಂಧಿ ಅವರು ಸೋಮವಾರ ಭಾಗವಹಿಸಿದ್ದರು —ಪಿಟಿಐ ಚಿತ್ರ

> ತೇಜಸ್ವಿ ಯಾದವ್ ಅವರು 2020ರಿಂದಲೂ ಈ ಎಲ್ಲ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದಾರೆ. ರಾಹುಲ್–ತೇಜಸ್ವಿ ಜೋಡಿಯು ಈ ಬಾರಿ ಬಿಜೆಪಿಯನ್ನು ಸೋಲಿಸುತ್ತದೆ
>
> **ಮೃತ್ಯುಂಜಯ್ ತಿವಾರಿ**, ಆರ್‌ಜೆಡಿ ವಕ್ತಾರ

> ಜನರ ಮನಸ್ಸಿನಿಂದ ತಮ್ಮ ನೆನಪು 'ಪಲಾಯನ' ಆಗುವುದರ ಕುರಿತು ರಾಹುಲ್ ಗಾಂಧಿ ಅವರು ತಲೆಕೆಡಿಸಿಕೊಳ್ಳಬೇಕು
>
> **ಗಿರಿರಾಜ್ ಸಿಂಗ್**, ಬೇಗೂಸರಾಯ್ ಸಂಸದ, ಕೇಂದ್ರ ಸಚಿವ

ರಾಹುಲ್ ಹೇಳಿದ್ದು...

- ತೆಲಂಗಾಣದಲ್ಲಿ ಜಾತಿ ಗಣತಿ ಮಾಡಿದ್ದೇವೆ. ವರದಿಯಲ್ಲಿನ ಮಾಹಿತಿಗಳನ್ನು ನೀವು ನಿಮ್ಮ ಕನಸಿನಲ್ಲಿಯೂ ಊಹಿಸಿಕೊಳ್ಳಲು ಸಾಧ್ಯವಿಲ್ಲ. ಸರ್ಕಾರಿ ಅಥವಾ ಖಾಸಗಿ ಬ್ಯಾಂಕುಗಳಲ್ಲಿ ಯಾರು ಸಾಲ ಪಡೆದುಕೊಂಡಿದ್ದಾರೆ ಎನ್ನುವ ಪಟ್ಟಿ ನೋಡಿದರೆ, ಇಲ್ಲಿ ಒಬ್ಬರೂ ಹಿಂದುಳಿದ ವರ್ಗ, ಎಸ್‌ಸಿ, ಎಸ್‌ಟಿ, ಆದಿವಾಸಿ ಜನರು ಸಿಗುವುದಿಲ್ಲ. ದೊಡ್ಡ ದೊಡ್ಡ ಕಂಪನಿಗಳ ಮಾಲೀಕರು, ಸಿಇಒಗಳ ಪಟ್ಟಿಯಲ್ಲೂ ಪ್ರಬಲ ಜಾತಿಯವರೇ ಇದ್ದಾರೆ
- ಸಂದೀಪ್ ದೀಕ್ಷಿತ್ ಅವರು ನಡೆಸಿಕೊಡುವ ಪಾಡ್‌ಕಾಸ್ಟ್‌ನಲ್ಲಿ ಭಾಗವಹಿಸಿದ್ದೆ, 'ನಿಮ್ಮ ಪ್ರಕಾರ ನಿಮ್ಮ ಮುತ್ತಾತ ನೆಹರೂ ಅವರು ಏನಾಗಿದ್ದರು. ಅವರು ಪ್ರಧಾನಿಯೇ, ಸ್ವಾತಂತ್ರ್ಯ ಸೇನಾನಿಯೇ, ರಾಜಕೀಯ ನಾಯಕರೇ? ಮತ್ತು ನೀವು ಅವರಿಂದ ಏನು ಕಲಿತಿರಿ' ಎಂದು ಪ್ರಶ್ನಿಸಿದರು. ನೆಹರೂ ಹಾಗೂ ಗಾಂಧಿ ಇಬ್ಬರೂ ಸತ್ಯವನ್ನು ಪ್ರೀತಿಸುತ್ತಿದ್ದರು ಎಂದು ನಾನು ಉತ್ತರಿಸಿದೆ

ವಕ್ಫ್ ಕಾಯ್ದೆ ತಿದ್ದುಪಡಿ ಪ್ರಶ್ನಿಸಿ ಹಲವು ಅರ್ಜಿಗಳ ಸಲ್ಲಿಕೆ

ವಿಚಾರಣೆಗೆ 'ಸುಪ್ರೀಂ' ಒಪ್ಪಿಗೆ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ತುರ್ತು ವಿಚಾರಣೆಗೆ ಪಟ್ಟಿ ಮಾಡಲು ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಕೊಂಡಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ಪೀಠವು ಜಮೀಯತ್ ಉಲೆಮಾ ಎ ಹಿಂದ್ ಪರ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್ ಅವರ ವಾದವನ್ನು ಆಲಿಸಿತು.

ಈ ವಿಷಯದ ಕುರಿತು ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದು, ಅವುಗಳನ್ನು ತುರ್ತು ವಿಚಾರಣೆಗೆ ಪಟ್ಟಿ ಮಾಡಬೇಕಿದೆ ಎಂದು ಕಪಿಲ್ ಸಿಬಲ್ ಮನವಿ ಮಾಡಿದರು. ಸಿಬಲ್ ಅಲ್ಲದೆ, ಹಿರಿಯ ವಕೀಲರಾದ ಅಭಿಷೇಕ್ ಸಿಂಘ್ವಿ ಮತ್ತು ನಿಜಾಮ್ ಪಾಷಾ ಅವರೂ ಇದೇ ವಿಷಯಕ್ಕೆ ಸಂಬಂಧಿಸಿದ ಇತರ ಅರ್ಜಿಗಳನ್ನು ತುರ್ತು ವಿಚಾರಣೆಗೆ ಪರಿಗಣಿಸುವಂತೆ ಕೇಳಿಕೊಂಡರು.

ಅರ್ಜಿಗಳನ್ನು ಪೀಠದ ಮುಂದೆ ಪಟ್ಟಿ ಮಾಡುವಂತೆ ಕೋರಿ ಪತ್ರ ಸಲ್ಲಿಸಲು ಅಥವಾ ಮೇಲ್ ಕಳುಹಿಸುವಂತೆ ಸಿಜೆಐ ಅವರು ವಕೀಲರಿಗೆ ತಿಳಿಸಿದರು. ಈಗಾಗಲೇ ಪತ್ರ ಮತ್ತು ಮೇಲ್ ಮಾಡಲಾಗಿದೆ ಎಂದು ಸಿಬಲ್ ತಿಳಿಸಿದಾಗ ಸಿಜೆಐ, 'ಪತ್ರವನ್ನು ನೋಡಿದ ಬಳಿಕ ನಿರ್ಧಾರ ತೆಗೆದುಕೊಳ್ಳುತ್ತೇವೆ. ನಾವು ಅರ್ಜಿಗಳನ್ನು ವಿಚಾರಣೆಗೆ ಪಟ್ಟಿ ಮಾಡುತ್ತೇವೆ' ಎಂದರು. ಪಾಷಾ ಅವರು ಸಂಸದ, ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರು ಸಲ್ಲಿಸಿದ ಅರ್ಜಿಯನ್ನು ಉಲ್ಲೇಖಿಸಿದರು.

2025ರ ವಕ್ಫ್ (ತಿದ್ದುಪಡಿ) ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಅಂಕಿತ ಹಾಕಿದ್ದರು. ಸಂಸತ್ತಿನ ಉಭಯ ಸದನಗಳು ಸುದೀರ್ಘ ಚರ್ಚೆಯ ನಂತರ ಈ ಮಸೂದೆಗೆ ಅಂಗೀಕಾರ ನೀಡಿದ್ದವು.

ಒವೈಸಿ ಅಲ್ಲದೆ ಕಾಂಗ್ರೆಸ್ ಸಂಸದ ಮೊಹಮ್ಮದ್ ಜಾವೇದ್ ಮತ್ತು ಎಎಪಿ ಶಾಸಕ ಅಮಾನತ್‌ಉಲ್ಲಾ ಖಾನ್ ಅವರೂ ಕಾಯ್ದೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಜಮೀಯತ್ ಉಲೆಮಾ ಎ ಹಿಂದ್, ಸಮಸ್ತ ಕೇರಳ ಜಮೀಯತುಲ್ ಉಲೆಮಾ ಮತ್ತು ಅಸೋಸಿಯೇಷನ್ ಫಾರ್ ದಿ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಕೂಡಾ ಕೋರ್ಟ್ ಮೊರೆ ಹೋಗಿವೆ.

ಎಐಎಂಪಿಎಲ್‌ಬಿ ಅರ್ಜಿ

ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು (ಎಐಎಂಪಿಎಲ್‌ಬಿ) ವಕ್ಫ್ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಭಾನುವಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.



ಅರ್ಜಿಯಲ್ಲಿ ವಕ್ಫ್ ಕಾಯ್ದೆಯನ್ನು ಬಲವಾಗಿ ಆಕ್ಷೇಪಿಸಿರುವುದಾಗಿ ಎಐಎಂಪಿಎಲ್‌ಬಿ ವಕ್ತಾರ ಎಸ್‌ಕ್ಯುಆರ್ ಇಲ್ಯಾಸ್ ಪ್ರಕಟಣೆಯಲ್ಲಿ ಹೇಳಿದ್ದಾರೆ. 'ಸಂಸತ್ತು ಅಂಗೀಕರಿಸಿರುವ ತಿದ್ದುಪಡಿಗಳು ಸಂವಿಧಾನವು ನೀಡಿರುವ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದೆಯಲ್ಲದೆ, ವಕ್ಫ್ ಆಡಳಿತವನ್ನು ಸಂಪೂರ್ಣವಾಗಿ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಸರ್ಕಾರದ ಉದ್ದೇಶವನ್ನು ಬಹಿರಂಗಪಡಿಸಿದೆ' ಎಂದು ಅರ್ಜಿಯಲ್ಲಿ ಆರೋಪಿಸಿದೆ.

ಮನೆ ಬಳಕೆ ಎಲ್‌ಪಿಜಿ ₹50 ಏರಿಕೆ

ಒಂದನೇ ಪುಟದಿಂದ...

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸೌದಿ ಸಿಪಿ (ಎಲ್‌ಪಿಜಿ ದರ ನಿಗದಿಗೆ ಆಧಾರವಾಗಿರುವ ದರ) ಕಳೆದ ಎರಡು ವರ್ಷಗಳಲ್ಲಿ ಶೇ 63ರಷ್ಟು ಏರಿಕೆಯಾಗಿದೆ. 2023ರ ಜುಲೈನಲ್ಲಿ ಟನ್‌ಗೆ 385 ಡಾಲರ್ (₹33 ಸಾವಿರ) ಇದ್ದಿದ್ದು 2025ರ ಫೆಬ್ರುವರಿಗೆ 629 ಡಾಲರ್‌ಗೆ (₹54 ಸಾವಿರ) ಏರಿಕೆಯಾಗಿದೆ ಎಂದು ಸಚಿವರು ತಿಳಿಸಿದರು.

'ಇದರಿಂದ ದೆಹಲಿಯಲ್ಲಿ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್‌ಗೆ ₹1,028 ಬೆಲೆ ನಿಗದಿಪಡಿಸಬೇಕಿತ್ತು. ಆದರೆ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳು ಇದುವರೆಗೂ ಬೆಲೆಯನ್ನು ಸರಿದೂಗಿಸಿಕೊಳ್ಳುತ್ತಿದ್ದವು' ಎಂದರು.

'ಎಲ್‌ಪಿಜಿಯನ್ನು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಗೆ ಮಾರಾಟ ಮಾಡಿದ್ದಕ್ಕಾಗಿ ಕಂಪನಿಗಳು ₹41,338 ಕೋಟಿ ನಷ್ಟ ಅನುಭವಿಸಿವೆ. ಇನ್ನಷ್ಟು ನಷ್ಟವನ್ನು ತಪ್ಪಿಸಲು ಬೆಲೆಯನ್ನು ಅಲ್ಪ ಹೆಚ್ಚಿಸಲಾಗಿದೆ' ಎಂದು ಕಾರಣ ನೀಡಿದರು.

'ಪ್ರಸ್ತುತ ಬೆಲೆಯಲ್ಲಿ, ಉಜ್ವಲಾ ಯೋಜನೆ ಫಲಾನುಭವಿ ಕುಟುಂಬಗಳಿಗೆ ಎಲ್‌ಪಿಜಿ ಬಳಸಿ ದಿನಕ್ಕೆ ಅಡುಗೆ ಮಾಡಲು ಸುಮಾರು ₹6.10 ಹಾಗೂ ಸಾಮಾನ್ಯ ಬಳಕೆದಾರರಿಗೆ ₹14.58 ಖರ್ಚಾಗುತ್ತದೆ. ಇದು ತುಂಬಾ ದುಬಾರಿಯೇನೂ ಅಲ್ಲ' ಎಂದು ಹೇಳಿದರು.

ಕಾಮ್ರಾ ಜಾಮೀನು ಅವಧಿ ವಿಸ್ತರಣೆ



ಕುನಾಲ್ ಕಾಮ್ರಾ

ಚೆನ್ನೈ (ಪಿಟಿಐ): ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ ಶಿಂದೆ ಅವರನ್ನು ವಿಡಂಬನೆ ಮಾಡಿ ಹಾಸ್ಯ ಮಾಡಿದ ಪ್ರಕರಣದಲ್ಲಿ ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರಿಗೆ ನೀಡಿದ್ದ ಮಧ್ಯಂತರ ನಿರೀಕ್ಷಣಾ ಜಾಮೀನಿನ ಅವಧಿಯನ್ನು ಏಪ್ರಿಲ್ 17ರವರೆಗೆ ಮದ್ರಾಸ್ ಹೈಕೋರ್ಟ್ ವಿಸ್ತರಿಸಿದೆ.

ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಸುಂದರ್ ಮೋಹನ್ ಅವರು, 'ಕಾಮ್ರಾ ಅವರು ಸಂಬಂಧಪಟ್ಟ ಕೋರ್ಟ್ ಮೊರೆ ಹೋಗಲು ಕ್ರಮ ಕೈಗೊಳ್ಳಬಹುದು' ಎಂದು ತಿಳಿಸಿದರು. ಬಳಿಕ ಕೋರ್ಟ್ ಪ್ರಕರಣದ ವಿಚಾರಣೆಯನ್ನು ಏ.17ಕ್ಕೆ ಮುಂದೂಡಿತು.

ಅರ್ಜಿ ವಿಚಾರಣೆ ಇಂದು (ಮುಂಬೈ ವರದಿ): ಕುನಾಲ್ ಕಾಮ್ರಾ ವಿರುದ್ಧ ದಾಖಲಾದ ಎಫ್‌ಐಆರ್ ರದ್ದು ಮಾಡಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ಮಂಗಳವಾರ ವಿಚಾರಣೆ ನಡೆಸಲಿದೆ.

'ಬುಕ್ ಮೈ ಶೋ'ಗೆ ಕಾಮ್ರಾ ಬಹಿರಂಗ ಪತ್ರ

ಮುಂಬೈ: ತನ್ನ ಕಾರ್ಯಕ್ರಮಗಳನ್ನು ಪಟ್ಟಿಯಿಂದ ಕೈಬಿಟ್ಟಿರುವ 'ಬುಕ್ ಮೈ ಶೋ' ಸಂಸ್ಥೆಗೆ ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಬಹಿರಂಗ ಪತ್ರ ಬರೆದಿದ್ದಾರೆ.

'ನನ್ನ ಕಾರ್ಯಕ್ರಮಗಳು 'ಬುಕ್ ಮೈ ಶೋ'ದಲ್ಲಿ ಇವೆಯೋ ಇಲ್ಲವೋ ಗೊತ್ತಿಲ್ಲ. ವೀಕ್ಷಕರ ದೃಷ್ಟಿಯಿಂದ ಯಾವುದೇ ಖಾಸಗಿ ಕಾರ್ಯಕ್ರಮ 'ಬಹಿಷ್ಕಾರ' ಮಾಡಲು ಅಥವಾ ಕುಗ್ಗಿಸಲು ನಾನು ಇಷ್ಟಪಡುವುದಿಲ್ಲ. ವ್ಯವಹಾರಕ್ಕೆ ಒಳಿತಾಗುವ ಕಾರ್ಯವನ್ನು ತನ್ನ ಹಕ್ಕಿನ ಪರಿಮಿತಿಯೊಳಗೆ ಸಂಸ್ಥೆ ಮಾಡಿದೆ' ಎಂದು ಕುನಾಲ್ 'ಎಕ್ಸ್' ಮತ್ತು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

'ಬಂಧನ ಆದೇಶದ ಅಧಿಕಾರ ಗ್ರಾಹಕ ವೇದಿಕೆಗಿಲ್ಲ'

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ತನ್ನ ಆದೇಶಗಳನ್ನು ಪಾಲಿಸದ ಯಾವುದೇ ವ್ಯಕ್ತಿಯ ಬಂಧನಕ್ಕೆ ವಾರಂಟ್ ಹೊರಡಿಸುವ ಅಧಿಕಾರವನ್ನು ಗ್ರಾಹಕ ವ್ಯಾಜ್ಯಗಳನ್ನು ಪರಿಹರಿಸುವ ವೇದಿಕೆಯು ಹೊಂದಿಲ್ಲ ಎಂದು ಕಲ್ಕತ್ತ ಹೈಕೋರ್ಟ್ ಹೇಳಿದೆ.

ಜಿಲ್ಲಾ ಗ್ರಾಹಕ ವ್ಯಾಜ್ಯ ಪರಿಹಾರ ವೇದಿಕೆಯು ತನ್ನನ್ನು ಬಂಧಿಸುವಂತೆ ಆದೇಶಿಸಿ ಹೊರಡಿಸಿದ್ದ ನೋಟಿಸ್ ಪ್ರಶ್ನಿಸಿ ವ್ಯಕ್ತಿಯೊಬ್ಬರು ಹೈಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಮೂರ್ತಿ ಸುವ್ರಾ ಘೋಷ್ ಅವರು ಅರ್ಜಿಯ ವಿಚಾರಣೆ ನಡೆಸಿ, ಗ್ರಾಹಕ ವೇದಿಕೆ ನೀಡಿದ್ದ ನೋಟಿಸ್ ಅನ್ನು ರದ್ದುಗೊಳಿಸಿದ್ದಾರೆ. ಅಲ್ಲದೇ, ಈ ರೀತಿಯ ನೋಟಿಸ್ ಜಾರಿಗೊಳಿಸುವುದು ಗ್ರಾಹಕ ಹಿತರಕ್ಷಣೆ ಕಾಯ್ದೆಯ ನಿಬಂಧನೆಗಳ ವ್ಯಾಪ್ತಿಗೆ ಬರುವುದಿಲ್ಲ ಎಂದೂ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಛತ್ತೀಸಗಢ: 26 ನಕ್ಸಲರು ಶರಣು

ದಂತೇವಾಡ (ಪಿಟಿಐ): ಛತ್ತೀಸಗಢದ ದಂತೇವಾಡ ಜಿಲ್ಲೆಯಲ್ಲಿ ಕನಿಷ್ಠ 26 ಮಂದಿ ನಕ್ಸಲರು ಭದ್ರತಾ ಪಡೆಗಳ ಎದುರು ಸೋಮವಾರ ಶರಣಾಗಿದ್ದಾರೆ. ಈ ಪೈಕಿ ಮೂವರ ಸುಳಿವು ನೀಡಿದವರಿಗೆ ನಗದು ಬಹುಮಾನವನ್ನು ಘೋಷಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

'ಪೊಳ್ಳು' ಹಾಗೂ 'ಅಮಾನವೀಯ' ನಕ್ಸಲ್ ಸಿದ್ಧಾಂತದಿಂದ ಬೇಸತ್ತು ಹಾಗೂ ಸಂಘಟನೆಯಲ್ಲಿ ಭಿನ್ನಾಭಿಪ್ರಾಯ ಉಲ್ಬಣಗೊಂಡಿದ್ದರಿಂದ ಶರಣಾಗತಿ ನಿರ್ಧಾರ ಕೈಗೊಂಡಿದ್ದಾಗಿ ನಕ್ಸಲರು ತಿಳಿಸಿದ್ದಾರೆ' ಎಂದು ದಂತೇವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗೌರವ್ ರೈ ಹೇಳಿದ್ದಾರೆ.

'ಜನ ಮಿಲಿಶಿಯಾ' ಕಮಾಂಡರ್ ರಾಜೇಶ್ ಕಶ್ಯಪ್, 'ಜನತಾನಾ ಸರ್ಕಾರ್' ಮುಖ್ಯಸ್ಥ ಕೋಸ ಮದ್ವಿ ಹಾಗೂ ಸಿಎನ್‌ಎಂ ಸಂಘಟನೆಯ ಭೋಟು ಕುಂಜಾಂ ಶರಣಾದವರಲ್ಲಿ ಪ್ರಮುಖರು ಎಂದು ಅವರು ತಿಳಿಸಿದ್ದಾರೆ.

ಅಮರಾವತಿ: ₹4200 ಕೋಟಿ ನೀಡಿದ ಕೇಂದ್ರ

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ರಾಜಧಾನಿ ಅಮರಾವತಿ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ₹4,200 ಕೋಟಿ ಅನುದಾನ ಬಿಡುಗಡೆ ಮಾಡಿದೆ ಎಂದು ಅಧಿಕಾರಿಯೊಬ್ಬರು ಸೋಮವಾರ ಮಾಹಿತಿ ನೀಡಿದ್ದಾರೆ.

₹15000 ಕೋಟಿ ವೆಚ್ಚದ ಈ ಯೋಜನೆಗೆ ವಿಶ್ವಬ್ಯಾಂಕ್ ಹಾಗೂ ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ತಲಾ ₹6,868 ಕೋಟಿ ನೀಡಲು ಒಪ್ಪಿಕೊಂಡಿವೆ. ಉಳಿದ ₹1400 ಕೋಟಿಯನ್ನು ಕೇಂದ್ರ ಸರ್ಕಾರ ನೀಡಲಿದೆ.

ಕೇಂದ್ರವೂ ತನ್ನ ಪಾಲಿನ ₹800 ಕೋಟಿ ಸೇರಿಸಿ ಒಟ್ಟು ₹4,200 ಕೋಟಿ ಬಿಡುಗಡೆ ಮಾಡಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ತಮಿಳುನಾಡಿನ ಆಗ್ರಹದ ಬಗ್ಗೆ ಮೋದಿ ನಿರ್ಲಕ್ಷ್ಯ'

ಚೆನ್ನೈ (ಪಿಟಿಐ): 'ಕಚ್ಚತೀವು ದ್ವೀಪವನ್ನು ಮರಳಿ ಪಡೆಯುವ ಮತ್ತು ಮೀನುಗಾರರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ತಮಿಳುನಾಡಿನ ಆಗ್ರಹವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀಲಂಕಾ ಭೇಟಿಯ ವೇಳೆ ನಿರ್ಲಕ್ಷಿಸಿದ್ದಾರೆ' ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದರು.

'ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ ಅವರು, ಮೀನುಗಾರರನ್ನು ಹಾಗೂ ಅವರ ಬೋಟುಗಳನ್ನು ಬಿಡಿಸುವ ಬಗ್ಗೆ ಪ್ರಧಾನಿ ಮೋದಿ ಅವರು ಯಾವುದೇ ಮಾತುಕತೆ ನಡೆಸಿಲ್ಲ. ನಮ್ಮ ಆಗ್ರಹವನ್ನು ನಿರ್ಲಕ್ಷಿಸಿದ್ದು ವಿಷಾದನೀಯ ಮತ್ತು ನಿರಾಶಾದಾಯಕ ಬೆಳವಣಿಗೆ' ಎಂದು ಅಭಿಪ್ರಾಯಪಟ್ಟರು.

'ಪ್ರಧಾನಿ ಅವರು ಶ್ರೀಲಂಕಾಕ್ಕೆ ಭೇಟಿ ನೀಡಿದ ಬಳಿಕ 14 ಮೀನುಗಾರರನ್ನು ಬಿಡುಗಡೆ ಮಾಡಲಾಯಿತು. ಆದರೂ ಮೀನುಗಾರರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಿರ್ಲಕ್ಷ್ಯ ಧೋರಣೆಯೇ ಇದೆ. ಆದರೆ, ನಾವು ಮೀನುಗಾರರ ಅಭಿವೃದ್ಧಿಗೆ ಕೆಲಸ ಮಾಡುತ್ತೇವೆ' ಎಂದರು.

ಇದೇ ವೇಳೆ, ರಾಮೇಶ್ವರದಲ್ಲಿರುವ ತಂಗಚ್ಚಿಮದಂ ಬಂದರು ಅಭಿವೃದ್ಧಿ ಸೇರಿದಂತೆ ಹಲವು ಅಭಿವೃದ್ಧಿ ಯೋಜನೆಗಳನ್ನು ಸ್ಟಾಲಿನ್ ಘೋಷಣೆ ಮಾಡಿದರು.

'ಬೇಡಿಕೆ ಈಡೇರುವವರೆಗೂ ಪ್ರತಿಭಟನೆ ನಿಲ್ಲದು'

ಚಂಡೀಗಢ: 'ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ಸೇರಿದಂತೆ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಕೇಂದ್ರ ಸರ್ಕಾರ ಒಪ್ಪುವವರೆಗೂ ರೈತರ ಪ್ರತಿಭಟನೆಗಳು ಮುಂದುವರಿಯಲಿವೆ' ಎಂದು ರೈತ ಮುಖಂಡ ಜಗಜೀತ್ ಸಿಂಗ್ ಡಲ್ಲೇವಾಲ್ ಸೋಮವಾರ ಹೇಳಿದ್ದಾರೆ. ಅಲ್ಲದೇ, ಕೇಂದ್ರದ ನಾಯಕರ ಜತೆಗೆ ಮೇ 4ರಂದು ನಡೆಯಲಿರುವ ಸಭೆಯಲ್ಲಿ ರೈತ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದಿದ್ದಾರೆ. ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ 131 ದಿನಗಳಿಂದ ನಡೆಸಿದ್ದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಡಲ್ಲೇವಾಲ್ ಭಾನುವಾರ ಕೊನೆಗೊಳಿಸಿದ್ದರು.

'ಬಿಜೆಪಿಗೆ ಕಪಾಳಕ್ಕೆ ಏಟು'

ಒಂದನೇ ಪುಟದಿಂದ...

ಜನಾಕ್ರೋಶ ಯಾತ್ರೆ ಹೊರಟವರ ಮುಂದೆ ಇರುವುದು ಎರಡೇ ಎರಡು ಆಯ್ಕೆ. ಪ್ರಧಾನ ಮಂತ್ರಿಯವರ ಮೇಲೆ ಒತ್ತಡ ಹೇರಿ ಕೇಂದ್ರ ಸರ್ಕಾರ ಹೆಚ್ಚಿಸಿರುವ ಬೆಲೆ ಇಳಿಸುವಂತೆ ಮಾಡಬೇಕು. ಇಲ್ಲವೇ, ಯಾತ್ರೆಯನ್ನು ಮೊಟುಕುಗೊಳಿಸಿ ಗಂಟುಮೂಟೆ ಕಟ್ಟಿಕೊಂಡು ಮನೆಗೆ ಮರಳಬೇಕು. ಇದರ ಹೊರತಾಗಿ ಯಾತ್ರೆ ಮುಂದುವರಿಸಿದರೆ ಜನರ ಆಕ್ರೋಶಕ್ಕೆ ಒಳಗಾಗುವುದು ಖಚಿತ ಎಂದಿದ್ದಾರೆ.

ಸಿವಿಲ್ ವಿಚಾರ ಕ್ರಿಮಿನಲ್ ಪ್ರಕರಣವಾಗಿ ಪರಿವರ್ತನೆ: 'ಸುಪ್ರೀಂ'

'ಉ.ಪ್ರದೇಶ: ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸಿವಿಲ್ ಪ್ರಕರಣವನ್ನು ಕ್ರಿಮಿನಲ್ ಪ್ರಕರಣವಾಗಿ ಪರಿವರ್ತಿಸಿದ ವಿಚಾರವಾಗಿ ಉತ್ತರ ಪ್ರದೇಶದ ಪೊಲೀಸರನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಕಿಡಿಕಾರಿತು.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್, ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ನ್ಯಾಯಪೀಠವು, ನಾಗರಿಕ ವಿಚಾರವನ್ನು ಕ್ರಿಮಿನಲ್ ಪ್ರಕರಣವಾಗಿ ಪರಿವರ್ತಿಸುವುದು ಸ್ವೀಕಾರಾರ್ಹವಲ್ಲ ಎಂದು ಸ್ಪಷ್ಟಪಡಿಸಿತು.

ಸಿವಿಲ್ ಪ್ರಕರಣಗಳ ಇತ್ಯರ್ಥಕ್ಕೆ ದೀರ್ಘಕಾಲ ಹಿಡಿಯುತ್ತದೆ ಎಂಬ ಏಕಮಾತ್ರ ಕಾರಣಕ್ಕಾಗಿ ಎಫ್‌ಐಆರ್ ದಾಖಲಿಸಿ ಅವುಗಳನ್ನು ಕ್ರಿಮಿನಲ್ ಕಾನೂನು ವ್ಯಾಪ್ತಿಯಲ್ಲಿ ತರುವಿರಾ ಎಂದು ಪ್ರಶ್ನಿಸಿತು. ಅಧಿಕಾರಿಗಳ ನಡೆಯನ್ನು ಟೀಕಿಸಿದ ಪೀಠ, 'ಉತ್ತರ ಪ್ರದೇಶದಲ್ಲಿ ಏನಾಗುತ್ತಿದೆಯೋ ಅದು ತಪ್ಪು. ಪ್ರತಿದಿನವೂ ಸಿವಿಲ್ ಅರ್ಜಿಗಳನ್ನು ಕ್ರಿಮಿನಲ್ ಪ್ರಕರಣಗಳಾಗಿ ಪರಿವರ್ತಿಸ ಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿತು.

ತನಿಖಾಧಿಕಾರಿಯನ್ನು ಸಾಕ್ಷಿ ಕಟಕಟೆಗೆ ಕರೆಯುತ್ತೇವೆ. ಅಲ್ಲಿ ನಿಂತು ಅವರು ಕ್ರಿಮಿನಲ್ ಪ್ರಕರಣ ಎಂದು ಸಾಬೀತು ಮಾಡಲಿ. ತನಿಖಾಧಿಕಾರಿ ಪಾಠ ಕಲಿಯಬೇಕು ಎಂದು ಕಿಡಿಕಾರಿತು.

ಸಿವಿಲ್ ವ್ಯಾಜ್ಯವನ್ನು ಕ್ರಿಮಿನಲ್ ಕಾನೂನು ವ್ಯಾಪ್ತಿಯಲ್ಲಿ ಏಕೆ ತರಲಾಗುತ್ತಿದೆ ಎಂಬುದನ್ನು ವಿವರಿಸಿ, ಪ್ರಮಾಣಪತ್ರ ಸಲ್ಲಿಸಿ ಎಂದು ಪೊಲೀಸ್ ಮಹಾ ನಿರ್ದೇಶಕ ಮತ್ತು ಗೌತಮ ಬುದ್ಧ ನಗರ ಜಿಲ್ಲೆ ಪೊಲೀಸ್ ಠಾಣೆಯ ಠಾಣಾಧಿಕಾರಿ ಅವರಿಗೆ ಸೂಚಿಸಿತು.

ದೇಬು ಸಿಂಗ್ ಮತ್ತು ದೀಪಕ್ ಸಿಂಗ್ ಎಂಬುವವರ ವಿರುದ್ಧ ದಾಖಲಾದ ಎಫ್‌ಐಆರ್ ರದ್ದು ಮಾಡಲು ಅಲಹಾಬಾದ್ ಹೈಕೋರ್ಟ್ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಇಬ್ಬರೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ನೊಯಿಡಾದ ನ್ಯಾಯಾಲಯದಲ್ಲಿ ಇವರ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿಚಾರಣೆಗೆ 'ಸುಪ್ರೀಂ' ತಡೆ ನೀಡಿತು.

ವಿವಿ–ಪ್ಯಾಟ್ ತಾಳೆ: ಅರ್ಜಿ ವಜಾ

ನವದೆಹಲಿ (ಪಿಟಿಐ): ಮತ ಎಣಿಕೆ ಸಂದರ್ಭದಲ್ಲಿ ವಿವಿ–ಪ್ಯಾಟ್ (ಮತದಾನ ದೃಢೀಕರಣ ರಸೀದಿ ಯಂತ್ರ) ರಸೀದಿಗಳನ್ನು ನೂರಕ್ಕೆ ನೂರರಷ್ಟು ತಾಳೆ ಮಾಡುವಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ಸೂಚನೆ ನೀಡಬೇಕು ಎನ್ನುವ ಕೋರಿಕೆ ಇದ್ದ ಅರ್ಜಿಯನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.


ಹಂಸರಾಜ್ ಜೈನ್ ಎನ್ನುವವರು ಈ ಅರ್ಜಿ ಸಲ್ಲಿಸಿದ್ದರು. ಇದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ.ವಿ. ವಿಶ್ವನಾಥನ್ ಅವರು ಇದ್ದ ತ್ರಿಸದಸ್ಯ ಪೀಠದ ಎದುರು ಬಂದಿತ್ತು. ಜೈನ್ ಅವರು ಇದೇ ಕೋರಿಕೆಯೊಂದಿಗೆ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ವಿಐಟಿ ವೆಲ್ಲೂರು: ವಿಶ್ವವಿದ್ಯಾಲಯ ದಿನಾಚರಣೆ

ವೆಲ್ಲೂರು: ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (VIT)ಯಲ್ಲಿ 2025ರ 'ವಿಶ್ವವಿದ್ಯಾಲಯ ದಿನ' ಮತ್ತು 'ಕ್ರೀಡಾ ದಿನ'ವನ್ನು ಇತ್ತೀಚೆಗೆ ಆಚರಿಸಲಾಯಿತು.

ಶೈಕ್ಷಣಿಕ, ಕ್ರೀಡೆ ಮತ್ತು ಹಾಜರಾತಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶ ಎಂ.ಎಂ. ಸುಂದರೇಶ್ ಹಾಗೂ ಎಲ್ ಆ್ಯಂಡ್ ಟಿ ಕಾರ್ಪೊರೇಟ್ ಕಚೇರಿ ಮುಖ್ಯಸ್ಥ, ಹಿರಿಯ ಉಪಾಧ್ಯಕ್ಷ ಗಣೇಶನ್ ಅವರು ಸುಮಾರು ₹1.4 ಕೋಟಿ ಮೌಲ್ಯದ ಬಹುಮಾನಗಳನ್ನು ನೀಡಿ ಗೌರವಿಸಿದರು.

ವಿಐಟಿಯ ಸಂಸ್ಥಾಪಕ-ಕುಲಪತಿ ಡಾ. ಜಿ. ವಿಶ್ವನಾಥನ್ ಅವರು ಉನ್ನತ ಪದವಿ ಪಡೆದು ಹೊರಹೋಗುತ್ತಿರುವ ಅತ್ಯುತ್ತಮ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನು ಹಾಗೂ ಶೈಕ್ಷಣಿಕ ಮತ್ತು ಕ್ರೀಡಾ ಕ್ಷೇತ್ರದ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಪಡೆದ 3200 ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ನಂತರ ಮಾತನಾಡಿದ ವಿಶ್ವನಾಥನ್, ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ (ಒಇಸಿಡಿ)ಯ ಸದಸ್ಯ ರಾಷ್ಟ್ರಗಳು ವಾರ್ಷಿಕ ಸುಮಾರು 17 ಸಾವಿರ ಡಾಲರ್, ಅಮೆರಿಕ ಸಂಯುಕ್ತ ಸಂಸ್ಥಾನ 35 ಸಾವಿರ ಡಾಲರ್ ಹಾಗೂ ಚೀನಾ ದೇಶ 2,400 ಡಾಲರ್ ಹಣವನ್ನು ಉನ್ನತ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಲಿವೆ. ಆದರೆ, ಭಾರತ ಕೇವಲ 260 ಡಾಲರ್ ಮಾತ್ರ ಖರ್ಚು ಮಾಡುತ್ತಲಿದೆ. ಉನ್ನತ ಶಿಕ್ಷಣಕ್ಕಾಗಿ ವೆಚ್ಚ ಮಾಡುವ ರಾಷ್ಟ್ರಗಳ ಪಟ್ಟಿಯಲ್ಲಿ ನಮ್ಮ ದೇಶ 190 ರಿಂದ 165ಕ್ಕೆ ತಲುಪಿರುವುದು ಸಂತೋಷದ ಸಂಗತಿ. ಆದರೂ, ಅಭಿವೃದ್ಧಿ ರಾಷ್ಟ್ರ ಎನಿಸಿಕೊಳ್ಳಬೇಕಾದರೆ ಶಿಕ್ಷಣ ಕ್ಷೇತ್ರದಲ್ಲಿ ಮತ್ತಷ್ಟು ಸುಧಾರಣೆ ತರಬೇಕಾಗಿದೆ. ಅದಕ್ಕಾಗಿ ಸರ್ಕಾರ ಹೆಚ್ಚಿನ ಹಣ ಖರ್ಚು ಮಾಡುವುದು ಸೂಕ್ತ ಎಂದರು.



ನ್ಯಾ. ಎಂ.ಎಂ. ಸುಂದರೇಶ್ ಮತ್ತು ಸಂಸ್ಥಾಪಕ– ಕುಲಪತಿ ಡಾ. ಜಿ. ವಿಶ್ವನಾಥನ್ ಅವರಿಂದ ಶ್ರುಜನಾ ಕೆ 'ಬೆಸ್ಟ್ ಔಟ್ ಗೋಯಿಂಗ್ ಸ್ಟೂಡೆಂಟ್ ಪ್ರಶಸ್ತಿ' ಸ್ವೀಕರಿಸಿದರು. (ಎಡದಿಂದ ಬಲಕ್ಕೆ) ವಿಐಟಿ ವಿಸಿ ಡಾ. ಕಾಂಚನಾ ಭಾಸ್ಕರನ್,ರಮಣಿ ಬಾಲಸುಂದರಂ, ಸಹಾಯಕ ಉಪಾಧ್ಯಕ್ಷೆ ಕಾದಂಬರಿ ಎಸ್ ವಿಶ್ವನಾಥನ್, ಉಪಾಧ್ಯಕ್ಷ ಶಂಕರ್ ವಿಶ್ವನಾಥನ್, ಉಪಾಧ್ಯಕ್ಷ ಡಾ. ಸೇಕರ್ ವಿಶ್ವನಾಥನ್, ಇಡಿ ಸಂಧ್ಯಾ ಪೆಂಟಾರೆಡ್ಡಿ, ಪ್ರೊ–ವಿಸಿ ಡಾ. ಪಾರ್ಥ ಶರತಿ ಮಲ್ಲಿಕ್ ಮತ್ತು ರಿಜಿಸ್ಟ್ರಾರ್ ಜಯಭಾರತಿ ಉಪಸ್ಥಿತರಿದ್ದರು.

ನ್ಯಾ. ಎಂ.ಎಂ. ಸುಂದರೇಶ್ ಅವರು, ವಿಐಟಿ ಕಳೆದ 40 ವರ್ಷಗಳಲ್ಲಿ ಸಾಕಷ್ಟು ಎತ್ತರಕ್ಕೆ ಬೆಳೆದಿದೆ. ಅದರ ಯಶಸ್ಸು ಕುಲಪತಿ ಡಾ. ಜಿ.ವಿ. ಅವರಿಗೆ ಸಲ್ಲಬೇಕು. ಇತ್ತೀಚೆಗೆ ಅಪರೂಪವಾಗಿರುವ ಕ್ರೀಡೆಗಳ ಬಗ್ಗೆ ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದರು. ನಂತರ ಅತ್ಯುತ್ತಮ ವಿದ್ಯಾರ್ಥಿ ಕ್ಲಬ್, ಉತ್ತಮ ಪ್ರದರ್ಶನ ನೀಡಿದ ಎನ್‌ಆರ್‌ಐ ಮತ್ತು ವಿದೇಶಿ ವಿದ್ಯಾರ್ಥಿಗಳನ್ನು ಅವರು ಸನ್ಮಾನಿಸಿದರು.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್



ವಿರಾಟ್–ರಜತ್ ಅಬ್ಬರ • ವಾಂಖೆಡೆಯಲ್ಲಿ ದಶಕದ ನಂತರ ಗೆದ್ದ ಬೆಂಗಳೂರು • ಜೋಶ್, ಭುವಿ, ಕೃಣಾಲ್ ಮಿಂಚು

‘ಹಾರ್ದಿಕ್ ಚಾಲೆಂಜ್’ ಗೆದ್ದ ಆರ್‌ಸಿಬಿ

ಮುಂಬೈ (ಪಿಟಿಐ): ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಐಪಿಎಲ್ ಪಂದ್ಯದ ಕೊನೆಯ ಮೂರು ಓವರ್‌ಗಳು ರೋಚಕ ರಸದೌತಣ ನೀಡಿದವು.

ವೇಗದ ಜೋಡಿ ಭುವನೇಶ್ವರ್ ಕುಮಾರ್, ಜೋಶ್ ಹ್ಯಾಜಲ್‌ವುಡ್ ಮತ್ತು ಸ್ಪಿನ್ನರ್ ಕೃಣಾಲ್ ಪಾಂಡ್ಯ ಅವರ ಚಾಣಾಕ್ಷ ಬೌಲಿಂಗ್‌ನಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಹತ್ತು ವರ್ಷಗಳ ನಂತರ ಮುಂಬೈನಲ್ಲಿ ಜಯಗಳಿಸಿತು.

222 ರನ್‌ಗಳ ಗುರಿಯನ್ನು ಬೆನ್ನಟ್ಟಿದ್ದ ಮುಂಬೈ ತಂಡವು 99 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಾಗ ಆರ್‌ಸಿಬಿ ಸುಲಭ ಜಯದ ಕನಸು ಕಂಡಿತು. ಆದರೆ ನಾಯಕ ಹಾರ್ದಿಕ್ ಪಾಂಡ್ಯ (42; 15ಎ) ಮತ್ತು ತಿಲಕ್ ವರ್ಮಾ (56; 29ಎ) ಅವರಿಬ್ಬರೂ ಕೇವಲ 34 ಎಸೆತಗಳಲ್ಲಿ ಸಿಡಿಸಿದ 89 ರನ್‌ಗಳನ್ನು ಸೇರಿಸಿದರು. ಎದುರಾಳಿಗಳಿಗೆ ಸೋಲಿನ ಆತಂಕ ಮೂಡಿಸಿದರು.

ತಿಲಕ್ ಮತ್ತು ಹಾರ್ದಿಕ್ ಅವರು ಬೌಂಡರಿ, ಸಿಕ್ಸರ್‌ಗಳ ಮಳೆಗರೆದರು. ಅದರಲ್ಲೂ ಹಾರ್ದಿಕ್ ತಮ್ಮ ಸಹೋದರ, ಸ್ಪಿನ್ನರ್ ಕೃಣಾಲ್ ಪಾಂಡ್ಯ ಅವರ ಬೌಲಿಂಗ್‌ನಲ್ಲಿಯೇ ಎರಡು ಸಿಕ್ಸರ್ ಹೊಡೆದರು. ಇದರಿಂದಾಗಿ ಮುಂಬೈ ತಂಡಕ್ಕೆ ಗೆಲುವಿಗಾಗಿ ಕೊನೆಯ 3 ಓವರ್‌ಗಳಲ್ಲಿ 41 ರನ್‌ಗಳ ಅಗತ್ಯವಿತ್ತು.

ನಾಯಕ ರಜತ್ ಅವರು 18ನೇ ಓವರ್ ಬೌಲಿಂಗ್ ಮಾಡಲು ಭುವನೇಶ್ವರ್‌ಗೆ ಚೆಂಡುಕೊಟ್ಟರು. ಭುವಿ ನಿರೀಕ್ಷೆ ಹುಸಿ ಮಾಡಲಿಲ್ಲ. ಮೂರನೇ ಎಸೆತದಲ್ಲಿ ವರ್ಮಾ ವಿಕೆಟ್ ಪಡೆದು, ಜೊತೆಯಾಟ ಮುರಿದರು. ಆದರೆ ಹಾರ್ದಿಕ್ ಮಾತ್ರ ತಮ್ಮ ಆಟವನ್ನು ಮುಂದುವರಿಸಿದರು. ಅವರೊಂದಿಗೆ ನಮನ್ ಧೀರ್ ಕೂಡ ಸೇರಿಕೊಂಡರು. ಕೊನೆಯ ಎರಡು ಓವರ್‌ಗಳಲ್ಲಿ 28 ರನ್ ಅಗತ್ಯವಿತ್ತು.

ಹ್ಯಾಜಲ್‌ವುಡ್ 19ನೇ ಓವರ್‌ನ ಮೊದಲ ಎಸೆತ ದಲ್ಲಿಯೇ ಪಾಂಡ್ಯ ವಿಕೆಟ್ ಗಳಿಸಿದರು. ಫೀಲ್ಡರ್ ಲಿವಿಂಗ್‌ಸ್ಟೋನ್ ಪಡೆದ ಅಮೋಘ ಕ್ಯಾಚ್‌ಗೆ ಹಾರ್ದಿಕ್ ನಿರ್ಗಮಿಸಬೇಕಾಯಿತು. ಪಂದ್ಯಕ್ಕೆ ಇದು ಪ್ರಮುಖ ತಿರುವಾಯಿತು. ಈ ಓವರ್‌ನಲ್ಲಿ ಮಿಚೆಲ್ ಸ್ಯಾಂಟನರ್ ಒಂದು ಸಿಕ್ಸರ್ ಹೊಡೆದರು. ಆದರೂ ಕೊನೆ ಓವರ್‌ನಲ್ಲಿ 19 ರನ್ ಗಳಿಸುವ ಸವಾಲು ಮುಂಬೈಗಿತ್ತು.



ವಿರಾಟ್ ಕೊಹ್ಲಿ

ಕೊನೆಯ ಓವರ್ ಹಾಕಿದ ಕೃಣಾಲ್ ಮೊದಲ ಎಸೆತದಲ್ಲಿ ಸ್ಯಾಂಟನರ್ ವಿಕೆಟ್ ಪಡೆದರು. ಎರಡನೇ ಎಸೆತದಲ್ಲಿ ದೀಪಕ್ ಚಾಹರ್ ಸಿಕ್ಸರ್‌ಗೆತ್ತಿದ ಚೆಂಡನ್ನು ಬೌಂಡರಿ ಲೈನ್‌ನಲ್ಲಿ ಫಿಲ್ ಸಾಲ್ಟ್ ಚಾಕಚಕ್ಯತೆಯ ಫೀಲ್ಡಿಂಗ್ ಸಹಕಾರದಿಂದ ಟಿಮ್ ಡೇವಿಡ್ ಕ್ಯಾಚ್ ಪಡೆದರು. ಇದೆ ಓವರ್‌ನಲ್ಲಿ ನಮನ್ ವಿಕೆಟ್ ಕೂಡ ಕೃಣಾಲ್ ಪಾಲಾಯಿತು. ಮುಂಬೈ 9 ವಿಕೆಟ್‌ಗೆ 209 ರನ್‌ಗಳೊಂದಿಗೆ ಹೋರಾಟ ಮುಗಿಸಿ, 12 ರನ್‌ಗಳಿಂದ ಸೋತಿತು. ಮುಂಬೈಗೆ ಇದು ಟೂರ್ನಿಯಲ್ಲಿ ನಾಲ್ಕನೇ ಸೋಲು.

ವಿರಾಟ್-ರಜತ್ ಬೀಸಾಟ: ಟಾಸ್ ಗೆದ್ದ ಮುಂಬೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರ್‌ಸಿಬಿ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 221 ರನ್‌ಗಳ ದೊಡ್ಡ ಮೊತ್ತ ಗಳಿಸಲು ವಿರಾಟ್ ಕೊಹ್ಲಿ (67; 42ಎ, 4X8, 6X2) ಹಾಗೂ ರಜತ್ (64; 32ಎ, 4X5, 6X4) ಅವರ ಬೀಸಾಟ ಕಾರಣವಾಯಿತು.



ಅಗ್ರಮಾನ್ಯ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ತಂಡಕ್ಕೆ ಮರಳಿದ್ದರಿಂದ ಮುಂಬೈ ತಂಡವು ಅಪಾರ ಆತ್ಮವಿಶ್ವಾಸದಲ್ಲಿತ್ತು. ಎಡಗೈ ವೇಗಿ ಟ್ರೆಂಟ್ ಬೌಲ್ಟ್ ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ಫಿಲ್ ಸಾಲ್ಟ್ ಅವರ ವಿಕೆಟ್ ಕಿತ್ತರು. ಆದರೆ ಇದರಿಂದ ತಂಡಕ್ಕೆ ಹೆಚ್ಚಿನ ಹಾನಿಯಾಗದಂತೆ ವಿರಾಟ್ ಮತ್ತು ದೇವದತ್ತ ಪಡಿಕ್ಕಲ್ (37; 22ಎ) ನೋಡಿಕೊಂಡರು.

ಎಡಗೈ ಮಣಿಕಟ್ಟಿನ ಸ್ಪಿನ್ನರ್ ವಿಘ್ನೇಷ್ ಪುತ್ತೂರ್ ಅವರಿಗೆ 9ನೇ ಓವರ್ ಬೌಲಿಂಗ್ ಮಾಡಲು ಚೆಂಡು ಕೊಟ್ಟ ಪಾಂಡ್ಯ ತಂತ್ರಗಾರಿಕೆ ಫಲಿಸಿತು. ದೊಡ್ಡ ಹೊಡೆತಕ್ಕೆ ಯತ್ನಿಸಿದ ಪಡಿಕ್ಕಲ್, ವಿಲ್ ಜಾಕ್ಸ್‌ಗೆ ಕ್ಯಾಚ್ ಆದರು.

ಕ್ರೀಸ್‌ಗೆ ಬಂದ ರಜತ್ ಅವರು ಕೊಹ್ಲಿಯೊಂದಿಗೆ ರನ್ ಬೇಟೆಯಾಡಿದರು. ಇಬ್ಬರೂ 200ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. 15ನೇ ಓವರ್‌ನಲ್ಲಿ ಹಾರ್ದಿಕ್ ಅವರು ವಿರಾಟ್ ವಿಕೆಟ್ ಗಳಿಸಿದರು. ಅದೇ ಓವರ್‌ನಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್ ಕೂಡ ವಿಕೆಟ್ ಒಪ್ಪಿಸಿದರು. ಈ ಹಂತದಲ್ಲಿಯೂ ರಜತ್ ಆಟದ ವೇಗ ಜೋರಾಗಿಯೇ ಇತ್ತು. ಅವರೊಂದಿಗೆ ಜಿತೇಶ್ ಶರ್ಮಾ ಸೇರಿಕೊಂಡರು. ‘ಡೆತ್ ಓವರ್’ಗಳಲ್ಲಿ ಅಗತ್ಯವಿದ್ದ ಸ್ಫೋಟಕ ಶೈಲಿಯ ಬ್ಯಾಟಿಂಗ್ ಮಾಡಿದ ಜಿತೇಶ್ 19 ಎಸೆತಗಳಲ್ಲಿ ಅಜೇಯ 40 ರನ್ ಗಳಿಸಿದರು.

ವಿಕೆಟ್ ಪಡೆದ ಸಂಭ್ರಮದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರು —ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 5ಕ್ಕೆ221 (20 ಓವರ್‌ಗಳಲ್ಲಿ)
ಸಾಲ್ಟ್ ಬಿ ಬೌಲ್ಟ್ 4 (2ಎ, 4X1)
ವಿರಾಟ್ ಸಿ ನಮನ್ ಬಿ ಹಾರ್ದಿಕ್ 67 (42ಎ, 4X8, 6X2)
ಪಡಿಕ್ಕಲ್ ಸಿ ಜಾಕ್ಸ್ ಬಿ ವಿಘ್ನೇಷ್ 37 (22ಎ, 4X2, 6X3)
ರಜತ್ ಸಿ ರಿಕೆಲ್ಟನ್ ಬಿ ಬೌಲ್ಟ್ 64 (32ಎ, 4X5, 4X4)
ಲಿವಿಂಗ್‌ಸ್ಟೋನ್ ಸಿ ಬೂಮ್ರಾ ಬಿ ಹಾರ್ದಿಕ್ 0 (2ಎ)
ಜಿತೇಶ್ ಔಟಾಗದೇ 40 (19ಎ, 4X2, 6X4)
ಡೇವಿಡ್ ಔಟಾಗದೇ 1 (1ಎ)
ಇತರೆ: 8(ಲೆಗ್‌ಬೈ 1, ವೈಡ್ 7)
ವಿಕೆಟ್ ಪತನ: 1-4 (ಫಿಲಿಪ್ ಸಾಲ್ಟ್; 0.2), 2-95 (ದೇವದತ್ತ ಪಡಿಕ್ಕಲ್; 8.6), 3-143 (ವಿರಾಟ್ ಕೊಹ್ಲಿ; 14.1), 4-144 (ಲಿಯಾಮ್ ಲಿವಿಂಗ್‌ಸ್ಟೋನ್; 14.3), 5-213 (ರಜತ್ ಪಾಟೀದಾರ್; 18.6)
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-57-2, ದೀಪಕ್ ಚಾಹರ್ 2-0-29-0, ಜಸ್‌ಪ್ರೀತ್ ಬೂಮ್ರಾ 4-0-29-0, ವಿಲ್ ಜಾಕ್ಸ್ 1-0-10-0, ಮಿಚೆಲ್ ಸ್ಯಾಂಟನರ್ 4-0-40-0, ಹಾರ್ದಿಕ್ ಪಾಂಡ್ಯ 4-0-45-2, ವಿಘ್ನೇಷ್ ಪುತ್ತೂರ್ 1-0-10-1.

ಮುಂಬೈ ಇಂಡಿಯನ್ಸ್ 9ಕ್ಕೆ 209 (20 ಓವರ್‌ಗಳಲ್ಲಿ)
ರೋಹಿತ್ ಬಿ ಯಶ್ 17 (9ಎ, 4x2, 6x1)
ರಿಕೆಲ್ಟನ್ ಎಲ್‌ಬಿಡಬ್ಲ್ಯು ಬಿ ಹ್ಯಾಜಲ್‌ವುಡ್ 17 (10ಎ, 4x4)
ಜ್ಯಾಕ್ಸ್ ಸಿ ಕೊಹ್ಲಿ ಬಿ ಕೃಣಾಲ್ 22 (18ಎ, 4x2, 6x1)
ಸೂರ್ಯಕುಮಾರ್ ಸಿ ಲಿವಿಂಗ್‌ಸ್ಟೋನ್ ಬಿ ಯಶ್ 28 (26ಎ, 4x5)
ತಿಲಕ್ ಸಿ ಸಾಲ್ಟ್ ಬಿ ಭುವನೇಶ್ವರ್ 56 (29ಎ, 4x4, 6x4)
ಹಾರ್ದಿಕ್ ಸಿ ಲಿವಿಂಗ್‌ಸ್ಟೋನ್ ಬಿ ಹ್ಯಾಜಲ್‌ವುಡ್ 42 (15ಎ, 4x3, 6x4)
ನಮನ್ ಸಿ ಯಶ್ ಬಿ ಕೃಣಾಲ್ 11 (6ಎ, 4x1, 6x1)
ಸ್ಯಾಂಟನರ್ ಸಿ ಡೇವಿಡ್ ಬಿ ಕೃಣಾಲ್ 8 (4ಎ, 6x1)
ಚಾಹರ್ ಬಿ ಡೇವಿಡ್ ಬಿ ಕೃಣಾಲ್ 0 (1ಎ)
ಟ್ರೆಂಟ್ ಬೌಲ್ಟ್ ಔಟಾಗದೇ 1 (1ಎ)
ಜಸ್‌ಪ್ರೀತ್ ಬೂಮ್ರಾ ಔಟಾಗದೇ 0 (1ಎ)
ಇತರೆ: 7 (ಲೆಗ್‌ಬೈ 1, ವೈಡ್ 6)
ವಿಕೆಟ್ ಪತನ: 1-21 (ರೋಹಿತ್ ಶರ್ಮಾ, 1.4), 2-38 (ರಿಯಾನ್ ರಿಕೆಲ್ಟನ್, 3.4), 3-79 (ವಿಲ್ ಜ್ಯಾಕ್ಸ್, 9.4), 4-99 (ಸೂರ್ಯಕುಮಾರ್ ಯಾದವ್, 11.6), 5-188 (ತಿಲಕ್ ವರ್ಮಾ, 17.4), 6-194 (ಹಾರ್ದಿಕ್ ಪಾಂಡ್ಯ, 18.1), 7-203 (ಮಿಚೆಲ್ ಸ್ಯಾಂಟನರ್, 19.1), 8-203 (ದೀಪಕ್ ಚಾಹರ್, 19.2), 9-209 (ನಮನ್ ಧೀರ್, 19.5)
ಬೌಲಿಂಗ್: ಭುವನೇಶ್ವರ ಕುಮಾರ್ 4-0-48-1, ಯಶ್ ದಯಾಳ್ 4-0-46-2, ಜೋಶ್ ಹ್ಯಾಜಲ್‌ವುಡ್ 4-0-37-2, ಸುಯಶ್ ಶರ್ಮಾ 4-0-32-0, ಕೃಣಾಲ್ ಪಾಂಡ್ಯ 4-0-45-4.
ಪಂದ್ಯದ ಆಟಗಾರ: ರಜತ್ ಪಾಟೀದಾರ್

ಫಲಿತಾಂಶ: ರಾಯಲ್ ಚಾಲೆಂಜರ್ಸ್ ತಂಡಕ್ಕೆ 12 ರನ್‌ಗಳ ಜಯ

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಡಿಸಿ	3	3	0	6	1.257
2	ಜಿಟಿ	4	3	1	6	1.031
3	ಆರ್‌ಸಿಬಿ	4	3	1	6	1.015
4	ಪಿಬಿಕೆಎಸ್	3	2	1	4	0.074
5	ಕೆಕೆಆರ್	4	2	2	4	0.070
6	ಎಲ್‌ಎಸ್‌ಜಿ	4	2	2	4	0.048
7	ಆರ್‌ಆರ್	4	2	2	4	-0.185
8	ಎಂಐ	5	1	4	2	0.010
9	ಸಿಎಸ್‌ಕೆ	3	1	2	2	-0.891
10	ಎಸ್‌ಆರ್‌ಎಚ್	5	1	4	2	-1.629

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 201 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 10 ವಿಕೆಟ್

ಟಿ20 ಕ್ರಿಕೆಟ್: ಕೊಹ್ಲಿ 13 ಸಾವಿರ ರನ್

ಮುಂಬೈ (ಪಿಟಿಐ): ವಿರಾಟ್ ಕೊಹ್ಲಿ ಅವರು ಟಿ20 ಕ್ರಿಕೆಟ್ ಮಾದರಿಯಲ್ಲಿ 13 ಸಾವಿರ ರನ್ ಮೈಲಿಗಲ್ಲು ದಾಟಿದ ಭಾರತದ ಮೊದಲ ಆಟಗಾರನಾದರು.

ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದಲ್ಲಿ ಅರ್ಧಶತಕ ಗಳಿಸಿದ ಅವರು ಈ ದಾಖಲೆ ತಲುಪಿದರು. ಈ ಸಾಧನೆ ಮಾಡಿದ ವಿಶ್ವದ ಬ್ಯಾಟರ್‌ಗಳ ಕೊಹ್ಲಿ ಐದನೇ ಸ್ಥಾನ ಪಡೆದಿದ್ದಾರೆ. ಕೊಹ್ಲಿ ಒಟ್ಟು 400 ಟಿ20 ಪಂದ್ಯಗಳನ್ನು ಆಡಿದ್ದಾರೆ. ಹೋದ ವರ್ಷ ಭಾರತ ತಂಡ ಟಿ20 ವಿಶ್ವಕಪ್ ಜಯಿಸಿದ ನಂತರ ಕೊಹ್ಲಿ ಅಂತರರಾಷ್ಟ್ರೀಯ ಚುಟುಕು ಕ್ರಿಕೆಟ್ ಮಾದರಿಗೆ ವಿದಾಯ ಹೇಳಿದ್ದರು.

ಅಶಿಸ್ತು: ಇಶಾಂತ್ ಶರ್ಮಾಗೆ ದಂಡ



ಹೈದರಾಬಾದ್ (ಪಿಟಿಐ): ಗುಜರಾತ್ ಟೈಟನ್ಸ್ ತಂಡದ ವೇಗದ ಬೌಲರ್ ಇಶಾಂತ್ ಶರ್ಮಾ ಅವರಿಗೆ ನಿಯಮ ಉಲ್ಲಂಘನೆಗಾಗಿ ದಂಡ ವಿಧಿಸಲಾಗಿದೆ. ಅಲ್ಲದೇ ಒಂದು ಡಿಮೆರಿಟ್ ಅಂಕವನ್ನೂ ಅವರ ಖಾತೆಗೆ ಸೇರಿಸಲಾಗಿದೆ.

ಭಾನುವಾರ ಸನ್‌ರೈಸರ್ಸ್ ಹೈದರಾಬಾದ್ ಎದುರು ನಡೆದ ಪಂದ್ಯದಲ್ಲಿ ಅವರು ಅಶಿಸ್ತು ಪ್ರದರ್ಶಿಸಿದ ಕಾರಣಕ್ಕೆ ಐಪಿಎಲ್‌ನ 2.2 ನೇ ನಿಯಮ ದಡಿಯಲ್ಲಿ ಪಂದ್ಯ ಸಂಭಾವನೆಯ ಶೇ 25ರಷ್ಟು ಮೊತ್ತದ ದಂಡ ವಿಧಿಸಲಾಗಿದೆ.

‘ಪಂದ್ಯದ ಸಂದರ್ಭದಲ್ಲಿ ಕ್ರಿಕೆಟ್ ಸಲಕರಣೆಗಳು, ವಸ್ತ್ರ, ಮೈದಾನದ ಸಲಕರಣೆಗಳು ಅಥವಾ ಸೌಕರ್ಯ ಸಾಧನಗಳಿಗೆ ಹಾನಿ ಮಾಡಿದಾಗ ಈ ನಿಯಮದ ಉಲ್ಲಂಘನೆಯೆಂದು ಪರಿಗಣಿಸಲಾಗುತ್ತದೆ. ತಮ್ಮ ತಪ್ಪನ್ನು ಇಶಾಂತ್ ಕೂಡ ಒಪ್ಪಿಕೊಂಡಿದ್ದಾರೆ. ಪಂದ್ಯ ರೆಫರಿ ತೀರ್ಪು ಅಂತಿಮ’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಶಾಂತ್ ಅವರು ಈ ಪಂದ್ಯದಲ್ಲಿ ನಾಲ್ಕು ಓವರ್‌ಗಳಲ್ಲಿ 53 ರನ್‌ಗಳನ್ನು ಕೊಟ್ಟಿದ್ದರು. ವಿಕೆಟ್ ಕೂಡ ಗಳಿಸಿರಲಿಲ್ಲ. ಈ ಪಂದ್ಯದಲ್ಲಿ ಗುಜರಾತ್ ತಂಡವು ಸನ್‌ರೈಸರ್ಸ್ ಹೈದರಾಬಾದ್ ಎದುರು 7 ವಿಕೆಟ್‌ಗಳಿಂದ ಜಯಿಸಿತ್ತು.

ಸಂಕ್ಷಿಪ್ತ ಸುದ್ದಿ

ಇಂಗ್ಲೆಂಡ್ ತಂಡಕ್ಕೆ ಬ್ರೂಕ್ ನಾಯಕ



ಲಂಡನ್ (ಪಿಟಿಐ): ಹ್ಯಾರಿ ಬ್ರೂಕ್ ಅವರನ್ನು ಇಂಗ್ಲೆಂಡ್ ಏಕದಿನ ಮತ್ತು ಟಿ20 ಕ್ರಿಕೆಟ್ ತಂಡಗಳ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಕಳೆದ ತಿಂಗಳು ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಕಳಪೆ ಪ್ರದರ್ಶನ ನೀಡಿದ ನಂತರ ಜೋಸ್ ಬಟ್ಲರ್ ನಾಯಕತ್ವ ಸ್ಥಾನವನ್ನು ತ್ಯಜಿಸಿದ್ದರು. ಆ ಸ್ಥಾನಕ್ಕೆ 26 ವರ್ಷ ವಯಸ್ಸಿನ ಬ್ಯಾಟರ್ ಬ್ರೂಕ್ ಅವರನ್ನು ಇಂಗ್ಲೆಂಡ್ ಹಾಗೂ ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಸೋಮವಾರ ನೇಮಿಸಿದೆ.

2022ರ ಜನವರಿಯಲ್ಲಿ ಟಿ20 ಪಂದ್ಯದ ಮೂಲಕ ಇಂಗ್ಲೆಂಡ್ ತಂಡಕ್ಕೆ ಪದಾರ್ಪಣೆ ಮಾಡಿದ್ದ ಬ್ರೂಕ್, ಕಳೆದ ವರ್ಷದಿಂದ ಏಕದಿನ ಮತ್ತು ಟಿ20 ಮಾದರಿಯಲ್ಲಿ ಉಪನಾಯಕನಾಗಿದ್ದರು. ಕಳೆದ ಸೆಪ್ಟೆಂಬರ್‌ನಲ್ಲಿ ಬಟ್ಲರ್ ಅನುಪಸ್ಥಿತಿಯಲ್ಲಿ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿಯಲ್ಲಿ ಅವರು ತಂಡವನ್ನು ಮುನ್ನಡೆಸಿದ್ದರು.

ಡೆಕ್ಕನ್ ತಂಡಕ್ಕೆ ಜಯ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಎಫ್‌ಸಿ ಡೆಕ್ಕನ್ ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–2 ಗೋಲುಗಳಿಂದ ಸ್ನೈಪರ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಡೆಕ್ಕನ್ ಪರ ಗಾಡ್ವಿನ್ ಜಾಯ್ (31ನೇ ಮತ್ತು 60ನೇ ನಿಮಿಷ) ಎರಡು ಗೋಲು ಗಳಿಸಿದರೆ, ಪ್ರಜ್ವಲ್ ಗೌಡ (47ನೇ) ಮತ್ತು ಹಿಜಾಮ್ ಸನತೋಯ್ ಸಿಂಗ್ (77ನೇ) ತಲಾ ಒಂದು ಗೋಲು ತಂದಿತ್ತರು. ಸ್ನೈಪರ್ಸ್ ಪರ ಅರ್ಜುನ್ ರೂಡಿ (21ನೇ) ಮತ್ತು ಅಮಲ್ ಸುರೇಶ್ (40ನೇ) ಚೆಂಡನ್ನು ಗುರಿ ಸೇರಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಐಟಿ (ಆದಾಯ ತೆರಿಗೆ) ಫುಟ್‌ಬಾಲ್ ಕ್ಲಬ್ ತಂಡವು 1–1 ಗೋಲುಗಳಿಂದ ಬ್ಲಿಟ್ಜ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಐಟಿ ತಂಡದ ಪಾಂಡ್ಯನ್ ಎಂ. (28ನೇ) ಮತ್ತು ಬ್ಲಿಟ್ಜ್ ತಂಡದ ಮೃಣಾಲ್ ಗೌಡ (80 + 1ನೇ) ಗೋಲು ತಂದಿತ್ತರು.

ಹಾಕಿ: ಕಾಯಪಂಡ ತಂಡಕ್ಕೆ ಗೆಲುವು

ಮಡಿಕೇರಿ: ಕಾಯಪಂಡ ತಂಡವು ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮೈದಾನದಲ್ಲಿ ಸೋಮವಾರ ನಡೆದ ಹಣಾಹಣಿಯಲ್ಲಿ ಚೇಂದಿರ ಎದುರು 7–6 ಗೋಲುಗಳಿಂದ ಜಯಿಸಿತು. ‘ಮುದ್ದಂಡ ಕಪ್’ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಬಹುತೇಕ ಪಂದ್ಯಗಳು ರೋಚಕವಾಗಿದ್ದವು.

ಕರ್ತಮಾಡ ತಂಡ 5-3ರಿಂದ ಬೊಟ್ಟಂಗಡ ವಿರುದ್ಧ, ಚೆಂಡಮಾಡ 3-1ರಿಂದ ತೇಲಪಂಡದ ವಿರುದ್ಧ, ಅರೆಯಡ 3-2ರಿಂದ ಚೋಕಿರ ವಿರುದ್ಧ, ಆಲೆಮಾಡ 3-1ರಿಂದ ಮುದ್ದಿಯಡ ವಿರುದ್ಧ, ಮಚ್ಚಾರಂಡ 4-3ರಿಂದ ಎಳ್ತಂಡ ವಿರುದ್ಧ, ಬಾಳೆಯಡ 4-3ರಿಂದ ಮೂಕಳೇರ ವಿರುದ್ಧ ಗೆಲುವು ಸಾಧಿಸಿದವು.

ಚೆನ್ನೈಗೆ ಸೋಲಿನ ಸರಪಳಿ ಕಳಚುವ ಒತ್ತಡ

ಪಂಜಾಬ್ ಕಿಂಗ್ಸ್– ಸೂಪರ್ ಕಿಂಗ್ಸ್ ಹಣಾಹಣಿ ಇಂದು

ಮಹೇಂದ್ರಸಿಂಗ್ ರನ್ ಗಳಿಕೆ ವೇಗ ಹೆಚ್ಚುವುದೇ?

ಬಲಾಬಲ

ಒಟ್ಟು ಪಂದ್ಯ	30
ಚೆನ್ನೈಗೆ ಜಯ	16
ಪಂಜಾಬ್‌ಗೆ ಜಯ	14

ಪಂದ್ಯ ಆರಂಭ: ರಾತ್ರಿ 7.30



ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ – ಪಿಟಿಐ ಚಿತ್ರ

ಮುಲ್ಲನಪುರ (ಪಿಟಿಐ): ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ಮಂಗಳವಾರ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಇನಿಂಗ್ಸ್‌ನ ಕೊನೆಯ ಹಂತದ ಓವರ್‌ಗಳಲ್ಲಿ ಮೊದಲಿನಂತೆ ಬಿರುಸಿನ ಬ್ಯಾಟಿಂಗ್ ಮಾಡುವಲ್ಲಿ ಮಹೇಂದ್ರಸಿಂಗ್ ಧೋನಿ ಯಶಸ್ವಿಯಾಗುತ್ತಿಲ್ಲ. ಇದು ಚೆನ್ನೈ ತಂಡವನ್ನು ಕಾಡುತ್ತಿದೆ. ಚೆನ್ನೈ ತಂಡವು ಈಗಾಗಲೇ ‘ಹ್ಯಾಟ್ರಿಕ್’ ಸೋಲು ಅನುಭವಿಸಿದೆ. ಈ ಎಲ್ಲ ಸೋಲುಗಳು ಕೂಡ ಗುರಿ ಬೆನ್ನಟ್ಟುವ ಪಂದ್ಯಗಳಲ್ಲಿ ಆಗಿದೆ.

ತಂಡವನ್ನು ಜಯದ ಹಾದಿಗೆ ಮರಳಿ ತರುವ ಸವಾಲು ನಾಯಕ ಋತುರಾಜ್ ಗಾಯಕವಾಡ ಅವರ ಮುಂದಿದೆ. ಈ ಹಿಂದಿನ ಆವೃತ್ತಿಗಳಲ್ಲಿ ಧೋನಿ ತಂಡದಲ್ಲಿರುವುದೇ ಶಕ್ತಿ ಎಂದು ಹೇಳಲಾಗುತ್ತಿತ್ತು. ಆದರೆ ಈಗಿನ ಪರಿಸ್ಥಿತಿ ತದ್ವಿರುದ್ಧವಾಗಿದೆ. ಇದರಿಂದಾಗಿ ತಂಡದಲ್ಲಿ ಸಮತೋಲನ ಕಾಪಾಡಿಕೊಳ್ಳುವುದು ಕೂಡ ಕಠಿಣವಾಗುತ್ತಿದೆ ಎನ್ನಲಾಗಿದೆ.

ಇಂತಹ ಪರಿಸ್ಥಿತಿಯಲ್ಲಿಯೂ ಫ್ರ್ಯಾಂಚೈಸಿಯ ಯಾರೊಬ್ಬರು ಧೋನಿಗೆ ‘ಕನ್ನಡಿ’ ತೋರಿಸುವ ಧೈರ್ಯ ಮಾಡುತ್ತಿಲ್ಲ. ಏಕೆಂದರೆ; ಅಪಾರ ಸಂಖ್ಯೆಯ ಅಭಿಮಾನಿಗಳ ವಲಯದಲ್ಲಿ ಧೋನಿ ವರ್ಚಸ್ಸು ಈಗಲೂ ದೊಡ್ಡ ಮಟ್ಟದಲ್ಲಿ ಇದೆ. ಅವರು ಮೈದಾನಕ್ಕಿಳಿಯುತ್ತಿದ್ದಂತೆ ಅಭಿಮಾನಿಗಳ ಹರ್ಷ ಮುಗಿಲುಮುಟ್ಟುತ್ತದೆ. ಆದರೆ, ಈಚೆಗೆ ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಫಲಿತಾಂಶದಿಂದ ಚೆನ್ನೈ ಅಭಿಮಾನಿಗಳಿಗೂ ಕೂಡ ಧೋನಿಗಿಂತ ತಂಡ ಮುಖ್ಯ ಎಂಬುದರ ಹೊಳಹು ಸಿಕ್ಕಿರಬಹುದು. ಕಳೆದ ಹಲವು ವರ್ಷಗಳಲ್ಲಿ ಧೋನಿ ಅಂತರ ರಾಷ್ಟ್ರೀಯ ಕ್ರಿಕೆಟ್ ಮಾದರಿಗಳಿಂದ ನಿವೃತ್ತರಾಗಿದ್ದಾರೆ. ಚೆನ್ನೈ ತಂಡದ ನಾಯಕತ್ವವನ್ನೂ ಬಿಟ್ಟುಕೊಟ್ಟಿದ್ದಾರೆ. ಇದು ಅವರ ಹೆಗ್ಗಳಿಕೆ. ಆದರೆ ಐಪಿಎಲ್‌ನಿಂದ ವಿದಾಯ ಹೇಳುವ ನಿರ್ಧಾರ ಯಾವಾಗ ಕೈಗೊಳ್ಳುವರು ಎಂಬ ಕುತೂಹಲ ಈಗ ಇದೆ.

‘ನಾನು ಅವರೊಂದಿಗೆ (ಧೋನಿ) ತಂಡದಲ್ಲಿ ಆನಂದದಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ. ಅವರು ಈಗಲೂ ಸಮರ್ಥರಾಗಿಯೇ ಮುಂದುವರಿಯುತ್ತಿದ್ದಾರೆ. ನಿವೃತ್ತಿಯ ಕುರಿತು ನಾವು ಯಾವಾಗಲೂ ಮಾತನಾಡಿಲ್ಲ. ಆದರೆ ನೀವು (ಮಾಧ್ಯಮದವರು) ಯಾವಾಗಲೂ ನಿವೃತ್ತಿ ಕುರಿತು ಕೇಳುತ್ತೀರಿ’ ಎಂದು ಮುಖ್ಯ ಕೋಚ್ ಸ್ಟೀಫನ್ ಫ್ಲೆಮಿಂಗ್ ಪತ್ರಿಕಾಗೋಷ್ಠಿ ಯಲ್ಲಿ ಸ್ಪಷ್ಟಪಡಿಸಿದರು.

ಇನ್ನೊಂದೆಡೆ ಮಧ್ಯಮ ಕ್ರಮಾಂಕದಲ್ಲಿ ಶಿವಂ ದುಬೆ ಕೂಡ ತಮ್ಮ ಸ್ಫೋಟಕ ಶೈಲಿಯ ಬ್ಯಾಟಿಂಗ್ ಮಾಡುತ್ತಿಲ್ಲ. ಅದರಿಂದಾಗಿ ಚೆನ್ನೈ ಎದುರು ಟಾಸ್ ಜಯಿಸುವ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಳ್ಳಲು ಆಸಕ್ತಿ ತೋರುತ್ತವೆ. ಏಕೆಂದರೆ 180 ರನ್‌ಗಳ ಮೊತ್ತ ಗಳಿಸಿದರೂ ಸಾಕು, ಜಯಿಸುವ ಸಾಧ್ಯತೆ ಹೆಚ್ಚು. ದುಬೆ ಮಿಂಚದಿದ್ದರೆ ಈ ಗುರಿ ಮುಟ್ಟುವುದು ಕಷ್ಟ. ಋತುರಾಜ್ ಅವರು ಇನಿಂಗ್ಸ್ ಆರಂಭಿಸುತ್ತಿಲ್ಲ. ಮೂರನೇ ಕ್ರಮಾಂಕದಲ್ಲಿ ಆಡುತ್ತಿದ್ದಾರೆ. ರಚಿನ್ ರವೀಂದ್ರ, ವಿಜಯ ಶಂಕರ್, ರಾಹುಲ್ ತ್ರಿಪಾಠಿ ಅವರು ಉತ್ತಮ ಲಯದಲ್ಲಿದ್ದಾರೆ. ಬೌಲಿಂಗ್‌ನಲ್ಲಿ ಖಲೀಲ್, ಜಡೇಜ ಮತ್ತು ಅಶ್ವಿನ್ ಅವರ ಬಲವನ್ನೇ ತಂಡವು ನೆಚ್ಚಿಕೊಂಡಿದೆ.

ಆದರೆ ಆತಿಥೇಯ ಪಂಜಾಬ್ ತಂಡವನ್ನು ಮಣಿಸುವುದು ಸುಲಭವಲ್ಲ. ನಾಯಕ ಶ್ರೇಯಸ್, ನೇಹಲ್ ವಧೇರಾ ಅವರು ಉತ್ತಮ ಲಯದಲ್ಲಿದ್ದಾರೆ. ಆರಂಭಿಕ ಜೋಡಿ ಪ್ರಿಯಾಂಶ್ ಆರ್ಯ ಮತ್ತು ಪ್ರಭಸಿಮ್ರನ್ ಸಿಂಗ್ ಉತ್ತಮ ಅಡಿಪಾಯ ಹಾಕುವ ಕೆಲಸ ಮಾಡಬೇಕು. ಆರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬರುವ ಗ್ಲೆನ್ ಮ್ಯಾಕ್ಸ್‌ವೆಲ್ ಕೊನೆಯ ಹಂತದ ಓವರ್‌ಗಳಲ್ಲಿ ರನ್ ಹೊಳೆ ಹರಿಸದಂತೆ ತಡೆಯುವುದು ಚೆನ್ನೈ ತಂಡದ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು.

ಇನ್ನೂ 10 ತಿಂಗಳು ಬಾಕಿ ಇವೆ: ಧೋನಿ



ಮಹೇಂದ್ರಸಿಂಗ್ ಧೋನಿ

ನವದೆಹಲಿ (ಪಿಟಿಐ): ‘ಮುಂದಿನ ವರ್ಷ ಐಪಿಎಲ್‌ನಲ್ಲಿ ಕಣಕ್ಕಿಳಿಯಬೇಕೋ ಬೇಡವೋ ಎಂದು ನಿರ್ಧರಿಸಲು ನನಗಿನ್ನೂ 10 ತಿಂಗಳು ಸಮಯಾವಕಾಶವಿದೆ. ಆ ಸಂದರ್ಭದಲ್ಲಿ ನನ್ನ ದೇಹ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದರ ಮೇಲೆ ನಿರ್ಧಾರ ಕೈಗೊಳ್ಳುತ್ತೇನೆ’ ಎಂದು ವಿಕೆಟ್‌ಕೀಪರ್ ಬ್ಯಾಟರ್ ಮಹೇಂದ್ರಸಿಂಗ್ ಧೋನಿ ಹೇಳಿದ್ದಾರೆ.

ಅವರು ಈಚೆಗೆ ರಾಜ್ ಶಮಾನಿ ಪಾಡ್‌ಕಾಸ್ಟ್‌ನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ‘ಮುಂದಿನ ವರ್ಷ ನನಗೆ 44 ವರ್ಷ ವಯಸ್ಸಾಗುತ್ತದೆ. ಮತ್ತೊಂದು ವರ್ಷ ಆಡಬೇಕೆ ಅಥವಾ ಬೇಡವೇ ಎಂಬುದನ್ನು ದೈಹಿಕ ಸ್ಥಿತಿ ಗತಿಯ ಮೇಲೆ ನಿರ್ಧರಿತವಾಗಲಿದೆ’ ಎಂದರು.

ಸುನೀಲ್– ದಿಗ್ವೇಶ್ ರಾಠಿ ಮುಖಾಮುಖಿ

ಕೋಲ್ಕತ್ತಗೆ ಲಖನೌ ಸವಾಲು

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್ ಆ್ಯಪ್



ಲಖನೌ ತಂಡದ ದಿಗ್ವೇಶ್ ಸಿಂಗ್

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಲ್‌ರೌಂಡರ್ ಸುನೀಲ್ ನಾರಾಯಣ್ ಅವರು ತಮ್ಮ ದೊಡ್ಡ ಅಭಿಮಾನಿ ದಿಗ್ವೇಶ್ ರಾಠಿ ಅವರೊಂದಿಗೆ ಮಂಗಳವಾರ ಇಲ್ಲಿ ಮುಖಾಮುಖಿಯಾಗಲಿದ್ದಾರೆ.

ಲಖನೌ ಸೂಪರ್ ಜೈಂಟ್ಸ್ ತಂಡದಲ್ಲಿರುವ ದಿಗ್ವೇಶ್ ಅವರು ವೆಸ್ಟ್ ಇಂಡೀಸ್ ಆಟಗಾರ ಸುನೀಲ್ ಅವರ ಅಭಿಮಾನಿ. ದಿಗ್ವೇಶ್ ಅವರ ಹಾವಭಾವವೂ ಸುನೀಲ್ ಅವರಂತೆಯೇ ಇದೆ. ಈಚೆಗೆ ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದಲ್ಲಿ ದಿಗ್ವೇಶ್ ಗೆಲುವಿನ ರೂವಾರಿ ಯಾಗಿದ್ದರು. ಇಲ್ಲಿಯೂ ಅವರು ತಮ್ಮ ಸ್ಪಿನ್ ಬೌಲಿಂಗ್ ಲಯವನ್ನು ಮುಂದುವರಿಸಿ ಕೋಲ್ಕತ್ತದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವರೇ ಎಂಬ ಕುತೂಹಲ ಗರಿಗೆದರಿದೆ.

ಉಭಯ ತಂಡಗಳು ತಲಾ 4 ಪಂದ್ಯ ಆಡಿವೆ. ಅದರಲ್ಲಿ ಎರಡು ಜಯ ಮತ್ತು ಎರಡು ಸೋಲು ಅನುಭವಿಸಿವೆ. ಕೋಲ್ಕತ್ತ ತಂಡವು ಈಚೆಗೆ ಸನ್‌ರೈಸರ್ಸ್ ಹೈದರಾಬಾದ್ ಎದುರು ಗೆದ್ದಿತ್ತು. ಆ ಪಂದ್ಯದಲ್ಲಿ ವೆಂಕಟೇಶ್ ಅಯ್ಯರ್ ಬಿರುಸಿನ ಬ್ಯಾಟಿಂಗ್ ರಂಗೇರಿತ್ತು. ಅವರು ಲಯಕ್ಕೆ ಮರಳಿದ್ದು ತಂಡದ ಬಲ ಹೆಚ್ಚಿಸಿದೆ. ಅಂಗಕ್ರಿಷ್ ರಘುವಂಶಿ, ಅಜಿಂಕ್ಯ ರಹಾನೆ ಮತ್ತು ರಿಂಕು ಸಿಂಗ್ ಕೂಡ ಉತ್ತಮ ಲಯದಲ್ಲಿದ್ದಾರೆ. ವೇಗದ ಬೌಲರ್ ವೈಭವ್ ಅರೋರಾ ಹಾಗೂ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ತಂಡಕ್ಕೆ ಗೆಲುವಿನ ಕಾಣಿಕೆ ನೀಡುವ ಸಮರ್ಥರು.

ಲಖನೌ ತಂಡದ ಆರಂಭಿಕ ಜೋಡಿ ಮಿಚೆಲ್ ಮಾರ್ಷ್ ಮತ್ತು ಏಡನ್ ಮಾರ್ಕರಂ ಅವರಿಬ್ಬರೂ ಮುಂಬೈ ಎದುರಿನ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದರು. ಇವರಿಬ್ಬರೂ ಬೀಸಾಟವಾಡದಂತೆ ನೋಡಿಕೊಳ್ಳುವ ಸವಾಲು ಕೆಕೆಆರ್ ಬೌಲರ್‌ಗಳ ಮುಂದಿದೆ. ನಿಕೊಲಸ್ ಪೂರನ್, ಆಯೂಷ್ ಬಡೋನಿ, ಡೇವಿಡ್ ಮಿಲ್ಲರ್ ಅವರೂ ಮಧ್ಯಮ ಕ್ರಮಾಂಕದಲ್ಲಿ ರನ್ ಹೊಳೆ ಹರಿಸಬಲ್ಲವರು. ಆದರೆ ನಾಯಕ ರಿಷಭ್ ಪಂತ್ ಮಾತ್ರ ಇನ್ನೂ ಲಯಕ್ಕೆ ಮರಳದಿರುವುದು ತಂಡದ ಚಿಂತೆ ಹೆಚ್ಚಿಸಿದೆ. ವೇಗಿ ಆವೇಶ್ ಖಾನ್, ಆಕಾಶ್ ದೀಪ್ ಮತ್ತು ಶಾರ್ದೂಲ್ ಠಾಕೂರ್ ಅವರು ಕೂಡ ತಂಡದ ಬಲ ಹೆಚ್ಚಿಸುವ ಆಟಗಾರರಾಗಿದ್ದಾರೆ.



ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರ ಸುನೀಲ್ ನಾರಾಯಣ್

ಬ್ಯಾಡ್ಮಿಂಟನ್ ಏಷ್ಯಾ ಟೂರ್ನಿ ಸಿಂಧು, ಸೇನ್ ಮೇಲೆ ನಿರೀಕ್ಷೆ

ನಿಂಗ್ಬೊ, ಚೀನಾ (ಪಿಟಿಐ): ಭಾರತದ ತಾರೆಯರಾದ ಲಕ್ಷ್ಯ ಸೇನ್, ಎಚ್.ಎಸ್. ಪ್ರಣಯ್ ಮತ್ತು ಪಿ.ವಿ. ಸಿಂಧು ಅವರು ಮಂಗಳವಾರ ಆರಂಭವಾಗುವ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕೆ ಇಳಿಯಲಿದ್ದಾರೆ. ಈ ಋತುವಿನಲ್ಲಿ ಸತತ ವೈಫಲ್ಯ ಅನುಭವಿಸಿರುವ ಅವರು ಇಲ್ಲಿ ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಕ್ರಮವಾಗಿ 17 ಮತ್ತು 18ನೇ ಸ್ಥಾನದಲ್ಲಿರುವ ಪ್ರಣಯ್ ಮತ್ತು ಸೇನ್ ಅವರೊಂದಿಗೆ ಕಿರಣ್ ಜಾರ್ಜ್ (34ನೇ ರ‍್ಯಾಂಕ್), ಪ್ರಿಯಾಂಶು ರಾಜಾವತ್ (35ನೇ) ಅವರು ಪುರುಷರ ಸಿಂಗಲ್ಸ್ ಸ್ಪರ್ಧೆಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಒಲಿಂಪಿಕ್ ಡಬಲ್ ಪದಕ ವಿಜೇತೆ ಸಿಂಧು (17ನೇ ರ‍್ಯಾಂಕ್) ಅವರೊಂದಿಗೆ ಮಾಳವಿಕಾ ಬನ್ಸೋಡ್ (23ನೇ), ಅನುಪಮಾ ಉಪಾಧ್ಯಾಯ (43ನೇ) ಮತ್ತು ಆಕರ್ಷಿ ಕಶ್ಯಪ್ (48ನೇ) ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ ಸುಧಾರಿತ ಪ್ರದರ್ಶನದ ಒತ್ತಡದಲ್ಲಿದ್ದಾರೆ.

23 ವರ್ಷ ವಯಸ್ಸಿನ ಸೇನ್ ಅವರು ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನ ಹಾಲಿ ರನ್ನರ್ ಅಪ್ ಚೀನಾ ತೈಪೆಯ ಲೀ ಚಿಯಾ ಹಾವೊ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.



ಲಕ್ಷ್ಯ ಸೇನ್

31 ವರ್ಷ ವಯಸ್ಸಿನ ಪ್ರಣಯ್, ಮೊದಲ ಸುತ್ತಿನಲ್ಲಿ ಚೀನಾದ ಗುವಾಂಗ್ ಜು ಲು ಅವರನ್ನು ಎದುರಿಸಲಿದ್ದಾರೆ. ಪ್ರಿಯಾಂಶು ಅವರಿಗೆ ಥಾಯ್ಲೆಂಡ್‌ನ ಕಾಂಟಾಫೋನ್ ವಾಂಗ್‌ಚರೋಯೆನ್ ಎದುರಾಳಿ. ಜಾರ್ಜ್ ಕ್ವಾಲಿಫೈಯರ್ ಆಟಗಾರನನ್ನು ಎದುರಿಸಲಿದ್ದಾರೆ.

29 ವರ್ಷ ವಯಸ್ಸಿನ ಸಿಂಧು ತನ್ನ ಅಭಿಯಾನವನ್ನು ವಿಶ್ವದ 34ನೇ ರ‍್ಯಾಂಕ್‌ನ ಇಂಡೋನೇಷ್ಯಾದ ಎಸ್ತರ್ ನುರುಮಿ ಟ್ರೈ ವಾರ್ಡೋಯೊ ವಿರುದ್ಧ ಆರಂಭಿಸುವರು. ಅನುಪಮಾ ಅವರಿಗೆ ಎಂಟನೇ ಶ್ರೇಯಾಂಕದ ಮಾಜಿ ವಿಶ್ವ ಚಾಂಪಿಯನ್ ರಚನೋಕ್ ಇಂಟನಾನ್ (ಥಾಯ್ಲೆಂಡ್) ಎದುರಾಳಿ. ಮಾಳವಿಕಾ ಮತ್ತು ಆಕರ್ಷಿ ಕ್ರಮವಾಗಿ ಚೀನಾದ ಫಾಂಗ್ ಜೀ ಗಾವೊ ಮತ್ತು ಎರಡನೇ ಶ್ರೇಯಾಂಕದ ಯು ಹಾನ್ ಅವರನ್ನು ಎದುರಿಸುವರು.

ಬ್ಯಾಸ್ಕೆಟ್‌ಬಾಲ್: ರಾಜ್ಯ ತಂಡಕ್ಕೆ ಕುಶಾಲ್, ಅದಿತಿ ಸಾರಥ್ಯ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಶಾಲ್ ಸಿಂಗ್ ಎಂ. ಮತ್ತು ಅದಿತಿ ಎಸ್. ಅವರು ಪುದುಚೇರಿ ಯಲ್ಲಿ ಇದೇ 9ರಿಂದ 16ರವರೆಗೆ ನಡೆಯಲಿರುವ 40ನೇ ಯುವ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಕರ್ನಾಟಕ ತಂಡಗಳನ್ನು ಮುನ್ನಡೆಸಲಿದ್ದಾರೆ.

ರಾಜ್ಯ ಯುವ ಬಾಲಕ ಮತ್ತು ಬಾಲಕಿಯರ ತಂಡಗಳನ್ನು ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಪ್ರಕಟಿಸಿದೆ.

ಬಾಲಕರ ತಂಡ: ಕುಶಾಲ್ ಸಿಂಗ್ ಎಂ (ನಾಯಕ), ಆಶೆರ್ ಡಿಸೋಜ, ಸಂವೇಹ್ ರಾಥೋಡ್, ಅಕ್ಷತ್ ಎ, ವಸಿಷ್ಠ ಪ್ರಸನ್ನ, ಅದ್ವಿತ್ ಆನಂದ್, ರಿಶ್ತಿಹ್ ಬಸುರಾಯ್, ಅವ್ಯಂ ಗುಪ್ತಾ, ದಿವಿತ್ ವಿ. ಶೆಣವ, ಚತುರ ಎಂ. ಸಚು, ಕ್ರಿಶ್ ಬಿಷ್ಣೋಯಿ, ಉಜ್ವಲ್ ಜಾಧವ್ ಕೆ. ಕೋಚ್: ಪ್ರಮೋದ ಎಸ್.ಕೆ, ಮ್ಯಾನೇಜರ್: ಶ್ರೀನಿವಾಸ ಮೂರ್ತಿ ಎಚ್.

ಬಾಲಕಿಯರ ತಂಡ: ಅದಿತಿ ಎಸ್. (ನಾಯಕಿ) ಶೀತಲ್ ಎಂ.ಆರ್, ನಿರೀಕ್ಷಾ ಬಿ.ಸಿ, ಸ್ವಾತಿ ಪ್ರಭು, ಮಹೇಕ್ ಶರ್ಮಾ, ಶ್ರೀಶಾ ಎನ್, ಆಂಚಲ್ ಪಿ. ಸೀರ್ವಿ, ಅವನಿ ಮರ್ದಾ, ಅನ್ವಿತಾ ಸಣ್ಣರ್, ಶ್ರಾವಣಿ ಶಿವಣ್ಣ, ಹನೀಶಾ ಶಿಂಧೆ, ಶಿವಬಾಯಿ ಸಿ. ಮಠ, ಕೋಚ್: ಸತ್ಯನಾರಾಯಣ ಕೆ, ಮ್ಯಾನೇಜರ್: ಭಾವನಾ ಆರ್.



ಝೊಡಿಯಾಕ್ ಕ್ರಿಕೆಟ್ ಕ್ಲಬ್ ತಂಡವು ಕೆಎಸ್‌ಸಿಎ ಮೊದಲ ಗುಂಪಿನ, ಐದನೇ ಡಿವಿಷನ್ ಲೀಗ್ ಟೂರ್ನಿಯಲ್ಲಿ ಜೆ.ಬಿ. ಮಲ್ಲಾರಾಧ್ಯ ಶೀಲ್ಡ್ ಗೆದ್ದುಕೊಂಡಿತು. (ಎಡದಿಂದ), ನಿಂತವರು: ವಸಿಷ್ಠ ಮಯ್ಯ, ಎಂ. ಕಾರ್ತಿಕ್, ಚೇತನ್, ಅಭಿಷೇಕ್, ಸೂರಜ್ ಸ್ಟೀಫನ್, ಜ್ಞಾನಿ, ಯು. ಮಣಿಕಂಠ, ಪವನ್ ಯಾದವ್ ಎಂ. ಆರ್. ಮಹೇಶ್ ರೆಡ್ಡಿ, ವಿ. ಸಂಜಯ. ಕುಳಿತವರು: ಶೋಯೆಬ್ ಪಾಷಾ, ಗೌರವ್ ಬಬ್ಬರ್, ಆರ್. ಸಂದೀಪಕುಮಾರ್ (ನಾಯಕ), ವೆಂಕಟೇಶ್ ಮಯ್ಯ (ಕಾರ್ಯದರ್ಶಿ), ಬಂದಾ ಶ್ರೀನಿವಾಸ್. ಬಾಲು ದಿಲೀಪ್ ಕುಮಾರ್, ಸುನೀಲ್ ಕುಮಾರ್. ಆರ್‌ಎಸ್‌ಐ ಮೈದಾನದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಝೊಡಿಯಾಕ್ ತಂಡವು 50 ರನ್‌ಗಳಿಂದ ಫ್ರೆಂಡ್ಸ್ ಯೂನಿಯನ್ ಕ್ರಿಕೆಟರ್ಸ್ ತಂಡವನ್ನು ಮಣಿಸಿತು.



ಮೋಹನ್ ಬಾಗನ್ ಸೂಪರ್ ಜೈಂಟ್ಸ್ ಮತ್ತು ಜೆಮ್ಶೆಡ್‌ಪುರ (ಬಿಳಿ) ತಂಡಗಳ ಆಟಗಾರರು ಚೆಂಡಿಗಾಗಿ ಸೆಣಸಾಟ ನಡೆಸಿದರು ಪಿಟಿಐ ಚಿತ್ರ

ಬಿಎಫ್‌ಸಿಗೆ ಬಾಗನ್ ಎದುರಾಳಿ

ಕೋಲ್ಕತ್ತ (ಪಿಟಿಐ): ಇಂಜುರಿ ಅವಧಿಯಲ್ಲಿ ಲಲೆಂಗ್ಮಾವಿಯಾ ರಾಲ್ಟೆ ಗಳಿಸಿದ ನಿರ್ಣಾಯಕ ಗೋಲಿನ ನೆರವಿನಿಂದ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವು ಸತತ ಮೂರನೇ ಬಾರಿ ಇಂಡಿಯನ್ ಸೂಪರ್ ಲೀಗ್‌ನ ಫೈನಲ್ ಪ್ರವೇಶಿಸಿತು.

ಇದೇ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ಶನಿವಾರ ನಡೆಯುವ ಪ್ರಶಸ್ತಿ ಸುತ್ತಿನಲ್ಲಿ ಮೋಹನ್ ಬಾಗನ್ ತಂಡವು ಬೆಂಗಳೂರು ಎಫ್‌ಸಿ ತಂಡವನ್ನು ಎದುರಿಸಲಿದೆ.

ಸೆಮಿಫೈನಲ್‌ನ ಎರಡು ಲೆಗ್ ಪಂದ್ಯಗಳಲ್ಲಿ ದಾಖಲಾದ ಒಟ್ಟು ಗೋಲುಗಳ ಲೆಕ್ಕಾಚಾರದಲ್ಲಿ ಮೋಹನ್ ಬಾಗನ್ (3–2) ತಂಡವು ಮೇಲುಗೈ ಸಾಧಿಸಿ ಫೈನಲ್‌ಗೆ ಅರ್ಹತೆ ಪಡೆಯಿತು.

ಮೊದಲ ಲೆಗ್‌ನ ಪಂದ್ಯದಲ್ಲಿ 1–2 ಗೋಲುಗಳಿಂದ ಸೋತಿದ್ದ ಮೋಹನ್ ಬಾಗನ್ ತಂಡವು ಸೋಮವಾರ ನಡೆದ ಎರಡನೇ ಲೆಗ್‌ನ ಪಂದ್ಯದಲ್ಲಿ 2–0 ಗೋಲುಗಳಿಂದ ಪಾರಮ್ಯ ಮೆರೆಯಿತು. 51ನೇ ನಿಮಿಷದಲ್ಲಿ ಸ್ಕಾಟ್ಲೆಂಡ್ ಆಟಗಾರ ಜೇಸನ್ ಕಮಿಂಗ್ಸ್ ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿ ಮೋಹನ್ ಬಾಗನ್ ತಂಡಕ್ಕೆ ಮುನ್ನಡೆ ಒದಗಿಸಿದರು. 90 + 4ನೇ ನಿಮಿಷದಲ್ಲಿ ರಾಲ್ಟೆ ಚೆಂಡನ್ನು ಗುರಿ ಸೇರಿಸಿದರು.